ಬುಧವಾರ, ನವೆಂಬರ್ 29, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 329 | ಪುಟ 14

www.prajavani.net

prajavani.net | prajavani | prajavani | prajavani


# ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕರ್ನಾಟಕ 50 · 25 ವರ್ಷಗಳ ಮುನ್ನೋಟ

**ತಂತ್ರಜ್ಞಾನ**

ತ್ರಿಡಿ ಮುದ್ರಣ ತಂತ್ರಜ್ಞಾನದ ನೆರವಿನಿಂದ ಅಂಗರಚನೆ ಸಾಧ್ಯವಾಗಿರುವುದು ಅಂಗಗಳನ್ನು ಕಳೆದುಕೊಂಡವರಲ್ಲಿ ಹೊಸ ಭರವಸೆಯನ್ನು ಮೂಡಿಸಿದೆ



₹64 ಕೋಟಿ ಜಿಎಸ್‌ಟಿ ವಂಚನೆ 5

ತೆಲಂಗಾಣ ಕಾಂಗ್ರೆಸ್‌ನ 'ಫೀನಿಕ್ಸ್' ಕಥನ... 11

| ಸೆನ್ಸೆಕ್ಸ್ | ನಿಫ್ಟಿ | ಚಿನ್ನ (Std. 10g) | ಶುದ್ಧ ಬೆಳ್ಳಿ (kg) | ₹/$ |
|---|---|---|---|---|
| 66,174 | 19,890 | ₹63,820 (ಬೆಂಗಳೂರು) | ₹77,300 (ಬೆಂಗಳೂರು) | 83.34 |

41 ಕಾರ್ಮಿಕರೂ ಸುರಕ್ಷಿತವಾಗಿ ಸುರಂಗದಿಂದ ಹೊರಕ್ಕೆ • 17 ದಿನಗಳ ಕತ್ತಲ ವಾಸ ಕೊನೆಗೂ ಅಂತ್ಯ

# ಪರ್ವತದ ಮಡಿಲಲ್ಲಿ 'ಪವಾಡ'

**ಉತ್ತರಕಾಶಿ (ಪಿಟಿಐ):** ಉತ್ತರಾಖಂಡದ ಹಿಮಾಲಯ ಪರ್ವತ ಶ್ರೇಣಿಯ ನಡುವೆ ಮಂಗಳವಾರ ಸೂರ್ಯ ಮರೆಯಾಗಿ ಹೋದ ತುಸು ಹೊತ್ತಿನಲ್ಲಿ 'ಆ' 41 ಜೀವಗಳ ಬಾಳಿನಲ್ಲಿ ಹೊಸ ಸೂರ್ಯೋದಯವೇ ಆಯಿತು. 'ಈಗ, ಇನ್ನೇನು ಸುರಂಗದಿಂದ ಹೊರಬರಲಿದ್ದಾರೆ' ಎಂದು ಹಂಬಲಿಸಿ ಪರ್ವತದ ಎದುರು ಎರಡು ವಾರಗಳಿಂದಲೂ ಕಾದು ಕುಳಿತವರ ಮೊಗದಲ್ಲಿ ಕೊನೆಗೂ ಮಂದಹಾಸ ಮಿನುಗಿತು.

ಉತ್ತರಕಾಶಿ ಜಿಲ್ಲೆಯ ಸಿಲ್ಕ್ಯಾರಾ–ಬಡಕೋಟ್ ಸುರಂಗದಲ್ಲಿ ಸಿಲುಕಿದ್ದ 41 ಮಂದಿ ಕಾರ್ಮಿಕರನ್ನು ರಕ್ಷಿಸಲು 17 ದಿನಗಳಿಂದ ನಡೆದಿದ್ದ ಹಿಮಾಲಯ ಸದೃಶ ಯತ್ನಕ್ಕೆ ಕೊನೆಗೂ ಜಯ ಸಿಕ್ಕಿತು. ಅಷ್ಟೂ ಮಂದಿ ಕಾರ್ಮಿಕರನ್ನು ಸುರಕ್ಷಿತವಾಗಿ ಹೊರಗೆ ಕರೆದುಕೊಂಡು ಬರುವಲ್ಲಿ ರಕ್ಷಣಾ ಸಿಬ್ಬಂದಿ ಮಂಗಳವಾರ ರಾತ್ರಿ ಯಶಸ್ಸು ಕಂಡರು. ಭಾರತದಲ್ಲಿ ಇಂತಹ ಚಾರಿತ್ರಿಕ ಕಾರ್ಯಾಚರಣೆ ನಡೆದಿದ್ದು ಇದೇ ಮೊದಲು.

ಭಾರತೀಯ ಸೇನೆ ಸೇರಿದಂತೆ ಹಲವು ಏಜೆನ್ಸಿಗಳು ಭಾಗಿಯಾಗಿದ್ದ ರಕ್ಷಣಾ ಕಾರ್ಯಾಚರಣೆಗೆ ಮತ್ತೆ ಮತ್ತೆ ಅಡ್ಡಿಗಳು ಎದುರಾಗುತ್ತಿದ್ದವು. ಕಾರ್ಮಿಕರ ಕ್ಷೇಮವನ್ನು ಬಯಸುತ್ತಿದ್ದವರಲ್ಲಿ ಒಮ್ಮೆ ಭರವಸೆ ಚಿಗುರುತ್ತಿತ್ತು, ಕೆಲವೊಮ್ಮೆ ನಿರಾಸೆ ಕವಿಯುತ್ತಿತ್ತು. ಆದರೆ, ಭರವಸೆ ಹಾಗೂ ನಿರಾಸೆಯ ನಡುವೆ ನಡೆದಿದ್ದ ಹೊಯ್ದಾಟದಲ್ಲಿ ಕೊನೆಗೂ ಭರವಸೆಯೇ ಗೆದ್ದಿತು.

ಸುರಂಗದಲ್ಲಿ ಸಿಲುಕಿ, 17 ದಿನಗಳಿಂದ ಹೊರಜಗತ್ತನ್ನೇ ಕಾಣದಿದ್ದ ಕಾರ್ಮಿಕರು ಸುರಕ್ಷಿತವಾಗಿ ಹೊರಗೆ ಬಂದಿದ್ದಾರೆ ಎಂಬ ಸುದ್ದಿ ಬಿತ್ತರವಾದ ನಂತರದಲ್ಲಿ ದೇಶವಾಸಿಗಳು ಸಾಮಾಜಿಕ ಜಾಲತಾಣಗಳ ಮೂಲಕ ಸಂತಸ ಹಂಚಿಕೊಂಡರು. ವಿಜ್ಞಾನ, ನಂಬಿಕೆ, ಪ್ರಾರ್ಥನೆ, ತಾಂತ್ರಿಕ ಪರಿಣತಿ ಹಾಗೂ ಶ್ರಮದ ಸಂಗಮಕ್ಕೆ ಸಿಕ್ಕ ಯಶಸ್ಸು ಇದು ಎಂದು ಕೆಲವರು ಸಾಮಾಜಿಕ ಜಾಲತಾಣಗಳಲ್ಲಿ ಭಾವುಕವಾಗಿ ಸಂತಸದ ಹೊನಲು ಹರಿಸಿದರು.

ಸುರಂಗದಿಂದ ಸುರಕ್ಷಿತವಾಗಿ ಹೊರಗೆ ಕರೆತರಲು ಅಳವಡಿಸಿದ್ದ 60 ಮೀಟರ್ ಉದ್ದದ ಪೈಪ್ ಮೂಲಕ ಕಾರ್ಮಿಕರು ಹೊರಬರುತ್ತಿದ್ದಂತೆಯೇ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಮತ್ತು ಕೇಂದ್ರ ಸಚಿವ ವಿ.ಕೆ. ಸಿಂಗ್ ಅವರು, ಕಾರ್ಮಿಕರನ್ನು ಸ್ವಾಗತಿಸಿದರು. ಎನ್‌ಡಿಆರ್‌ಎಫ್ ಸಿಬ್ಬಂದಿ ಈ ಕಾರ್ಮಿಕರನ್ನು ಸುರಂಗದಿಂದ ಹೊರಗೆ ಕರೆತಂದರು.

ಭಾರಿ ಯಂತ್ರಗಳ ನೆರವಿಲ್ಲದೆಯೇ ಸುರಂಗ ಕೊರೆಯುವ ನಿಪುಣರ ತಂಡವು, ಸುರಂಗ ಕೊರೆಯುವ ಕೆಲಸವನ್ನು ಪೂರ್ಣಗೊಳಿಸಿದ ಸರಿಸುಮಾರು ಒಂದು ಗಂಟೆಯ ನಂತರದಲ್ಲಿ, ಕಾರ್ಮಿಕರನ್ನು ಹೊರಗೆ ತರಲಾಯಿತು.

ಕಾರ್ಮಿಕರು ಹೊರಬರುತ್ತಿದ್ದಂತೆ, ಕೆಲವರು ಸಂತಸದಿಂದ 'ಹರ ಹರ ಮಹಾದೇವ' ಎಂದು, 'ಭಾರತ್ ಮಾತಾಕಿ ಜೈ' ಎಂದು ಘೋಷಣೆ ಕೂಗಿದರು. ಸುರಂಗದ ಹೊರಬಂದ ಕಾರ್ಮಿಕರನ್ನು ಆಂಬುಲೆನ್ಸ್ ಮೂಲಕ ಸಮೀಪದ ಸಮುದಾಯ ಆರೋಗ್ಯ ಕೇಂದ್ರಕ್ಕೆ ಕರೆದುಕೊಂಡು ಹೋಗಲಾಯಿತು. ಅಲ್ಲಿ ಕಾರ್ಮಿಕರಿಗಾಗಿ 41 ಹಾಸಿಗೆಗಳ ವಿಶೇಷ ವಾರ್ಡ್ ಸಿದ್ಧವಾಗಿತ್ತು.

ಇದಕ್ಕೂ ಮೊದಲು ಕಾರ್ಮಿಕರನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಲಾಯಿತು. ಸಿಲ್ಕ್ಯಾರಾ ಸುರಂಗದ ಒಂದು ಭಾಗ ಕುಸಿದ ಕಾರಣ, ಅಲ್ಲಿ ಕೆಲಸ ಮಾಡುತ್ತಿದ್ದ 41 ಮಂದಿ ಕಾರ್ಮಿಕರು ನವೆಂಬರ್ 12ರಿಂದಲೂ ಒಳಗೆ ಸಿಲುಕಿಕೊಂಡಿದ್ದರು. ಅವರಿಗೆ ಔಷಧ, ಆಹಾರ ಮತ್ತು ಇತರ ಅಗತ್ಯ ವಸ್ತುಗಳನ್ನು ಆರು ಇಂಚು ವ್ಯಾಸದ ಒಂದು ಪೈಪ್ ಮೂಲಕ ರವಾನಿಸಲಾಗುತ್ತಿತ್ತು.

**ಪ್ರಧಾನಿ ಸಂತಸ:** ಈ ರಕ್ಷಣಾ ಕಾರ್ಯವು ಎಲ್ಲರನ್ನೂ ಭಾವುಕವಾಗಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಕ್ರಿಯಿಸಿದ್ದಾರೆ. ರಕ್ಷಣಾ ಸಿಬ್ಬಂದಿ ಕಾರ್ಮಿಕರನ್ನು ಹೊರಗೆ ಕರೆತಂದ ನಂತರದಲ್ಲಿ ಎಕ್ಸ್ ಮೂಲಕ ಸಂತಸ ಹಂಚಿಕೊಂಡಿರುವ ಮೋದಿ, 'ರಕ್ಷಣಾ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದವರ ಧೈರ್ಯ ಮತ್ತು ದೃಢನಿಶ್ಚಯವು ಕಾರ್ಮಿಕರಿಗೆ ಹೊಸ ಜೀವನ ನೀಡಿದೆ' ಎಂದು ಹೇಳಿದ್ದಾರೆ.

'ಈ ಕಾರ್ಯದಲ್ಲಿ ತೊಡಗಿದ್ದ ಎಲ್ಲರೂ ಮಾನವೀಯತೆ ಹಾಗೂ ಒಂದು ತಂಡವಾಗಿ ಕೆಲಸ ಮಾಡುವುದಕ್ಕೆ ಅದ್ಭುತವಾದ ಉದಾಹರಣೆಯೊಂದನ್ನು ಸೃಷ್ಟಿಸಿಕೊಟ್ಟಿದ್ದಾರೆ' ಎಂದು ಮೋದಿ ಅವರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಸುರಂಗದಲ್ಲಿ ಸಿಲುಕಿದ್ದ ಕಾರ್ಮಿಕರ ಧೈರ್ಯ ಮತ್ತು ತಾಳ್ಮೆ ಎಲ್ಲರಿಗೂ ಸ್ಫೂರ್ತಿದಾಯಕ ಎಂದಿದ್ದಾರೆ.



ಸಿಲ್ಕ್ಯಾರಾ ಸುರಂಗದಿಂದ ಹೊರಬಂದ ಕಾರ್ಮಿಕರೊಬ್ಬರನ್ನು ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ಆಲಂಗಿಸಿ ಖುಷಿಪಟ್ಟರು —ಪಿಟಿಐ ಚಿತ್ರ

### 'ಕಾರ್ಮಿಕರಿಗೆ ₹1 ಲಕ್ಷ ಪರಿಹಾರ'

- ಸುರಂಗ ಕೊರೆಯುವ ಯಂತ್ರಕ್ಕೆ ಮತ್ತೆ ಮತ್ತೆ ಅಡ್ಡಿ ಎದುರಾಗುತ್ತಿತ್ತು. ಭಾರಿ ಯಂತ್ರದ ಸಹಾಯವಿಲ್ಲದೆ ಸುರಂಗ ಕೊರೆದವರಿಗೆ ನಾನು ಧನ್ಯವಾದ ಅರ್ಪಿಸುವೆ.
- ಅತ್ಯಂತ ಕಿರಿಯ ವಯಸ್ಸಿನ ಕಾರ್ಮಿಕರನ್ನು ಮೊದಲು ಹೊರತರಲಾಯಿತು. ಅವರೆಲ್ಲ ಪೈಪ್ ಮೂಲಕ ತಾವಾಗಿಯೇ ಹೊರಗೆ ತೆವಳಿಕೊಂಡು ಬಂದರು.
- 41 ಕಾರ್ಮಿಕರಿಗೆ ಪ್ರತಿಯೊಬ್ಬರಿಗೂ ತಲಾ ₹1 ಲಕ್ಷ ಪರಿಹಾರ ನೀಡಲಾಗುತ್ತದೆ. ನಿರ್ಮಾಣ ಹಂತದಲ್ಲಿರುವ ಸುರಂಗದ ಮರುಪರಿಶೀಲನೆ ನಡೆಸಲಾಗುತ್ತದೆ.
- ಯಾರ ಆರೋಗ್ಯಕ್ಕೂ ಆಪತ್ತು ಇಲ್ಲ. ಕಾರ್ಮಿಕರನ್ನು ವೈದ್ಯಕೀಯ ನಿಗಾದಲ್ಲಿ ಇರಿಸಲಾಗುತ್ತದೆ. ನಂತರ ಅವರನ್ನು ಮನೆಗೆ ಕಳುಹಿಸಲಾಗುತ್ತದೆ.

(ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು ರಕ್ಷಣಾ ಕಾರ್ಯಾಚರಣೆಯ ನಂತರದಲ್ಲಿ ಹೇಳಿದ್ದು...)

**ನಮ್ಮ ಸ್ನೇಹಿತರು (ಸುರಂಗದಲ್ಲಿ ಸಿಲುಕಿದ್ದ ಕಾರ್ಮಿಕರು) ಬಹುಕಾಲದ ಕಾಯುವಿಕೆಯ ನಂತರ ತಮ್ಮ ಪ್ರೀತಿಪಾತ್ರರನ್ನು ಭೇಟಿ ಮಾಡಲಿದ್ದಾರೆ ಎಂಬುದು ಬಹಳ ತೃಪ್ತಿ ನೀಡುವ ಸಂಗತಿ**

**ನರೇಂದ್ರ ಮೋದಿ,** ಪ್ರಧಾನಿ

ಇನ್ನಷ್ಟು ಸುದ್ದಿಗಳು 7, 11

# ಬಗರ್‌ಹುಕುಂ: ಅನರ್ಹ ಅರ್ಜಿಗಳೇ ಅಧಿಕ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಬಗರ್‌ಹುಕುಂ ಅಡಿ ಒಟ್ಟು 9,29,512 ಅರ್ಜಿಗಳು ಸಲ್ಲಿಕೆಯಾಗಿದ್ದು, ಬಹುತೇಕ ಅರ್ಜಿಗಳು ಅರ್ಹತೆಯನ್ನೇ ಹೊಂದಿಲ್ಲ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಅರ್ಹತೆ ಇಲ್ಲದ ಅರ್ಜಿಗಳನ್ನು ಕೈಬಿಟ್ಟು, ಅರ್ಹ ಅರ್ಜಿಗಳನ್ನು ಮಾತ್ರ ಪುರಸ್ಕರಿಸಲು ಮಾರ್ಗಸೂಚಿ ರೂಪಿಸಿದ್ದು, ಎಂಟು ತಿಂಗಳಲ್ಲಿ ಈ ಕಾರ್ಯ ಪೂರ್ಣಗೊಳಿಸಲು ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸುಮಾರು 50 ಲಕ್ಷ ಎಕರೆ ಜಮೀನು ಸಕ್ರಮಕ್ಕಾಗಿ ಅರ್ಜಿಗಳು ಸಲ್ಲಿಕೆಯಾಗಿವೆ. ಆದರೆ, ಆ ಪ್ರಮಾಣದ ಜಮೀನಿನ ಲಭ್ಯತೆಯೇ ಇಲ್ಲ. ಅರ್ಹ ಅರ್ಜಿದಾರರಿಗೆ ಆದ್ಯತೆ ಮೇರೆಗೆ ಭೂಮಿಯನ್ನು ಹಂಚಲಾಗುವುದು. ಅನರ್ಹರೇ ಹೆಚ್ಚಿನ ಸಂಖ್ಯೆಯಲ್ಲಿ ಅರ್ಜಿ ಸಲ್ಲಿಸಿರುವುದರಿಂದ ಸಮಸ್ಯೆ ಸೃಷ್ಟಿಯಾಗಿದೆ ಎಂದು ಅವರು ವಿವರಿಸಿದರು.

ಕೆಲವು ಪ್ರಕರಣಗಳಲ್ಲಿ ಕೆಲ ವ್ಯಕ್ತಿಗಳು ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಿರುವ ಉದಾಹರಣೆಯೂ ಇದೆ. ಒಬ್ಬ ವ್ಯಕ್ತಿಯಂತೂ 25 ಅರ್ಜಿಗಳನ್ನು ಸಲ್ಲಿಸಿದ್ದಾನೆ. ಮತ್ತೊಂದು ಪ್ರಕರಣದಲ್ಲಿ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ 18 ವರ್ಷ ತುಂಬಿದ ವ್ಯಕ್ತಿಯೂ ಅರ್ಜಿ ಸಲ್ಲಿಸಿದ್ದಾನೆ. ನೂರಾರು ಎಕರೆ ಜಮೀನು ಹೊಂದಿದವರು, ಕೃಷಿಯನ್ನೇ ಮಾಡದವರೂ ಅರ್ಜಿ ಸಲ್ಲಿಸಿದ್ದಾರೆ ಎಂದು ಸಚಿವರು ಹೇಳಿದರು.

ಸರ್ಕಾರಿ ಭೂಮಿಯಲ್ಲಿ ಅಕ್ರಮ ಸಾಗುವಳಿ ಮಾಡಿಕೊಂಡವರಿಗೆ ಸಕ್ರಮ ಮಾಡಿಕೊಡುವುದಕ್ಕೆ ಸಂಬಂಧಿಸಿದಂತೆ ನಿಯಮಗಳಿಗೆ ಅನುಗುಣವಾಗಿಯೇ ಸರ್ಕಾರ ನಡೆದುಕೊಳ್ಳುತ್ತದೆ. ಆದರೆ, ಈ ಹಿಂದೆ ಸಕ್ರಮ ಮಾಡಿಕೊಟ್ಟ ಸಾಕಷ್ಟು ಪ್ರಕರಣಗಳಲ್ಲಿ ಲೋಪಗಳಾಗಿವೆ.

### ಮಾರ್ಗಸೂಚಿ...

- ಅರ್ಜಿದಾರ ಎಲ್ಲೆಲ್ಲಿ ಅರ್ಜಿ ಹಾಕಿದ್ದಾನೆ ಎಂಬುದನ್ನು ಪರಿಶೀಲಿಸಲು ಆಧಾರ್ ಸಂಖ್ಯೆ ಲಿಂಕ್ ಮಾಡುವುದರ ಜತೆಗೆ ಆಧಾರ್ ದೃಢೀಕರಣ ಮಾಡಲಾಗುವುದು. ಪ್ರತಿ ತಾಲ್ಲೂಕಿನಲ್ಲೂ ತಹಶೀಲ್ದಾರರು ಅವರು ಇದನ್ನು ಪರಿಶೀಲಿಸುತ್ತಾರೆ.
- ಸಾಗುವಳಿ ಆರಂಭಿಸಿದ ದಿನಾಂಕಕ್ಕೆ ಅರ್ಜಿದಾರನ ವಯಸ್ಸು 18 ವರ್ಷ ಆಗಿತ್ತಾ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು.
- ಯಾವ ಜಮೀನಿಗೆ ಅರ್ಜಿ ಹಾಕಿದ್ದಾರೋ ಆ ಜಮೀನು 2010, 2011, 2012 ವರ್ಷಗಳಲ್ಲಿ ಹೇಗಿತ್ತು ಎಂಬುದರ ಉಪಗ್ರಹ ಚಿತ್ರವನ್ನು ತೆಗೆಸಿ ತಹಶೀಲ್ದಾರ್‌ಗೆ ನೀಡಲಾಗುವುದು. ನಿಜವಾಗಿ ಸಾಗುವಳಿ ಆಗಿತ್ತೇ ಎಂಬುದು ತಿಳಿಯಲು ಸಾಧ್ಯವಾಗುತ್ತದೆ. ಸಾಗುವಳಿ ಮಾಡಿಲ್ಲವಾದರೆ ಕ್ರಮ ತೆಗೆದುಕೊಳ್ಳಲಾಗುತ್ತದೆ. ಸಾಕ್ಷ್ಯವನ್ನು ಬಗರ್ ಹುಕುಂ ಸಮಿತಿಗೆ ನೀಡಲಾಗುತ್ತದೆ.
- ತಹಶೀಲ್ದಾರ್ ಅವರು ಮಹಜರ್ ಮಾಡಿ, ಸಾಗುವಳಿ ಮಾಡುತ್ತಿದ್ದಾರೋ ಎಂಬುದನ್ನು ಖಾತರಿ ಮಾಡಿಕೊಳ್ಳಬೇಕು.

5ನೇ ಪುಟ ನೋಡಿ





ಪಟ್ಟಿಗೆ ವರಿಷ್ಠರ ಒಪ್ಪಿಗೆ ಬಾಕಿ– ಮುಖ್ಯಮಂತ್ರಿ ಸಿದ್ದರಾಮಯ್ಯ

# ನಿಗಮ–ಮಂಡಳಿ: ಮೊದಲು ಶಾಸಕರಿಗೆ ಸ್ಥಾನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮೊದಲ ಹಂತದಲ್ಲಿ ಶಾಸಕರಿಗೆ ಮಾತ್ರ ನಿಗಮ–ಮಂಡಳಿಗಳ ಅಧ್ಯಕ್ಷ ಸ್ಥಾನ ಹಂಚಿಕೆ ಮಾಡಲು ಕಾಂಗ್ರೆಸ್ ನಾಯಕರು ನಿರ್ಧರಿಸಿದ್ದಾರೆ.

ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಮತ್ತು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಜೊತೆ ತಾಜ್ ವೆಸ್ಟೆಂಡ್ ಹೋಟೆಲ್‌ನಲ್ಲಿ ಮಂಗಳವಾರ ಚರ್ಚೆ ನಡೆಸಿದ ಬಳಿಕ ಸುದ್ದಿಗಾರರ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು.

'ಈಗಾಗಲೇ ಹೈಕಮಾಂಡ್‌ಗೆ ಪಟ್ಟಿಯನ್ನು ಕಳುಹಿಸಿದ್ದೇವೆ. ಪಕ್ಷದ ವರಿಷ್ಠರು ಒಪ್ಪಿಗೆ ಕೊಡುವುದು ಮಾತ್ರ ಬಾಕಿ ಇದೆ' ಎಂದರು.

'ಡಿ. 4ರಿಂದ ಬೆಳಗಾವಿಯಲ್ಲಿ ವಿಧಾನ ಮಂಡಲ ಅಧಿವೇಶನ ನಡೆಯಲಿದೆ. ಅದಕ್ಕೂ ಮೊದಲು ಶಾಸಕರಿಗೆ ನಿಗಮ, ಮಂಡಳಿಗಳ ಸ್ಥಾನ ಹಂಚಿಕೆ ಮಾಡಲಾಗುವುದು. ಎರಡು ಮತ್ತು ಮೂರನೇ ಹಂತದಲ್ಲಿ ಪಕ್ಷದ ಕಾರ್ಯಕರ್ತರಿಗೆ ಸ್ಥಾನ ನೀಡಲಾಗುವುದು' ಎಂದರು.

ಸಭೆಯಿಂದ ಸಿದ್ದರಾಮಯ್ಯ ನಿರ್ಗಮಿಸಿದ ಬಳಿಕ ಸುರ್ಜೇವಾಲಾ ಜೊತೆ ಡಿ.ಕೆ. ಶಿವಕುಮಾರ್ ಕೆಲಹೊತ್ತು ಪ್ರತ್ಯೇಕವಾಗಿ ಚರ್ಚೆ ನಡೆಸಿದರು.

ಸುರ್ಜೇವಾಲಾ ಪ್ರತಿಕ್ರಿಯಿಸಿ, 'ನಿಗಮ, ಮಂಡಳಿಗಳ ಅಧ್ಯಕ್ಷ ಸ್ಥಾನ ಹಂಚಿಕೆ ಸಹಿತ ಹಲವು ವಿಷಯಗಳ ಕುರಿತು ಡಿ.ಕೆ. ಶಿವಕುಮಾರ್ ಮತ್ತು ಮುಖ್ಯಮಂತ್ರಿ ಜೊತೆ ಚರ್ಚೆ ಮಾಡಿದ್ದೇನೆ. ಹಂತ ಹಂತವಾಗಿ ನಿಗಮ, ಮಂಡಳಿಗಳ ಅಧ್ಯಕ್ಷ ಸ್ಥಾನ ಭರ್ತಿ ಮಾಡುತ್ತೇವೆ. ಗ್ಯಾರಂಟಿಗಳ ಅನುಷ್ಠಾನ ವಿಚಾರವಾಗಿಯೂ ನಾವು ಚರ್ಚಿಸಿದ್ದೇವೆ. ಪಾರದರ್ಶಕವಾಗಿ ಕೆಲಸ ಮುಂದುವರಿಸುವ ಬಗ್ಗೆಯೂ ಮಾತುಕತೆ ನಡೆಸಿದ್ದೇವೆ' ಎಂದರು.

'ಸದ್ಯ ನಮ್ಮ ಗಮನ ಪಂಚ ರಾಜ್ಯಗಳ ಚುನಾವಣೆ ಕಡೆಗೆ. ಮುಂದೆ ಲೋಕಸಭೆ ಚುನಾವಣೆ ಗುರಿ. 'ಇಂಡಿಯಾ' ಮೈತ್ರಿಕೂಟದ ಜೊತೆಗೆ ಕಾಂಗ್ರೆಸ್ ಚುನಾವಣೆಗೆ ಹೋಗಲಿದೆ' ಎಂದೂ ಹೇಳಿದರು.

ವಿಧಾನಸಭೆಯ 25 ಹಾಗೂ ಪರಿಷತ್ತಿನ ನಾಲ್ವರಿಗೆ ಮೊದಲ ಪಟ್ಟಿಯಲ್ಲಿ ಅವಕಾಶ ಸಿಗಲಿದೆ ಎಂದು ಗೊತ್ತಾಗಿದೆ.

# ಆರೋಗ್ಯ ಸಿಬ್ಬಂದಿಗೆ ಮಾಸ್ಕ್ ಕಡ್ಡಾಯ

## ಸನ್ನದ್ಧ ಸ್ಥಿತಿಗೆ ಸರ್ಕಾರಿ, ಖಾಸಗಿ ಆಸ್ಪತ್ರೆಗಳಿಗೆ ಸೂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಚೀನಾದ ಉತ್ತರ ಭಾಗದ ಮಕ್ಕಳಲ್ಲಿ ಕಾಣಿಸಿಕೊಂಡ ನ್ಯುಮೋನಿಯಾ ಪ್ರಕರಣಗಳು ರಾಜ್ಯದಲ್ಲಿ ಪಸರಿಸದಂತೆ ತಡೆಯಲು ಆರೋಗ್ಯ ಇಲಾಖೆಯು ಮುನ್ನೆಚ್ಚರಿಕೆ ಕ್ರಮಗಳ ಮಾರ್ಗಸೂಚಿಗಳನ್ನು ಪ್ರಕಟಿಸಿದ್ದು, ಆರೋಗ್ಯ ಸಿಬ್ಬಂದಿ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಸೋಮವಾರ ನಡೆದ ಇಲಾಖೆಯ ರಾಜ್ಯ ತಾಂತ್ರಿಕ ಸಲಹಾ ಸಮಿತಿ ಸಭೆಯಲ್ಲಿ ವ್ಯಕ್ತವಾದ ಅಭಿಪ್ರಾಯ ಆಧರಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತ ಡಿ. ರಂದೀಪ್ ಅವರು ಮಂಗಳವಾರ ಸುತ್ತೋಲೆ ಹೊರಡಿಸಿದ್ದಾರೆ.

### ಜನರು ವಹಿಸಬೇಕಾದ ಎಚ್ಚರಿಕೆ

- ಕೆಮ್ಮುವಾಗ ಮತ್ತು ಶೀನುವಾಗ ಕರವಸ್ತ್ರದಿಂದ ಬಾಯಿ, ಮೂಗು ಮುಚ್ಚಿಕೊಳ್ಳುವುದು
- ಆಗಾಗ ಸೋಪಿನಿಂದ ಕೈ ತೊಳೆದುಕೊಳ್ಳುವುದು
- ಶೀತ ಮತ್ತು ಜ್ವರ 5ರಿಂದ 7 ದಿನಗಳು ಇರಲಿವೆ
- ಎಳೆ ಮಕ್ಕಳು, ವೃದ್ಧರು, ಗರ್ಭಿಣಿಯರು, ಗಂಭೀರ ಸ್ವರೂಪದ ಅನಾರೋಗ್ಯ ಸಮಸ್ಯೆ ಇರುವವರು ಎಚ್ಚರಿಕೆಯಿಂದ ಇರುವುದು
- ಶೀತ–ಜ್ವರ ಬಾಧೆ(ಐಎಲ್‌ಐ,ಸಾರಿ ಲಕ್ಷಣ) ಇದ್ದರೆ ಹತ್ತಿರ ಸರ್ಕಾರಿ ಆಸ್ಪತ್ರೆಯಲ್ಲಿ ತೋರಿಸಿಕೊಳ್ಳುವುದು

5ನೇ ಪುಟ ನೋಡಿ

## ತೆಲಂಗಾಣ: ಚುನಾವಣಾ ಪ್ರಚಾರಕ್ಕೆ ತೆರೆ

ಹೈದರಾಬಾದ್: ತೆಲಂಗಾಣ ವಿಧಾನಸಭೆ ಚುನಾವಣೆಯ ಬಹಿರಂಗ ಪ್ರಚಾರಕ್ಕೆ ಮಂಗಳವಾರ ಸಂಜೆ 5 ಗಂಟೆಗೆ ತೆರೆಬಿದ್ದಿತು. 119 ಸದಸ್ಯಬಲದ ರಾಜ್ಯ ವಿಧಾನಸಭೆಗೆ ಗುರುವಾರ ಚುನಾವಣೆ ನಡೆಯಲಿದೆ. 11

## ಮುಸ್ಲಿಂ ಶಾಸಕಿ ಭೇಟಿ ನೀಡಿದ್ದ ದೇವಾಲಯದ ಶುದ್ಧಿ

ಸಿದ್ಧಾರ್ಥನಗರ (ಉತ್ತರ ಪ್ರದೇಶ) (ಪಿಟಿಐ): ಸಮಯ್ ಮಾತಾ ಹಿಂದೂ ದೇಗುಲಕ್ಕೆ ಮುಸ್ಲಿಂ ಶಾಸಕಿ ಭೇಟಿ ನೀಡಿದ್ದರಿಂದ ಅಪವಿತ್ರಗೊಂಡಿದೆ ಎಂದು ಆರೋಪಿಸಿ ಬಿಜೆಪಿ ಮತ್ತು ಹಿಂದೂ ಯುವ ವಾಹಿನಿಗೆ ಸೇರಿದ ಕಾರ್ಯಕರ್ತರು ಗಂಗಾಜಲದಿಂದ ಶುದ್ಧೀಕರಣ ಮಾಡಿದ್ದಾರೆ. 11

## ನೆರವಿಗೆ ನಾಸಾ ಸಿದ್ಧ

ನವದೆಹಲಿ(ಪಿಟಿಐ): ತನ್ನದೇ ಆದ ಬಾಹ್ಯಾಕಾಶ ನಿಲ್ದಾಣ ಸ್ಥಾಪಿಸುವ ಭಾರತದ ಕಾರ್ಯಕ್ಕೆ ಕೈಜೋಡಿಸಲು ಅಮೆರಿಕ ಮುಕ್ತವಾಗಿದೆ ಎಂದು ನಾಸಾ ಆಡಳಿತಾಧಿಕಾರಿ ಬಿಲ್ ನೆಲ್ಸನ್ ಮಂಗಳವಾರ ಹೇಳಿದ್ದಾರೆ. 11

# ಕೃಷ್ಣ ಬೈರೇಗೌಡ ಮಾತಿಗೆ ಪಾಟೀಲ ಗರಂ

## ಹಣ ಪಡೆದು ಕಾಮಗಾರಿ ವಹಿಸಿರುವ ಆರೋಪ: ತನಿಖೆಗೆ ಒತ್ತಾಯಿಸಿ ಸಿ.ಎಂಗೆ ಶಾಸಕ ಪತ್ರ

ಪ್ರಜಾವಾಣಿ ವಾರ್ತೆ

**ಕಲಬುರಗಿ:** 'ಕರ್ನಾಟಕ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಗಮ (ಕೆಆರ್‌ಐಡಿಎಲ್) ಕಡೆಯಿಂದ ನಾನು ಹಣ ಪಡೆದು ಕಾಮಗಾರಿ ಮಾಡಿಸಿದ್ದೇನೆ ಎಂಬಂತೆ ವಿಧಾನಸಭೆಯಲ್ಲಿ ಸಚಿವ ಕೃಷ್ಣ ಬೈರೇಗೌಡ ಮಾಡಿದ್ದ ಆರೋಪದ ಬಗ್ಗೆ ತನಿಖೆ ನಡೆಸಿ ಆರೋಪ ಮುಕ್ತನನ್ನಾಗಿ ಮಾಡಬೇಕು. ನನ್ನ ಮೇಲಿನ ಆರೋಪ ಸಾಬೀತಾದರೆ ಇಂದೇ ವಿಧಾನಸಭೆ ಸದಸ್ಯ ಸ್ಥಾನಕ್ಕೆ ರಾಜೀನಾಮೆ ಕೊಡುತ್ತೇನೆ' ಎಂದು ಆಳಂದ ಶಾಸಕ ಬಿ.ಆರ್. ಪಾಟೀಲ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಮಂಗಳವಾರ ಪತ್ರ ಬರೆದಿದ್ದಾರೆ.

'2013ರಲ್ಲಿ ನಾನು ಶಾಸಕನಾದಾಗ ಮುಖ್ಯಮಂತ್ರಿಯಾಗಿದ್ದ ನೀವು ಸಾಕಷ್ಟು ಅನುದಾನ ನೀಡಿದ್ದೀರಿ. ಕೆಲ ಕಾಮಗಾರಿಗಳನ್ನು ಕೆಆರ್‌ಐಡಿಎಲ್‌ಗೆ ನೀಡಿದ್ದು ನಿಜ. ಚುನಾವಣೆ ಹತ್ತಿರ ಬರುತ್ತಿದ್ದ ಸಂದರ್ಭದಲ್ಲಿ ಬೇರೆ ಸಂಸ್ಥೆಗಳಿಗೆ ಕೊಟ್ಟರೆ ಟೆಂಡರ್ ಪ್ರಕ್ರಿಯೆಗಳು ಪ್ರಾರಂಭವಾಗಿ ಕಾಮಗಾರಿಗಳು ತಡವಾಗುತ್ತವೆ ಎಂಬ ಉದ್ದೇಶದಿಂದ ಅಂದಿನ ಭೂಸೇನೆಗೆ (ಪ್ರಸ್ತುತ ಕೆಆರ್‌ಐಡಿಎಲ್) ವಹಿಸಿದ್ದೆ. ಆದರೆ, ಇಲ್ಲಿಯವರೆಗೆ ಕಾಮಗಾರಿ ಮುಗಿದಿಲ್ಲ. ಅರ್ಧಂಬರ್ಧ ಮುಗಿದಿವೆ. ಕೆಲಸ ಮಾಡಿದರೂ ಕಾಮಗಾರಿ ಕಳಪೆಯಾಗಿವೆ. 2018ರಲ್ಲಿ ಬಂದ ಬಿಜೆಪಿ ಸರ್ಕಾರವೂ ಈ ಬಗ್ಗೆ ಗಮನ ಹರಿಸಲಿಲ್ಲ' ಎಂದು ಪತ್ರದಲ್ಲಿ ತಿಳಿಸಿದ್ದಾರೆ.

6ನೇ ಪುಟ ನೋಡಿ



**ಕೃಷ್ಣ ಬೈರೇಗೌಡ ಅವರ ಮಾತಿನಿಂದ ನನಗೆ ನೋವಾಗಿದೆ. ಹೀಗಾಗಿ, ತನಿಖೆ ನಡೆಸುವಂತೆ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿರುವುದು ನಿಜ**


**ಬಿ.ಆರ್. ಪಾಟೀಲ,** ಶಾಸಕ



**ಬಿ.ಆರ್. ಪಾಟೀಲ ಪತ್ರ ಬರೆದಿರುವುದು ನನಗೆ ಗೊತ್ತಿಲ್ಲ. ಆ ಪತ್ರ ಇನ್ನೂ ನನಗೆ ತಲುಪಿಲ್ಲ. ಅವನು ಏನು ಬರೆದಿದ್ದಾನೆಂದು ನೋಡುತ್ತೇನೆ**

**ಸಿದ್ದರಾಮಯ್ಯ,** ಮುಖ್ಯಮಂತ್ರಿ

### 'ಮುಖ್ಯಮಂತ್ರಿ ನೋಡಿಕೊಳ್ಳುತ್ತಾರೆ'



ಪಾಟೀಲ ಅವರು ಸಿ.ಎಂಗೆ ಪತ್ರ ಬರೆದಿದ್ದಾರೆ. ಅವರು ಈ ವಿಷಯದ ಬಗ್ಗೆ ನೋಡಿಕೊಳ್ಳುತ್ತಾರೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು. 'ವಿಧಾನಸಭೆಯಲ್ಲಿ ನಾನು ಹೇಳಿರುವುದು ದಾಖಲೆಯಲ್ಲಿದೆ. ನಾನು ಅಂತಹ ಹೇಳಿಕೆ ಅಥವಾ ಆ ವಿಷಯದಲ್ಲಿ ಮಧ್ಯಪ್ರವೇಶ ಮಾಡಿಲ್ಲ. ಅವರು ನನ್ನ ಮಾತನ್ನು ತಪ್ಪಾಗಿ ಅರ್ಥೈಸಿಕೊಂಡಿದ್ದಾರೆ' ಎಂದರು

ತಲೆಮರೆಸಿಕೊಂಡ ಇಬ್ಬರಿಗೆ ಶೋಧ, ತನಿಖೆ ವೇಳೆ ಆಘಾತಕಾರಿ ಮಾಹಿತಿ

# 3 ತಿಂಗಳಲ್ಲಿ 242 ಹೆಣ್ಣುಭ್ರೂಣಗಳ ಹತ್ಯೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಭ್ರೂಣಲಿಂಗ ಪತ್ತೆ ಹಾಗೂ ಗರ್ಭಪಾತ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಬೈಯಪ್ಪನಹಳ್ಳಿ ಠಾಣೆ ಪೊಲೀಸರಿಗೆ ತನಿಖೆ ವೇಳೆ ಆಘಾತಕಾರಿ ಮಾಹಿತಿಗಳು ಲಭಿಸುತ್ತಿವೆ.

ಬಂಧಿತ 9 ಆರೋಪಿಗಳು ಕಳೆದ ಮೂರು ತಿಂಗಳಲ್ಲಿ 242 ಮಂದಿ ಗರ್ಭಿಣಿಯರಿಗೆ ಗರ್ಭಪಾತ ಮಾಡಿಸಿರುವುದು ಪತ್ತೆಯಾಗಿದೆ.

ಪ್ರಕರಣದಲ್ಲಿ ಇದುವರೆಗೆ 9 ಮಂದಿ ಆರೋಪಿಗಳನ್ನು ಬಂಧಿಸಲಾಗಿದೆ. ಇಬ್ಬರು ತಲೆಮರೆಸಿಕೊಂಡಿದ್ದಾರೆ. ತನಿಖೆ ಪ್ರಗತಿಯಲ್ಲಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ಪತ್ರಿಕಾ ಗೋಷ್ಠಿಯಲ್ಲಿ ಮಂಗಳವಾರ ಹೇಳಿದರು.

'ಬಂಧಿತರ ಪೈಕಿ ಒಬ್ಬ ಆರೋಪಿ, 2021ರಲ್ಲಿ ಅಪಹರಣ ಪ್ರಕರಣವೊಂದರಲ್ಲಿ ಬಂಧನಕ್ಕೆ ಒಳಗಾಗಿದ್ದ' ಎಂದು ಅವರು ತಿಳಿಸಿದರು.

**ನೋಂದಣಿಯಾಗದ ಆಸ್ಪತ್ರೆ:** 'ಪ್ರಕರಣದಲ್ಲಿ ಆರೋಗ್ಯ ಇಲಾಖೆಯ ನಿರ್ಲಕ್ಷ್ಯ ಹಾಗೂ ಲೋಪದೋಷಗಳು ಕಂಡು ಬಂದಿವೆ. ಚಂದನ್ ಬಲ್ಲಾಳ್, ತನ್ನ ಆಸ್ಪತ್ರೆಯನ್ನು ನೋಂದಣಿ ಮಾಡಿಸಿಕೊಂಡಿಲ್ಲ. ಅಲ್ಲದೇ ಮೈಸೂರಿನ ಆರೋಗ್ಯ ಇಲಾಖೆ ಅಧಿಕಾರಿಗಳು ಪರಿಶೀಲಿಸದೆ ನಿರ್ಲಕ್ಷ್ಯ ತೋರಿದ್ದಾರೆ. ಎಲ್ಲ ಆಯಾಮಗಳಲ್ಲೂ ತನಿಖೆ ನಡೆಯುತ್ತಿದೆ' ಎಂದು ಹೇಳಿದರು.

**ಆರೋಪಿಗಳಿಗೆ ದಾವಣಗೆರೆಯ ನಂಟು:** ಪ್ರಕರಣದ ಮೊದಲ ಆರೋಪಿ, ಮಧ್ಯವರ್ತಿ ಶಿವಲಿಂಗೇಗೌಡನ ಪತ್ನಿ ಸುನಂದಾ ಹಾಗೂ ದಾವಣಗೆರೆ ಜಿಲ್ಲೆ ಹೊನ್ನಾಳಿ ತಾಲ್ಲೂಕಿನ ವೀರೇಶ್ ಸ್ನೇಹಿತ ಸಿದ್ದೇಶ್ ತಲೆಮರೆಸಿಕೊಂಡಿದ್ದಾರೆ. ವೀರೇಶ್ ಹಾಗೂ ಸಿದ್ದೇಶ್ ಅವರು ಪುಟ್ಟ ಗಾತ್ರದ ಸ್ಕ್ಯಾನಿಂಗ್ ಯಂತ್ರವನ್ನು ನೀಡಿದ್ದರು. ಈ ಯಂತ್ರ ತೀವ್ರ ನಿಗಾ ಘಟಕದಲ್ಲಿ ಇರುತ್ತದೆ. ಇವರಿಬ್ಬರಿಗೆ ಆ ಯಂತ್ರ ಹೇಗೆ ಲಭಿಸಿತು ಎಂಬುದರ ಕುರಿತು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸ್ ಮೂಲಗಳು ಹೇಳಿವೆ.


**ಮೂವರಿಗೆ ಜಾಮೀನು:** ಬಂಧಿತ ಆರೋಪಿಗಳ ಪೈಕಿ ತಮಿಳುನಾಡು ಮೂಲದ ಮಕ್ಕಳ ತಜ್ಞ ತುಳಸಿರಾಮ್, ಮೈಸೂರಿನ ವೈದ್ಯ ಚಂದನ್ ಬಲ್ಲಾಳ್ ಪತ್ನಿ ಮೀನಾ, ಸ್ವಾಗತಕಾರಿಣಿ ನಜ್ಮಾ ಖಾನಂ ಅವರಿಗೆ ನ್ಯಾಯಾಲಯದಿಂದ ಜಾಮೀನು ಸಿಕ್ಕಿದ್ದು ಬಿಡುಗಡೆಯಾಗಿದ್ದಾರೆ ಎಂದು ಮೂಲಗಳು ಹೇಳಿವೆ.

### 3 ವರ್ಷ, 900 ಗರ್ಭಪಾತ

ಆರೋಪಿಗಳು ಮೂರು ವರ್ಷಗಳಿಂದ 900ಕ್ಕೂ ಹೆಚ್ಚು ಗರ್ಭಪಾತ ಮಾಡಿದ್ದಾರೆ ಎಂಬ ಮಾಹಿತಿ ವಿಚಾರಣೆ ವೇಳೆ ಸಿಕ್ಕಿದೆ. ಈ ಹಿಂದೆ ಪ್ರತಿ ತಿಂಗಳು 25 ರಿಂದ 27 ಗರ್ಭಪಾತ ಮಾಡಿದ್ದರೆ, 2023ರ ಜುಲೈ 21ರಿಂದ ಅ.16ರ ವರೆಗೆ 242 ಗರ್ಭಪಾತ ನಡೆಸಿದ್ದಾರೆ ಎಂದು ಪೊಲೀಸರು ಹೇಳಿದರು.

### ಚಿನಕುರಳಿ

ಪ್ರಕಾಶ್ ಶೆಟ್ಟಿ





EAST WEST 1968

Over 50 Years of Academic Excellence

EAST WEST GROUP OF INSTITUTIONS


(Recognised by Govt. of Karnataka) (Approved by AICTE & INC, PCI, New Delhi)
(Affiliated to Bangalore University, Rajiv Gandhi University, Visveshwaraiah Technological University)

4000+ Faculty & Staff | 16000+ Students | Students from 15 Countries

NAAC A Accredited

CAMPUS - 1
MAGADI ROAD
# 63, Off Magadi Rd, Vishwaneedam P.O.
Bengaluru - 560 091
Phone: 080-2328 8242, 2328 8245
Mobile: 94482 24779

PGCET CODE:
VTU: MBA-B171 : MCA-C428
BU: MBA-B169 : MCA-C426



CAMPUS - 2
YELAHANKA NEW TOWN
# 13/A, 'A' Sector, Yelahanka New Town,
Bengaluru-560 064
Phone: 080-2856 6115, 2856 6116
Mobile: 98446 71611



ADMISSIONS OPEN

MANAGEMENT
MBA ♦ MCA ♦ M.Com
BBA ♦ BCA ♦ B.Com

SCIENCE
M.Sc ♦ B.Sc - Biotechnology
M.Sc ♦ B.Sc - Microbiology
B.Sc - Genetics, B.Sc - Forensic Science :
B.Sc - Interior Design & Decoration
B.A - Journalism / Criminology / Psychology

M.Tech
Digital Electronics, Structural Engg
Computer Science & Engg
Geo Technical Engg, Machine Design

ENGINEERING
Aeronautical, E & C, E & E, CS, IS
CSE (IOT, CYS & BC)
Artificial Intelligence & Data Science
Artificial Intelligence & Machine Learning
Mechanical, Civil, Agriculture Engg.

ARCHITECTURE

PHARMACY ♦ PHYSIOTHERAPY
NURSING ♦ LAB TECHNICIAN

PhD ♦ R&D

PUC ♦ POLYTECHNIC ♦ BEd ♦ LLB

www.ewgi.edu.in

EW-23418

Placement assistance for Engineering and other courses

IN HOUSE HOSTEL & DINING FACILITY

## ಆಧಾರ್: ಪತ್ನಿ ವಾದ ನಿರಾಕರಣೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನಾವು ವಿಧಿಬದ್ಧವಾಗಿ ಮದುವೆಯಾದ ದಂಪತಿ. ಹಾಗಾಗಿ, ನನಗೆ ನನ್ನ ಪತಿಯ ಆಧಾರ್ ಕಾರ್ಡ್ ಮಾಹಿತಿ ಪಡೆಯುವ ಅಧಿಕಾರವಿದೆ' ಎಂಬ ಪತ್ನಿಯೊಬ್ಬರ ವಾದವನ್ನು ಒಪ್ಪಲು ಹೈಕೋರ್ಟ್ ನಿರಾಕರಿಸಿದೆ.

ಕೌಟುಂಬಿಕ ವ್ಯಾಜ್ಯವೊಂದರಲ್ಲಿ ಪತ್ನಿಯ ಅರ್ಜಿಗೆ ಸಂಬಂಧಿಸಿದಂತೆ ಏಕಸದಸ್ಯ ನ್ಯಾಯಪೀಠ ನೀಡಿದ್ದ ಆದೇಶ ಪ್ರಶ್ನಿಸಿ ಭಾರತದ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರದ (ಯುಐಡಿಎಐ) ಮತ್ತು ಉಪ ಮಹಾನಿರ್ದೇಶಕ ಹಾಗೂ ಮಾಹಿತಿ ಅಧಿಕಾರಿ ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಹಾಗೂ ವಿಜಯಕುಮಾರ್ ಎ.ಪಾಟೀಲ್ ಅವರಿದ್ದ ವಿಭಾಗೀಯ ನ್ಯಾಯಪೀಠ ವಿಲೇವಾರಿ ಮಾಡಿದೆ.

'ಮದುವೆಯ ಬಳಿಕ ಪತಿ-ಪತ್ನಿಯ ಗುರುತು ಒಂದಕ್ಕೊಂದು ಮಿಳಿತವಾಗಿರುತ್ತವೆ. ದಂಪತಿಯಲ್ಲಿ ಒಬ್ಬರು ಮತ್ತೊಬ್ಬರ ಮಾಹಿತಿ ಕೋರುವುದಕ್ಕೆ ಯಾವುದೇ ಆಕ್ಷೇಪ ಇರುವುದಿಲ್ಲ. ಮೂರನೇ ವ್ಯಕ್ತಿ ಮಾಹಿತಿ ಕೋರಿದಾಗ ಮಾತ್ರವೇ ವಿಧಿಸಲಾಗುವ ನಿರ್ಬಂಧವನ್ನು ಈ ಪ್ರಕರಣಕ್ಕೆ ಅನ್ವಯಿಸಲಾಗದು ಎಂಬ' ಪತ್ನಿಯ ವಾದವನ್ನು ನ್ಯಾಯಪೀಠ ತಿರಸ್ಕರಿಸಿದೆ.

'ಇದು ಏಕಪಕ್ಷೀಯ ವಾದ. ಆಧಾರ್ ಸಂಖ್ಯೆ ಗೋಪ್ಯತೆಯ ಹಕ್ಕು. ಇದು ವ್ಯಕ್ತಿಯೊಬ್ಬರ ಗೋಪ್ಯತೆಯ ಹಕ್ಕಿನ ಸ್ವಾಯತ್ತತೆಯನ್ನು ಸಂರಕ್ಷಿಸುತ್ತದೆ' ಎಂಬ ಅಭಿಪ್ರಾಯ ವ್ಯಕ್ತಪಡಿಸುವ ಮೂಲಕ ಅರ್ಜಿಯನ್ನು ಏಕಸದಸ್ಯ ನ್ಯಾಯಪೀಠ ಹೊಸದಾಗಿ ಪರಿಗಣಿಸುವಂತೆ ನಿರ್ದೇಶಿಸಿದೆ.

### ಪ್ರಕರಣವೇನು?

ಪ್ರಕರಣದ ಅರ್ಜಿದಾರಳಾದ ಪತ್ನಿ 2005ರ ನವೆಂಬರ್‌ನಲ್ಲಿ ವಿವಾಹವಾಗಿದ್ದರು. ದಂಪತಿಗೆ ಹೆಣ್ಣು ಮಗುವಿದೆ. ಕೌಟುಂಬಿಕ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಪತಿಯ ವಿರುದ್ಧ ದಾವೆ ಹೂಡಿದ್ದ ಆಕೆಗೆ ಕೌಟುಂಬಿಕ ನ್ಯಾಯಾಲಯ ₹ 10 ಸಾವಿರ ಹಾಗೂ ಹೆಣ್ಣು ಮಗುವಿಗೆ ₹ 5 ಸಾವಿರ ಜೀವನಾಂಶ ನೀಡುವಂತೆ ಆದೇಶಿಸಿತ್ತು.

'ಪತಿ ಈ ಮೊದಲಿದ್ದ ವಿಳಾಸದಲ್ಲಿ ಇಲ್ಲ, ತಲೆ ಮರೆಸಿಕೊಂಡಿದ್ದಾರೆ. ಅವರು ಎಲ್ಲಿದ್ದಾರೆ ಎಂಬುದನ್ನು ಪತ್ತೆ ಮಾಡಲು ಆಗಿಲ್ಲ' ಎಂಬ ಕಾರಣಕ್ಕೆ ಕೌಟುಂಬಿಕ ನ್ಯಾಯಾಲಯದ ಆದೇಶವನ್ನು ಜಾರಿಗೊಳಿಸಲು ಆಗಿರಲಿಲ್ಲ. ಹೀಗಾಗಿ, ಪತ್ನಿಯು ಆರ್‌ಟಿಐ ಕಾಯ್ದೆ ಅಡಿಯಲ್ಲಿ ಯುಐಡಿಎಐಗೆ ಮನವಿ ಸಲ್ಲಿಸಿದ್ದರು.

ಈ ಮನವಿಯನ್ನು 2021ರ ಫೆ. 25ರಂದು ತಿರಸ್ಕರಿಸಿದ್ದ ಯುಐಡಿಎಐ, 'ಪತಿಯ ಆಧಾರ್ ಮಾಹಿತಿಯನ್ನು ಬಹಿರಂಗಪಡಿಸಲಾಗದು. ಇದನ್ನು ಆಧಾರ್ ಕಾಯ್ದೆಯ ಕಲಂ 33ರ ಅಡಿ ಹೈಕೋರ್ಟ್ ನಿರ್ಧರಿಸಬೇಕಾಗುತ್ತದೆ' ಎಂದು ತಿಳಿಸಿತ್ತು.

ಈ ಸಂಬಂಧ ಆಕೆ ಹೈಕೋರ್ಟ್ ಮೆಟ್ಟಿಲೇರಿದ್ದರು. ಪತಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ್ದ ಹೈಕೋರ್ಟ್ ಪತ್ನಿಯ ಅರ್ಜಿಯನ್ನು ಪರಿಗಣಿಸುವಂತೆ ಯುಐಡಿಎಐಗೆ 2023ರ ಫೆಬ್ರವರಿ 8ರಂದು ಆದೇಶಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಯುಐಡಿಎಐ ವಿಭಾಗೀಯ ನ್ಯಾಯಪೀಠಕ್ಕೆ ಮೇಲ್ಮನವಿ ಸಲ್ಲಿಸಿತ್ತು.


ಭಾರತ ಸರ್ಕಾರ
ಬಾಹ್ಯಾಕಾಶ ಇಲಾಖೆ
ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ)
ಇಸ್ರೋ ಟೆಲಿಮೆಟ್ರಿ ಟ್ರ್ಯಾಕಿಂಗ್ ಅಂಡ್ ಕಮಾಂಡ್ ನೆಟ್‌ವರ್ಕ್ (ಐಎಸ್‌ಟಿಆರ್‌ಎಸಿ)
ನಿರ್ಮಾಣ ಮತ್ತು ನಿರ್ವಹಣೆ ಸಮೂಹ,
ಪ್ಲಾಟ್ ನಂ. 12 ಮತ್ತು 13, 3ನೇ ಮುಖ್ಯ ರಸ್ತೆ, 2ನೇ ಹಂತ, ಪೀಣ್ಯ ಕೈಗಾರಿಕಾ ಎಸ್ಟೇಟ್, ಬೆಂಗಳೂರು-58.
ದೂ: 080-28094196, 4184, 4541, 4542 ಫ್ಯಾಕ್ಸ್: 080-28094180

**ಸಂಕ್ಷಿಪ್ತ ಇ-ಟೆಂಡರ್ ಪ್ರಕಟಣೆ**

ಭಾರತದ ರಾಷ್ಟ್ರಪತಿಯವರ ಪರವಾಗಿ ಕೆಳಕಂಡ ಕಾಮಗಾರಿಗಳಿಗಾಗಿ ಸೂಕ್ತ ದರ್ಜೆಯ ಗುತ್ತಿಗೆದಾರರುಗಳಿಂದ ಐಟಂ ದರದ ಇ-ಟೆಂಡರುಗಳನ್ನು ಆಹ್ವಾನಿಸಲಾಗಿದೆ.

| | | |
|---|---|---|
| ಎನ್‌ಐಟಿ ಸಂಖ್ಯೆ | ಐಎಸ್‌ಟಿಆರ್‌ಎಸಿ/ಸಿಎಂಜಿ/ಎಂಎಐಎನ್‌ಟಿ/ಸಿ/ಇ-ಟೆಂಡರ್-66/2023-24, ದಿನಾಂಕ: 28.11.2023 | ಐಎಸ್‌ಟಿಆರ್‌ಎಸಿ/ಸಿಎಂಜಿ/ಎಂಎಐಎನ್‌ಟಿ/ಸಿ/ಇ-ಟೆಂಡರ್-67/2023-24, ದಿನಾಂಕ: 28.11.2023 |
| ಕಾಮಗಾರಿಯ ಹೆಸರು | ಎಂಒಎಕ್ಸ್ ಕ್ಯಾಂಪಸ್, ಐಎಸ್‌ಟಿಆರ್‌ಎಸಿ, ಬೆಂಗಳೂರು ಇಲ್ಲಿ ಹೊರಾಂಗಣ ಪರಿಸರದ ಸಂರಕ್ಷಣೆಗಾಗಿ ವಾರ್ಷಿಕ ಸೇವಾ ಗುತ್ತಿಗೆ | ಎಸ್‌ಸಿಸಿ ಕ್ಯಾಂಪಸ್, ಐಎಸ್‌ಟಿಆರ್‌ಎಸಿ, ಬೆಂಗಳೂರು ಇಲ್ಲಿನ ಎನ್‌ಎಸ್‌ಎ ಭಾಗಕ್ಕೆ ವರ್ಕ್ ಸ್ಟೇಷನ್‌ಗಳು, ಪಾರ್ಟಿಷನ್‌ಗಳು ಮತ್ತು ಸ್ಟೋರೇಜ್ ಯೂನಿಟ್ಸ್; ಡೇಟಾ ಸಿಸ್ಟಮ್ಸ್ ಲ್ಯಾಬ್‌ನಲ್ಲಿ ಮರದ ಬ್ಯಾಕಿಂಗ್ ಮತ್ತು ಆರ್‌ಡಿಎ ಭಾಗದ ಸಮ್ಮೇಳನ ಭವನದಲ್ಲಿ ಮರದ ನೆಲಹಾಸು ಒದಗಿಸುವುದು (ಸಿವಿಲ್ ಒಳಾಂಗಣ ಕೆಲಸಗಳು) |
| ಟೆಂಡರಿಗಿಟ್ಟಿರುವ ಅಂದಾಜು ಮೊತ್ತ | ರೂ. 60.31 ಲಕ್ಷಗಳು | ರೂ. 23.66 ಲಕ್ಷಗಳು |
| ಟೆಂಡರ್ ದಸ್ತಾವೇಜಿನ ವಿವರಗಳು | ಇ-ಟೆಂಡರ್ | ಇ-ಟೆಂಡರ್ |
| ಪೂರ್ಣಗೊಳಿಸಲು ಕಾಲಾವಧಿ | 12 ತಿಂಗಳು (ಇಲಾಖೆಯು ಗುತ್ತಿಗೆಯನ್ನು ಮತ್ತೆ 24 ತಿಂಗಳ ಅವಧಿಗೆ ವಿಸ್ತರಿಸುವ ಹಕ್ಕನ್ನು ಕಾಯ್ದಿರಿಸಿದೆ) | 03 ತಿಂಗಳು |
| ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಅವಧಿ | 29.11.2023 ರಿಂದ 19.12.2023 ರವರೆಗೆ | 29.11.2023 ರಿಂದ 12.12.2023 ರವರೆಗೆ |
| ಬಿಡ್ ಸ್ಪಷ್ಟೀಕರಣ ದಿನಾಂಕ | 29.11.2023 ರಿಂದ 19.12.2023 ರವರೆಗೆ | 29.11.2023 ರಿಂದ 13.12.2023 ರವರೆಗೆ |
| ಬಿಡ್ ಸ್ಪಷ್ಟೀಕರಣಗಳಿಗೆ ಉತ್ತರ ನೀಡುವ ಕಡೆಯ ದಿನಾಂಕ ಮತ್ತು ಸಮಯ | 20.12.2023ರಂದು 16.30 ಗಂಟೆವರೆಗೆ | 14.12.2023ರಂದು 16.30 ಗಂಟೆವರೆಗೆ |
| ಟೆಂಡರುಗಳನ್ನು ಸ್ವೀಕರಿಸುವ ಕಡೆಯ ದಿನಾಂಕ ಮತ್ತು ಸಮಯ | 21.12.2023ರಂದು 14.30 ಗಂಟೆವರೆಗೆ | 15.12.2023ರಂದು 14.30 ಗಂಟೆವರೆಗೆ |
| ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ | 22.12.2023ರಂದು 11.30 ಗಂಟೆ ನಂತರ | 18.12.2023ರಂದು 11.30 ಗಂಟೆ ನಂತರ |
| ಇಎಂಡಿ | ರೂ. 1.21 ಲಕ್ಷಗಳು | ರೂ. 47,320/- |

ಆಸಕ್ತಿಯುಳ್ಳ ಟೆಂಡರ್‌ದಾರರು ಅರ್ಹತಾ ಅಗತ್ಯತೆ ಮತ್ತು ಇತರೆ ವಿವರಗಳಿಗೆ ಟೆಂಡರ್ ವಿವರವಾದ ಟೆಂಡರ್ ಆಹ್ವಾನ ಪ್ರಕಟಣೆಯನ್ನು (ಎನ್‌ಐಟಿ) ಪರಿವೀಕ್ಷಿಸುವುದು ಮತ್ತು ಇತರೆ ವಿವರಗಳನ್ನು ವೆಬ್‌ಸೈಟ್: **www.isro.gov.in** ಗೆ ಭೇಟಿ ನೀಡಿ ಪಡೆಯಬಹುದು ಮತ್ತು ಟೆಂಡರ್ ದಸ್ತಾವೇಜುಗಳನ್ನು **www.tenderwizard.com/ISRO** ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/- ಸಮೂಹ ಮುಖ್ಯಸ್ಥರು, ಸಿಎಂಜಿ



ಕರ್ನಾಟಕ ಸರ್ಕಾರ
**ಜಿಲ್ಲಾ ಸರ್ವೇಕ್ಷಣಾ ಘಟಕ, ಬೆಂಗಳೂರು ನಗರ ಜಿಲ್ಲೆ.**
ಹಳೇ ಟಿಬಿ ಆಸ್ಪತ್ರೆ ಆವರಣ, ಹಳೇ ಮದ್ರಾಸ್ ರೋಡ್, ಇಂದಿರಾ ನಗರ ಬೆಂಗಳೂರು - 38
ಇ ಮೇಲ್ : dsubangaloreurban@gmail.com ದೂರವಾಣಿ ಸಂಖ್ಯೆ : 080-29516143.

ಸಂಖ್ಯೆ:ಡಿ.ಎಸ್.ಒ/ಬೆಂ.ನ.ಜಿ/ಎನ್.ಸಿ.ಡಿ/01/2023-24 ದಿನಾಂಕ : 27.11.2023

**ನೇಮಕಾತಿ ಪ್ರಕಟಣೆ**

ಬೆಂಗಳೂರು ನಗರ ಜಿಲ್ಲೆಯಲ್ಲಿ 2023-24ನೇ ಸಾಲಿಗೆ ಎನ್.ಹೆಚ್.ಎಂ ಯೋಜನೆಯ ಎನ್.ಪಿ.ಸಿ.ಡಿ.ಸಿ.ಎಸ್ ಖಾಲಿ ಇರುವ ಹುದ್ದೆ ಮತ್ತು ಎನ್.ಪಿ.ಪಿ.ಸಿ ಕಾರ್ಯಕ್ರಮದಡಿಯಲ್ಲಿ ಹೊಸದಾಗಿ ಅನುಮೋದನೆಯಾಗಿರುವ ವೈದ್ಯಕೀಯ ಮತ್ತು ಅರೆವೈದ್ಯಕೀಯ ಹುದ್ದೆಗಳನ್ನು ಎನ್.ಹೆಚ್.ಎಂ ಮಾರ್ಗಸೂಚಿಗಳಂತೆ ಗುತ್ತಿಗೆ ಆಧಾರದ ಮೇಲೆ ನಿಯಮಾನುಸಾರ ಭರ್ತಿಮಾಡಲು ಅರ್ಹ ಅಭ್ಯರ್ಥಿಗಳನ್ನು ನೇರ ಸಂದರ್ಶನಕ್ಕೆ ಆಹ್ವಾನಿಸಲಾಗಿದೆ. ಹುದ್ದೆಗಳ ಮಾಹಿತಿ ಹಾಗೂ ರೋಸ್ಟರ್ ವಿವರಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

| ಕ್ರಸ | ಹುದ್ದೆಗಳ ವಿವರ | ವಿದ್ಯಾರ್ಹತೆ | ಮಾಸಿಕ ಸಂಚಿತ ವೇತನ | ಒಟ್ಟು ಹುದ್ದೆಗಳ ಸಂಖ್ಯೆ | ಅಭ್ಯರ್ಥಿ ವಯೋಮಿತಿ | ಕಾರ್ಯ ನಿರ್ವಹಿಸಬೇಕಾಗಿರುವ ಸ್ಥಳ |
|---|---|---|---|---|---|---|
| 1 | ತಜ್ಞ ವೈದ್ಯರು | ಎಂ.ಬಿ.ಬಿಎಸ್(ಆದ್ಯತೆ:ಮೆಡಿಸನ್/ಅನಸ್ತಿಷಿಯಾ (ಡಿಪ್ಲೋಮಾ/ಸ್ನಾತಕೋತ್ತರ)/ರೇಡಿಯೋಥೇರಪಿ (ಡಿಪ್ಲೋಮಾ/ಸ್ನಾತಕೋತ್ತರ) ಆಸ್ಪತ್ರೆಯಲ್ಲಿ ಕನಿಷ್ಠ 1 ವರ್ಷ ಕೆಲಸ ಮಾಡಿದ ಅನುಭವ. (ಆದ್ಯತೆ:ರಾ.ಆ. ಕಾರ್ಯಕ್ರಮದಡಿಯಲ್ಲಿ ಕೆಲಸದ ಅನುಭವ) | 1,10,000/- | 02 SC Others-1 GM WM-1 | 40 ವರ್ಷ ಒಳಗಿರತಕ್ಕದ್ದು | ಸರ್‌ಸಿ.ವಿ ರಾಮನ್ ಸಾರ್ವಜನಿಕ ಆಸ್ಪತ್ರೆ |
| 2 | ಶುಶ್ರೂಷಣಾ ಅಧಿಕಾರಿಗಳು | ಜಿ.ಎನ್.ಎಂ (ಆದ್ಯತೆ: ಜಿ.ಎನ್.ಎಂ. ವಿದ್ಯಾರ್ಹತೆ) ಸಾರ್ವಜನಿಕ ಆರೋಗ್ಯ ಅಥವಾ ಸರ್ಕಾರದ ಆರೋಗ್ಯ ಕಾರ್ಯಕ್ರಮದಲ್ಲಿ 1 ವರ್ಷಗಳ ಅನುಭವ ಕಡ್ಡಾಯವಾಗಿ ಕಂಪ್ಯೂಟರ್ ಜ್ಞಾನ ಹೊಂದಿರಬೇಕು. (ಆದ್ಯತೆ: ರಾ.ಆ.ಅಭಿಯಾನ ಕಾರ್ಯಕ್ರಮದಡಿಯಲ್ಲಿ ಕೆಲಸದ ಅನುಭವ) | 18,714/- | 10 SC Other-1 GM WM-1 ST Rur-1 GM PH-1 Cat (1) WM-1 GM Rur-1 2(A) Oth-1 GM WM-1 SC Rur-1 GM EX M-1 | 40 ವರ್ಷ ಒಳಗಿರತಕ್ಕದ್ದು | ಸರ್‌ಸಿ.ವಿ ರಾಮನ್ ಸಾರ್ವಜನಿಕ ಆಸ್ಪತ್ರೆ |
| 3 | ಆಪ್ತ ಸಮಾಲೋಚಕರು | ವಿಜ್ಞಾನ ವಿಷಯದಲ್ಲಿ ಪದವಿ ಅಥವಾ ಆಪ್ತ ಸಲಹೆ/ ಆರೋಗ್ಯ ಶಿಕ್ಷಣ/ಸಮೂಹ ಸಂವಹನದಲ್ಲಿ ಪದವಿ/ ಡಿಪ್ಲೊಮಾ (ಆದ್ಯತೆ: ಆಪ್ತ ಸಲಹೆ ನೀಡುವುದರಲ್ಲಿ ಡಿಪ್ಲೊಮಾ/ಪದವಿ) ಆರೋಗ್ಯ ಸೇವಾ ಸೌಲಭ್ಯದಲ್ಲಿ ಸಲಹೆಗಾರರಾಗಿ ಕೆಲಸ ಮಾಡಿದ 2 ವರ್ಷಗಳ ಅನುಭವ ಕಡ್ಡಾಯವಾಗಿ ಕಂಪ್ಯೂಟರ್ ಜ್ಞಾನ ಹೊಂದಿರಬೇಕು. (ಆದ್ಯತೆ: ರಾ.ಆ ಕಾರ್ಯಕ್ರಮದಡಿಯಲ್ಲಿ ಕೆಲಸದ ಅನುಭವ) | 19,208/- | 01 GM Others-1 | 40 ವರ್ಷ ಒಳಗಿರತಕ್ಕದ್ದು | ಸಮುದಾಯ ಆರೋಗ್ಯ ಕೇಂದ್ರ, ಕೆಂಗೇರಿ |

- ಈ ಆಯ್ಕೆಯು/ ನೇಮಕಾತಿಯು ಎನ್‌ಹೆಚ್‌ಎಂ ಮಾರ್ಗಸೂಚಿಗಳಂತೆ ರೋಸ್ಟರ್ ಕಮ್ ಮೆರಿಟ್ ಅನ್ವಯ ನೇಮಕಾತಿ ಮಾಡಿಕೊಳ್ಳಲಾಗುವುದು, ಈ ಗುತ್ತಿಗೆ ನೇಮಕಾತಿ ಪ್ರಕ್ರಿಯೆಯಲ್ಲಿ ಅರ್ಹ ಮೀಸಲಾತಿ ಅಭ್ಯರ್ಥಿಗಳು ದೊರೆಯದೇ ಇರುವ ಸಂದರ್ಭದಲ್ಲಿ ಮಾತ್ರ ಸಾಮಾನ್ಯ ಅಭ್ಯರ್ಥಿಗಳನ್ನು ಆಯ್ಕೆ ಮಾಡಿಕೋಳ್ಳಲಾಗುವುದು (ಸುತ್ತೋಲೆ ಸಂಖ್ಯೆ : ಆಕುಕ 25 ಎಂಎಸ್‌ಎನ್ 2016 ದಿನಾಂಕ : 14-03-2016), ಈ ಆಯ್ಕೆ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಯಾದರೂ ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.
- ಈ ಮೇಲಿನ ಹುದ್ದೆಗಳಿಗೆ ನಿಯಮಾನುಸಾರ ಕಂಪ್ಯೂಟರ್‌ನ ಸಾಕ್ಷರತೆಯನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು, ಸರ್ಕಾರದ ಮಾನ್ಯತೆ ಪಡೆದ ಸಂಸ್ಥೆಯಿಂದ ಪ್ರಮಾಣ ಪತ್ರ ಹೊಂದಿರಬೇಕು. (ತಜ್ಞವೈದ್ಯರನ್ನು ಹೊರತುಪಡಿಸಿ)
- ಈ ನೇಮಕಾತಿ ಪ್ರಕಟಣೆಯು ರೋಲಿಂಗ್ ಪ್ರಕಟಣೆ ಆಗಿರುವುದರಿಂದ ನಿಗದಿಪಡಿಸಿರುವ ನೇರ ಸಂದರ್ಶನದ ದಿನಾಂಕದಂದು ಭರ್ತಿ ಆಗದೆ ಇರುವ ಹುದ್ದೆಗಳನ್ನು ನಂತರ ಅರ್ಜಿ ಸಲ್ಲಿಸಿ ಸಂದರ್ಶನದ ಮುಖಾಂತರ ಹುದ್ದೆಗಳನ್ನು ಆಯ್ಕೆ ಮಾಡಲಾಗುವುದು, ಇದರ ಅವಧಿಯು ದಿನಾಂಕ : 31-03-2024ರ ವರೆಗೆ ಇರುತ್ತದೆ.
- ಆಸಕ್ತಿಯುಳ್ಳ ಅಭ್ಯರ್ಥಿಗಳು ದಿನಾಂಕ: 05/12/2023 ರಂದು ಬೆಳಿಗ್ಗೆ 11.00 ಗಂಟೆಗೆ ನೇರ ಸಂದರ್ಶನಕ್ಕೆ ತಮ್ಮ ಮೂಲ ದಾಖಲೆಗಳೊಂದಿಗೆ ಹಾಗೂ ನಕಲು ಪ್ರತಿಗಳೊಂದಿಗೆ ಜಿಲ್ಲಾ ಸರ್ವೇಕ್ಷಣಾಧಿಕಾರಿಗಳ ಕಛೇರಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ಆವರಣ ಹಳೇ ಟಿ.ಬಿ. ಆಸ್ಪತ್ರೆ, ಹಳೇ ಮದ್ರಾಸ್ ರಸ್ತೆ, ಸ್ವಾಮಿ ವಿವೇಕಾನಂದ ಮೆಟ್ರೋ ನಿಲ್ದಾಣ, ಇಂದಿರಾನಗರ, ಬೆಂಗಳೂರು-38 ಇಲ್ಲಿಗೆ ಹಾಜರಾಗುವುದು.

ಸಹಿ/-
ಸದಸ್ಯ ಕಾರ್ಯದರ್ಶಿಗಳು
ಜಿಲ್ಲಾ ಸರ್ವೇಕ್ಷಣಾಧಿಕಾರಿಗಳು, ಬೆಂಗಳೂರು ನಗರ ಜಿಲ್ಲೆ.

DIPR/CP/2324/Zen/2023-24


ನಟಿ ಎಂ.ಲೀಲಾವತಿ ನಿರ್ಮಿಸಿರುವ ಪಶು ಆಸ್ಪತ್ರೆ ಉದ್ಘಾಟಿಸಿದ ಡಿ.ಕೆ. ಶಿವಕುಮಾರ್

## 'ಸಹ ಕಲಾವಿದರಿಗೆ ಪಿಂಚಣಿ ಭಾಗ್ಯ'

ಪ್ರಜಾವಾಣಿ ವಾರ್ತೆ

**ನೆಲಮಂಗಲ:** ಚಿತ್ರರಂಗದ ಸಹ ಕಲಾವಿದರು ಹಾಗೂ ತೆರೆಯ ಹಿಂದಿನ ತಾಂತ್ರಿಕ ವರ್ಗದವರಿಗೆ ಪಿಂಚಣಿ ನೀಡಲು ಚಿಂತನೆ ನಡೆಸಲಾಗುವುದು ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ನೆಲಮಂಗಲದ ಸೋಲದೇವನಹಳ್ಳಿಯಲ್ಲಿ ನಟಿ ಎಂ. ಲೀಲಾವತಿ ಅವರು ₹ 40 ಲಕ್ಷ ವೆಚ್ಚದಲ್ಲಿ ನಿರ್ಮಿಸಿರುವ ಪಶು ಆಸ್ಪತ್ರೆಯನ್ನು ಮಂಗಳವಾರ ಉದ್ಘಾಟಿಸಿ, ಲೀಲಾವತಿ ಅವರ ಆರೋಗ್ಯ ವಿಚಾರಿಸಿದ ಬಳಿಕ ಅವರು ಸುದ್ದಿಗಾರರ ಜೊತೆಗೆ ಮಾತನಾಡಿದರು.

'ಸಹ ಕಲಾವಿದರಿಗೆ, ತಂತ್ರಜ್ಞರಿಗೆ ಪಿಂಚಣಿ ಕೊಡಿಸಬೇಕು ಎನ್ನುವುದು ಲೀಲಾವತಿ ಅವರ ದೊಡ್ಡ ಕನಸು. ಈ ಬಗ್ಗೆ ಚಲನಚಿತ್ರ ವಾಣಿಜ್ಯ ಮಂಡಳಿಗೆ ಅಧ್ಯಕ್ಷರ ಮೂಲಕ ಮನವಿ ಸಲ್ಲಿಸಿದ್ದರು. ಈ ಬಗ್ಗೆ ಮುಖ್ಯಮಂತ್ರಿಯವರ ಜೊತೆಗೆ ಮಾತನಾಡಿ ಕಲಾವಿದರಿಗೆ ಶಕ್ತಿ ತುಂಬುವ ಕೆಲಸವನ್ನು ನಮ್ಮ ಸರ್ಕಾರ ಮಾಡಲಿದೆ' ಎಂದರು.

'ಬೆಂಗಳೂರಿಗೆ ಹತ್ತಿರವಾಗಿರುವ ಜಾಗದಲ್ಲಿ ಪಶು ಆಸ್ಪತ್ರೆ ನಿರ್ಮಾಣ ಮಾಡಿರುವುದು ಈ ಭಾಗದ ರೈತರಿಗೆ ಹೆಚ್ಚಿನ ಅನುಕೂಲವಾಗಲಿದೆ. ಪಶುಗಳಿಗೆ ಆಸ್ಪತ್ರೆ ನಿರ್ಮಾಣ ಮಾಡಿ ನಮ್ಮ ಸಮಾಜಕ್ಕೆ ಲೀಲಾವತಿ ಅವರು ಮತ್ತು ಅವರ ಮಗ ವಿನೋದ್ ರಾಜ್ ಅವರು ದೊಡ್ಡ ಸಂದೇಶವನ್ನು ನೀಡಿದ್ದಾರೆ' ಎಂದು ಹೇಳಿದರು.

'ಸ್ಥಳೀಯ ಬಗರ್‌ಹುಕುಂ ಜಮೀನು, ಲೇಔಟ್‌ಗಳು ಸೇರಿದಂತೆ ಈ ಭಾಗದ ರೈತರಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ ಲೀಲಾವತಿ ಗಮನ ಸೆಳೆದಿದ್ದಾರೆ. ಕಾನೂನಿನ ಚೌಕಟ್ಟಿನಲ್ಲಿ ಅವರ ಮನವಿಗಳಿಗೆ ಸ್ಪಂದಿಸಲಾಗುವುದು' ಎಂದು ತಿಳಿಸಿದರು.

ನಟ ವಿನೋದ್ ರಾಜ್ ಮಾತನಾಡಿ, 'ಸುತ್ತಮುತ್ತ 10-15 ಕಿ.ಮೀ ಯಾವುದೇ ಪಶು ಆಸ್ಪತ್ರೆ ಇಲ್ಲ. ಇಲ್ಲಿ ಪಶು ಆಸ್ಪತ್ರೆ ನಿರ್ಮಿಸಿದರೆ ಸುಮಾರು 8 ಸಾವಿರ ಜಾನುವಾರುಗಳಿಗೆ ಸಹಕಾರಿಯಾಗುತ್ತದೆ ಎಂದು ನಮ್ಮ ತಾಯಿ ಕಾಳಜಿ ವಹಿಸಿ ಆಸ್ಪತ್ರೆ ನಿರ್ಮಿಸಿದ್ದಾರೆ. ಆಸ್ಪತ್ರೆಯನ್ನು ಸರ್ಕಾರಕ್ಕೆ ಹಸ್ತಾಂತರಿಸಿದರೂ ಇಲ್ಲಿನ ಎಲ್ಲ ಮೂಲ ಸೌಲಭ್ಯಗಳನ್ನು ನಾವೇ ನೋಡಿಕೊಳ್ಳುತ್ತೇವೆ' ಎಂದು ತಿಳಿಸಿದರು.

ವಿಧಾನ ಪರಿಷತ್ ಸದಸ್ಯ ಎಸ್. ರವಿ, ಶಾಸಕ ಎನ್. ಶ್ರೀನಿವಾಸ್, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿ.ಆರ್. ಗೌಡ, ಜಿಲ್ಲಾಧಿಕಾರಿ ಎನ್. ಶಿವಶಂಕರ್, ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ, ತಹಶೀಲ್ದಾರ್ ಆರುಂಧತಿ, ಕಾಂಗ್ರೆಸ್ ಮುಖಂಡರಾದ ನೆ.ಲ. ನರೇಂದ್ರಬಾಬು, ವೀರಮಾರೇಗೌಡ, ಸಿ.ಎಂ.ಗೌಡ, ಚಿಕ್ಕಹನುಮೇಗೌಡ, ಸಂತೋಷ್, ಮಂಜುನಾಥಯ್ಯ, ಡಿ.ಚಿಕ್ಕಣ್ಣ ಇದ್ದರು.

### ಲೀಲಾವತಿ ಆರೋಗ್ಯ ವಿಚಾರಿಸಿದ ಶಿವರಾಜ್‌ಕುಮಾರ್ ದಂಪತಿ

ವಯೋಸಹಜ ಅನಾರೋಗ್ಯದಿಂದ ಬಳಲುತ್ತಿರುವ ಕನ್ನಡದ ಮೇರುನಟಿ ಲೀಲಾವತಿ ಅವರ ಮನೆಗೆ ಮಂಗಳವಾರ ನಟ ಶಿವರಾಜ್‌ಕುಮಾರ್ ಹಾಗೂ ಗೀತಾ ಶಿವರಾಜ್‌ಕುಮಾರ್ ಅವರು ಭೇಟಿ ನೀಡಿ, ಆರೋಗ್ಯ ವಿಚಾರಿಸಿದ್ದಾರೆ.

ನೆಲಮಂಗಲದ ಸೋಲದೇವನಹಳ್ಳಿಯಲ್ಲಿರುವ ತೋಟದಮನೆಗೆ ಭೇಟಿ ನೀಡಿದ ಶಿವರಾಜ್‌ಕುಮಾರ್ ಅವರು, ಲೀಲಾವತಿ ಅವರ ಪುತ್ರ, ನಟ ವಿನೋದ್ ರಾಜ್ ಅವರಿಗೆ ಧೈರ್ಯ ತುಂಬಿದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಶಿವರಾಜ್‌ಕುಮಾರ್, 'ನನಗೂ, ವಿನೋದ್ ಅವರಿಗೂ ಇರುವ ಆತ್ಮೀಯತೆ ನಮಗಿಬ್ಬರಿಗಷ್ಟೇ ಗೊತ್ತು. ಮಗ ಚೆನ್ನಾಗಿ ಇರಬೇಕು ಎನ್ನುವುದು ಲೀಲಾವತಿ ಅವರ ಆಸೆ. ಹೆತ್ತವರಿಗೆ ಮಕ್ಕಳು ಚೆನ್ನಾಗಿ ಇರಬೇಕು ಎನ್ನುವ ಬಯಕೆ. ವಿನೋದ್ ಅವರು ಧೈರ್ಯವಾಗಿರಬೇಕು. ಲೀಲಾವತಿ ಅಮ್ಮ ನನ್ನ ಧ್ವನಿ ಗುರುತಿಸಿದರು. ಅವರ ಪ್ರೀತಿಯನ್ನು ಮರೆಯಲು ಸಾಧ್ಯವಿಲ್ಲ. ಒಂದೆಡೆ ಅವರ ಸ್ಥಿತಿ ನೋಡಿ ಬೇಸರವಾಗುತ್ತದೆ. ಆದರೆ ದೇವರ ಆಶೀರ್ವಾದವಿದೆ, ಜನರ ಪ್ರೀತಿ ಇದೆ. ಹೀಗಾಗಿ ಬೇಗ ಗುಣಮುಖರಾಗುತ್ತಾರೆ. ಲೀಲಾವತಿ ಅವರ ಹೆಸರಿನಲ್ಲಿ ಪಶು ಆಸ್ಪತ್ರೆ ಆರಂಭವಾಗಿರುವುದು ಸಂತೋಷದ ವಿಚಾರ' ಎಂದರು.

ಇತ್ತೀಚೆಗಷ್ಟೇ ನಟರಾದ ಅರ್ಜುನ್ ಸರ್ಜಾ, ದರ್ಶನ್, ಅಭಿಷೇಕ್ ಅಂಬರೀಷ್ ಅವರು ಲೀಲಾವತಿ ಅವರ ಮನೆಗೆ ಭೇಟಿ ನೀಡಿ ಆರೋಗ್ಯ ವಿಚಾರಿಸಿದ್ದರು.



ನಟ ಶಿವರಾಜ್‌ಕುಮಾರ್ ಹಾಗು ಪತ್ನಿ ಗೀತಾ, ಲೀಲಾವತಿ ಅವರ ಆರೋಗ್ಯ ವಿಚಾರಿಸಿದರು. ನಟ ವಿನೋದ್ ರಾಜ್ ಇದ್ದಾರೆ

## 'ಅಂಗಡಿ ತೆರವು: ಬಿಬಿಎಂಪಿ ಅಧಿಕಾರಿಗಳ ಮೇಲೆ ಪ್ರಕರಣ ದಾಖಲಿಸಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ನಗರದಲ್ಲಿ ಇತ್ತೀಚೆಗೆ ಬೀದಿ ವ್ಯಾಪಾರಿಗಳನ್ನು ತೆರವುಗೊಳಿಸಿ, ಅವರ ವಸ್ತುಗಳನ್ನು ಜಪ್ತಿ ಮಾಡಿರುವ ಬಿಬಿಎಂಪಿ ಅಧಿಕಾರಿಗಳ ಮೇಲೆ ಪ್ರಕರಣ ದಾಖಲಿಸಬೇಕು' ಎಂದು ಬೆಂಗಳೂರು ಜಿಲ್ಲಾ ಬೀದಿ ವ್ಯಾಪಾರಿಗಳ ಸಂಘಟನೆಗಳ ಒಕ್ಕೂಟ ಆಗ್ರಹಿಸಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಎಸ್. ಬಾಬು, 'ಬ್ರ್ಯಾಂಡ್ ಬೆಂಗಳೂರಿನಲ್ಲಿ ಬಡವರಿಗೆ ವ್ಯಾಪಾರ ಮಾಡಲು ಜಾಗವಿಲ್ಲವೇ? ಕಳೆದ ಆರು ತಿಂಗಳಲ್ಲಿ ಮಹದೇವಪುರ ವ್ಯಾಪ್ತಿಯೊಂದರಲ್ಲಿ 1 ಸಾವಿರಕ್ಕೂ ಹೆಚ್ಚು ಬೀದಿ ವ್ಯಾಪಾರಿಗಳನ್ನು ಎತ್ತಂಗಡಿ ಮಾಡಲಾಗಿದೆ. ಮಲ್ಲೇಶ್ವರ, ಜಯನಗರ 4ನೇ ಬಡಾವಣೆ ಹಾಗೂ ಬನಶಂಕರಿಯಲ್ಲಿ ಬೀದಿ ವ್ಯಾಪಾರಿಗಳನ್ನು ಬಿಬಿಎಂಪಿ ಅಧಿಕಾರಿಗಳು ಒತ್ತಾಯಪೂರ್ವಕವಾಗಿ ತೆರವುಗೊಳಿಸಿದ್ದಾರೆ. ಇದರಿಂದ, ಹಲವಾರು ವ್ಯಾಪಾರಿಗಳು ನಷ್ಟ ಅನುಭವಿಸಿ ಬೀದಿ ಪಾಲಾಗಿದ್ದು, ಇಂತಹ ವ್ಯಾಪಾರಿಗಳಿಗಾಗಿರುವ ನಷ್ಟವನ್ನು ಭರಿಸಬೇಕು' ಎಂದು ಒತ್ತಾಯಿಸಿದರು.

ವಕೀಲ ವಿನಯ್ ಶ್ರೀನಿವಾಸ್, 'ಬೀದಿ ವ್ಯಾಪಾರಿಗಳ ಜೀವನೋಪಾಯ ರಕ್ಷಣೆ ಹಾಗೂ ನಿಯಂತ್ರಣ ಕಾಯ್ದೆ-2014ರ ಪ್ರಕಾರ ನಗರದಲ್ಲಿರುವ ಬೀದಿ ವ್ಯಾಪಾರಿಗಳ ಸಮೀಕ್ಷೆ ನಡೆಸಬೇಕು. ಈ ಕಾಯ್ದೆಯ ಬಗ್ಗೆ ಬಿಬಿಎಂಪಿ ಅಧಿಕಾರಿಗಳು ಮತ್ತು ಪೊಲೀಸರಿಗೆ ಈ ಅರಿವು ಮೂಡಿಸುವ ತರಬೇತಿ ಕಾರ್ಯಕ್ರಮ ಹಮ್ಮಿಕೊಳ್ಳಬೇಕು. ಪಟ್ಟಣ ವ್ಯಾಪಾರ ಸಮಿತಿಗಳಿಗೆ ಕಾನೂನಿನ ಪ್ರಕಾರ ಕಚೇರಿ, ಬಜೆಟ್ ನೀಡಬೇಕು. ಏನಾದರೂ ಸಮಸ್ಯೆಗಳು ಬಂದಾಗ ಮೊದಲು ಸಮಿತಿಯಲ್ಲಿ ಚರ್ಚಿಸಬೇಕು. ಕಾಯ್ದೆಯ ಕಲಂ 20ರಂತೆ ದೂರು ನಿವಾರಣೆ ಸಮಿತಿ ರಚಿಸಬೇಕು' ಎಂದು ಹೇಳಿದರು.

'2017ರಲ್ಲಿ ಬೀದಿ ವ್ಯಾಪಾರಿಗಳಿಗೆ ಬಿಬಿಎಂಪಿ ನೀಡಿರುವ ಗುರುತಿನ ಚೀಟಿ ಹಾಗೂ ವ್ಯಾಪಾರ ಪ್ರಮಾಣ ಪತ್ರದ ಸಿಂಧುತ್ವವನ್ನು ಮುಂದಿನ ಸಮೀಕ್ಷೆ ನಡೆಸುವವರೆಗೂ ಮುಂದುವರಿಸುವಂತೆ ಆದೇಶ ಹೊರಡಿಸಬೇಕು' ಎಂದು ಹೇಳಿದರು.

ಸಂಘದ ಉಪಾಧ್ಯಕ್ಷ ಸಯ್ಯದ್ ಜಮೀರ, ಸದಸ್ಯೆ ವನಜಾಕ್ಷಿ ಇದ್ದರು.


ಕೆನರಾ ಬ್ಯಾಂಕ್ Canara Bank
ಭಾರತ ಸರ್ಕಾರದ ಒಂದು ಉದ್ಯಮ · A Government of India Undertaking
ಸಿಂಡಿಕೇಟ್ Syndicate
ಸಾಮಾನ್ಯ ಆಡಳಿತ ವಿಭಾಗ, ವೃತ್ತ ಕಛೇರಿ, ಬೆಂಗಳೂರು - 560 001
**ಬ್ಯಾಂಕ್ ಮಾಲೀಕತ್ವದ ಬಳಸಿದ ಕಾರುಗಳ ಮಾರಾಟ**
ಬ್ಯಾಂಕ್ ಮಾಲೀಕತ್ವದ ಬಳಸಿದ ಕಾರುಗಳು "ಇರುವಲ್ಲಿಯೇ ಇರುವಂತೆಯೇ" ಆಧಾರದ ಮೇಲೆ ಮಾರಾಟಕ್ಕೆ ಲಭ್ಯವಿವೆ.
ಹೆಚ್ಚಿನ ವಿವರಗಳು ಮತ್ತು ಇತರ ಷರತ್ತು ಮತ್ತು ನಿಬಂಧನೆಗಳಿಗಾಗಿ, ದಯವಿಟ್ಟು **https://canarabank.com/tenders.aspx** ಗೆ ಭೇಟಿ ನೀಡಿ.
ಸ್ಪಷ್ಟೀಕರಣಗಳಿಗಾಗಿ ಸಂಪರ್ಕಿಸಿ : 080-25310038
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ : **22-12-2023, ಸಂಜೆ 03:00 ಗಂಟೆ**
ಸಹಿ/-
ಸಹಾಯಕ ಮಹಾ ಪ್ರಬಂಧಕರು



**ನಗರಸಭೆ ಕಾರ್ಯಾಲಯ, ಕೋಲಾರ**
ಸಂಖ್ಯೆ:ನಸಕೋ/ಆಶಾ/ಟೆಂಡರ್/ಸಿಆರ್/01/2023-24 ದಿನಾಂಕ: 24.11.2023
**ಟೆಂಡರ್ ಪ್ರಕಟಣೆ**
(ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ನಿಬಂಧನೆಗಳಿಗೆ ಒಳಪಟ್ಟು ಇ-ಟೆಂಡರ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ.)
ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದೇಶ 1999-2000 ರ ಪ್ರಕಾರ ಆಕ್ಟ್ 2000 ರ ನಿಯಮದಂತೆ ಕೋಲಾರ ನಗರಸಭೆ ವತಿಯಿಂದ 2022-23 ನೇ ಸಾಲಿನ 15ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದಲ್ಲಿ ದ್ವಿ ಲಕೋಟೆ ಪದ್ಧತಿಯಲ್ಲಿ ಅರ್ಹ ಗುತ್ತಿಗೆದಾರರಿಂದ ಘನತ್ಯಾಜ್ಯ ವಸ್ತು ನಿರ್ವಹಣೆ ಘಟಕಕ್ಕೆ ಇ.ಸಿ.ಪಡೆಯಲು (ಇಂಡೆಂಟ್ ಸಂಖ್ಯೆ **DMA/2023-24/SE1436**) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಈ ಕೆಳಕಂಡ ಸಹಿ ಮಾಡಿರುವವರು ಟೆಂಡರ್‌ನ್ನು ಆಹ್ವಾನಿಸಿರುತ್ತಾರೆ. ಇಲಾಖಾ ವೆಬ್‌ಸೈಟ್ **https://kppp.karnataka.gov.in** ರಲ್ಲಿ ಟೆಂಡರ್‌ಗಾಗಿ ಭಾಗವಹಿಸಬಹುದು ಹಾಗೂ ವಿವರಗಳನ್ನು ಪಡೆಯಬಹುದಾಗಿದೆ. (1) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **11.12.2023 ರ ಸಂಜೆ 17.30 ಗಂಟೆವರೆಗೆ.** (2) ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **13.12.2023 ರ ಬೆಳಗ್ಗೆ 11.00 ಗಂಟೆಗೆ.**
ಸೂಚನೆ: ಹೆಚ್ಚಿನ ವಿವರಗಳಿಗಾಗಿ ನಗರಸಭೆಯ ತಾಂತ್ರಿಕ ವಿಭಾಗದಲ್ಲಿ ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು ಹಾಗೂ **www.kolarcity.mrc.gov.in** ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು.
ಸಹಿ/-
ಪೌರಾಯುಕ್ತರು,
ನಗರಸಭೆ, ಕೋಲಾರ
ವಾ.ಸಾ.ಸಂ.ಇ./ ಕೋಲಾರ/ ಆರ್.ಓ.ಸಂಖ್ಯೆ 228/ಕೆಎಸ್‌ಎಂಸಿಎ/2023-24



icmr | NCDIR
INDIAN COUNCIL OF MEDICAL RESEARCH | NATIONAL CENTRE FOR DISEASE INFORMATICS AND RESEARCH
**ICMR-NATIONAL CENTRE FOR DISEASE INFORMATICS AND RESEARCH**
Department of Health Research, Ministry of Health and Family Welfare, Government of India,
Nirmal Bhawan- ICMR Complex, Poojanahalli Road, Kannamangala Post,
Bengaluru -562 110. Karnataka (India) Email: adm.ncdir@gov.in
**Advertisement No. 02/2023**
Online applications are invited from eligible candidates for the various posts to be filled up on regular basis at ICMR-NCDIR, Bengaluru. The vacancy details are as follows:

| Sl. No | Name of the Post | Pay Level | No. of Posts | Category UR | Category OBC | Age Limit |
|---|---|---|---|---|---|---|
| 1 | Lower Division Clerk | Level-2 | 2 | 1 | 1 | 18-27 |
| 2 | Upper Division Clerk | Level-4 | 2 | 2 | - | 18-27 |
| 3 | Stenographer | Level-4 | 3 | 3 | - | 18-27 |

Last date for submission of online applications: **29.12.2023 upto 05:00 PM.** Detailed advertisement and other terms and conditions can be viewed/ downloaded from the websites www.ncdirindia.org / www.icmr.nic.in.
Sd/-
Director

आईसीएमआर-राष्ट्रीय रोग सूचना विज्ञान और अनुसंधान केंद्र
स्वास्थ्य अनुसंधान विभाग, स्वास्थ्य एवं परिवार कल्याण मंत्रालय, भारत सरकार, निर्मल भवन- आईसीएमआर कॉम्प्लेक्स, पूजनहल्ली रोड, कन्नमंगला पोस्ट,बेंगलुरु -562 110. कर्नाटक (भारत) ईमेल: adm.ncdir@gov.in
**विज्ञापन संख्या २ /२०२३**
आईसीएमआर-एनसीडीआईआर, बेंगलुरु में नियमित आधार पर भरे जाने वाले विभिन्न पदों के लिए पात्र उम्मीदवारों से ऑनलाइन आवेदन आमंत्रित किए जाते हैं। रिक्ति विवरण इस प्रकार हैं:

| क्र. सं. | पद का नाम | वेतन स्तर | पदों की संख्या | वर्ग निष्कपट | वर्ग अन्य पिछड़ा वर्ग | आयु सीमा |
|---|---|---|---|---|---|---|
| 1 | अवर श्रेणी लिपिक | स्तर-2 | 2 | 1 | 1 | 18-27 |
| 2 | उच्च श्रेणी लिपिक | स्तर-4 | 2 | 2 | - | 18-27 |
| 3 | आशुलिपिक | स्तर-4 | 3 | 3 | - | 18-27 |

ऑनलाइन आवेदन जमा करने की अंतिम तिथि: 29.12.2023 शाम 05:00 बजे तक। विस्तृत विज्ञापन और अन्य नियम एवं शर्तें वेबसाइट से देखी/डाउनलोड की जा सकती हैं। www.ncdirindia.org/www.icmr.nic.in
हस्ताक्षरित/-
निदेशक


350ಕ್ಕೂ ಹೆಚ್ಚು ಅಂತರರಾಷ್ಟ್ರೀಯ ಪ್ರತಿನಿಧಿಗಳು ಭಾಗಿ

## ಇಂದಿನಿಂದ ತಂತ್ರಜ್ಞಾನ ಶೃಂಗಸಭೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮೂರು ದಿನಗಳ ಬೆಂಗಳೂರು ತಂತ್ರಜ್ಞಾನ ಶೃಂಗಸಭೆ-2023 ಬುಧವಾರದಿಂದ ಆರಂಭವಾಗಲಿದೆ. 30ಕ್ಕೂ ಹೆಚ್ಚು ರಾಷ್ಟ್ರಗಳ ತಂತ್ರಜ್ಞರು, ಸಂಶೋಧಕರು, ನವೋದ್ಯಮಗಳ ಪ್ರತಿನಿಧಿಗಳು ಈ ಶೃಂಗಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಇದು ಬೆಂಗಳೂರು ತಂತ್ರಜ್ಞಾನ ಶೃಂಗಸಭೆಯ 26ನೇ ಆವೃತ್ತಿ. ಬೆಂಗಳೂರು ನಗರದ ಅರಮನೆ ಆವರಣದಲ್ಲಿ ಈ ಬಾರಿಯ ಶೃಂಗಸಭೆ ನಡೆಯಲಿದ್ದು, ಸಕಲ ಸಿದ್ಧತೆ ನಡೆದಿದೆ. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ದ್ವಿಪಕ್ಷೀಯ ಮಾತುಕತೆಗಳಿಗೂ ಸಭೆ ವೇದಿಕೆಯಾಗಲಿದೆ.

ಬುಧವಾರ ಬೆಳಿಗ್ಗೆ 10 ಗಂಟೆಗೆ ನಡೆಯುವ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ 'ಬೆಂಗಳೂರು ತಂತ್ರಜ್ಞಾನ ಶೃಂಗಸಭೆ-2023' ಉದ್ಘಾಟಿಸುವರು. ಕಝುಕಿಸ್ತಾನದ ಡಿಜಿಟಲ್ ಅಭಿವೃದ್ಧಿ, ನಾವೀನ್ಯತೆ ಮತ್ತು ವೈಮಾನಿಕ ಉದ್ಯಮ ಖಾತೆ ಸಚಿವ ಬಾಗ್ದೋತ್ ಮುಸ್ಸಿನ್, ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಎನ್.ಎಸ್. ಬೋಸರಾಜು, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ, ಎಎಂಡಿ ಸಮೂಹದ ಕಾರ್ಯನಿರ್ವಾಹಕ ಉಪಾಧ್ಯಕ್ಷ ಮಾರ್ಕ್ ಪೇಪರ್‌ಮಾಸ್ಟರ್, ವಿಪ್ರೊ ಕಾರ್ಯನಿರ್ವಾಹಕ ನಿರ್ದೇಶಕ ರಿಷಾದ್ ಪ್ರೇಮ್‌ಜಿ ಸೇರಿದಂತೆ ಹಲವರು ಉದ್ಘಾಟನಾ ಸಮಾರಂಭದಲ್ಲಿ ಪಾಲ್ಗೊಳ್ಳುವರು.

350ಕ್ಕೂ ಹೆಚ್ಚು ಮಂದಿ ಅಂತರರಾಷ್ಟ್ರೀಯ ಪ್ರತಿನಿಧಿಗಳು ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ. 400ಕ್ಕೂ ಹೆಚ್ಚು ಮಂದಿ ಗೋಷ್ಠಿಗಳಲ್ಲಿ ವಿಷಯ ಮಂಡಿಸುವರು. ವಸ್ತುಪ್ರದರ್ಶನಕ್ಕೂ ವ್ಯವಸ್ಥೆ ಮಾಡಿದ್ದು, 350ಕ್ಕೂ ಹೆಚ್ಚು ನವೋದ್ಯಮಗಳು ತಮ್ಮ ಸಂಶೋಧನೆ ಮತ್ತು ಉತ್ಪನ್ನಗಳನ್ನು ಪ್ರದರ್ಶಿಸಲಿವೆ. ವಸ್ತುಪ್ರದರ್ಶನ ವಿಭಾಗದಲ್ಲಿ ಒಟ್ಟು 600 ಮಳಿಗೆಗಳನ್ನು ಸಜ್ಜುಗೊಳಿಸಲಾಗಿದೆ.

ನವೋದ್ಯಮಗಳ 2,000 ಪ್ರತಿನಿಧಿಗಳು ಸೇರಿದಂತೆ 20,000ಕ್ಕೂ ಹೆಚ್ಚು ಮಂದಿ ಈ ಶೃಂಗಸಭೆಯ ಗೋಷ್ಠಿಗಳಲ್ಲಿ ಭಾಗವಹಿಸಲಿದ್ದಾರೆ. 50,000ಕ್ಕೂ ಹೆಚ್ಚು ಮಂದಿ ಶೃಂಗಸಭೆಗೆ ಭೇಟಿ ನೀಡುವ ನಿರೀಕ್ಷೆ ಇದೆ.

### 75ಕ್ಕೂ ಹೆಚ್ಚು ಗೋಷ್ಠಿ

ಈ ಬಾರಿಯ ಶೃಂಗಸಭೆಯಲ್ಲಿ 75ಕ್ಕೂ ಹೆಚ್ಚು ಗೋಷ್ಠಿಗಳು ನಡೆಯಲಿವೆ. ಕೃತಕ ಬುದ್ಧಿಮತ್ತೆ, ರೋಬಾಟಿಕ್ಸ್, ಗುಪ್ತಚರ ಮತ್ತು ವೈಮಾನಿಕ ಕ್ಷೇತ್ರ, ಔಷಧ ಸಂಶೋಧನೆ ಮತ್ತು ಉತ್ಪಾದನೆ, ಕೃಷಿ ಕ್ಷೇತ್ರದಲ್ಲಿ ಜೈವಿಕ ತಂತ್ರಜ್ಞಾನದ ಬಳಕೆ, ನವೋದ್ಯಮಗಳಿಗೆ ಸಂಬಂಧಿಸಿದಂತೆ ಚರ್ಚೆಗಳು ನಡೆಯಲಿವೆ.

ಗೋಷ್ಠಿಗಳಲ್ಲಿ ಇನ್ಫೊಸಿಸ್‌ನ ಎನ್.ಆರ್. ನಾರಾಯಣಮೂರ್ತಿ, ಬಯೋಕಾನ್‌ನ ಕಿರಣ ಮಜುಂದಾರ್ ಷಾ ಪಾಲ್ಗೊಳ್ಳಲಿದ್ದಾರೆ.

### ನಗರದಲ್ಲಿ ಇಂದು

**ಸ್ವಾಭಿಮಾನಿ ಕನ್ನಡಿಗರ ರಾಜ್ಯೋತ್ಸವ: ಉದ್ಘಾಟನೆ:** ಎನ್. ಕುಮಾರ್, ಧ್ವಜಾರೋಹಣ: ರಾಮೇಗೌಡ, ಅತಿಥಿಗಳು: ಜಗದೀಶ್, ಎಂ. ಪ್ರಕಾಶಮೂರ್ತಿ, ಅಧ್ಯಕ್ಷತೆ: ಸಿ.ಕೆ. ರವಿಚಂದ್ರ, ಆಯೋಜನೆ: ರಾಜ್ಯ ನಡಿಗೆದಾರರ ಒಕ್ಕೂಟ, ಸ್ಥಳ: ಲಾಲ್‌ಬಾಗ್ ವೆಸ್ಟ್‌ಗೇಟ್ ಬಳಿ, ಬೆಳಿಗ್ಗೆ 7.30

**ವಾರ್ಷಿಕ ಕ್ರೀಡಾಕೂಟ: ಉದ್ಘಾಟನೆ:** ಎಂ.ಕೆ. ಆಶಾ, ಅತಿಥಿ: ಎಂ. ತಿಮ್ಮರೆಡ್ಡಿ, ಅಧ್ಯಕ್ಷತೆ: ಕೆ.ವಿ. ಮುನಿಸ್ವಾಮಿ, ಆಯೋಜನೆ: ವೆಂಕಟೇಶ್ವರ ಎಜುಕೇಷನಲ್ ಇನ್‌ಸ್ಟಿಟ್ಯೂಟ್ಸ್, ಸ್ಥಳ: ಐಟಿಐ ಅಂಬೇಡ್ಕರ್ ಕ್ರೀಡಾಂಗಣ, ಕೆ.ಆರ್. ಪುರ, ಬೆಳಿಗ್ಗೆ 9ರಿಂದ

**ಅಂತರಶಾಲಾ ರಸಪ್ರಶ್ನೆ ಸ್ಪರ್ಧೆ:** ಆಯೋಜನೆ: ಡೆಕ್ಕನ್ ಹೆರಾಲ್ಡ್, ಸ್ಥಳ: ಬಾಲಭವನ, ಕಬ್ಬನ್ ಉದ್ಯಾನ, ಬೆಳಿಗ್ಗೆ 9.30


**ಕರ್ನಾಟಕ ರಾಜ್ಯೋತ್ಸವ:** ಉದ್ಘಾಟನೆ: ಶಿವರಾಜ ತಂಗಡಗಿ, ಅತಿಥಿಗಳು: ರಿಜ್ವಾನ್ ಅರ್ಷದ್, ಕೆ. ಧರಣಿದೇವಿ, ಪಿಚ್ಚಳ್ಳಿ ಶ್ರೀನಿವಾಸ್, ಅಧ್ಯಕ್ಷತೆ: ಚಂದ್ರಶೇಖರ್ ಬಿ., ಆಯೋಜನೆ ಮತ್ತು ಸ್ಥಳ: ಸರ್ಕಾರಿ ರಾಂನಾರಾಯಣ್ ಚೆಲ್ಲಾರಾಂ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಅರಮನೆ ರಸ್ತೆ, ಬೆಳಿಗ್ಗೆ 10.30

**ಕರ್ನಾಟಕ ರಾಜ್ಯೋತ್ಸವ:** ಅಧ್ಯಕ್ಷತೆ: ಎಲ್. ಮಂಜುನಾಥ್, ಅತಿಥಿಗಳು: ಎಸ್. ರಾಜೇಂದ್ರ ಕುಮಾರ್, ಜಿ. ಕೃಷ್ಣಪ್ಪ, ಮಾಗಡಿ ಗಿರೀಶ್, ಆಯೋಜನೆ ಮತ್ತು ಸ್ಥಳ: ಅಂಚೆ ಇಲಾಖೆ, ಮೇಘದೂತ್ ಸಭಾಂಗಣ, ಜಿಪಿಓ, ಮಧ್ಯಾಹ್ನ 2

**ಮಹಿಳಾ ಸಾಹಿತ್ಯದ ಹಿರಿಯ ಚೇತನಗಳು 'ಜಯಾ ರಾಜಶೇಖರ' ಗೌರವಾರ್ಪಣೆ:** ಸಂವಾದ: ಶೈಲಜಾ ಸುರೇಶ್, ವಿದ್ಯಾ ಶಿರಹಟ್ಟಿ, ಮಧುರಾಕರ್ಣಂ, ವಿಭಾ ಪುರೋಹಿತ್, ತ್ರಿವೇಣಿ ಮಿಟ್ಟಿ, ಅನಂತ ಕುಮಾರಿ, ಸ್ವರ್ಣಗೌರಿ ಕೆ.ಎಸ್., ಕೆ.ವಿ. ರಾಜೇಶ್ವರಿ, ಆಯೋಜನೆ: ಲೇಖಿಕಾ ಸಾಹಿತ್ಯ ವೇದಿಕೆ, ಸ್ಥಳ: #33, 15ನೇ ಕ್ರಾಸ್, ಜಯನಗರ, 3ನೇ ಬ್ಲಾಕ್, ಮಧ್ಯಾಹ್ನ 3

**ಕರ್ನಾಟಕ ರಾಜ್ಯೋತ್ಸವ:** ಉದ್ಘಾಟನೆ: ರಾಮಲಿಂಗಾರೆಡ್ಡಿ, ಅಧ್ಯಕ್ಷತೆ: ಮನು ಬಳಿಗಾರ್, 'ಕನ್ನಡ ವಿದ್ಯಾಶ್ರೀ', ಕಾರ್ಮಿಕರಿಗೆ 'ಕನ್ನಡ ಶ್ರೀ' ಪ್ರಶಸ್ತಿಗಳ ಪ್ರದಾನ: ಜಿ. ಸತ್ಯವತಿ, ಕಲಾ ಕೃಷ್ಣಸ್ವಾಮಿ, ಸನ್ಮಾನಿತರು: ಎಚ್. ದುಂಡಿರಾಜ, ಬೈರಮಂಗಲ ರಾಮೇಗೌಡ, ಆಯೋಜನೆ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಸ್ಥಳ: ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ, ಕೇಂದ್ರ ಕಚೇರಿ, ಕೆಂಗಲ್ ಹನುಮಂತಯ್ಯ ರಸ್ತೆ, ಶಾಂತಿನಗರ, ಸಂಜೆ 4

**'ಪ್ಯಾಲೆಸ್ಟೀನ್' ಕುರಿತಾದ ಕವನವಾಚನ, ಕಿರುನಾಟಕಗಳ ಪ್ರದರ್ಶನ:** ಅತಿಥಿಗಳು: ಎಂ.ಡಿ. ಪಲ್ಲವಿ, ಶ್ವೇತಾಂಶು ಬೋರಾ, ರಾಮ್ನೀಕ್ ಸಿಂಗ್, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 5.30



ಎಂ.ಡಿ. ಪಲ್ಲವಿ

**ಭರತನಾಟ್ಯ ರಂಗಪ್ರವೇಶ:** ಪ್ರಸ್ತುತಿ: ಸಿಂಚನಾ ಮಂಜುನಾಥ್, ಅತಿಥಿಗಳು: ಆನೂರು ಅನಂತಕೃಷ್ಣ ಶರ್ಮಾ, ಟಿ.ಎಸ್. ನಾಗಾಭರಣ, ಮಾಲಿನಿ ರವಿಶಂಕರ್, ಆಯೋಜನೆ: ಸ್ಫೂರ್ತಿ ಸ್ಕೂಲ್ ಆಫ್ ಡಾನ್ಸ್, ಸ್ಥಳ: ಶಿವರಾತ್ರೀಶ್ವರ ಕೇಂದ್ರ, ಜಯನಗರ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

## ನವೆಂಬರ್ 30ರವರೆಗೆ ಡಿಎಲ್‌ಸಿ ಸೇವೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ರಾಜ್ಯ ಸರ್ಕಾರದ ಪಿಂಚಣಿದಾರರಿಗೆ, ಕುಂಟುಬ ಪಿಂಚಣಿದಾರರಿಗೆ ಡಿಜಿಟಲ್ ಲೈಫ್ ಸರ್ಟಿಫಿಕೆಟ್ (ಡಿಎಲ್‌ಸಿ) ಅನ್ನು ಸುಲಭವಾಗಿ ಒದಗಿಸಲು ರಾಜ್ಯ ಸರ್ಕಾರ ದೊಂದಿಗೆ ಇಂಡಿಯಾ ಪೋಸ್ಟ್ ಪೇಮೆಂಟ್ಸ್ ಬ್ಯಾಂಕ್ (ಐಪಿಪಿಬಿ) ಒಪ್ಪಂದ ಮಾಡಿಕೊಂಡಿದೆ. ಅದರಂತೆ ನ.30ರವರೆಗೆ ಐಪಿಪಿಬಿ ಡಿಎಲ್‌ಎಸಿ ಸೇವೆ ಒದಗಿಸುತ್ತಿದೆ.

ಪಿಂಚಣಿದಾರರು ವೈಯಕ್ತಿಕವಾಗಿ ಜೀವನ ಪ್ರಮಾಣಪತ್ರವನ್ನು ಸಲ್ಲಿಸುವ ಸಮಯದಲ್ಲಿ ಎದುರಿಸುತ್ತಿರುವ ತೊಂದರೆಗಳನ್ನು ತಪ್ಪಿಸಲು, ಭಾರತೀಯ ಅಂಚೆ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಐಪಿಪಿಬಿ ಪಿಂಚಣಿದಾರರ ಮನೆ ಬಾಗಿಲಿನಲ್ಲಿ, ಡಿಜಿಟಲ್ ಲೈಫ್ ಪ್ರಮಾಣಪತ್ರವನ್ನು ಸಲ್ಲಿಸಲು ವ್ಯವಸ್ಥೆ ಮಾಡಿದೆ. ಪಿಂಚಣಿದಾರರು ಪೋಸ್ಟ್‌ಮ್ಯಾನ್ ಮೂಲಕ ಆಧಾರ್ ಸಂಖ್ಯೆ, ಮೊಬೈಲ್ ಸಂಖ್ಯೆ, ಪಿಪಿಒ ಸಂಖ್ಯೆ ಮತ್ತು ಪಿಂಚಣಿದಾರರ ಬ್ಯಾಂಕ್ ಖಾತೆಯ ವಿವರಗಳೊಂದಿಗೆ ಬೆರಳಚ್ಚು ನೀಡಿ, ಕೆಲವೇ ನಿಮಿಷಗಳಲ್ಲಿ ಪಡೆಯಬಹುದು ಎಂದು ಐಪಿಪಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಮುನಿಸಿಪಾಲಿಕಾ–2023 ಸಮ್ಮೇಳನ • ಅರಮನೆ ಮೈದಾನದಲ್ಲಿ ಮೂರು ದಿನಗಳ ಪ್ರದರ್ಶನಕ್ಕೆ ಚಾಲನೆ

# ಮ್ಯಾನ್‌ಹೋಲ್ ಸ್ವಚ್ಛತೆಗೆ ರೋಬಾಟ್

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಮ್ಯಾನ್‌ಹೋಲ್‌ಗಳ ಸ್ವಚ್ಛತೆಗೆ ಇನ್ನುಮುಂದೆ ಆಧುನಿಕ ರೋಬಾಟ್‌ಗಳು ಬಳಕೆಯಾಗಲಿವೆ.

ಅರಮನೆ ಮೈದಾನದಲ್ಲಿ ಮಂಗಳವಾರ ಆರಂಭವಾದ ಮೂರು ದಿನಗಳ ಮುನಿಸಿಪಾಲಿಕಾ–2023 ಸಮ್ಮೇಳನದಲ್ಲಿ ಇಂತಹ ಹತ್ತುಹಲವು ರೋಬಾಟ್‌ಗಳನ್ನು ಪ್ರದರ್ಶನಕ್ಕೆ ಇಡಲಾಗಿದೆ. ಸಫಾಯಿ ಕರ್ಮಚಾರಿಗಳ ಬಳಕೆ ನಿಷೇಧದ ನಂತರ ಇಂತಹ ರೋಬಾಟ್‌ಗಳ ಆವಿಷ್ಕಾರಕ್ಕೆ ಹಲವು ಕಂಪನಿ ಮುಂದಾಗಿದ್ದವು. ರೋಬಾಟ್ ಒಮ್ಮೆ ಗುಂಡಿಗೆ ಇಳಿದರೆ 30 ಕೆ.ಜಿಯಿಂದ 160 ಕೆ.ಜಿ.ವರೆಗಿನ ಕಲ್ಮಶ ಹೊರತೆಗೆದು ಯಂತ್ರದ ಹೊಟ್ಟೆಯೊಳಗೆ ತುಂಬುತ್ತದೆ. ಒಳಚರಂಡಿ, ಸಾಮೂಹಿಕ ಶೌಚಾಲಯ, ಮನೆಯ ಶೌಚಗಳು, ಸೇತುವೆ, ಡೆಕ್ ಸ್ಲ್ಯಾಬ್ ಒಳಗೆ ಕಟ್ಟಿಕೊಂಡ ತ್ಯಾಜ್ಯಗಳನ್ನೂ ತೆಗೆಯಲು ಬಳಸಬಹುದು. ಸಮ್ಮೇಳನದಲ್ಲಿ ಸದ್ಯ ₹10 ಲಕ್ಷದಿಂದ ₹39 ಲಕ್ಷದವರೆಗಿನ ರೋಬಾಟ್‌ಗಳು ಲಭ್ಯವಿವೆ.



ಬೆಂಗಳೂರಿನಲ್ಲಿ ಮಂಗಳವಾರ ಆರಂಭವಾದ ಮುನಿಸಿಪಾಲಿಕಾ ಸಮ್ಮೇಳನದಲ್ಲಿ ಮ್ಯಾನ್‌ಹೋಲ್ ಸ್ವಚ್ಛಗೊಳಿಸುವ ರೋಬಾಟ್‌ಗಳನ್ನು ಸಾರ್ವಜನಿಕರು ವೀಕ್ಷಿಸಿದರು. ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್‌.ಜಿ.

ನಗರಾಭಿವೃದ್ಧಿ ಇಲಾಖೆ, ಪೌರಾಡಳಿತ ನಿರ್ದೇಶನಾಲಯ, ವಸತಿ ಇಲಾಖೆ ಸಹಯೋಗದಲ್ಲಿ ಸಮ್ಮೇಳನ ಆಯೋಜಿಸಲಾಗಿದೆ.

**ಮ್ಯಾನ್‌ಹೋಲ್, ಯುಜಿಡಿಗೂ ಫೈಬರ್:** ನಗರ ಹಾಗೂ ಗ್ರಾಮೀಣ ಪ್ರದೇಶಗಳ ಜನವಸತಿಗಳಲ್ಲಿ ಯುಜಿಡಿ ಕಾಮಗಾರಿಗಳಿಗೆ ಹಾಗೂ ಮ್ಯಾನ್‌ಹೋಲ್ ಸಿದ್ಧಪಡಿಸಲು ಮೊದಲು ಸಿಮೆಂಟ್ ಸಾಮಗ್ರಿಗಳನ್ನು ಬಳಸಿಕೊಳ್ಳಲಾಗುತ್ತಿತ್ತು. ಹಲವು ಕಂಪನಿಗಳು ಫೈಬರ್ ಬಳಸಿ ಆಧುನಿಕ ಪೈಪ್‌ಗಳನ್ನು ಸಿದ್ಧಪಡಿಸಿವೆ. 2.5 ಇಂಚಿನಿಂದ 32 ಇಂಚಿನ ವ್ಯಾಸ ಒಳಗೊಂಡ ಪೈಪ್‌ಗಳು, 2.5 ಮೀಟರ್ ಎತ್ತರದ ಮ್ಯಾನ್‌ಹೋಲ್ ಛೇಂಬರ್‌ಗಳು ಮಾರುಕಟ್ಟೆಗೆ ಬಂದಿವೆ.

ಘನತ್ಯಾಜ್ಯ ನಿರ್ವಹಣೆ, ಆಧುನಿಕ ಕಸ ಸಂಗ್ರಹ ಸಾಮಗ್ರಿ, ಘನತ್ಯಾಜ್ಯ ಸಂಸ್ಕರಣ ಘಟಕ, ಕಸ ಸಾಗಣೆಯ ವೈವಿಧ್ಯ ವಾಹನ, ನೀರು ಶುದ್ಧೀಕರಣ ಘಟಕ, ಸಾರ್ವಜನಿಕ ಶೌಚಾಲಯದ ವಿವಿಧ ಮಾದರಿಗಳು ಸಮ್ಮೇಳನದ ಪ್ರಮುಖ ಆಕರ್ಷಣೆಗಳಾಗಿವೆ.

ಆಧುನಿಕ ಕಟ್ಟಡ ಸಾಮಗ್ರಿಗಳು, ತಂತ್ರಜ್ಞಾನ, ಸಮಕಾಲೀನ ವಾಸ್ತುಶಿಲ್ಪಗಳು, ಸ್ಮಾರ್ಟ್‌ಸಿಟಿ ಸೇರಿದಂತೆ ಭವಿಷ್ಯದ ನಗರಗಳ ನಿರ್ಮಾಣಕ್ಕೆ ಅಗತ್ಯವಾದ ಸಾಮಗ್ರಿಗಳು, ಪರಿಹಾರೋಪಾಯಗಳು ಸಮ್ಮೇಳನದಲ್ಲಿ ದೊರಕಲಿವೆ.

## ನೀರಿಗೆ ₹9 ಸಾವಿರ ಕೋಟಿ

ನಗರ ಪ್ರದೇಶಗಳಲ್ಲಿ ಸಮರ್ಪಕ ಕುಡಿಯುವ ನೀರು ಪೂರೈಸಲು ₹9 ಸಾವಿರ ಕೋಟಿ ನೀಡಲು ನಿರ್ಧರಿಸಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮುನಿಸಿಪಾಲಿಕಾ ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಅವರು, ದೇಶ ಸುಸ್ಥಿರ ಬೆಳವಣಿಗೆಗೆ ನಗರ-ಗ್ರಾಮೀಣ ಅಭಿವೃದ್ಧಿ ಮುಖ್ಯ. ರಾಜ್ಯದ 316 ನಗರಗಳಿಗೂ ನಾಗರಿಕ ಸವಲತ್ತುಗಳನ್ನು ಸರ್ಕಾರ ಒದಗಿಸುತ್ತಿದೆ. ರಾಜ್ಯದಲ್ಲಿ ಶೇ 38ರಷ್ಟು ಮಂದಿ ನಗರ ಪ್ರದೇಶಗಳಲ್ಲಿ ನೆಲೆಸಿದ್ದಾರೆ. ಸುಗಮ ಸಂಚಾರ, ಘನತ್ಯಾಜ್ಯ ನಿರ್ವಹಣೆ, ಒಳಚರಂಡಿ ವ್ಯವಸ್ಥೆ ಸೇರಿದಂತೆ ಅಗತ್ಯ ನಾಗರಿಕ ಸವಲತ್ತುಗಳನ್ನು ಒದಗಿಸಲು ಇನ್ನಷ್ಟು ಆಧುನಿಕ, ಸುಧಾರಿತ ವ್ಯವಸ್ಥೆ ಕಲ್ಪಿಸಲಾಗುವುದು ಎಂದರು.

ನಗರಾಭಿವೃದ್ಧಿ ಸಚಿವ ಬೈರತಿ ಸುರೇಶ್, ಪೌರಾಡಳಿತ ಸಚಿವ ರಹೀಂ ಖಾನ್, ಶಾಸಕ ಎಚ್.ಡಿ. ತಮ್ಮಯ್ಯ, ವಿಧಾನ ಪರಿಷತ್ ಸದಸ್ಯ ಎಸ್.ರವಿ, ಆಸ್ಟ್ರೇಲಿಯಾ ವ್ಯಾಪಾರ ಮತ್ತು ಹೂಡಿಕೆ ಆಯೋಗದ ಅಧ್ಯಕ್ಷೆ ಕ್ಯಾಥರಿನ್ ಗಲೇಫರ್ ಉಸ್ಥಿತರಿದ್ದರು.

## ಕೊಳವೆಬಾವಿಗೆ ₹50 ಶುಲ್ಕ: ಡಿಕೆಶಿ

ಕೊಳವೆಬಾವಿ ಕೊರೆಸಲು ಅನುಮತಿಗಾಗಿ ₹50 ಶುಲ್ಕ ನಿಗದಿ ಮಾಡಿದರೆ ರಾಜ್ಯದಲ್ಲಿ ಕೊರೆಯುವ ಕೊಳವೆಬಾವಿಗಳ ಲೆಕ್ಕ ಸಿಗಲಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಕೊಳವೆ ಬಾವಿ ಕೊರೆಯಲು ಅನುಮತಿ ಸೇರಿದಂತೆ ಇತರ ಮಾರ್ಗಸೂಚಿಗಳನ್ನು ಅಧಿಕಾರಿಗಳು ಅನುಸರಿಸಬೇಕು ಎಂದು ಅವರು ತಿಳಿಸಿದರು.



ಹಾರ್ದಿಕ್ ಪಾಂಡ್ಯ ತನ್ನ ಮೂಲ ಐಪಿಎಲ್ ಫ್ರಾಂಚೈಸ್‌ಗೆ ಮರಳಿದ್ದಾರೆ!

## ವರ್ಗಾವಣೆಗೆ ಹಣ: ತನಿಖೆಗೆ ಸೂಚನೆ– ಗೃಹ ಸಚಿವ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ವರ್ಗಾವಣೆಗಾಗಿ ಗೃಹ ಸಚಿವರಿಗೆ ಹಣ ತಲುಪಿಸಲಾಗಿದೆ ಎಂದು ಉಮಾಪತಿ ಗೌಡ ಅವರು ಮಾತನಾಡಿರುವ ಆಡಿಯೊವನ್ನು ನಾನೂ ಆಲಿಸಿದ್ದೇನೆ. ಅದರ ಬಗ್ಗೆ ತನಿಖೆ ಮಾಡುವಂತೆ ಪೊಲೀಸ್ ಆಯುಕ್ತರಿಗೆ ಸೂಚನೆ ನೀಡಿದ್ದೇನೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ನೇರವಾಗಿ ಗೃಹ ಸಚಿವರಿಗೆ ಕೊಟ್ಟಿದ್ದೇನೆ ಎಂದೂ ಆಡಿಯೊದಲ್ಲಿ ಹೇಳಿದ್ದಾನೆ. ಆ ಗೃಹ ಸಚಿವ ನಾನೇ ತಾನೇ. ಯಾವ ಉದ್ದೇಶದಿಂದ ಹಣ ಕೊಟ್ಟಿದ್ದಾನೆ? ಯಾವಾಗ ಕೊಟ್ಟಿದ್ದಾನೆ? ಎಷ್ಟು ಕೊಟ್ಟಿದ್ದಾನೆ? ಎಂದು ತನಿಖೆ ಮಾಡಿ ಎಂದು ಹೇಳಿದ್ದೇನೆ' ಎಂದರು.

'ನಿಗಮ ಮಂಡಳಿಗಳಿಗೆ ನೇಮಕ ವಿಚಾರದಲ್ಲಿ ಪಕ್ಷದ ರಾಜ್ಯ ಉಸ್ತುವಾರಿಯವರು ಕಳೆದ ವಾರ ಮುಖ್ಯಮಂತ್ರಿ ಮತ್ತು ಕೆಪಿಸಿಸಿ ಅಧ್ಯಕ್ಷರ ಜೊತೆ ಮಾತನಾಡಿದ್ದಾರೆ. ಅವರು ನೇಮಕ ಪ್ರಕ್ರಿಯೆ ಅಂತಿಮಗೊಳಿಸಬಹುದು. ನನ್ನ ಜೊತೆ ಈ ಬಗ್ಗೆ ಚರ್ಚೆ ಮಾಡಿಲ್ಲ. ನನ್ನ ಅಭಿಪ್ರಾಯವನ್ನೂ ಕೇಳಿದರೆ ಒಳ್ಳೆಯದಿತ್ತು. ಯಾಕೆಂದರೆ, ನಾನು ಎಂಟು ವರ್ಷ ಅಧ್ಯಕ್ಷನಾಗಿದ್ದೆ' ಎಂದು ಅವರು ಅಭಿಪ್ರಾಯ ವ್ಯಕ್ತಪಡಿಸಿದರು.


ನಗರದಲ್ಲಿ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ, ಕೆಎಂಎಫ್ ನೌಕರರ ಕಲ್ಯಾಣ ನಿಧಿ ಟ್ರಸ್ಟ್, ಕೆಂಎಂಎಫ್ ಕಲಾವೇದಿಕೆ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ, ಪ್ರತಿಭಾ ಪುರಸ್ಕಾರ ಮತ್ತು ಬಹುಮಾನ ವಿತರಣೆ ಹಾಗೂ ಡಾ. ವರ್ಗೀಸ್ ಕುರಿಯನ್ ಜನ್ಮದಿನೋತ್ಸವ ಸಮಾರಂಭದಲ್ಲಿ ನಟ ಶಿವರಾಜಕುಮಾರ್ ಅವರನ್ನು ಸನ್ಮಾನಿಸಲಾಯಿತು. ಕೆಎಂಎಫ್ ಮಾಜಿ ವ್ಯವಸ್ಥಾಪಕ ನಿರ್ದೇಶಕ ಪ್ರೇಮನಾಥ್, ಕೆಎಂಎಫ್ ಅಧ್ಯಕ್ಷ ಎಲ್‌.ಬಿ.ಪಿ.ಭೀಮಾನಾಯ್ಕ್, ಸಂಗೀತ ನಿರ್ದೇಶಕ ಹಂಸಲೇಖ, ಕೆಂಎಂಎಫ್ ವ್ಯವಸ್ಥಾಪಕ ನಿರ್ದೇಶಕ ಎಂ.ಕೆ. ಜಗದೀಶ್ ಇದ್ದರು

## ತರಬೇತಿಗೆ ಮೆಟಾ ಸಹಭಾಗಿತ್ವ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಆನ್‌ಲೈನ್ ಸುರಕ್ಷತೆ ಮತ್ತು ಡಿಜಿಟಲ್ ಪೌರತ್ವದ ಕುರಿತು ರಾಜ್ಯದ ಒಂದು ಲಕ್ಷ ಶಿಕ್ಷಕರು ಹಾಗೂ ಹತ್ತು ಲಕ್ಷ ವಿದ್ಯಾರ್ಥಿಗಳಿಗೆ ತರಬೇತಿ ನೀಡುವ ಯೋಜನೆಗೆ ಸಹಭಾಗಿತ್ವ ವಹಿಸಲು ರಾಜ್ಯ ಸರ್ಕಾರವು ತಂತ್ರಜ್ಞಾನ ಕ್ಷೇತ್ರದ ಪ್ರಮುಖ ಸಂಸ್ಥೆಯಾದ ಮೆಟಾ ಜತೆ ಮಂಗಳವಾರ ಒಪ್ಪಂದಕ್ಕೆ ಸಹಿ ಮಾಡಿದೆ.

ಮೆಟಾ ಕಂಪನಿಯ ಉಪಾಧ್ಯಕ್ಷ ಜೋಯಲ್ ಕಪ್ಲಾನ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿದರು. ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಕೂಡ ಉಪಸ್ಥಿತರಿದ್ದರು. ಇದೇ ಸಂದರ್ಭದಲ್ಲಿ ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ ಅಧಿಕಾರಿಗಳು ಹಾಗೂ ಮೆಟಾ ಪ್ರತಿನಿಧಿಗಳು ಒಪ್ಪಂದಕ್ಕೆ ಸಹಿ ಹಾಕಿದರು.

2025ರ ವೇಳೆಗೆ ರಾಜ್ಯದ 100 ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳ ಒಂದು ಲಕ್ಷ ಶಿಕ್ಷಕರು ಹಾಗೂ ಹತ್ತು ಲಕ್ಷ ವಿದ್ಯಾರ್ಥಿಗಳಿಗೆ ಡಿಜಿಟಲ್ ಜಾಗೃತಿಯ ತರಬೇತಿ ನೀಡುವ ಗುರಿ ಇದೆ. ಮುಖ್ಯ ತರಬೇತುದಾರರಿಗೆ ತರಬೇತಿ ನೀಡಲಾಗುತ್ತದೆ. ಅವರು ಶಿಕ್ಷಕರು ಮತ್ತು ವಿದ್ಯಾರ್ಥಿಳಿಗೆ ತರಬೇತಿ ನೀಡುತ್ತಾರೆ. ಈ ಯೋಜನೆಯಡಿ ಮೆಟಾ ಕಂಪನಿಯು ಸರ್ಕಾರದ ವಿವಿಧ ಇಲಾಖೆಗಳ ಮಧ್ಯೆ ಮಾಹಿತಿ ವಿನಿಮಯಕ್ಕೆ ಪ್ರತ್ಯೇಕವಾದ ವಾಟ್ಸ್ ಆ್ಯಪ್ ಚಾಟ್‌ಬಾಟ್ ಅಭಿವೃದ್ಧಿಪಡಿಸಲಿದೆ.

ಒಪ್ಪಂದದ ಕುರಿತು ಮಾತನಾಡಿದ ಸಿದ್ದರಾಮಯ್ಯ, 'ಆನ್‌ಲೈನ್ ಸುರಕ್ಷತೆ ಕುರಿತು ತರಬೇತಿ ನೀಡುವುದು ಈಗಿನ ತುರ್ತಾಗಿದೆ. ಡೀಪ್‌ಫೇಕ್‌ಗಳಂತಹ ತಂತ್ರಜ್ಞಾನಗಳ ಅಪಾಯಗಳನ್ನು ಎದುರಿಸಲು ಈ ತರಬೇತಿ ಸಹಕಾರಿಯಾಗುತ್ತದೆ' ಎಂದರು.

ಪ್ರಿಯಾಂಕ್ ಖರ್ಗೆ ಮಾತನಾಡಿ, 'ಆನ್‌ಲೈನ್ ಸುರಕ್ಷತೆಗೆ ಸಂಬಂಧಿಸಿದ ವಿಷಯಗಳು ಭವಿಷ್ಯದಲ್ಲಿ ಹೆಚ್ಚಿನ ಉದ್ಯೋಗಗಳ ಸೃಜನೆಗೆ ಪೂರಕವಾಗಲಿವೆ. ಆ ನಿಟ್ಟಿನಲ್ಲಿ ನಮ್ಮ ವಿದ್ಯಾರ್ಥಿಗಳನ್ನು ಸಜ್ಜುಗೊಳಿಸಲು ತರಬೇತಿ ನೀಡಲಾಗುತ್ತಿದೆ' ಎಂದು ತಿಳಿಸಿದರು.

## ಉದ್ಯೋಗ ಕೊಡಿಸುವ ನೆಪ: ವಂಚನೆ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಸಾರ್ವಜನಿಕರಿಗೆ ಅರೆಕಾಲಿಕ ಉದ್ಯೋಗ ಕೊಡಿಸುವ ನೆಪದಲ್ಲಿ ಲಕ್ಷಾಂತರ ರೂಪಾಯಿ ಹೂಡಿಕೆ ಮಾಡಿಸಿ ವಂಚಿಸುತ್ತಿದ್ದ ನಾಲ್ವರು ಆರೋಪಿಗಳನ್ನು ಈಶಾನ್ಯ ವಿಭಾಗದ ಸೈಬರ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಆರ್‌.ಟಿ.ನಗರ ನಿವಾಸಿ ಸೈಯದ್ ಯೂನಸ್ ಪಾಜಿಲ್(31), ಭಾರತಿನಗರ ನಿವಾಸಿ ಮೊಹಮ್ಮದ್ ಕಲೀಮುಲ್ಲಾ(35), ಕಾವೇರಿನಗರ ನಿವಾಸಿ ಸೈಯದ್ ಅರ್ಬಾಜ್(24) ಮತ್ತು ಫ್ರೆಜರ್ ಟೌನ್ ನಿವಾಸಿ ಇಬ್ರಾಹಿಂ ಕರ್ನೂಲ್(36) ಬಂಧಿತರು.

ತಲೆಮರೆಸಿಕೊಂಡಿರುವ ಮೂವರು ಆರೋಪಿಗಳಿಗಾಗಿ ಶೋಧ ಕಾರ್ಯ ನಡೆಯುತ್ತಿದೆ. ಆರೋಪಿಗಳಿಂದ 30 ವಿವಿಧ ಖಾತೆಗಳಲ್ಲಿದ್ದ ₹60 ಲಕ್ಷ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಆಯುಕ್ತ ಬಿ.ದಯಾನಂದ ಪತ್ರಿಕಾಗೋಷ್ಠಿಯಲ್ಲಿ ಮಂಗಳವಾರ ತಿಳಿಸಿದರು.

ಆರೋಪಿಗಳು ಸೃಷ್ಟಿಸಿದ್ದ ಖಾತೆಗಳ ವಿರುದ್ಧ ದೇಶದಾದ್ಯಂತ 305 ಪ್ರಕರಣಗಳು ದಾಖಲಾಗಿವೆ. ಸುಮಾರು ₹40 ಕೋಟಿ ವಂಚನೆ ಮಾಡಿದ್ದಾರೆ ಎಂದು ತನಿಖೆಯಿಂದ ಗೊತ್ತಾಗಿದೆ.

ಕೃತ್ಯಕ್ಕೆ ಬಳಸಿದ್ದ 4 ಮೊಬೈಲ್‌ಗಳು, 2 ಬ್ಯಾಂಕ್ ಪಾಸ್‌ಬುಕ್, 6 ಡೆಬಿಟ್ ಕಾರ್ಡ್, ಸಿಮ್ ಕಾರ್ಡ್‌ಗಳು, ಬಯೊಮೆಟ್ರಿಕ್ ಸಾಧನ, 2 ಸೀಲ್‌ಗಳನ್ನು ಜಪ್ತಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

**ಹೇಗೆ ವಂಚನೆ?:** ಆರೋಪಿಗಳಿಗೆ ದುಬೈನ ವ್ಯಕ್ತಿಯೊಬ್ಬ ಪರಿಚಯವಿತ್ತು. ಆತನ ಸೂಚನೆ ಮೇರೆಗೆ ಬಂಧಿತ ನಾಲ್ವರು ಆರೋಪಿಗಳು ಕಾರ್ಯಾಚರಣೆ ನಡೆಸುತ್ತಿದ್ದರು. ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ವ್ಯಾಪ್ತಿಯಲ್ಲಿ ಬಡವರು ಮತ್ತು ಮಧ್ಯಮ ವರ್ಗದ ಜನರಿಗೆ ₹ 10ರಿಂದ ₹20 ಸಾವಿರ ಕೊಟ್ಟು ಅವರ ಆಧಾರ್ ಕಾರ್ಡ್ ಸೇರಿ ಎಲ್ಲ ದಾಖಲೆಗಳನ್ನು ಪಡೆದು ವಿವಿಧ ಬ್ಯಾಂಕ್‌ಗಳಲ್ಲಿ ಚಾಲ್ತಿ ಖಾತೆ ತೆರೆಯುತ್ತಿದ್ದರು. ಅಲ್ಲದೇ ಅಂಗಡಿ ಬಾಡಿಗೆ ಪಡೆಯುತ್ತಿದ್ದರು.

ಅಂಗಡಿಗಳಿಗೆ ಬೇರೆ ಬೇರೆ ಕಂಪನಿ ಹೆಸರು ಇಡುತ್ತಿದ್ದರು. ಇನ್‌ಸ್ಟಾಗ್ರಾಂ ಹಾಗೂ ಟೆಲಿಗ್ರಾಂ ಆ್ಯಪ್‌ಗಳ ಮೂಲಕ ಸಾರ್ವಜನಿಕರನ್ನು ಸಂಪರ್ಕಿಸಿ ಅರೆಕಾಲಿಕ ಉದ್ಯೋಗ ನೀಡುವ ಭರವಸೆ ನೀಡುತ್ತಿದ್ದರು. ಅವರಿಗೆ ಟಾಸ್ಕ್‌ಗಳ ಹೆಸರಿನಲ್ಲಿ ಹಣ ಹೂಡಿಕೆ ಮಾಡಿಸಿಕೊಳ್ಳುತ್ತಿದ್ದರು. ಬಳಿಕ ಹಣವನ್ನೂ ವಾಪಸ್ ಮಾಡುತ್ತಿರಲಿಲ್ಲ. ಕೆಲಸವನ್ನೂ ಕೊಡುತ್ತಿರಲಿಲ್ಲ ಎಂದು ಪೊಲೀಸರು ಹೇಳಿದರು.

## ಅಮೆರಿಕ ಕಾನ್ಸುಲೇಟ್ ಜನರಲ್ ಕಚೇರಿಗೆ ಸಮ್ಮತಿ

**ಬೆಂಗಳೂರು:** ಕರ್ನಾಟಕದಲ್ಲೂ ಅಮೆರಿಕದ ಕಾನ್ಸುಲೇಟ್ ಜನರಲ್ ಕಚೇರಿ ತೆರೆಯಲು ಸಮ್ಮತಿ ದೊರೆತಿದ್ದು, ವೈಟ್‌ಫೀಲ್ಡ್‌ನಲ್ಲೇ ಸ್ಥಾಪಿಸುವಂತೆ ಕೋರಿಕೆ ಸಲ್ಲಿಸಲಾಗಿದೆ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದರು.

ಭಾರತದಲ್ಲಿನ ಅಮೆರಿಕದ ಕಾನ್ಸುಲೇಟ್ ಜನರಲ್ ಕ್ರಿಸ್ಟೋಫರ್ ಡಬ್ಲ್ಯು. ಹೋಡ್ಜಸ್ ಅವರೊಂದಿಗೆ ಮಂಗಳವಾರ ಮಾತುಕತೆ ನಡೆಸಿದ ನಂತರ ಅವರು ಮಾತನಾಡಿದರು.

ಅಮೆರಿಕ ಪ್ರವಾಸದ ಸಮಯದಲ್ಲೇ ಸಮ್ಮತಿ ಪಡೆಯಲಾಗಿತ್ತು. ಕಚೇರಿಗಾಗಿ ವೈಟ್‌ಫೀಲ್ಡ್‌ನಲ್ಲಿ ಈಗಾಗಲೇ ಸ್ಥಳ ಗುರುತಿಸಲಾಗಿದೆ ಎಂದು ಮಾಹಿತಿ ನೀಡಿದರು.

'ಎರಡು ಸಾವಿರ ಎಕರೆಯಲ್ಲಿ ಸ್ಥಾಪಿಸಲಾಗುತ್ತಿರುವ ಉದ್ದೇಶಿತ ಜ್ಞಾನ, ಆರೋಗ್ಯ ರಕ್ಷಣೆ, ನಾವೀನ್ಯತೆ ಮತ್ತು ಸಂಶೋಧನಾ ಕೇಂದ್ರ (ಕೆಎಚ್‌ಐಆರ್‌ಸಿಟಿ) ನಗರದ ಅಭಿವೃದ್ಧಿಗೆ, ವೈದ್ಯಕೀಯ ಪ್ರವಾಸೋದ್ಯಮದ ಕೇಂದ್ರವಾಗಿ ಬೆಂಗಳೂರನ್ನು ಬಲಪಡಿಸಲು ಸಹಾಯ ಮಾಡಲಿದೆ' ಎಂದು ಹೇಳಿದರು.

## 'ಅರೆ ನ್ಯಾಯಿಕ ಪ್ರಕರಣ: ಶೀಘ್ರ ಇತ್ಯರ್ಥ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕಂದಾಯ ಇಲಾಖೆಯ ಅರೆ ನ್ಯಾಯಿಕ ಪ್ರಕರಣಗಳನ್ನು ತಹಶೀಲ್ದಾರ್, ಉಪವಿಭಾಗಾಧಿಕಾರಿ ಹಾಗೂ ಜಿಲ್ಲಾಧಿಕಾರಿಗಳು ಕಾಲಮಿತಿಯೊಳಗೆ ಇತ್ಯರ್ಥಪಡಿಸುವಂತೆ ಸೂಚನೆ ನೀಡಲಾಗಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದ್ದಾರೆ.

ತಹಶೀಲ್ದಾರ್ ಹಂತದಲ್ಲಿನ ಅರೆ ನ್ಯಾಯಿಕ ಪ್ರಕರಣಗಳನ್ನು 90 ದಿನಗಳು ಹಾಗೂ ಉಪವಿಭಾಗಾಧಿಕಾರಿ ಮತ್ತು ಜಿಲ್ಲಾಧಿಕಾರಿಗಳ ವ್ಯಾಪ್ತಿಯ ಪ್ರಕರಣಗಳನ್ನು ಆರು ತಿಂಗಳಲ್ಲಿ ಇತ್ಯರ್ಥಗೊಳಿಸುವಂತೆ ನಿರ್ದೇಶನ ನೀಡಿರುವುದಾಗಿ ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.


ತಹಶೀಲ್ದಾರ್‌ಗಳ ಹಂತದಲ್ಲಿ ಒಂದು ವರ್ಷಕ್ಕೆ ಮೇಲ್ಪಟ್ಟ ಒಟ್ಟು 2,215 ಅರ್ಜಿಗಳು ಬಾಕಿ ಇದ್ದವು. ನಾಲ್ಕು ತಿಂಗಳಲ್ಲಿ 680 ಕ್ಕೆ ಇಳಿದಿದೆ. ಡಿಸೆಂಬರ್‌ನೊಳಗೆ ಇತ್ಯರ್ಥಗೊಳಿಸಲು ಸೂಚಿಸಲಾಗಿದೆ. ಉಪವಿಭಾಗಾಧಿಕಾರಿ ಹಂತದಲ್ಲಿ ಬಾಕಿ ಉಳಿದಿದ್ದ 59,339 ಪ್ರಕರಣಗಳ ಪೈಕಿ 27,960 ಇತ್ಯರ್ಥಗೊಂಡಿವೆ. 5 ವರ್ಷ ಮೇಲ್ಪಟ್ಟ ಪ್ರಕರಣಗಳನ್ನು 32,787 ಗಳಿಂದ 9,873 ಇಳಿಸಲಾಗಿದೆ. ಜನವರಿ ಕೊನೆಯೊಳಗೆ ಬಾಕಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ಸೂಚಿಸಲಾಗಿದೆ ಎಂದರು.

ಸಿ.ಎಂ ಸಿದ್ದರಾಮಯ್ಯ ನಡೆಸಿದ ಜನಸ್ಪಂದನದಲ್ಲಿ ಕಂದಾಯ ಇಲಾಖೆಗೆ ಸಂಬಂಧಿಸಿದ ಸಮಸ್ಯೆಗಳ ಪರಿಹಾರಕ್ಕೆ ಆದ್ಯತೆ ನೀಡಲಾಗುವುದು ಎಂದರು.

ಏಷ್ಯಾದ ಬೃಹತ್ ತಂತ್ರಜ್ಞಾನ ಸಮ್ಮೇಳನಕ್ಕೆ ಇಂದು ಚಾಲನೆ

ಕರ್ನಾಟಕ ಸರ್ಕಾರ
ಇಲೆಕ್ಟ್ರಾನಿಕ್ಸ್, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಇಲಾಖೆ

BREAKING BOUNDARIES
Innovation from India. Impact for the World.


ಬೆಂಗಳೂರು ಟೆಕ್ ಸಮ್ಮಿಟ್
ನವೆಂಬರ್ 29 - ಡಿಸೆಂಬರ್ 1, 2023 • ಬೆಂಗಳೂರು ಅರಮನೆ



ಉದ್ಘಾಟನೆ:
ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಘನ ಉಪಸ್ಥಿತಿ:
ಶ್ರೀ ಡಿ.ಕೆ ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಉದ್ಘಾಟನೆ: ಇಂದು ಬೆಳಗ್ಗೆ 10:00 ಗಂಟೆಗೆ

ಗೌರವಾನ್ವಿತ ಅತಿಥಿಗಳು

ಶ್ರೀಮತಿ ಸಾರಿ ಮುಲ್ತಲ
ಫಿನ್‌ಲ್ಯಾಂಡ್‌ನ ಸನ್ಮಾನ್ಯ ವಿಜ್ಞಾನ ಮತ್ತು ಸಂಸ್ಕೃತಿ ಸಚಿವರು

ಶ್ರೀ ವಾಲ್ಕರ್ ವಿಸ್ಸಿಂಗ್
ಜರ್ಮನಿಯ ಸನ್ಮಾನ್ಯ ಡಿಜಿಟಲ್ ವ್ಯವಹಾರಗಳು ಮತ್ತು ಸಾರಿಗೆ ಸಚಿವರು

ಶ್ರೀ ಮಾರ್ಕ್ ಪೇಪರ್‌ಮಾಸ್ಟರ್
ಕಾರ್ಯನಿರ್ವಾಹಕ ಉಪಾಧ್ಯಕ್ಷರು ಮತ್ತು ಮುಖ್ಯ ತಂತ್ರಜ್ಞಾನ ಅಧಿಕಾರಿ, ಎಎಂಡಿ

ಶ್ರೀ ರಿಷಾದ್ ಪ್ರೇಮ್‌ಜಿ
ಕಾರ್ಯನಿರ್ವಾಹಕ ಅಧ್ಯಕ್ಷರು, ವಿಪ್ರೋ

- ಮಲ್ಟಿ ಟ್ರ್ಯಾಕ್ ಕಾನ್ಫರೆನ್ಸ್
- ಗ್ಲೋಬಲ್ ಇನ್ನೋವೇಷನ್ ಅಲಯನ್ಸ್
- ಭಾರತ–ಅಮೇರಿಕಾ ಟೆಕ್ ಕಾನ್‌ಕ್ಲೇವ್
- ಪ್ರಾಡಕ್ಟ್ ಲಾಂಚಸ್ ಮತ್ತು B2B
- ಅಂತಾರಾಷ್ಟ್ರೀಯ ಪ್ರದರ್ಶನ
- ಚಂದ್ರಯಾನ ಮಿಷನ್ ಡೋಮ್
- ಸ್ಟಾರ್ಟ್‌ಅಪ್ ಪೆವಿಲಿಯನ್
- ಆರ್ ಅಂಡ್ ಡಿ – ಲ್ಯಾಬ್2ಮಾರ್ಕೆಟ್
- STPI ತಂತ್ರಜ್ಞಾನ ರಫ್ತು ಪ್ರಶಸ್ತಿ
- ಅಸಿಸ್ಟಿವ್ ಟೆಕ್ ಮತು ಸ್ಮಾರ್ಟ್ ಬಯೋ ಪ್ರಶಸ್ತಿ
- ಬಯೋ ಪೋಸ್ಟರ್ಸ್ ಮತ್ತು ಬಯೋ ಕ್ವಿಜ್
- ರಾಷ್ಟ್ರೀಯ ಗ್ರಾಮಾಂತರ ತಂತ್ರಜ್ಞಾನ ಕ್ವಿಜ್

Co-Host एसटीपीआई STPI · K-tech · STARTUP KARNATAKA

@blrtechsummit
www.bengalurutechsummit.com

ಗ್ಲೋಬಲ್ ಇನ್ನೋವೇಷನ್ ಅಲಯನ್ಸ್ ಪಾಲುದಾರರು
ARGENTINA, AUSTRALIA, AUSTRIA, BELGIUM, BHUTAN, CANADA, DENMARK, DOMINICAN REPUBLIC, EU, FINLAND, FRANCE, GERMANY, ISRAEL, ITALY, JAPAN, LITHUANIA, MALAYSIA, NETHERLANDS, NEWZEALAND, POLAND, SINGAPORE, SOUTH KOREA, SRI LANKA, SWEDEN, SWITZERLAND, THAILAND, UAE, UNITED KINGDOM, USA, VIETNAM

ತಮಿಳುನಾಡಿನಿಂದ ಹಸುಗೂಸು ತಂದು ಮಾರಾಟ; ಜಾಲ ಭೇದಿಸಿದ ಪೊಲೀಸರು

# ಮಕ್ಕಳ ಮಾರಾಟ: 8 ಆರೋಪಿಗಳ ಬಂಧನ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಕರ್ನಾಟಕ ಹಾಗೂ ತಮಿಳುನಾಡಿನಲ್ಲಿ ಸಕ್ರಿಯವಾಗಿದ್ದ ಹಸುಗೂಸುಗಳ ಮಾರಾಟ ಜಾಲವನ್ನು ಪತ್ತೆ ಹಚ್ಚಿರುವ ಕೇಂದ್ರ ಅಪರಾಧ ವಿಭಾಗದ ಪೊಲೀಸರು, 8 ಮಂದಿ ಆರೋಪಿಗಳನ್ನು ಬಂಧಿಸಿದ್ದಾರೆ.

ಬೆಂಗಳೂರಿನ ಮಹಾಲಕ್ಷ್ಮಿ ಲೇಔಟ್ ನಿವಾಸಿ ಮಹಾಲಕ್ಷ್ಮಿ, ತಮಿಳುನಾಡಿನ ಈರೋಡ್ ಕಣ್ಣನ್ ರಾಮಸ್ವಾಮಿ, ಆತನ ಸಹಚರರಾದ ಗೋಮತಿ, ಹೇಮಲತಾ, ರಾಧಾ, ಸುಹಾಸಿನಿ, ಶರಣ್ಯ ಮತ್ತು ಮುರುಗೇಶ್ವರಿ ಎಂಬುವರನ್ನು ಬಂಧಿಸಲಾಗಿದೆ.

ಸಿಸಿಬಿಯವರು ಈ ಆರೋಪಿಗಳನ್ನು ಹತ್ತು ದಿನ ವಶಕ್ಕೆ ಪಡೆದಿದ್ದಾರೆ. ಇದೇ ವೇಳೆ 20 ದಿನದ ಮಗುವೊಂದನ್ನು ರಕ್ಷಿಸಿ, ಮಕ್ಕಳ ಸಾಂತ್ವನ ಕೇಂದ್ರದಲ್ಲಿ ಇಡಲಾಗಿದೆ.

ಆರೋಪಿಗಳು ಕರ್ನಾಟಕ, ತಮಿಳುನಾಡು, ಆಂಧ್ರಪ್ರದೇಶದ ವಿವಿಧೆಡೆ ಮಕ್ಕಳ ಮಾರಾಟ ಜಾಲವನ್ನು ವಿಸ್ತರಿಸಿಕೊಂಡಿದ್ದರು. ಅವರು 10 ಮಕ್ಕಳನ್ನು ಮಾರಾಟ ಮಾಡಿರುವ ಪೋಷಕರ ವಿಳಾಸ ಪತ್ತೆ ಹಚ್ಚಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ್ ಮಂಗಳವಾರ ಪತ್ರಿಕಾ ಗೋಷ್ಠಿಯಲ್ಲಿ ಮಾಹಿತಿ ನೀಡಿದರು.

## ಆರೋಪಿಗಳು ಪರಸ್ಪರ ಪರಿಚಯಸ್ಥರು

ಆರೋಪಿಗಳ ಪೈಕಿ ತಮಿಳುನಾಡಿನ ಆರು ಮಹಿಳೆಯರು ಈ ಹಿಂದೆ ಐವಿಎಫ್ ಕೇಂದ್ರಗಳಲ್ಲಿ ವಿವಿಧ ವಿಭಾಗಗಳಲ್ಲಿ ಕೆಲಸ ಮಾಡುತ್ತಿದ್ದರು. ಬೆಂಗಳೂರಿನ ಮಹಾಲಕ್ಷ್ಮಿ ಅಲ್ಲೇ ಕೆಲಸದಲ್ಲಿ ಇದ್ದಳು. ಅವರು ಕೆಲಸ ಮಾಡುತ್ತಿದ್ದ ಕೇಂದ್ರಗಳು ಆರು ವರ್ಷಗಳ ಹಿಂದೆ ಬಂದ್ ಆಗಿದ್ದವು. ಎಲ್ಲರೂ ಕೆಲಸ ಬಿಟ್ಟಿದ್ದರು. ಎಲ್ಲರೂ ಪರಿಚಯಸ್ಥರಾಗಿದ್ದರು. ಕೆಲಸ ಬಿಟ್ಟ ಮೇಲೆ ಮಕ್ಕಳಿಲ್ಲದ ಪೋಷಕರಿಗೆ ಬಾಡಿಗೆ ತಾಯ್ತನದ ಮೂಲಕ ಮಕ್ಕಳಿಗೆ ಜನ್ಮ ನೀಡುತ್ತಿದ್ದರು. ಅದಾದ ಮೇಲೆ ಮಕ್ಕಳ ಮಾರಾಟಕ್ಕೆ ಇಳಿದಿದ್ದರು ಎಂದು ಪೊಲೀಸರು ಹೇಳಿದರು.


ಹೇಮಲತಾ


ಸುಹಾಸಿನಿ


ಶರಣ್ಯ


ರಾಧಾ


ಮಹಾಲಕ್ಷ್ಮಿ


ಕಣ್ಣನ್


ಗೋಮತಿ

'ಆರೋಪಿಗಳು ತಮಿಳುನಾಡಿನ ಕೆಲವು ಆಸ್ಪತ್ರೆಗಳ ವೈದ್ಯರ ಜೊತೆಗೆ ಸಂಪರ್ಕ ಹೊಂದಿದ್ದರು. ಹಣದ ಅವಶ್ಯ ಇರುವ ಮಹಿಳೆಯರನ್ನು ಪತ್ತೆ ಮಾಡುತ್ತಿದ್ದರು. ಅವರಿಗೆ ಕೃತಕ ಗರ್ಭಧಾರಣೆಗೆ ಒಳಗಾಗುವಂತೆ ಮನವೊಲಿಸುತ್ತಿದ್ದರು. ಕೃತಕ ಗರ್ಭಧಾರಣೆಗೆ ಒಳಗಾದ ಮಹಿಳೆಯರಿಗೆ ಹಣ ನೀಡುತ್ತಿದ್ದರು. ಗರ್ಭಿಣಿಯರಿಗೆ ಆರೋಪಿಗಳೇ ಆರೈಕೆ ಮಾಡುತ್ತಿದ್ದರು' ಎಂಬ ಅಂಶ ತನಿಖೆ ವೇಳೆ ಗೊತ್ತಾಗಿದೆ.

**ಅಂಡಾಣು ಮಾರಾಟ:** ಆರೋಪಿಗಳು ಹಸುಗೂಸುಗಳನ್ನು ಮಾರಾಟ ಮಾಡುವುದಲ್ಲದೇ, ತಮಿಳುನಾಡು ಮತ್ತು ಕರ್ನಾಟಕದ ಪ್ರತಿಷ್ಠಿತ ಆಸ್ಪತ್ರೆಗಳಿಗೆ ಅಕ್ರಮವಾಗಿ ತಮ್ಮ ಅಂಡಾಣುಗಳನ್ನು ಮಾರಾಟ ಮಾಡುತ್ತಿದ್ದರು ಎಂಬುದು ತನಿಖೆ ವೇಳೆ ಗೊತ್ತಾಗಿದೆ.

**ಗಂಡು ಮಗುವಿಗೆ ₹ 8ರಿಂದ ₹10 ಲಕ್ಷ:** 'ಆರ್ಥಿಕ ತೊಂದರೆಯಿಂದಾಗಿ ಮಕ್ಕಳನ್ನು ಸಾಕುವುದು ಕಷ್ಟವಾಗುತ್ತಿದೆ ಎಂದು ಗರ್ಭಪಾತ ಮಾಡಿಸಲು ಬರುವ ಗರ್ಭಿಣಿಯರನ್ನು ವೈದ್ಯರ ಮೂಲಕವೇ ಪರಿಚಯ ಮಾಡಿಕೊಳ್ಳುತ್ತಿದ್ದರು. ಗರ್ಭಪಾತ ಮಾಡಿಸಿಕೊಳ್ಳದಂತೆ ಅವರ ಮನವೊಲಿಸುತ್ತಿದ್ದರು. ಹಣದ ಆಮಿಷವೊಡ್ಡಿ ಮಗುವಿಗೆ ಜನ್ಮ ನೀಡುವಂತೆ ಕೋರುತ್ತಿದ್ದರು. ಅಂತಹ ಮಹಿಳೆಯರಿಗೆ ಹಣ ಕೊಟ್ಟು, ತಮ್ಮ ಮನೆ ಅಥವಾ ಪರಿಚಯಸ್ಥರ ಮನೆಯಲ್ಲೇ ಅವರನ್ನು 9 ತಿಂಗಳು ಆರೈಕೆ ಮಾಡುತ್ತಿದ್ದರು. ತಮ್ಮ ಸಂಪರ್ಕದಲ್ಲಿದ್ದ ತಮಿಳುನಾಡಿನ ವೈದ್ಯರಿಂದ ಹೆರಿಗೆ ಮಾಡಿಸುತ್ತಿದ್ದರು'

'20 ರಿಂದ 25 ದಿನಗಳವರೆಗೆ ಮಗುವನ್ನು ತಾಯಿ ಬಳಿ ಬಿಟ್ಟು, ನಂತರ ಆಕೆಗೆ ₹ 2 ಲಕ್ಷದಿಂದ ₹2.50 ಲಕ್ಷದವರೆಗೆ ಕೊಟ್ಟು ಮಗು ಖರೀದಿಸುತ್ತಿದ್ದರು. ಆ ಹಸುಗೂಸನ್ನು ಲಕ್ಷಾಂತರ ರೂಪಾಯಿಗೆ ಮಾರಾಟ ಮಾಡುತ್ತಿದ್ದರು'.

**ಮಗು ಬೇಕಾದವರ ಪತ್ತೆ:** ಆರೋಪಿಗಳು ಮಗು ಬೇಕಾದ ದಂಪತಿಗಳನ್ನು ಪತ್ತೆ ಮಾಡುತ್ತಿದ್ದರು. ಅವರಿಗೆ ವಾಟ್ಸ್‌ಆ್ಯಪ್ ಮೂಲಕ ಮಗುವಿನ ಫೋಟೊ ಕಳುಹಿಸುತ್ತಿದ್ದರು. ಮಗುವಿನ ಬಣ್ಣ, ಲಿಂಗ ತಿಳಿದ ಪೋಷಕರು ಮಗು ಖರೀದಿಗೆ ಮುಂದಾಗುತ್ತಿದ್ದರು. ಗಂಡು ಮಗುವಿಗೆ ₹ 8 ಲಕ್ಷದಿಂದ ₹10 ಲಕ್ಷ, ಹೆಣ್ಣು ಮಗುವಿಗೆ ₹ 4 ಲಕ್ಷದಿಂದ ₹ 5 ಲಕ್ಷಕ್ಕೆ ಮಾರಾಟ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

**ನಕಲಿ ದಾಖಲೆ ಸೃಷ್ಟಿ:** 'ಮಾರಾಟವಾದ ಮಗುವಿಗೆ ಬೇಕಾದ ಎಲ್ಲ ದಾಖಲೆಗಳನ್ನು ಆರೋಪಿಗಳು ಸೃಷ್ಟಿಸುತ್ತಿದ್ದರು. ಜನನ ಪ್ರಮಾಣ ಪತ್ರಕ್ಕೆ ಬೇಕಾದ ಪೋಷಕರ ಆಧಾರ್ ಕಾರ್ಡ್, ಆಸ್ಪತ್ರೆಯ ವೈದ್ಯರ ಸಹಿ ಕೂಡ ನಕಲು ಮಾಡಿ ದಾಖಲೆಗಳನ್ನು ಸೃಷ್ಟಿಸಿ ಕೊಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

## ಮದ್ಯ ವ್ಯಸನಿ ನೀಡಿದ್ದ ಮಾಹಿತಿ

ರಾಜರಾಜೇಶ್ವರಿ ನಗರದಲ್ಲಿ ಮದ್ಯವ್ಯಸನಿಯೊಬ್ಬ ನೀಡಿದ ಮಾಹಿತಿ ಆಧರಿಸಿ ಕಾರ್ಯಾಚರಣೆ ನಡೆಸಿದ ಪೊಲೀಸರಿಗೆ ಹಸುಗೂಸು ಮಾರಾಟ ಜಾಲ ಪತ್ತೆಯಾಗಿದೆ. ನ.24ರಂದು ನಾಲ್ವರು ಆರೋಪಿಗಳನ್ನು ಬಂಧಿಸಿದ್ದರು. ಇದಾದ ಮೇಲೆ ಕಾರ್ಯಾಚರಣೆ ನಡೆಸಿ ಮತ್ತೆ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾರೆ.

ಐದು ತಿಂಗಳ ಹಿಂದೆ ಬೆಂಗಳೂರಿನ ಮಹಾಲಕ್ಷ್ಮಿ, ತಮಿಳುನಾಡಿನ ಗೋಮತಿಗೆ ಗಂಡು ಮಗುವೊಂದು ಬೇಕೆಂದು ಕರೆ ಮಾಡಿ ತಿಳಿಸಿದ್ದರು. ಹೀಗಾಗಿ ಐದು ತಿಂಗಳ ಹಿಂದೆ ಮುರುಗೇಶ್ವರಿಯನ್ನು ಗೋಮತಿ ಬೆಂಗಳೂರಿಗೆ ಕರೆತಂದು ರಾಜಾಜಿನಗರ ಸಮೀಪದಲ್ಲಿ ಬಾಡಿಗೆ ಮನೆಯಲ್ಲಿ ಇರಿಸಿ ಆರೈಕೆ ಮಾಡಿದ್ದರು. 25 ದಿನಗಳ ಹಿಂದೆ ವಾಣಿವಿಲಾಸ ಆಸ್ಪತ್ರೆಗೆ ದಾಖಲಿಸಿದ್ದರು. 20 ದಿನಗಳ ಹಿಂದೆ ಅಲ್ಲಿಯೇ ಆಕೆಗೆ ಗಂಡು ಮಗು ಜನಿಸಿತ್ತು. ಬಳಿಕ ತಮಿಳುನಾಡಿನಿಂದ ಇತರೆ ಆರೋಪಿಗಳು ಬಂದು ಮಗು ಮಾರಾಟ ನಡೆಸುವಾಗ ಸಿಕ್ಕಿಬಿದ್ದಿದ್ದಾರೆ.

ಇದುವರೆಗೆ ಆರೋಪಿಗಳು 60 ಹಸುಗೂಸುಗಳನ್ನು ಮಾರಾಟ ಮಾಡಿರುವುದು ವಿಚಾರಣೆ ವೇಳೆ ಗೊತ್ತಾಗಿದೆ. ಇನ್ನು 10 ಮಕ್ಕಳನ್ನು ಮಾರಾಟ ಮಾಡಲು ಸಿದ್ಧತೆ ಮಾಡಿಕೊಂಡಿದ್ದರು. ಮಕ್ಕಳಿಲ್ಲದ ದಂಪತಿಗಳಿಂದ ಮುಂಗಡ ಹಣ ಪಡೆದಿದ್ದರು ಎಂದು ಮೂಲಗಳು ಹೇಳಿವೆ.

## ಸುಲಿಗೆ: ಬಂಧನ

**ಬೆಂಗಳೂರು:** ದ್ವಿಚಕ್ರ ವಾಹನಗಳಲ್ಲಿ ಮಾರಕಾಸ್ತ್ರಗಳನ್ನು ಇಟ್ಟುಕೊಂಡು ಒಂಟಿಯಾಗಿ ನಡೆದಾಡುವವರನ್ನು ಅಡ್ಡಗಟ್ಟಿ ದರೋಡೆ ನಡೆಸುತ್ತಿದ್ದ ನಾಲ್ವರು ಆರೋಪಿಗಳನ್ನು ಪುಲಕೇಶಿ ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಎನ್.ಆರ್.ನಗರದ ಉಸ್ಮಾನ್ ಪಾಷಾ, ಸಿ.ಸೂರ್ಯ, ಇರ್ಫಾನ್, ಸಿ.ಜೀವ ಬಂಧಿತ ಆರೋಪಿಗಳು.

ಬಂಧಿತರಿಂದ ₹1.50 ಲಕ್ಷ ಮೌಲ್ಯದ ಮೊಬೈಲ್, ಬೆಳ್ಳಿ ಚೈನು, ನಗದು, ಕೃತ್ಯಕ್ಕೆ ಬಳಸಿದ್ದ ಚಾಕುಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

'2 ತಿಂಗಳ ಹಿಂದೆ ಡೇವಿಸ್ ರಸ್ತೆಯ ಸಿಗ್ನಲ್ ಬಳಿ ಸ್ವಿಗ್ಗಿ ಡೆಲಿವರಿ ಹುಡುಗನನ್ನು ತಡೆದು ಆತನಿಂದ ಮೊಬೈಲ್, ನಗದು ಸುಲಿಗೆ ಮಾಡಿದ್ದರು. ಬೊಮ್ಮನಹಳ್ಳಿ ರಸ್ತೆಯಲ್ಲಿ ವ್ಯಕ್ತಿಯಿಂದ ಮೊಬೈಲ್ ಕಸಿದು ಪರಾರಿಯಾಗಿದ್ದರು. ಪುಲಿಕೇಶಿ ನಗರದ ಸಿಸಿ ರಸ್ತೆಯಲ್ಲಿ ಹಣ ಸುಲಿಗೆ ಮಾಡುವ ವೇಳೆ ವ್ಯಕ್ತಿಯ ಮೇಲೆ ಹಲ್ಲೆ ನಡೆಸಿ ಪರಾರಿಯಾಗಿದ್ದರು. ಸಹಾಯ ಕೇಳುವ ನೆಪದಲ್ಲಿ ಕಾರನ್ನು ಅಡ್ಡಗಟ್ಟಿ ಚಾಲಕರನ್ನು ಬೆದರಿಸಿ ಸುಲಿಗೆ ಮಾಡಿದ್ದರು' ಎಂದು ತಿಳಿಸಿದರು.

# ₹1.53 ಕೋಟಿ ದರೋಡೆ: ಏಳು ಮಂದಿ ಸೆರೆ

ರಾಕ್‌ಲೈನ್ ಸಹೋದರನ ಮನೆಯಲ್ಲಿ ಕಳ್ಳತನ: 3 ಕೆ.ಜಿ. ಚಿನ್ನಾಭರಣ ಜಪ್ತಿ ಮಾಡಿದ ಪೊಲೀಸರು

ಪ್ರಜಾವಾಣಿ ವಾರ್ತೆ

**ಅಪರಾಧ ಸುದ್ದಿ**

**ಮುಖ್ಯಾಂಶಗಳು**
- ನೇಪಾಳದವರು ಭಾಗಿ
- ವಿದೇಶ ಪ್ರವಾಸಕ್ಕೆ ಹೋಗಿದ್ದಾಗ ದರೋಡೆ
- ಸಿ.ಸಿ ಟಿ.ವಿ ಕ್ಯಾಮೆರಾ ನೀಡಿದ ಸುಳಿವು

**ಬೆಂಗಳೂರು:** ಚಿತ್ರ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಅವರ ಸಹೋದರ, ಉದ್ಯಮಿ ಭ್ರಮರೇಶ್ ಅವರ ಮನೆಯಲ್ಲಿ ಚಿನ್ನಾಭರಣ ಹಾಗೂ ನಗದು ದರೋಡೆ ಮಾಡಿದ ಪ್ರಕರಣ ಸಂಬಂಧಿಸಿದಂತೆ ನೇಪಾಳದ ಏಳು ಮಂದಿ ಆರೋಪಿಗಳನ್ನು ಮಹಾಲಕ್ಷ್ಮಿ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ನೇಪಾಳದ ಉಪೇಂದ್ರ, ಪಾರ್ವತಿ, ನರಬಹದ್ದೂರ್, ಕೋಮಲ್, ಖಾಕೇಂದ್ರ ಶಾಹಿ, ಸ್ವಸ್ತಿಕಾ, ಶಾದಲಾ ಬಂಧಿತರು. ಇನ್ನೂ ಮೂವರು ತಲೆಮರೆಸಿಕೊಂಡಿದ್ದು ಅವರ ಪತ್ತೆಗೆ ಕಾರ್ಯಾಚರಣೆ ಮುಂದುವರಿಸಲಾಗಿದೆ. ಆರೋಪಿಗಳು ಕಳ್ಳತವನ್ನೇ ವೃತ್ತಿ ಮಾಡಿಕೊಂಡಿದ್ದರು ಎಂಬುದು ಪೊಲೀಸರ ತನಿಖೆಯಿಂದ ಗೊತ್ತಾಗಿದೆ.

ಬಂಧಿತ ಆರೋಪಿಗಳಿಂದ ₹1.53 ಕೋಟಿ ಮೌಲ್ಯದ 3 ಕೆ.ಜಿ ಚಿನ್ನಾಭರಣ, 562 ಗ್ರಾಂ ಬೆಳ್ಳಿ ಸಾಮಗ್ರಿ, ವಿವಿಧ ಕಂಪನಿಯ 16 ವಾಚ್‌ಗಳು, ₹40 ಸಾವಿರ ನಗದು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ನಗರ ಪೊಲೀಸ್ ಕಮಿಷನರ್ ದಯಾನಂದ್ ಅವರು ಮಾಹಿತಿ ನೀಡಿದರು.

'ಅ.21ರಂದು ಭ್ರಮರೇಶ್ ಅವರು ತಮ್ಮ ಕುಟುಂಬದ ಸದಸ್ಯರೊಂದಿಗೆ ವಿದೇಶ ಪ್ರವಾಸಕ್ಕೆ ತೆರಳಿದ್ದರು. ಅ.29ರಂದು ವಾಪಸ್ ಬಂದು ನೋಡುವಾಗ ಮನೆಯಲ್ಲಿದ್ದ ಚಿನ್ನಾಭರಣ ಕಳವು ನಡೆದಿರುವುದು ಪತ್ತೆಯಾಗಿತ್ತು. ಮಾರನೆಯ ದಿನ ದೂರು ನೀಡಿದ್ದರು' ಎಂದು ಹೇಳಿದರು.

**ಸಿಸಿ ಟಿ.ವಿ ಕ್ಯಾಮೆರಾ ಸುಳಿವು:** 'ಮನೆಯ ಸುತ್ತಮುತ್ತ ಅಳವಡಿಸಿದ್ದ ಸಿಸಿ ಟಿ.ವಿ ಕ್ಯಾಮೆರಾಗಳನ್ನು ಪರಿಶೀಲನೆ ನಡೆಸಿದಾಗ ಆರೋಪಿಗಳ ಚಹರೆ ಪತ್ತೆಯಾಗಿತ್ತು. ದೃಶ್ಯಾವಳಿ ನೆರವಿನಿಂದ ಆರೋಪಿಗಳನ್ನು ಬಂಧಿಸಲಾಯಿತು' ಎಂದು ಹೇಳಿದರು.


ಉಪೇಂದ್ರ


ಖಾಕೇಂದ್ರ


ಕೋಮಲ್


ನರ ಬಹದ್ದೂರ್


ಪಾರ್ವತಿ


ಶಾದಲಾ


ಸ್ವಸ್ತಿಕಾ

'ಮಹಾಲಕ್ಷ್ಮಿ ಲೇಔಟ್‌ನ ನಾಗಪುರ ವಾರ್ಡ್‌ನಲ್ಲಿ ಭ್ರಮರೇಶ್ ಅವರು ನೆಲೆಸಿದ್ದರು. ಬಂಧಿತರ ಪೈಕಿ ಆರೋಪಿಯೊಬ್ಬ ಭ್ರಮರೇಶ್ ಮನೆಯ ಪಕ್ಕದಲ್ಲೇ ನಿರ್ಮಾಣ ಹಂತದ ಕಟ್ಟಡದ ಭದ್ರತಾ ಸಿಬ್ಬಂದಿಯಾಗಿ ಕೆಲಸ ಮಾಡಿಕೊಂಡಿದ್ದ. ಆತನೊಂದಿಗೆ ಉಳಿದ ಐವರು ಆರೋಪಿಗಳು ವಾಸವಿದ್ದರು. ಮೂರು ತಿಂಗಳುಗಳಿಂದಲೂ ಆರೋಪಿಗಳು, ಭ್ರಮರೇಶ್ ಮನೆಯ ಮೇಲೆ ಕಣ್ಣಿಟ್ಟಿದ್ದರು. ಭ್ರಮರೇಶ್ ವಿದೇಶ ಪ್ರವಾಸಕ್ಕೆ ತೆರಳಿದ್ದ ಬಗ್ಗೆ ಮಾಹಿತಿ ಪಡೆದು ದರೋಡೆಗೆ ತಂತ್ರ ರೂಪಿಸಿದ್ದರು'

'ತಾವಿದ್ದ ನಿರ್ಮಾಣ ಹಂತದ ಕಟ್ಟಡದ ಮೂಲಕ ಭ್ರಮರೇಶ್ ಮನೆಯ ಕಟ್ಟಡಕ್ಕೆ ಜಿಗಿದು ಕಿಟಕಿಯ ಸರಳುಗಳನ್ನು ಯಂತ್ರದ ಸಹಾಯದಿಂದ ಕತ್ತರಿಸಿದ್ದರು. ನಂತರ ಒಳಗೆ ನುಗ್ಗಿದ್ದರು. ಬಂಧಿತರ ಪೈಕಿ ಕೆಲವರು ಬಾಗಿಲು ಹಾಕಿದ್ದ ಮನೆಗಳನ್ನೇ ಗುರುತಿಸಿ ಹಗಲು ಅಥವಾ ರಾತ್ರಿ ವೇಳೆ ದರೋಡೆ ನಡೆಸುತ್ತಿದ್ದರು. ಈ ಸಂಬಂಧ ನಗರದ ಪುಟ್ಟೇನಹಳ್ಳಿ, ಮಾಗಡಿ ರಸ್ತೆ ಠಾಣೆ, ಆಂಧ್ರಪ್ರದೇಶದ ಕುಕ್ಕುಟಪಲ್ಲಿ ಹಾಗೂ ಮಹಾರಾಷ್ಟ್ರದ ಕಂಡಿವಾಲಿ ವೆಸ್ಟ್ ಪೊಲೀಸ್ ಠಾಣೆಯಲ್ಲೂ ಪ್ರಕರಣಗಳು ದಾಖಲಾಗಿದ್ದವು' ಎಂದು ಪೊಲೀಸರು ಹೇಳಿದರು.

## ಸುದ್ದಿ 2 ನಿಮಿಷ

### ಕ್ಯಾಟರ್‌ಬಿಲ್ ಬಳಸಿ ಗ್ಲಾಸ್ ಒಡೆಯುತ್ತಿದ್ದ ಆರೋಪಿಗಳು

**ಬೆಂಗಳೂರು:** ರಸ್ತೆಯ ಬದಿ ಹಾಗೂ ಪಾರ್ಕಿಂಗ್ ಸ್ಥಳಗಳಲ್ಲಿ ನಿಲುಗಡೆ ಮಾಡಿದ್ದ ಕಾರುಗಳ ಗ್ಲಾಸ್‌ಗಳನ್ನು ಒಡೆದು ಚಿನ್ನಾಭರಣ, ಲ್ಯಾಪ್‌ಟಾಪ್ ಹಾಗೂ ಮೊಬೈಲ್ ಕಳವು ಮಾಡುತ್ತಿದ್ದ ಮೂವರು ಆರೋಪಿಗಳನ್ನು ಯಲಹಂಕ ಪೊಲೀಸರು ಬಂಧಿಸಿದ್ದಾರೆ.

ಸುಫಿಯಾನ್ ಷರೀಫ್, ಮೋಯಿಜ್ ಹಾಗೂ ಶಾಹಿದ್ ಬಂಧಿತರು.

ಬಂಧಿತರಿಂದ ₹18 ಲಕ್ಷ ಮೌಲ್ಯದ ವಿವಿಧ ಕಂಪನಿಯ ಲ್ಯಾಪ್‌ಟಾಪ್‌ಗಳು, ಕಾರು, ಬೈಕ್ ಹಾಗೂ 60 ಗ್ರಾಂ ಚಿನ್ನಾಭರಣ ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಆರೋಪಿಗಳು, ರಸ್ತೆಬದಿಯಲ್ಲಿ ನಿಲ್ಲಿಸಿದ್ದ ಕಾರುಗಳಲ್ಲಿ ಬೆಲೆಬಾಳುವ ವಸ್ತುಗಳು ಇರುವುದನ್ನು ಪತ್ತೆ ಮಾಡುತ್ತಿದ್ದರು. ಅದಾದ ಮೇಲೆ ಕ್ಯಾಟರ್‌ಬಿಲ್ ಬಳಸಿ ಕಾರಿನ ಗಾಜು ಒಡೆದು ಹಾಕುತ್ತಿದ್ದರು. ಕಾರಿನ ಒಳಗಿದ್ದ ವಸ್ತುಗಳನ್ನು ಕಳವು ಮಾಡುತ್ತಿದ್ದರು. ಆರೋಪಿಗಳು ಯಲಹಂಕ, ಕೊತ್ತನೂರು, ಚಿಕ್ಕಜಾಲ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳವು ನಡೆಸಿದ್ದರು. ಇವರ ಬಂಧನದಿಂದ 9 ಕಳವು ಪ್ರಕರಣಗಳು ಪತ್ತೆಯಾಗಿವೆ' ಎಂದು ಪೊಲೀಸರು ಹೇಳಿದರು.

### ಬೈಕ್ ಸವಾರರ ಅಡ್ಡಗಟ್ಟಿ ಸುಲಿಗೆ

**ಬೆಂಗಳೂರು:** ಬೈಕ್ ಸವಾರರನ್ನು ಅಡ್ಡಗಟ್ಟಿ ಚಾಕು ತೋರಿಸಿ, ಬೆದರಿಸಿ ಚಿನ್ನಾಭರಣ, ಮೊಬೈಲ್, ನಗದು ಕಸಿದು ಪರಾರಿಯಾಗುತ್ತಿದ್ದ ಐವರು ಆರೋಪಿಗಳನ್ನು ಈಶಾನ್ಯ ವಿಭಾಗದ ಬಾಗಲೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಶಿವಾಜಿನಗರದ ಬಂಬೂ ಬಜಾರ್‌ನ ಮೊಹಮ್ಮದ್ ಅರ್ಬಾಜ್, ಥಣಿಸಂದ್ರದ ಅಮರಜ್ಯೋತಿಯ ಲೇಔಟ್‌ನ ಸೈಯದ್ ಅರ್ಬಾಝ್, ಟೆಲಿಕಾಂ ಲೇಔಟ್‌ನ ಸರಾಯಿ ಪಾಳ್ಯದ ನಿವಾಸಿ ಗೌಸ್ ಶರೀಫ್, ಕೆ.ಜಿ. ಹಳ್ಳಿಯ ಮುಜಾಮಿಲ್ ರಹೀಮಾನ್ ಹಾಗೂ ಎಜಾಜ್ ಅಹಮ್ಮದ್ ಬಂಧಿತ ಆರೋಪಿಗಳು.

ಬಂಧಿತರಿಂದ ₹2.50 ಲಕ್ಷ ಮೌಲ್ಯದ ಬೈಕ್, ನಾಲ್ಕು ಮೊಬೈಲ್, ಒಂದು ಚಿನ್ನದ ಉಂಗುರ ಹಾಗೂ ಕರಿಮಣಿಯುಳ್ಳ ಚಿನ್ನದ ಸರವನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ಹೇಳಿದರು.

'ಆರೋಪಿಗಳು ಕಳವು ಪ್ರಕರಣದಲ್ಲಿ ಬಂಧನಕ್ಕೆ ಒಳಗಾಗಿ ಜೈಲು ಸೇರಿದ್ದರು. ಬಿಡುಗಡೆಯಾದ ಮೇಲೆ ಮತ್ತೆ ಅದೇ ಕೃತ್ಯದಲ್ಲಿ ತೊಡಗಿದ್ದರು. ಕಣ್ಣೂರು ವೃತ್ತದಿಂದ ಬೆಳ್ಳಳ್ಳಿ ಗ್ರಾಮದ ರಸ್ತೆಯಲ್ಲಿ ಬೈಕ್ ಸವಾರರನ್ನು ಅಡ್ಡಗಟ್ಟಿ ಸುಲಿಗೆ ಮಾಡುತ್ತಿದ್ದರು. ಸುಲಿಗೆ ಮಾಡಿದ ಚಿನ್ನಾಭರಣ ಮಾರಾಟ ಮಾಡಿ ವಿಲಾಸಿ ಜೀವನ ನಡೆಸುತ್ತಿದ್ದರು' ಎಂದು ಪೊಲೀಸರು ಹೇಳಿದರು.


ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ, ಪತ್ರಿಕಾ ವಿತರಕರ ಒಕ್ಕೂಟದಿಂದ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರನ್ನು ಸನ್ಮಾನಿಸಲಾಯಿತು. ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಿವಾನಂದ ತಗಡೂರು, ಪತ್ರಿಕಾ ವಿತರಕರ ಒಕ್ಕೂಟದ ರಾಜ್ಯಾಧ್ಯಕ್ಷ ಶಂಭುಲಿಂಗ, ಪ್ರಧಾನ ಕಾರ್ಯದರ್ಶಿ ಸಂಗಮ ಸುರೇಶ್, ದಿನಪತ್ರಿಕೆ ಒಕ್ಕೂಟದ ಅಧ್ಯಕ್ಷ ಗೋಪಾಲ್ ದೇವರಾಜು ಎನ್, ಶ್ರೀನಿವಾಸ್, ಎಂ.ಆರ್.ಶಿವಶಾಂತ್ ನಾರಾಯಣಸ್ವಾಮಿ ಇದ್ದರು

ಪ್ರಜಾವಾಣಿ
# ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

General

ಬೇಕಾಗಿದ್ದಾರೆ
ದಾಬಸ್‌ಪೇಟೆ - ಬೆಂಗಳೂರಿನಲ್ಲಿ ಫ್ಯಾಕ್ಟರಿ ಪ್ರಾಜೆಕ್ಟ್‌ಗೆ ಅಗತ್ಯವಿರುವ ಸಿವಿಲ್ ಮತ್ತು ಪಿಇಬಿ ಅನುಭವಿ ಗುತ್ತಿಗೆದಾರರು ಬೇಕಾಗಿದ್ದಾರೆ.
ಸಂಪರ್ಕಿಸಿ:
ಸಿ. ರಾಜಗಣೇಶ್
94808 34473
ಮೇಲ್ ಐಡಿ: ganesh.c@slgroup.in

WANTED EXPERIENCED Tally ACCOUNTANT, Marketing Purchase DME Executives, Car_Driver For Mini Cement Plant at Tumkur District and Peenya, Bangalore. Contact: 9448288666, 7975591621 Email: siddaganga.sgc@gmail.com

FRANK PUBLIC SCHOOL, JP-Nagar 6th Phase, MARKETING EXECUTIVES, ADMISSION COUNCILLORS, FRONT OFFICE EXECUTIVES. 7019301626 rumysud@gmail.com

BEST JOBS in best organisations with best Salary. All categories. bengaluru jobs. Quickest ever Placement system. Just Misscall 24/7: 99000-54468

Teachers/ Professors

WANTED LECTURERS in English, Computer Science, Commerce and Biology for Vidyavana PU College, Tirumalashettyhalli Cross, Bengaluru- 560067. 9663389388

**Dr. Sri. Sri. Sri. Shivakumara Mahaswamy College of Engineering & Polytechnic**
(Affiliated to VTU, Belgaum & Approved by AICTE, New Delhi
Byranayakanahalli, Nelamangala Taluk, Bangalore Rural District-562132
Website : www.drsmce.org Email : recruitdrsmce2211@gmail.com
**OPPORTUNITIES : MESS OPERATOR WANTED**
We are seeking an experinced and reliable individual to run a mess facility in our establishment for more than 700 students. The Ideal candidate should possess excellent culinary skills, organizational abilities, and a commitment to maintaining high hygiene standards. Ready to use building with all facilities including utensils, water, electricity, etc.
**REQUIREMENTS :**
- Experitise with a diverse menu planning capability.
- Experience in managing a mess or similar food service establishment.
- Knowledge of food safety regulations and hygiene practices.
- Ability to manage inventory, procure supplies, and control costs effectively
- Strong communication and interpersonal skills to interact with students & staff.
- Willingness to adhere to the specified working hours and adapt to the dynamic nature of the business
How to Apply : Interested candidates are invited to submit their resume along with a cover letter highlighting their relevant experince.
**FACULTY POSITIONS FOR ENGINEERING & POLYTECHNIC**
Applications are invited for the posts of Professors, Associate Professors and Asst. Professors in the following Disciplines.
- Computer Science & Engineering
- Information Science & Engineering
- Electronics & Communication Engineering
- Physical Education Director
- Librarian
NON TEACHING POSTS
ACCOUNTANT : Qualification and Pay Scale : As per AICTE norms
Note : For the posts of PROFESSOR & ASSOCIATE PROFESSOR, Candidates having Ph.D are only eligible. Apply Via email and send hard copy so as to reach before 7 days from the date of advertisement along with your detailed CV & supporting documents.
Dr. H.D. Ramesh, Principal 9880658861 / 7760268213
Sri. D.C. Venugopal Chairman

WE ARE HIRING!
THE SIVAKASI LIONS INTERNATIONAL INSTITUTIONS
For Upcoming IB & CBSE School 2024-25
- PRINCIPAL
P.G. & B.Ed with min. 15 yrs teaching & 10 yrs admin exp.
- TEACHERS (PRT & TGT)
- FRONT DESK
- ADMISSION COUNSELLOR
- ADMIN
Salary shall not be a constraint for the deserving candidate.
Mail your CV within 7 days from the date of advertisement
career@sivakasilionsintl.com
+91 9810836950 www.sivakasilionsintl.com
Campus: Virudhunagar Road, Sivakasi, Tamil Nadu

**New Millennium School**
Horamavu Agara, Bangalore-560043
[Affiliated to CISCE New Delhi]
Invites application for the following positions from suitably qualified and experienced full time Teachers.
Music, Sanskrit, Basketball Coach, Physics / Maths (Middle and Senior School)
Office Staff with good Computer skills in Excel.
Send your CV to: newmillenniumschool@gmail.com
Walk in interview between 8 am to 12.30 pm on a working day.
Contact: 8660541421 7892839366
Visit: www.newmillenniumschool.com

JOB To Place your Classified Ads Contact: 9886213331

**CAUTION NOTICE**
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager The Printers (Mysore) Pvt. Ltd. Bengaluru

**II VISHWA VIDYAPEETH II**
GROUP OF SCHOOLS
**CAREER OPPORTUNITY**
INVITING APPLICATIONS FOR THE BELOW MENTIONED POSTS [ICSE/CBSE/IGCSE]
TEACHER (PRT/TGT/PGT) - ENGLISH, MATHEMATICS, SCIENCE, SOCIAL STUDIES, ECONOMICS, BUSINESS STUDIES, HINDI, KANNADA, FRENCH, PHYSICAL EDUCATION, DANCE, ART & CRAFT, MUSIC
COORDINATOR - ACADEMIC COORDINATOR, ADMISSION COORDINATOR
OTHER POSTS - PRE-PRIMARY TEACHERS, ADMIN EXECUTIVE, CONTENT WRITER & SOCIAL MEDIA DESIGNER, LIBRARIAN, NURSE, LAB ASSISTANT, DAY CARE IN-CHARGE
EXPERTISE IN HANDLING SIMILAR ROLE WITH WORK EXPERIENCE OF MINIMUM 3 YEARS AT A REPUTED SCHOOL
NOTE: KINDLY CARRY HARD COPY OF LATEST RESUME, 1 PASSPORT SIZE PHOTO & 1 GOVERNMENT PHOTO ID
VICE PRINCIPAL FOR ICSE / CBSE [YELAHANKA]
YELAHANKA [WALK-IN INTERVIEW] 2nd & 3rd December, 2023 (Saturday & Sunday) from 9:00 a.m. to 2:00 p.m. Contact: 76762 27477 Email: careers@vishwavidyapeeth.edu.in
VARTHUR [WALK-IN INTERVIEW] 9th & 10th December, 2023 (Saturday & Sunday) from 9:00 a.m. to 2:00 p.m. Contact: 76762 27483 Email: myjobs@vishwavidyapeeth.edu.in

Graphic Designers
WANTED MALE/ Female Graphic Designer (Corel Draw Photoshop Illustrator) for a Pvt Limited Company in around Rajajinagar Contact: 9108458798/ 23384085

Part-Time Jobs
TOP MNC Com. Licensed By Central Govt. Retired/ VRS Persons 2nd Career Opporty Age Above 45 Years 35K To 40K: 7019215243/ 9886641282

Wanted
WANTED FEMALE Office Assistant Below 40 Years Qualification any Degree, Good Communication Skills: Kannada, English, Hindi. in around Rajajinagar Contact: 23384085/ 9108458798

REAL ESTATE SELLING

Sites

Rajarajeshwari Nagar
RESIDENTIAL SITE 40X61 @ R.R.Nagar, Sweet Home Layout, Uttarhalli Main Road, BBMP A Katha. 9880886474

Anjanapura
20'X30' BDA site for immediate sale in Anjanapura 5th 'G' Block,having Kaveri water,Owner:9008716584, 50L

Nelamangala
SITES: SALE Nelamangala Snehamayee Housing Society Panchayat Converted Sites 1000, 1200, 1500 SQFT Brokers Excuse: 9886006491

Chikkaballapura
SITES: SALE Chikkaballapura Apranje Times Square DC Converted Good Investment / Immediate Construction 1200sq EF Broker Excuse: 9886006491

Industrial & Factory

Mysore Road
6500 SFT, 80x82 East facing Industrial Site for Sale, adjacent to Kumbalgodu Industrial Area. 8880004847

RENTAL PROPERTIES

Accommodation Available

Industrial And Factory
AT TUMKUR, Industrial Shed for Rent 12000 sqft with/ without large open area, with power, water, ready to occupy at Antharasanahalli Industrial Area. Contact: 9663374086, 080-28360561 Email: purchase@vetrilindia.in

3000 SQFT, 6300 sqft, 8000 sqft (HT) with power at Peenya 4th phase. Call: 9535477360, 080-28360561 purchase@vetrilindia.in

BUSINESS

Business to Business

Business
ANY CENTRAL/ New Delhi work done with High Level Contacts. Vamshadhara Project Services: 9342247637 (Swamy)

Business Offers

Finance
NRI'S INVESTMENT And Finance Available On Low Interest Against Properties, Land& Building,Sites,Flats,Converted& Agriculture Lands Call:7204995189

WANTED BUSINESS Partners Saree Business 10 Lakhs Investment Monthly Income 1 Lakhs Contact: 8892501007/ 9606701007

PERSONAL

Change of Name

CHANGE OF NAME
I, TAVAREKARE SYEDA ABDUL RAWOOF Residing at No.149, Cart Stand Road, Jalli Mohalla, Chickpet, Bangalore-560053 have changed my name to TAVAREKARE SYED ABDUL RAWOOF vide affidavit dated 27.11.2023 before Notary R. Vishwanath, Bangalore. Henceforth I shall be known as TAVAREKARE SYED ABDUL RAWOOF only.

CHANGE OF NAME
I, KHAKASHAN NAZ SYED, W/o Ruhulla Shariff, R/at # 21, 2nd Cross, M. D. Block, Malleshwaram, Bangalore-560003, have changed my name to KHAKASHAN NAAZ vide affidavit dt. 25.11.2023 before Notary C.Srinivas, Bangalore. Henceforth I shall be known as KHAKASHAN NAAZ only.

I,BHASKARA SRINIVASALU REDDY R/at No.60/70, 15th-Main, 12th-Cross, Near_VET School, J.P.Nagar 2nd-Phase, Bangalore- 560078 have Changed_my Name-to BHASKAR SRINIVASALU REDDY Sworn_Before Notary G.R.Rajanna, Bangalore

CHANGE OF NAME
I, SUNIL KUMAR SHARMA, Residing at Flat No. 316, Mahaveer Lakes, Lilac Block, Uttarahalli-Kengeri Main Road, Bengaluru-60, have changed my name to SUNIL SHARMA vide affidavit dt. 28.11.2023 before Notary A. Gerard, Bengaluru. Henceforth I shall be known as SUNIL SHARMA only.

CHANGE OF NAME
I, DADAPEER, S/o ABUDUL AZIZ SAB, R/at #80, 1st Floor, 8th Cross, Madeena Nagar, Magammnapalya Main Road, Bommanahalli Post, Bengaluru-68 have changed my name to DADAPEER A AZEEZ S/o ABDUL AZEEZ, vide affidavit dt.27.11.2023 sworn before notary A.S Narayana Reddy, Bengaluru.

CHANGE OF NAME
I, STEELA MANUAL is legally wedded spouse of No 14616272X SEP MANUAL R presently residing at No. 79, Kullegowdanapalya, K Gollahalli (PO), Kengeri, Bengaluru-560074, Have changed my name from STEELA MANUAL to STELLA MANUAL vide affidavit dated 28.11.2022 before advocate A. Idinabba, Bengaluru.

WE, PARESH GOWRISHANKAR PANDYA and PREETI PARESH PANDYA residing at V.S.Cozy, No.209, 2nd Floor, A.R.Layout, 28th Main, J.P.Nagar, 6th Phase, Bangalore-560078, have changed my minor daughter name from DHANVI to DHANVI PARESH PANDYA vide affidavit dated 27.11.2023 before notary Mohammed Hussain.K, Bangalore.

DH DECCAN HERALD Classifieds More value, more impact
JOB HUNT ಪ್ರಜಾವಾಣಿ
Get your HIRING NEEDS answered
Get the right people for your company... Book your Ad with us now !
www.dhclassifieds.com BOOK NOW
For more details contact:
+91 9845114560 | +91 9886213331 | +91 9900428036 | +91 9731810277 | +91 9901641752 | 080-45557163/164

# 'ಕರಾಳ' ಕಾಯ್ದೆಗಳಿಗೆ ಬೆಂಕಿ

## 'ಶ್ರಮಿಕರ ಮಹಾಧರಣಿ' ಅಂತ್ಯ ● ಕಾರ್ಮಿಕರ ಆಕ್ರೋಶ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ರೈತ, ದಲಿತ, ಕಾರ್ಮಿಕ, ವಿದ್ಯಾರ್ಥಿ, ಯುವಜನ ಹಾಗೂ ಮಹಿಳಾ ಸಂಘಟನೆಗಳ ಸಮನ್ವಯ ಸಮಿತಿ ನೇತೃತ್ವದಲ್ಲಿ 72 ಗಂಟೆಗಳ ಕಾಲ ನಡೆದ ದುಡಿಯುವ ವರ್ಗದ ಮಹಾಧರಣಿ ಮಂಗಳವಾರ ಸಂಜೆ ಅಂತ್ಯವಾಯಿತು.

ಮಹಾಧರಣಿಯ ಅಂತಿಮ ದಿನ ಹಲವು ನಿರ್ಣಯ ಕೈಗೊಂಡ ಹೋರಾಟಗಾರರು, ಕರಾಳ ಕಾಯ್ದೆಗಳ ಪ್ರತಿಗಳಿಗೆ ಬೆಂಕಿ ಹಚ್ಚಿ ತಮ್ಮ ಆಕ್ರೋಶವನ್ನು ಹೊರಹಾಕಿದರು.

ಕೇಂದ್ರ ಸರ್ಕಾರ ರೈತರ ಅನ್ನಕ್ಕೆ ವಿಷ ಹಾಕುವ ಕೆಲಸ ಮಾಡುತ್ತಿದೆ. ಕೇಂದ್ರ ಜಾರಿಗೆ ತರಲು ಬಯಸುತ್ತಿರುವ ಭೂಸುಧಾರಣಾ ಕಾಯ್ದೆ, ಎಪಿಎಂಸಿ ಕಾಯ್ದೆ, ವಿದ್ಯುತ್ ಕಾಯ್ದೆ, ಭೂಸ್ವಾಧೀನ ಕಾಯ್ದೆ ಎಲ್ಲವೂ ಕಾರ್ಪೊರೇಟ್ ಕುಳಗಳ ದಾಹ ತಣಿಸುವ ಸಂಚುಗಳಾಗಿದ್ದು, ಎಲ್ಲ ಕಾಯ್ದೆಗಳನ್ನೂ ವಾಪಸ್ ಪಡೆಯುವುದು ಸೇರಿ ಹಲವು ನಿರ್ಣಯಗಳನ್ನು ಮಹಾಧರಣಿಯಲ್ಲಿ ಕೈಗೊಳ್ಳಲಾಯಿತು.

ಜನರ ಆದಾಯ ಹೆಚ್ಚಿಸುವುದು, ವೆಚ್ಚಗಳಲ್ಲಿ ಕಡಿತ, ಜೀವನದ ಸುರಕ್ಷತೆ, ಆಳ್ವಿಕೆಯಲ್ಲಿ ಬದಲಾವಣೆ ಮತ್ತು ಪ್ರತಿಭಟಿಸುವ ಸ್ವಾತಂತ್ರ್ಯ ಕಲ್ಪಿಸುವಂತೆ ಆಗ್ರಹಿಸಲಾಯಿತು.

ಬಗರ್‌ಹುಕುಂ ಸಾಗುವಳಿದಾರರು, ಭೂಸ್ವಾಧೀನಕ್ಕೆ ಒಳಗಾದವರು, ವಸತಿ ರಹಿತರು, ನಷ್ಟಕ್ಕೆ ಒಳಗಾದ ರೈತರಿಗೆ ಸಹಾಯ ನೀಡಬೇಕು ಎಂದು ಮಹಾಧರಣಿಯಲ್ಲಿ ಒತ್ತಾಯಿಸಲಾಯಿತು.



ಕೇಂದ್ರ ಸರ್ಕಾರ ಕರಾಳ ಕಾಯ್ದೆಗಳನ್ನು ಜಾರಿಗೊಳಿಸಿ ಜನರಿಗೆ ದ್ರೋಹ ಎಸಗುತ್ತಿದೆ ಎಂದು ಆರೋಪಿಸಿದ ಹೋರಾಟಗಾರರು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದ ಬಳಿ ಮಂಗಳವಾರ ಕಾಯ್ದೆ ಪ್ರತಿಗಳಿಗೆ ಬೆಂಕಿ ಹಾಕಿದರು – ಪ್ರಜಾವಾಣಿ ಚಿತ್ರ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಮನ್ವಯ ಸಮಿತಿಗೆ ಬರೆದಿರುವ ಪತ್ರದಲ್ಲಿ ಹೋರಾಟದ ಹಕ್ಕೊತ್ತಾಯಗಳ ಕುರಿತು ಚರ್ಚಿಸಲು ಡಿ.19ರಂದು ಸಭೆ ಕರೆಯಲಾಗುವುದು ಎಂದು ಭರವಸೆ ನೀಡಿದ್ದಾರೆ. ಯಾವುದೇ ಕಾರಣಕ್ಕೂ ಸಭೆ ಮುಂದೂಡದೇ ಅಂದೇ ಸಭೆ ನಡೆಸಬೇಕು. 19 ಹಕ್ಕೊತ್ತಾಯಗಳ ಕುರಿತು ಚರ್ಚಿಸಿ ಶ್ರಮಿಕರಿಗೆ ನ್ಯಾಯ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಮುಖಂಡ ಕೆ.ಮಹಾಂತೇಶ್ ಮಾತನಾಡಿ, 'ಮೂರು ವರ್ಷಗಳ ಹಿಂದೆ ಕೃಷಿ ಮಸೂದೆಗಳನ್ನು ವಾಪಸ್ ಪಡೆಯುವುದಾಗಿ ಕೇಂದ್ರ ಸರ್ಕಾರ ಹೇಳಿ, ಲಿಖಿತ ರೂಪದಲ್ಲಿ ಭರವಸೆ ನೀಡಿತ್ತು. ಈಗ ಮಾತು ತಪ್ಪಿದೆ' ಎಂದು ಆಕ್ರೋಶ ಹೊರಹಾಕಿದರು.

ಐಎನ್‌ಟಿಯುಸಿ ಮುಖಂಡ ಶಾಮಣ್ಣ ರೆಡ್ಡಿ, ವಲಸೆ ಕಾರ್ಮಿಕರಿಗೆ ವಸತಿ ನೀಡಲು ನಿರಾಕರಿಸಲಾಗುತ್ತಿದೆ. ವಸತಿ ರಹಿತರಿಗೆ ಮನೆ ಹಾಗೂ ನಿವೇಶನ ಕಲ್ಪಿಸಬೇಕು ಎಂದು ಒತ್ತಾಯಿಸಿದರು.

ಹೋರಾಟಗಾರರಾದ ವಿಜಯ ಭಾಸ್ಕರ್, ಎಎಪಿ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು, ಸಿದ್ದನಗೌಡ ಪಾಟೀಲ್ ಸೇರಿದಂತೆ ಹಲವರು ಇದ್ದರು.

# 54ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ತೆರೆ

**ಪಣಜಿ:** ಇಲ್ಲಿನ ಐನಾಕ್ಸ್ ಕಾಂಪ್ಲೆಕ್ಸ್‌ನಲ್ಲಿ ನಡೆದ ಭಾರತದ 54ನೇ ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಮಂಗಳವಾರ ಅಂತ್ಯಗೊಂಡಿತು. ನ.20ರಂದು ಆರಂಭವಾಗಿತ್ತು.

ಪರ್ಷಿಯಾದ ಚಲನಚಿತ್ರ, ಅಬ್ಬಾಸ್ ಅಮಿನಿ ಅವರ 'ಎಂಡ್‌ಲೆಸ್ ಬಾರ್ಡರ್ಸ್' ಅತ್ಯುತ್ತಮ ಸಿನಿಮಾಗೆ ನೀಡುವ ಗೋಲ್ಡನ್ ಪೀಕಾಕ್ ಪ್ರಶಸ್ತಿ, ಆ್ಯಂಟನಿ ಚೆನ್ ಅವರ 'ಡ್ರಿಫ್ಟ್' ಚಿತ್ರಕ್ಕೆ ಐಸಿಎಫ್‌ಟಿ-ಯುನೆಸ್ಕೊ ಗಾಂಧಿ ಪದಕ ಪ್ರಶಸ್ತಿ ಲಭಿಸಿತು.

'ಕಾಂತಾರ' ಸಿನಿಮಾ ಖ್ಯಾತಿಯ ನಟ, ಕನ್ನಡಿಗ ರಿಷಬ್ ಶೆಟ್ಟಿ ಅವರು ವಿಶೇಷ ತೀರ್ಪುಗಾರರ ಪ್ರಶಸ್ತಿಗೆ ಪಾತ್ರರಾದರು.

ಜೀವಿತಾವಧಿ ಸಾಧನೆ ಪ್ರಶಸ್ತಿ ಗೌರವ ಹಾಲಿವುಡ್ ನಟ, ನಿರ್ಮಾಪಕ ಮೈಕೆಲ್ ಡಗ್ಲಾಸ್ ಅವರಿಗೆ ಸಂದಿತು. ಅತ್ಯುತ್ತಮ ವೆಬ್ ಸರಣಿ (ಒಟಿಟಿ) ಪ್ರಶಸ್ತಿಯನ್ನು ಅಮೆಜಾನ್ ಸರಣಿ 'ಪಂಚಾಯತ್ ಸೀಸನ್ 2' ಅನ್ನು ಪಡೆದುಕೊಂಡಿತು. 78 ವಿವಿಧ ದೇಶಗಳ 250 ಚಿತ್ರಗಳು ಪ್ರದರ್ಶನಗೊಂಡವು.

ಸುಧಾ, ಮಯೂರ ಓದಿರಿ


के आई ओ सी एल लिमिटेड
KUDREMUKH
ಕೆಐಒಸಿಎಲ್ ಲಿಮಿಟೆಡ್
(ಭಾರತ ಸರ್ಕಾರದ ಒಂದು ಉದ್ಯಮ)
ಸಿಐಎನ್ : L13100KA1976GOI002974
ಎರಡನೇ ಬ್ಲಾಕ್, ಕೋರಮಂಗಲ, ಬೆಂಗಳೂರು – 560 034
ಟೆಲಿಫೋನ್ – 080-25531525, ವೆಬ್- www.kioclltd.in, ಇಮೇಲ್ - cs@kioclltd.in

**ಕ್ಲೈಮ್ ಮಾಡದ/ಪಾವತಿ ಮಾಡದ ಇರುವ ಡಿವಿಡೆಂಡ್ ಮತ್ತು ಈಕ್ವಿಟಿಯನ್ನು ಹೂಡಿಕೆದಾರರ ಶಿಕ್ಷಣ ಮತ್ತು ರಕ್ಷಣಾ ನಿಧಿ ಪ್ರಾಧಿಕಾರಕ್ಕೆ ವರ್ಗಾವಣೆ ಮಾಡಲು ಷೇರ್ ಹೋಲ್ಡರ್‌ಗೆ ನೋಟೀಸು (IEPFA)**

ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣಾ ನಿಧಿ ಪ್ರಾಧಿಕಾರ (ಲೆಕ್ಕಪರಿಶೋಧನೆ, ಆಡಿಟ್, ವರ್ಗಾವಣೆ ಮತ್ತು ಮರುಪಾವತಿ) ನಿಯಮಗಳು, 2016 ("ನಿಯಮಗಳು") ... 2016-17 ರ ಆರ್ಥಿಕ ವರ್ಷಕ್ಕೆ ... 2024 ರಂದು IEPFA ಗೆ ... [illegible]

... 2016-17 ... 2023-24 ... IEPFA ... [illegible]

https://kioclltd.in/data.php?id=117&lang=EN ... [illegible]

... 20.02.2024 ... 2016-17 ... IEPFA ... [illegible]

20.02.2024 ... IEPFA ... [illegible]

IEPF ... www.iepf.gov.in ... IEPF ... [illegible]

... M/s. ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್, ... ಬೆಂಗಳೂರು – 560003. ದೂರವಾಣಿ – 080 - 23460815/18, ಫ್ಯಾಕ್ಸ್ – 080 - 23460819, ಇಮೇಲ್: irg@integratedindia.in ...

ಸ್ಥಳ – ಬೆಂಗಳೂರು
ದಿನಾಂಕ :29.11.2023

ಕೆಐಒಸಿಎಲ್ ಲಿಮಿಟೆಡ್
ಸಹಿ
(ಪಿ ಕೆ ಮಿಶ್ರ)
ಕಂಪನಿ ಸೆಕ್ರೆಟರಿ








TATA AIA
LIFE INSURANCE

**Asset Scrapping**

Offers are invited for sale of used office assets of a Multinational Company, on an as is where basis. **Materials include office desks, storages, electrical fittings, air conditioners, Server Rack, Electrical and Lan Cables etc. for disposal.**

The materials at the site, which is located in **474, 6th Block, 80 Feet Road, Opp. BMTC Bus Stop, Kormangala, Bangalore- 5600095, are open for inspection from 29.11.2023 to 30.11.23.**

**Appointment needs to be fixed for inspection by calling Sandeep P K on 9566088991 between 11 am to 3 pm.**

Terms and Conditions of Sale are available with the contact person at site. The Company reserves the rights to cancel/postpone/reject/accept offer is at its sole discretion.


# ರಾಜ್ಯದ ಶೇ 23 ಪ್ರದೇಶದಲ್ಲಿ ಅಂತರ್ಜಲದ ಅತಿ ಬಳಕೆ

ಪ್ರಜಾವಾಣಿ ವಾರ್ತೆ

**ನವದೆಹಲಿ:** ಭಾರತದಲ್ಲಿ ಪಾತಾಳಕ್ಕೆ ಇಳಿಯುತ್ತಿರುವ ಅಂತರ್ಜಲ ಮಟ್ಟವನ್ನು ಗಂಭೀರವಾಗಿ ಪರಿಗಣಿಸಿರುವ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯ (ಎನ್‌ಜಿಟಿ) ಪ್ರಧಾನ ಪೀಠವು, ಕರ್ನಾಟಕ ಸೇರಿದಂತೆ 19 ರಾಜ್ಯ ಸರ್ಕಾರಗಳು, ಕೇಂದ್ರ ಅಂತರ್ಜಲ ಮಂಡಳಿ, ಜಲಶಕ್ತಿ ಸಚಿವಾಲಯ ಹಾಗೂ ಪರಿಸರ ಸಚಿವಾಲಯದಿಂದ ಪ್ರತಿಕ್ರಿಯೆ ಕೇಳಿದೆ.

ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿರುವ ನ್ಯಾಯಮೂರ್ತಿ ಪ್ರಕಾಶ್ ಶ್ರೀವಾಸ್ತವ ಹಾಗೂ ತಜ್ಞ ಸದಸ್ಯ ಎ.ಸೆಂಥಿಲ್ ವೇಲ್ ಅವರನ್ನು ಒಳಗೊಂಡ ಪೀಠ, 'ಸಮಸ್ಯೆ ಗಂಭೀರವಾಗಿದೆ' ಎಂದು ಕಳವಳ ವ್ಯಕ್ತಪಡಿಸಿದೆ.

ಈ ನಡುವೆ, ನ್ಯಾಯಪೀಠಕ್ಕೆ ವರದಿ ಸಲ್ಲಿಸಿರುವ ಕೇಂದ್ರ ಅಂತರ್ಜಲ ಮಂಡಳಿ, 'ಕರ್ನಾಟಕದಲ್ಲಿ 1,70,647 ಚದರ ಕಿ.ಮೀ. ಅಂತರ್ಜಲ ಮರುಪೂರಣಕ್ಕೆ ಯೋಗ್ಯವಾದ ಪ್ರದೇಶವಿದೆ. ಆದರೆ, 39,352.66 ಚದರ ಕಿ.ಮೀ. ಪ್ರದೇಶದಲ್ಲಿ ಅಂತರ್ಜಲದ ಅತಿಯಾದ ಬಳಕೆಯಾಗಿದೆ. 6,580 ಪ್ರದೇಶದಲ್ಲಿ ಸಮಸ್ಯೆ ಗಂಭೀರವಾಗಿದೆ. ಒಟ್ಟಾರೆಯಾಗಿ, ರಾಜ್ಯದ ಎಲ್ಲ ಕಡೆಗಳಲ್ಲಿ ಅಂತರ್ಜಲದ ಹೊರ ತೆಗೆಯುವಿಕೆ ಪ್ರಮಾಣ ಹೆಚ್ಚಿದೆ' ಎಂದು ಹೇಳಿದೆ.

# ಗಾಣಿಗರ ಸಮಾವೇಶ ಡಿ.2ರಂದು

**ಬೆಂಗಳೂರು:** ಅಖಿಲ ಕರ್ನಾಟಕ ಗಾಣಿಗರ ಸಂಘದ ಸುವರ್ಣ ಮಹೋತ್ಸವದ ಅಂಗವಾಗಿ ಡಿ. 2ರಂದು ಗಾಣಿಗ ಸಮುದಾಯದ ಸಮಾವೇಶವು ಅಂಜನಾಪುರದ ಅವಲಹಳ್ಳಿಯಲ್ಲಿರುವ ಸಂಘದ ಆವರಣದಲ್ಲಿ ನಡೆಯಲಿದೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಗಾಣಿಗ ಸಂಘದ ಅಧ್ಯಕ್ಷ ಎಂ.ಆರ್. ರಾಜಶೇಖರ್ ಗಾಣಿಗ, 'ಗಾಣಿಗ ಸಂಘದ ನೂತನ ಕಟ್ಟಡದ ಉದ್ಘಾಟನೆ ಹಾಗೂ ನೂತನವಾಗಿ ನಿರ್ಮಿಸಲು ಉದ್ದೇಶಿಸಿರುವ ಕಟ್ಟಡದ ಶಂಕು ಸ್ಥಾಪನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮಾಡಲಿದ್ದಾರೆ' ಎಂದರು.

# 'ಅಭ್ಯರ್ಥಿಯ ಕ್ರಿಮಿನಲ್ ಕೇಸ್ ಮಾಹಿತಿಗೆ ಪ್ರತ್ಯೇಕ ನಮೂನೆ ಒದಗಿಸಿ'

ಪ್ರಜಾವಾಣಿ ವಾರ್ತೆ

**ಬೆಂಗಳೂರು:** 'ಸ್ಥಳೀಯ ಸಂಸ್ಥೆಗಳಲ್ಲಿ ನಾಮಪತ್ರ ಸಲ್ಲಿಸುವ ವೇಳೆ ಅಭ್ಯರ್ಥಿಗಳ ಕ್ರಿಮಿನಲ್ ಪ್ರಕರಣಗಳ ಉಲ್ಲೇಖಕ್ಕೆ ಪ್ರತ್ಯೇಕ ನಮೂನೆಯನ್ನು ಒದಗಿಸಬೇಕು' ಎಂದು ಹೈಕೋರ್ಟ್ ಹೇಳಿದೆ.

ಈ ಸಂಬಂಧ ಸಲ್ಲಿಸಲಾಗಿದ್ದ ಮೇಲ್ಮನವಿ ವಜಾಗೊಳಿಸಿರುವ ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ, 'ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲೂ ಅಭ್ಯರ್ಥಿಗಳ ಕ್ರಿಮಿನಲ್ ಹಿನ್ನೆಲೆ ಬಹಿರಂಗಪಡಿಸಬೇಕು ಎಂಬ ಸುಪ್ರೀಂಕೋರ್ಟ್ ನಿರ್ದೇಶನ ಪಾಲನೆಯ ನಿಟ್ಟಿನಲ್ಲಿ ಅಭ್ಯರ್ಥಿಗಳ ಕ್ರಿಮಿನಲ್ ಕೇಸ್‌ಗಳ ವಿವರಗಳನ್ನು ನೀಡಲು ಪ್ರತ್ಯೇಕ ನಮೂನೆ ಒದಗಿಸಬೇಕು' ಎಂದು ರಾಜ್ಯ ಚುನಾವಣಾ ಆಯೋಗಕ್ಕೆ ನಿರ್ದೇಶಿಸಿದೆ.

'ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವಾಗ ಅವರ ವಿರುದ್ಧ ಯಾವುದಾದರೂ ಕ್ರಿಮಿನಲ್ ಕೇಸ್ ಬಾಕಿ ಇದ್ದರೆ ಅದರ ವಿವರಗಳನ್ನು ಚುನಾವಣಾ ಆಯೋಗಕ್ಕೆ ಒದಗಿಸಬೇಕು. ಆ ಮಾಹಿತಿಯನ್ನು ಟಿಕೆಟ್ ನೀಡುವ ರಾಜಕೀಯ ಪಕ್ಷಕ್ಕೂ ಒದಗಿಸಬೇಕು. ಅಯಾ ಪಕ್ಷದ ವೆಬ್‌ಸೈಟ್‌ನಲ್ಲೂ ಅಭ್ಯರ್ಥಿಗಳ ಕ್ರಿಮಿನಲ್ ಹಿನ್ನೆಲೆ ತಿಳಿಸಬೇಕು. ಪತ್ರಿಕೆಗಳಲ್ಲೂ ಅವರ ವಿವರ ಪ್ರಕಟಿಸಬೇಕು' ಎಂದು ನ್ಯಾಯಪೀಠ ರಾಜ್ಯ ಚುನಾವಣಾ ಆಯೋಗಕ್ಕೆ ಸೂಚಿಸಿದೆ.

# 'ಗೃಹಜ್ಯೋತಿ' ಅಪಪ್ರಚಾರ: ಎಫ್‌ಐಆರ್

**ಬೆಂಗಳೂರು:** ತೆಲಂಗಾಣದಲ್ಲಿ ನಡೆಯುತ್ತಿರುವ ಚುನಾವಣೆ ಸಂದರ್ಭದಲ್ಲಿ ಕರ್ನಾಟಕ ರಾಜ್ಯದಲ್ಲಿ ಜಾರಿಯಲ್ಲಿರುವ ಗೃಹಜ್ಯೋತಿ ಯೋಜನೆ ಕುರಿತು ಅಪಪ್ರಚಾರ ನಡೆಸಲಾಗುತ್ತಿದೆ ಎಂದು ಆರೋಪಿಸಿ, ಬೆಸ್ಕಾಂ ಪ್ರಧಾನ ವ್ಯವಸ್ಥಾಪಕ ದೂರು ನೀಡಿದ್ದು ಪೂರ್ವ ವಿಭಾಗದ ಸೈಬರ್ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

'ಕರ್ನಾಟಕದಲ್ಲಿ ಗೃಹಜ್ಯೋತಿ ಯೋಜನೆ ಯಶಸ್ವಿಯಾಗಿಲ್ಲ. ವಿದ್ಯುತ್ ಪೂರೈಕೆ ವ್ಯವಸ್ಥೆಯೂ ಚೆನ್ನಾಗಿಲ್ಲ' ಎಂದು ಇಂಧನ ಸಚಿವರ ಧ್ವನಿಯನ್ನು ಕೃತಕ ಬುದ್ಧಿಮತ್ತೆ ಅಥವಾ ಬೇರೆ ಯಾವುದೋ ತಂತ್ರಜ್ಞಾನ ಬಳಸಿ ತೆಲಂಗಾಣ ರಾಜ್ಯದಲ್ಲಿ 'ಎಕ್ಸ್' ಖಾತೆಯಲ್ಲಿ ಅಪಪ್ರಚಾರ ನಡೆಸಲಾಗುತ್ತಿದೆ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

## ಸಂಕ್ಷಿಪ್ತ ಸುದ್ದಿ

### ಇಡಗುಂಜಿ ದೇವಾಲಯದಲ್ಲಿ ಪಂಕ್ತಿಭೇದ?

**ಕಾರವಾರ:** ಹೊನ್ನಾವರ ತಾಲ್ಲೂಕಿನ ಇಡಗುಂಜಿ ವಿನಾಯಕ ದೇವಸ್ಥಾನದ ಭೋಜನ ಶಾಲೆಯಲ್ಲಿ ಪಂಕ್ತಿಭೇದ ಮಾಡಲಾಗುತ್ತಿದೆ ಎಂದು ಆರೋಪಿಸಿ ಪ್ರವಾಸಿಗರೊಬ್ಬರು ಭೋಜನ ಶಾಲೆ ಸಿಬ್ಬಂದಿ ಜತೆ ವಾಗ್ವಾದ ನಡೆಸಿದ ದೃಶ್ಯವೊಂದು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ.

ಭಾನುವಾರ ದೇವಾಲಯಕ್ಕೆ ಭೇಟಿ ನೀಡಿದವರ ಪೈಕಿ ಬೆಂಗಳೂರಿನ ಭಕ್ತರೊಬ್ಬರು, 'ಭೋಜನಶಾಲೆಯಲ್ಲಿ ಬ್ರಾಹ್ಮಣರಿಗೆ ಪ್ರತ್ಯೇಕ ಊಟದ ವ್ಯವಸ್ಥೆ ಇದೆ. ಆ ಸಮುದಾಯದವರಿಗೆ ಮೊದಲು ಊಟ ಹಾಕಿ, ನಂತರ ಉಳಿದವರಿಗೆ ಊಟ ಬಡಿಸಲಾಗುತ್ತಿದೆ. ಪಂಕ್ತಿಭೇದ ಮಾಡುವವರ ವಿರುದ್ಧ ಕ್ರಮ ಜರುಗಿಸಬೇಕು' ಎಂದು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಹಾಕಿದ್ದಾರೆ.

'ಇಡಗುಂಜಿ ದೇವಾಲಯದಲ್ಲಿ ನಡೆದ ಘಟನೆ ಗಮನಕ್ಕೆ ಬಂದಿದ್ದು, ದೇವಸ್ಥಾನದವರ ಜೊತೆ ಚರ್ಚಿಸಿ, ಕ್ರಮ ಕೈಗೊಳ್ಳಲಾಗುವುದು' ಎಂದು ಜಿಲ್ಲಾಧಿಕಾರಿ ಗಂಗೂಬಾಯಿ ಮಾನಕರ್ ತಿಳಿಸಿದರು.

### ಶ್ಯಾಂ ಭಟ್ ನೇಮಕಕ್ಕೆ ಎಎಪಿ ವಿರೋಧ

**ಬೆಂಗಳೂರು:** ಭ್ರಷ್ಟಾಚಾರ ಆರೋಪಹೊರಿರುವ ಟಿ. ಶ್ಯಾಂ ಭಟ್ ಅವರನ್ನು ಮಾನವ ಹಕ್ಕುಗಳ ಆಯೋಗದ ಸದಸ್ಯರಾಗಿ ನೇಮಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಜನರ ನಂಬಿಕೆಗೆ ಚ್ಯುತಿ ತಂದಿದ್ದಾರೆ ಎಂದು ಆಮ್ ಆದ್ಮಿ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ 'ಮುಖ್ಯಮಂತ್ರಿ' ಚಂದ್ರು ಮಂಗಳವಾರ ದೂರಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಶ್ಯಾಂ ಭಟ್ ನೇಮಕ ಮಾಡುವ ಮೂಲಕ ಸಿದ್ದರಾಮಯ್ಯ ಅವರು ಭ್ರಷ್ಟರಿಗೆ ಮಣೆ ಹಾಕಿರುವ ಕ್ರಮ ಸರಿಯಲ್ಲ' ಎಂದರು.

ಸಿದ್ದರಾಮಯ್ಯ ಹಿಂದೆ ಸಿ.ಎಂ ಆಗಿದ್ದಾಗ ಶ್ಯಾಂ ಭಟ್ ಅವರನ್ನು ಕೆಪಿಎಸ್‌ಸಿ ಅಧ್ಯಕ್ಷರಾಗಿ ನೇಮಿಸಿದ್ದರು. ಕೆಪಿಎಸ್‌ಸಿಯಲ್ಲಿ ಭಾರಿ ಭ್ರಷ್ಟಾಚಾರ ನಡೆದ ಆರೋಪಗಳು ಬಂದಿದ್ದವು. ಈಗ ಮಾನವ ಹಕ್ಕುಗಳ ಆಯೋಗಕ್ಕೆ ನೇಮಿಸಲಾಗಿದೆ' ಎಂದು ಹೇಳಿದ್ದಾರೆ.


Azadi Ka Amrit Mahotsav
सत्यमेव जयते
G20 भारत 2023 INDIA

**ಭಾರತ ಸರ್ಕಾರ**
**ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ**
**ಸೆಂಟರ್ ಫಾರ್ ಪ್ರೊಸೆಸ್ಸಿಂಗ್ ಆಕ್ಸಲರೇಟೆಡ್ ಕಾರ್ಪೊರೇಟ್ ಎಕ್ಸಿಟ್ (ಸಿ–ಪೇಸ್)**
ಐಐಸಿಎ ಬಿಲ್ಡಿಂಗ್, 7ನೇ ಮಹಡಿ, ಪ್ಲಾಟ್ ಪಿ–6, 7, 8, ಸೆಕ್ಟರ್–5, ಐಎಂಟಿ ಮಾನೇಸರ್, ಗುರಗಾಂವ್, ಹರಿಯಾಣ – 122050. Email: roc.cpace@mca.gov.in

ಫಾರಂ ನಂ. ಎಸ್‌ಟಿಕೆ–6

**ಸಾರ್ವಜನಿಕ ಪ್ರಕಟಣೆ**

[ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248ರ ಸಬ್ ಸೆಕ್ಷನ್ (2) ಮತ್ತು ಸಬ್ ಸೆಕ್ಷನ್ (4) ಹಾಗೂ ಕಂಪನಿಗಳ (ಕಂಪನಿಗಳ ರಜಿಸ್ಟರ್‌ನಿಂದ ಕಂಪನಿಗಳ ಹೆಸರುಗಳನ್ನು ತೆಗೆದು ಹಾಕುವ) ನಿಯಮಗಳು, 2016ರ ನಿಯಮ 7ರ ಪ್ರಕಾರ]

ಪಬ್ಲಿಕ್ ನೋಟಿಸ್ ನಂ. ಆರ್‌ಒಸಿ/ಸಿ–ಪೇಸ್/ಎಸ್‌ಟಿಕೆ–2/248(2)/466 ದಿನಾಂಕ: 02.11.2023

**ಉಲ್ಲೇಖ:**

(1) ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248ರ ಅಡಿಯಲ್ಲಿ ಕರ್ನಾಟಕ ರಾಜ್ಯದ ಬೆಂಗಳೂರಿನಲ್ಲಿರುವ 103 (ಒಂದು ನೂರ ಮೂರು) ಕಂಪನಿಗಳ ಹೆಸರುಗಳನ್ನು ಅಳಿಸಿ ಹಾಕುವ ಅಥವಾ ತೆಗೆದು ಹಾಕುವ ವಿಷಯದಲ್ಲಿ

| ಕ್ರ. ಸಂ. | ವರ್ಕ್ ಐಟಂ | ಸಿಐಎನ್ | ಕಂಪನಿ ಹೆಸರು |
|---|---|---|---|
| 1 | AA3386183 | U74900KA2008PTC045865 | ಚಾರುಲೀಲಾ ಕನ್ಸಲ್ಟನ್ಸಿ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ |
| 2 | AA2921790 | U67190KA2013PTC069339 | ಸ್ಟಾಕೊಪಿಡಿಯಾ ಟೆಕ್ನಾಲಜಿ ಇಂಡಿಯಾ ಪ್ರೈವೇಟ್ ಲಿಮಿಟೆಡ್ |
| 3 | F59371559 | U93000KA2012PTC065841 | ಸ್ಮಾರ್ಟ್‌ಥಿಂಕ್ ಕನ್ಸಲ್ಟಿಂಗ್ ಪ್ರೈವೇಟ್ ಲಿಮಿಟೆಡ್ |
| 4 | F59572362 | U74900KA2014PTC074652 | ಡೈಜಿವರ್ಲ್ಡ್ ಟೆಲಿವಿಷನ್ ಪ್ರೈವೇಟ್ ಲಿಮಿಟೆಡ್ |
| 5 | AA4031331 | U74999KA2017PTC101261 | ಸಾಚ್ನೆ ಪ್ರೈವೇಟ್ ಲಿಮಿಟೆಡ್ |
| 6 | F58880980 | U72100KA2018PTC118741 | ಫೋರ್ಟಿಟ್ಯೂಡ್ ಟೆಕ್ನಾಲಜಿ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ |
| 7 | AA3719461 | U29100KA2021OPC153163 | ಆರ್‌ಐಟಿಡಿಎಂ ಇಂಜಿನಿಯರಿಂಗ್ (ಒಪಿಸಿ) ಪ್ರೈವೇಟ್ ಲಿಮಿಟೆಡ್ |
| 8 | F59756981 | U45309KA2022PTC166835 | ಎಸ್ಸೆನ್ಕೊ ಇಂಜಿನಿಯರಿಂಗ್ ಪ್ರೈವೇಟ್ ಲಿಮಿಟೆಡ್ |
| 9 | AA3940705 | U74900KA2011PTC059674 | ಪಾರ್ಕೋಸ್ ಬ್ರಾಂಡ್ಸ್ ಕಮ್ಯುನಿಕೇಶನ್ ಪ್ರೈವೇಟ್ ಲಿಮಿಟೆಡ್ |
| 10 | F59881029 | U22300KA2016PTC096220 | ಫೈರ್‌ಬ್ರಿಕ್ ಮೀಡಿಯಾ ಸೆಂಟರ್ ಪ್ರೈವೇಟ್ ಲಿಮಿಟೆಡ್ |
| 11 | F59877621 | U72900KA2021PTC148951 | ರೆಕ್ಸಿಕ್ ಪ್ರೈವೇಟ್ ಲಿಮಿಟೆಡ್ |
| 12 | F60058070 | U72900KA2019PTC120407 | ಹಾಟ್‌ಫೀ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ |
| 13 | AA4512316 | U74999KA2018PTC114645 | ಬೈರ್ಯಿಕ್ಸ್ ಎನರ್ಜಿ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ |
| 14 | F59378448 | U08019KA1981PTC004400 | ಪ್ರಾಪರ್ಟಿ ಅಂಡ್ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್ |
| 15 | F50460641 | U74300KA1985PTC007061 | ಸ್ಕಿಯಾನ್ ಅಡ್ವರ್ಟೈಸಿಂಗ್ ಪ್ರೈವೇಟ್ ಲಿಮಿಟೆಡ್ |
| 16 | F59572842 | U63040KA1984PTC005902 | ವಿಸಾ ಟೂರ್ಸ್ ಅಂಡ್ ಟ್ರಾವೆಲ್ ಪ್ರೈವೇಟ್ ಲಿಮಿಟೆಡ್ |
| 17 | AA3312513 | U65992KA1989PTC010020 | ಸೂರ್ಯ ಕಿರಣ್ ಚಿಟ್ಸ್ ಪ್ರೈವೇಟ್ ಲಿಮಿಟೆಡ್ |
| 18 | F60253556 | U40104KA1999PTC031103 | ಸೊಹಮ್ ಕೊಲಾವುರು ರಿನ್ಯೂವೆಬಲ್ ಎನರ್ಜಿ ಪ್ರೈವೇಟ್ ಲಿಮಿಟೆಡ್ |
| 19 | AA4412137 | U29304KA2022PTC166452 | ಎಫ್‌ಎಂಎಲ್ ಮೆಟಾಟೆಕ್ ಪ್ರೈವೇಟ್ ಲಿಮಿಟೆಡ್ |
| 20 | AA5765476 | U74900KA2008PTC045364 | ಆರೇಂಜ್‌ಟಿಪ್ ಡಿಸೈನ್ ಪ್ರೈವೇಟ್ ಲಿಮಿಟೆಡ್ |
| 21 | AA4474248 | U32201KA2007PTC043618 | ಥ್ರೀಕ್ ಐಟಿ ಕನ್ಸಲ್ಟಿಂಗ್ ಪ್ರೈವೇಟ್ ಲಿಮಿಟೆಡ್ |
| 22 | F59957423 | U45300KA2008PTC047202 | ಸಿರೊಯಾ ಬಿಲ್ಡರ್ಸ್ & ರಿಯಲ್ ಎಸ್ಟೇಟ್ಸ್ ಪ್ರೈವೇಟ್ ಲಿಮಿಟೆಡ್ |
| 23 | F60252749 | U45202KA2006PTC038134 | ಪ್ರಕೃತಿ ಇನ್‌ಫ್ರಾಸ್ಟ್ರಕ್ಚರ್ ಪ್ರೈವೇಟ್ ಲಿಮಿಟೆಡ್ |
| 24 | AA4843263 | U74900KA2010PTC055451 | ಪೆಟರಾಕೋಡ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ |
| 25 | F59972992 | U40102KA2011PTC057675 | ಭೊರುಕಾ ಕೊಜೆನ್ ಪವರ್ ಪ್ರೈವೇಟ್ ಲಿಮಿಟೆಡ್ |
| 26 | AA5496250 | U80300KA2011PTC059138 | ಸ್ಟೋನ್ಸ್2ಮೈಲ್‌ಸ್ಟೋನ್ಸ್ (ಸೌಥ್) ಎಡು ಪ್ರೈವೇಟ್ ಲಿಮಿಟೆಡ್ |
| 27 | AA3164071 | U74999KA2013PTC068094 | ಸೂಗುರೇಶ ಕನ್ಸಲ್ಟನ್ಸಿ ಪ್ರೈವೇಟ್ ಲಿಮಿಟೆಡ್ |
| 28 | AA4507013 | U74999KA2013PTC067644 | ಆರ್.ಎಸ್. ಮಾಂಟೆಕ್ ಪ್ರೈವೇಟ್ ಲಿಮಿಟೆಡ್ |
| 29 | F59972869 | U72200KA2012PTC066283 | ಪ್ಲೋ ಅಂಡ್ ಸೋ ಇನ್ಫೋಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ |
| 30 | F59610733 | U50500KA2013PTC071031 | ಶೈನ್‌ಝಿಲ್ಲಾ ಆಟೋ ಡಿಟೇಲಿಂಗ್ ಪ್ರೈವೇಟ್ ಲಿಮಿಟೆಡ್ |
| 31 | F59743807 | U80301KA2014PTC077868 | ಪರ್ಸೆಪ್ಷನ್ ಲರ್ನಿಂಗ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ |
| 32 | F57721102 | U74900KA2014PTC074711 | ಅಕ್ಷಿಮ್ ಮಾರ್ಕೆಟಿಂಗ್ ಪ್ರೈವೇಟ್ ಲಿಮಿಟೆಡ್ |
| 33 | AA4220374 | U01400KA2016PTC085627 | ಜಲಂಕುರ್ ಆಗ್ರೊ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ |
| 34 | F60188257 | U51900KA2015PTC085035 | ವೇ2ಲೀಡ್ ಇಕಾಮರ್ಸ್ ಪ್ರೈವೇಟ್ ಲಿಮಿಟೆಡ್ |
| 35 | F60234606 | U40104KA2015PTC082493 | ಭಗವಾನ್ ಆದಿತ್ಯ ಪವರ್ಸ್ ಪ್ರೈವೇಟ್ ಲಿಮಿಟೆಡ್ |
| 36 | AA4981309 | U74900KA2015PTC083359 | ಆವ್‌ಝಿಲ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ |
| 37 | F60631587 | U74999KA2016PTC098807 | ಆಮಜನ್ಯ ಹೆಲ್ತ್‌ಕೇರ್ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್ |
| 38 | F60046471 | U72900KA2018PTC114970 | ಆಗ್ನೆಸ್ ಇನ್ನೋವೇಟಿವ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ |
| 39 | AA4554776 | U72200KA2015PTC080116 | ಥಿಂಕ್‌ರೂಟ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ |
| 40 | F54474614 | U74999KA2017PTC100375 | ಬೆನ್‌ಗ್ಲೋಬ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ |
| 41 | AA5805537 | U72200KA2015PTC079575 | ಕಲ್ಚರೊ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್ |
| 42 | AA4784832 | U74999KA2016PTC093906 | ಮ್ಯಾಕ್ಸ್‌ವಿಜುಯಲ್ ಮೀಡಿಯಾ ಪ್ರೈವೇಟ್ ಲಿಮಿಟೆಡ್ |
| 43 | AA3135506 | U74999KA2016PTC094442 | ಎನಾರಿ ಸರ್ವೀಸಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ |
| 44 | F59855239 | U24290KA2016PTC094467 | ಹನಿಕ್ಯೂರ್ ಹೆಲ್ತ್‌ಕೇರ್ ಪ್ರೈವೇಟ್ ಲಿಮಿಟೆಡ್ |
| 45 | F60126406 | U74999KA2016PTC096595 | ಉಲ್ಲಾ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್ |
| 46 | AA4283227 | U72900KA2016PTC095963 | ಯುಪಿಲಾಟ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ |
| 47 | AA5222273 | U74999KA2017PTC105769 | ಸ್ಪಾಟ್‌ಲೈಟ್ ರಿನ್ಯೂಯೇಬಲ್ಸ್ ಪ್ರೈವೇಟ್ ಲಿಮಿಟೆಡ್ |
| 48 | F25780628 | U74999KA2017PTC106052 | ಎಂಎಫ್‌ಆರ್‌ಸಿ ರಿಸರ್ಚ್ ಪ್ರೈವೇಟ್ ಲಿಮಿಟೆಡ್ |
| 49 | AA4884150 | U80101KA2018PTC109149 | ಕಿಂಗಾರು ಎಡು ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ |
| 50 | AA5110857 | U31909KA2018PTC113860 | ಪವರ್‌ಮೈನ್ ಇನ್ನೋವೇಶನ್ಸ್ ಪ್ರೈವೇಟ್ ಲಿಮಿಟೆಡ್ |
| 51 | AA4596033 | U74999KA2018OPC114882 | ಜೆಫ್ & ಜೆಸ್ ರಿಟೇಲ್ ಅಂಡ್ ಸರ್ವೀಸಸ್ (ಒಪಿಸಿ) ಪ್ರೈವೇಟ್ ಲಿಮಿಟೆಡ್ |
| 52 | AA5852621 | U01100KA2017PTC108812 | ಸಿಟ್ರನ್ ಅಗ್ರಿಟೆಕ್ ಪ್ರೈವೇಟ್ ಲಿಮಿಟೆಡ್ |
| 53 | F17361965 | U72900KA2018PTC117243 | ಮಟಿಯೊ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್ |
| 54 | AA4068309 | U93090KA2018PTC116743 | ವಾಟ್ಸ್‌ನೆಕ್ಸ್ಟ್ ಇನ್ಫೊಎಕ್ಸೆಲ್ ಪ್ರೈವೇಟ್ ಲಿಮಿಟೆಡ್ |
| 55 | AA3681091 | U74999KA2018FTC116662 | ಗ್ರೇ ಮ್ಯಾಟರ್ ಟೆಕ್ನಿಕಲ್ ಸೊಲ್ಯೂಷನ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ |
| 56 | AA4277995 | U80900KA2019PTC128092 | ಎವನ್ ಟೆಕ್ ಅಕಾಡೆಮಿ ಪ್ರೈವೇಟ್ ಲಿಮಿಟೆಡ್ |
| 57 | F60158094 | U01100KA2018PTC118560 | ಸಿಟಿಫಾರ್ಮರ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ |
| 58 | AA410/576 | U51909KA2019PTC124391 | G&ಎನ್ ಟ್ರೇಡರ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ |
| 59 | AA5487042 | U74140KA2019PTC122761 | ಅಟೆರ್ನಿಟಿ ಇಂಡಿಯಾ ಪ್ರೈವೇಟ್ ಲಿಮಿಟೆಡ್ |
| 60 | AA4386978 | U65100KA2018PTC119264 | ಭೈರವ ಕ್ಯಾಪಿಟಲ್ ಪ್ರೈವೇಟ್ ಲಿಮಿಟೆಡ್ |
| 61 | AA4582430 | U74999KA2019PTC123447 | ಐಬಿಜಿ ಕನ್ಸಲ್ಟಂಟ್ಸ್ ಪ್ರೈವೇಟ್ ಲಿಮಿಟೆಡ್ |
| 62 | AA4918575 | U52609KA2019PTC127249 | ಸಫ್ಟೋರ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ |
| 63 | AA4772873 | U14290KA2019PTC129534 | ಬಿಲ್ಡ್‌ಅರ್ಥ್ ಸ್ಯಾಂಡ್ ಪ್ರೈವೇಟ್ ಲಿಮಿಟೆಡ್ |
| 64 | AA4598041 | U15490KA2019PTC129244 | ಡಿಟ್ಟೊ ಫುಡ್ ಅಂಡ್ ಬೆವರೇಜಸ್ ಪ್ರೈವೇಟ್ ಲಿಮಿಟೆಡ್ |
| 65 | F60101425 | U74999KA2019PTC129385 | ಸ್ಟಾಂಜೆನ್ ಬಿಎಂಎಫ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ |
| 66 | AA4773695 | U24299KA2019PTC125870 | ಫೆರ್ರೇಟ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ |
| 67 | F56650674 | U72900KA2020PTC133839 | ನಿಕಾನ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ |
| 68 | F60075892 | U65929KA2020PTC132979 | ಎಂಬಿಐ ಫೈನಾನ್ಷಿಯಲ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ |
| 69 | AA585098G | U72900KA2020PTC13-1063 | ನ್ಯೂಸ್ಟಾರ್ ಟೆಕ್ನಾಲಜಿ ಅಂಡ್ ಡೇಟಾ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ |
| 70 | AA2882549 | U72900KA2020PTC132192 | ಸಿಎಂಎಂಟಿ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ |
| 71 | F60005675 | U72501KA2020PTC132785 | ಎಫ್‌ಸ್ಪೇಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ |
| 72 | AA4859969 | U70200KA2020PTC132866 | ಎಕ್ಸ್‌ಪಾನ್ಸ್ ಸ್ಪೇಸಸ್ ಪ್ರೈವೇಟ್ ಲಿಮಿಟೆಡ್ |
| 73 | F57452948 | U72900KA2019PTC130652 | ವೊಥ್ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್ |
| 74 | AA4162878 | U72501KA2020PTC138363 | ಮೊಬಿರೆಕ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ |
| 75 | F60050069 | U65992KA2020PTC138992 | ಕುಲದೇವತಾ ಚಿಟ್ಸ್ ಪ್ರೈವೇಟ್ ಲಿಮಿಟೆಡ್ |
| 76 | F59696443 | U74999KA2020PTC135596 | ಟಾಟ್ಸೆರಿ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ |
| 77 | AA3125311 | U72900KA2020FTC142518 | ರೇಥಿಂಕ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ |
| 78 | F22173751 | U74999KA2020PTC142611 | ಹೈಪರ್‌ಫಾಸ್ಟ್ ಡೇಟಾಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್ |
| 79 | F59366872 | U72900KA2020PTC141497 | ಡ್ರಾಫರ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ |
| 80 | F58822941 | U25209KA2020PTC137950 | ಇಂಟರ್‌ಕಾನ್ ಪ್ಯಾಕೇಜಿಂಗ್ ಪ್ರೈವೇಟ್ ಲಿಮಿಟೆಡ್ |
| 81 | AA5209793 | U72900KA2020PTC139564 | ಐನ್‌ಕಿಂಡಲ್ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ |
| 82 | AA4954070 | U37100KA2021PTC147926 | ನಂ.14 ಸ್ಕ್ರಾಪ್ ಡೀಲರ್ಸ್ ಪ್ರೈವೇಟ್ ಲಿಮಿಟೆಡ್ |
| 83 | AA4640951 | U74999KA2021PTC145778 | ಅಭ್ಯಾಂಶ್ ಕನ್ಸಲ್ಟನ್ಸಿ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ |
| 84 | AA5190403 | U74999KA2021PTC150655 | ಪರ್ಫೆಕ್ಟ್ ಪ್ರೈಮ್ ಹೈರ್ ಪ್ರೈವೇಟ್ ಲಿಮಿಟೆಡ್ |
| 85 | AA4171379 | U52209KA2021PTC150404 | ಎಥ್ನಿಕ್ ಟ್ರೆಷರ್ ಪ್ರೈವೇಟ್ ಲಿಮಿಟೆಡ್ |
| 86 | AA4G72413 | U85100KA2021PTC148446 | ಎಂ–ಹೆಲ್ದೀ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ |
| 87 | F59514133 | U72900KA2021PTC148988 | ಟ್ರಿಯೊವೇರ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ |
| 88 | AA4815297 | U70109KA2021PTC149606 | ಸ್ಪೇಸ್‌ಎಲ್‌ಎನ್‌ಡಿಆರ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ |
| 89 | AA5341909 | U74999KA2021PTC150219 | ಕ್ರಿಝಿಟ್ ಕನ್ಸಲ್ಟಂಟ್ಸ್ ಪ್ರೈವೇಟ್ ಲಿಮಿಟೆಡ್ |
| 90 | F60149473 | U25209KA2022FTC161933 | ಎಸ್ಸೆಂಟ್ರಾ ಕಾಂಪೊನೆಂಟ್ಸ್ (ಇಂಡಿಯಾ) ಪ್ರೈವೇಟ್ ಲಿಮಿಟೆಡ್ |
| 91 | AA2761253 | U72900KA2022PTC160140 | ಎಐಬ್ರಾಡ್‌ವೇ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ |
| 92 | AA4109522 | U70109KA2022PTC165441 | ಆಸ್ಥೀ ಅಪಾರ್ಚುನಿಟಿ ಲಾಂಬ್ಡಾ ಪ್ರೈವೇಟ್ ಲಿಮಿಟೆಡ್ |
| 93 | F60103207 | U72200KA2016PTC086534 | ಕೋಸ್ಟರ್ಡ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ |
| 94 | AA5790700 | U72900KA2016PTC094963 | ಚೇಂಜ್‌ಸ್ಟ್ರೀಟ್ ಟೆಕ್ನಾಲಜಿ ಪ್ರೈವೇಟ್ ಲಿಮಿಟೆಡ್ |
| 95 | AA5511804 | U51909KA2017PTC105997 | ಎಂಎಸ್‌ಆರ್ ಹೈಯರ್ಸ್ ಪ್ರೈವೇಟ್ ಲಿಮಿಟೆಡ್ |
| 96 | F60498888 | U74999KA2017PTC109201 | ವಿಗ್ನೆನ್ ಟ್ರಾವೆಲ್ ಸೊಲ್ಯೂಷನ್ಸ ಪ್ರೈವೇಟ್ ಲಿಮಿಟೆಡ್ |
| 97 | AA5561828 | U29305KA2018PTC119383 | ಹೆಚ್‌ಎಸ್‌ಜಿಎನ್ ಏರೊಸ್ಪೇಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ |
| 98 | AA5838252 | U65990KA2019PTC127036 | ಬೈಟ್ ಪವರ್ಡ್ ಫೈನಾನ್ಸ್ ಪ್ರೈವೇಟ್ ಲಿಮಿಟೆಡ್ |
| 99 | AA5906875 | U71290KA2020PTC135566 | ಟಿಗ್ ಕನ್ಸಲ್ಟೆಕ್ಸ್ ಪ್ರೈವೇಟ್ ಲಿಮಿಟೆಡ್ |
| 100 | AA4716753 | U72200KA2019PTC130815 | ಬ್ರಿಕ್ಸ್ ಅಂಡ್ ಬೈಟ್ಸ್ ಟೆಕ್ನಾಲಜೀಸ್ ಪ್ರೈವೇಟ್ ಲಿಮಿಟೆಡ್ |
| 101 | F59924779 | U74999KA2021PTC143199 | ಮಿರುಕೊ ಪ್ರೈವೇಟ್ ಲಿಮಿಟೆಡ್ |
| 102 | AA5825990 | U72900KA2020PTC139935 | ಇನ್ಫಿಟ್ರಾನಿಕ್ಸ್ ಪ್ರೈವೇಟ್ ಲಿಮಿಟೆಡ್ |
| 103 | AA5912245 | U72200KA2020PTC140981 | ಸ್ಟ್ರೀಮ್ಯುನಿಟಿ ಪ್ರೈವೇಟ್ ಲಿಮಿಟೆಡ್ |


(2) ಈ ಪ್ರಕಟಣೆಯ ಮೂಲಕ ತಿಳಿಸುವುದು ಏನೆಂದರೆ, ಇಲ್ಲಿ ಮೇಲೆ ಉಲ್ಲೇಖಿಸಲಾಗಿರುವ ಕಂಪನಿಗಳು ತಮ್ಮ ಸ್ಥಾಪನೆ ಆದಾಗಿನಿಂದ ಒಂದು ವರ್ಷದೊಳಗೆ ವ್ಯವಹಾರವನ್ನು ಆರಂಭಿಸಲು ವಿಫಲವಾಗಿರುವ ಹಿನ್ನಲೆಯಲ್ಲಿ ಅಥವಾ ಸದರಿ ಕಂಪನಿಗಳು ಹಿಂದಿನ ತಕ್ಷಣದ ಎರಡು ಹಣಕಾಸು ವರ್ಷಗಳ ಅವಧಿಯಲ್ಲಿ ಯಾವುದೇ ವ್ಯಾಪಾರ ಅಥವಾ ಚಟುವಟಿಕೆ ಮಾಡದಿರುವ ಹಿನ್ನಲೆಯಲ್ಲಿ ಮತ್ತು ಅಂತಹ ಅವಧಿಯಲ್ಲಿ ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 455ರ ಅಡಿಯಲ್ಲಿ ಡೊರ್ಮಂಟ್ ಕಂಪನಿ ಸ್ಟೇಟಸ್ ಪಡೆಯಲು ಯಾವುದೇ ಅರ್ಜಿ ಸಲ್ಲಿಸದೆ ಇರುವ ಹಿನ್ನಲೆಯಲ್ಲಿ ಅಥವಾ ಕಂಪನಿಗಳು ಡೊರ್ಮಂಟ್ ಕಂಪನಿ ಸ್ಟೇಟಸ್ ಪಡೆದುಕೊಂಡಿದ್ದು/ಮೆಮೊರಾಂಡಮ್‌ನ ಚಂದಾದಾರರು ಕಂಪನಿಯ ಸ್ಥಾಪನಾ ಸಮಯದಲ್ಲಿಯೇ ಪಾವತಿಸಲು ಒಪ್ಪಿಕೊಂಡಿದ್ದ ಚಂದಾದಾರಿಕೆಯನ್ನು ಪಾವತಿಸದೆ ಇರುವ ಹಿನ್ನಲೆಯಲ್ಲಿ ಮತ್ತು ಸ್ಥಾಪನೆಯಾದಾಗಿನಿಂದ ಯಾವುದೇ ವ್ಯವಹಾರ ಮಾಡುತ್ತಿಲ್ಲ ಅಥವಾ ಚಟುವಟಿಕೆ ನಡೆಸುತ್ತಿಲ್ಲ ಎಂಬುದನ್ನು ನೂರಾ ಎಂಬತ್ತು ದಿನಗಳೊಳಗೆ ಸೆಕ್ಷನ್ 10ಎ ಸಬ್ ಸೆಕ್ಷನ್ (1)ರ ಅಡಿಯಲ್ಲಿ ಡಿಕ್ಲರೇಶನ್ ಸಲ್ಲಿಕೆ ಮಾಡಿರದೆ ಇರುವುದು, ಸೆಕ್ಷನ್ 12ರ ಸಬ್ ಸೆಕ್ಷನ್ (9) ಅಡಿಯಲ್ಲಿ ಭೌತಿಕ ಪರಿಶೀಲನೆ ಕೈಗೊಂಡ ನಂತರ ಇದು ಬೆಳಕಿಗೆ ಬಂದಿರುವ ಹಿನ್ನಲೆಯಲ್ಲಿ ಮತ್ತು ಬಹುತೇಕರು ತಮ್ಮ ಕಂಪನಿಗಳ ನೋಂದಣಿಯನ್ನು ಮುಂದುವರಿಸಲು ಇಚ್ಛಿಸದಿರುವ ಹಿನ್ನಲೆಯಲ್ಲಿ, ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 248(2)ರ ಅಡಿಯಲ್ಲಿ, ತಮ್ಮ ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಬೇಕು/ಅಳಿಸಿ ಹಾಕಬೇಕೆಂದು ಕೋರಿ ಅರ್ಜಿಗಳನ್ನು ಸಲ್ಲಿಸಿರುತ್ತವೆ.


(3) ಅಂತೆಯೇ, ಕಂಪನಿಗಳ ರಜಿಸ್ಟ್ರಾರ್ ಇವರು ಮೇಲ್ಕಂಡ ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಲು / ಅಳಿಸಿ ಹಾಕಲು ಉದ್ದೇಶಿಸಿರುತ್ತಾರೆ.

(4) ಹೀಗೆ, ಕಂಪನಿಗಳ ಹೆಸರುಗಳನ್ನು ಕಂಪನಿಗಳ ರಜಿಸ್ಟರ್‌ನಿಂದ ತೆಗೆದು ಹಾಕಲು/ಅಳಿಸಿ ಹಾಕಲು ಉದ್ದೇಶಿಸಲಾಗಿರುವ ಕ್ರಮಕ್ಕೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿಗೆ ಆಕ್ಷೇಪಣೆಗಳಿದ್ದಲ್ಲಿ, ಅಂತಹವರು ಈ ನೋಟಿಸ್ ಪ್ರಕಟಗೊಂಡ ದಿನಾಂಕದಿಂದ ಮೂವತ್ತು ದಿನಗಳೊಳಗೆ ಈ ಮೇಲೆ ತಿಳಿಸಲಾಗಿರುವ ಕಚೇರಿ ವಿಳಾಸಕ್ಕೆ ತಮ್ಮ ಆಕ್ಷೇಪಣೆಗಳನ್ನು ಸಲ್ಲಿಸಬಹುದು.

(ಹರಿಹರ ಸಾಹೂ)
ಕಂಪನಿಗಳ ರಿಜಿಸ್ಟ್ರಾರ್
ಸೆಂಟರ್ ಫಾರ್ ಪ್ರೊಸೆಸ್ಸಿಂಗ್ ಆಕ್ಸಲರೇಟೆಡ್ ಕಾರ್ಪೊರೇಟ್ ಎಕ್ಸಿಟ್

CBC 07123/11/0174/2324





## ಇಂಟರ್‌ನೆಟ್ ವೇಗ

# Mbps ಅಥವಾ MBps?

ಅವಿನಾಶ್ ಬಿ.



**ಬ್ರಾಡ್‌ಬ್ಯಾಂಡ್** ಅಥವಾ ಇಂಟರ್‌ನೆಟ್ ಸೇವೆಯನ್ನು ಒದಗಿಸುವ ಕಂಪನಿಯು 'ಸೆಕೆಂಡಿಗೆ 100 ಎಂಬಿಪಿಎಸ್ ಡೌನ್‌ಲೋಡ್ ವೇಗ ಇದೆ' ಎಂದು ಹೇಳಿಕೊಂಡಿದ್ದರೂ, ಒಂದು ಸೆಕೆಂಡಿನಲ್ಲಿ 100 ಎಂಬಿ ಫೈಲ್ ಅಥವಾ ವಿಡಿಯೊ ಡೌನ್‌ಲೋಡ್ ಮಾಡುವುದು ಸಾಧ್ಯವಾಗಿಲ್ಲ ಎಂಬುದು ಹೆಚ್ಚಿನವರ ದೂರು. ಈ ಲೇಖನ ಓದಿದ ಬಳಿಕ ನಿಮ್ಮಲ್ಲಿ ಈ ಬಗ್ಗೆ ಗೊಂದಲ ಇರುವುದಿಲ್ಲ.

**ಮೆಗಾಬಿಟ್ (Mb) ಮತ್ತು ಮೆಗಾಬೈಟ್ (MB): ವ್ಯತ್ಯಾಸ ಏನು?**

ಮೊದಲು ಈ ಬಿಟ್ (bit) ಎಂದರೇನೆಂದು ತಿಳಿಯೋಣ. ಇದು ಮೂಲತಃ 'ಬೈನರಿ ಡಿಜಿಟ್' ಎಂಬುದರ ಸಂಕ್ಷಿಪ್ತ ರೂಪ. ಕಂಪ್ಯೂಟರ್‌ಗಳು ಅಥವಾ ಯಾವುದೇ ಡಿಜಿಟಲ್ ಜಗತ್ತು ಎರಡು ಅಂಕಿಗಳಲ್ಲೇ (ಸೊನ್ನೆ ಮತ್ತು 1) ನಿಂತಿದೆ ಎಂಬುದು ಹೆಚ್ಚಿನವರಿಗೆ ಗೊತ್ತಿರುವ ವಿಚಾರ. 'ಬಿಟ್' ಎಂಬುದು ದ್ವಿಮಾನ (0 ಮತ್ತು 1 ಬಳಸುವ) ಪದ್ಧತಿಯಲ್ಲಿ ದತ್ತಾಂಶವನ್ನು ಅಳೆಯುವ ಅತ್ಯಂತ ಸಣ್ಣ ಪ್ರಮಾಣ. ಎಂಟು ಬಿಟ್‌ಗಳು ಸೇರಿದರೆ ಒಂದು ಬೈಟ್ ಆಗುತ್ತದೆ. ಬಿಟ್ ಮತ್ತು ಬೈಟ್ ನಡುವೆ ಇರುವ ಪ್ರಧಾನ ವ್ಯತ್ಯಾಸವೇ ಇದು.

ಬಹುತೇಕವಾಗಿ, ಹಾರ್ಡ್ ಡ್ರೈವ್ ಅಥವಾ ಸ್ಟೋರೇಜ್ ಡ್ರೈವ್‌ಗಳಲ್ಲಿರುವ ಫೈಲ್‌ಗಳ ವಿನಿಮಯದ ಸಂದರ್ಭದಲ್ಲಿ ಬಳಸುವುದು ಮೆಗಾಬೈಟ್ಸ್ ಎಂಬ ಪ್ರಮಾಣವನ್ನು. ಇಂಟರ್‌ನೆಟ್ ವೇಗವನ್ನು ಅಳೆಯುವುದು 'ಮೆಗಾಬಿಟ್ಸ್' ಎಂಬ ಮಾನಕದ ಮೂಲಕ. ಇಂಗ್ಲಿಷಿನಲ್ಲಿ ಬರೆಯುವಾಗ ವ್ಯತ್ಯಾಸವು ಎದ್ದು ಕಾಣುತ್ತದೆ 'Mb' (ಒಂದು ಸಣ್ಣಕ್ಷರ) ಎಂದರೆ 'ಮೆಗಾಬಿಟ್ಸ್' ಮತ್ತು 'MB' (ಎರಡೂ ದೊಡ್ಡಕ್ಷರ) ಎಂದರೆ 'ಮೆಗಾಬೈಟ್ಸ್'.

ನಮಗೆಲ್ಲ ಇತ್ತೀಚೆಗೆ 'ಜಿಬಿ' (ಗಿಗಾಬೈಟ್), 'ಟಿಬಿ' (ಟೆರಾಬೈಟ್) ಹೆಚ್ಚು ಪರಿಚಯವಾಗಿಬಿಟ್ಟಿದೆ. ವಿಶೇಷತಃ ಮೊಬೈಲ್ ಫೋನ್‌ಗಳ ಸ್ಟೋರೇಜ್‌ಗಳು ಈಗ 256GBಯಿಂದ 512GB, 1TB ವರೆಗೆಲ್ಲ ಇದೆ ಎಂಬುದು ಈಗ ಹೆಚ್ಚು ಕೇಳಿಬರುತ್ತಿರುವ ಮಾಹಿತಿ. ಒಂದು ಜಿಬಿ ಅಥವಾ ಗಿಗಾಬೈಟ್ ಎಂದರೆ ಸಾಮಾನ್ಯವಾಗಿ ಹೇಳುವುದಾದರೆ ಒಂದು ಸಾವಿರ ಎಂಬಿ. ನಿಖರವಾಗಿ ಹೇಳುವುದಾದರೆ 1024 ಮೆಗಾಬೈಟ್ಸ್. ಅದೇ ರೀತಿ, ಒಂದು ಮೆಗಾಬೈಟ್ (MB) ಎಂದರೆ 1024 KB (ಕಿಲೋಬೈಟ್ಸ್).

ಬ್ರಾಡ್‌ಬ್ಯಾಂಡ್ ಸೇವೆ ಒದಗಿಸುವ ಕಂಪನಿಗಳು ಎರಡು ವಿಧಾನಗಳಲ್ಲಿ ನಮ್ಮನ್ನು ಆಕರ್ಷಿಸಲು ಅಥವಾ ನಾವು ದಾರಿ ತಪ್ಪಲು ಅವಕಾಶ ಇದೆ. ಎಂದರೆ, ನಿಮಗೆ 100 ಎಂಬಿಪಿಎಸ್ ವೇಗದ ಸಂಪರ್ಕ ಕೊಡುತ್ತೇವೆ ಎಂದು ಅವರು ಹೇಳಬಹುದು. ವಾಸ್ತವವಾಗಿ, ಈ 100 Mbps ಸೂಪರ್‌ಫಾಸ್ಟ್ ಎಂಬುದು ನಿಜವಾದರೂ ಮತ್ತು ನಮಗೆ ಅದರ ಬಗ್ಗೆ ಖುಷಿಯಿದ್ದರೂ, ಇದರ ಅರ್ಥ ನಾವು ಸೆಕೆಂಡಿಗೆ 100MB ಫೈಲ್‌ಗಳನ್ನು ವಿನಿಮಯ (ಅಪ್‌ಲೋಡ್ ಮತ್ತು ಡೌನ್‌ಲೋಡ್) ಮಾಡಿಕೊಳ್ಳಬಹುದು ಎಂಬುದಲ್ಲ! ಅದು 100 ಮೆಗಾಬಿಟ್ಸ್ ಮಾತ್ರ. ಎಂದರೆ 12.5MBps ಮಾತ್ರ. ವಾಸ್ತವವೇನೆಂದರೆ, ಒಂದು ಮೆಗಾಬೈಟ್ (MB) ಎಂದರೆ 8 ಮೆಗಾಬಿಟ್ಸ್ (Mb). ಇದು ನಾವು ಅಂದುಕೊಂಡ 'ಎಂಬಿ' ಗಿಂತ ಕಡಿಮೆ ವೇಗ. ಇಂಟರ್‌ನೆಟ್ ಸೇವೆ ಒದಗಿಸುವವರು ಇದನ್ನೇ ಮುಂದಿಟ್ಟುಕೊಂಡು ನಮಗೆ ಅವರ ಬ್ರಾಡ್‌ಬ್ಯಾಂಡ್ ಸೇವೆಯನ್ನು ಪ್ರಚಾರ ಮಾಡುತ್ತಾರೆ - 100Mbps ವರೆಗೆ ವೇಗ ಲಭ್ಯ ಎಂದು! 100 Mbps ಸಂಪರ್ಕ ನಿಮ್ಮಲ್ಲಿದೆ ಎಂದಾದರೆ ಅದನ್ನು ಮೆಗಾಬೈಟ್ಸ್‌ನಲ್ಲಿ ಹೇಳುವುದಾದರೆ 12.5 MBps ಮಾತ್ರ! 100 Mbps ವೇಗದಲ್ಲಿ ನೀವು ಸೆಕೆಂಡಿಗೆ 12.5 ಎಂಬಿ ಗಾತ್ರದ ಫೈಲನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದರ್ಥ.

ಈಗ 5ಜಿ ವೇಗದ ಇಂಟರ್ನೆಟ್ ನೆಟ್‌ವರ್ಕ್ ಸೌಕರ್ಯ ಬಂದಿದೆ. ಕೆಲವು ಕಂಪನಿಗಳು 1Gbps ವೇಗ ಇದೆ ಎಂದು ಹೇಳಿಕೊಳ್ಳುತ್ತವೆ. ಇದರರ್ಥ 3 ಜಿಬಿ ಇರುವ ವಿಡಿಯೊ ಒಂದನ್ನು ನೀವು ಮೂರು ಸೆಕೆಂಡಿನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದಲ್ಲ. 5ಜಿ ನೆಟ್‌ವರ್ಕ್‌ನಲ್ಲಿ ಸದ್ಯದ ಸರಾಸರಿ ವೇಗ ಸುಮಾರು 300ರಿಂದ 325 Mbps. 4ಜಿಯಲ್ಲಿ ಇದ್ದ ಸರಾಸರಿ ವೇಗ ಸುಮಾರು 15Mbps ಮಾತ್ರ.




5ಜಿ ನಾವೆಲ್ಲ ತಿಳಿದುಕೊಂಡಷ್ಟು ವೇಗ ಇಲ್ಲ ಯಾಕೆ ಎಂಬುದು ಈಗ ಗೊತ್ತಾಗಿರಬಹುದು. 1GB (ಗಿಗಾಬೈಟ್) ಫೈಲ್ ಕೇವಲ ಒಂದು ಸೆಕೆಂಡಿನಲ್ಲಿ ಡೌನ್‌ಲೋಡ್ ಆಗಬೇಕಿದ್ದರೆ ವಾಸ್ತವವಾಗಿ 8Gbps ವೇಗದ ಇಂಟರ್‌ನೆಟ್ ಸಂಪರ್ಕ ಬೇಕು. ಮತ್ತೂ ಸರಳವಾಗಿ ಹೇಳುವುದಾದರೆ, ಇಂಟರ್‌ನೆಟ್ ವೇಗವು ನಿಜಕ್ಕೂ 100Mbps ಇದ್ದರೆ 12.5MB ಇರುವ ಒಂದು ಫೈಲ್ (ಆಡಿಯೊ, ವಿಡಿಯೊ ಇತ್ಯಾದಿ) ಒಂದು ಸೆಕೆಂಡಿನಲ್ಲಿ ಡೌನ್‌ಲೋಡ್ ಆಗುತ್ತದೆ. ಅಂದರೆ ಇಂಟರ್‌ನೆಟ್ ವೇಗವು 100Mbps, ಫೈಲ್‌ನ ಡೌನ್‌ಲೋಡ್ ವೇಗ 12.5MBps.

❖

# ಅಂಗಾಂಗಗಳಿಗೂ ಬಂತು ಮುದ್ರಣ ತಂತ್ರಜ್ಞಾನ!

ನೇಸರ ಕಾಡನಕುಪ್ಪೆ

ಅಪಘಾತಗಳಲ್ಲಿ ಅಂಗಗಳನ್ನು ಕಳೆದುಕೊಂಡವರಿಗೆ ಅಥವಾ ಹುಟ್ಟಿನಿಂದಲೇ ಅಂಗಗಳನ್ನು ಕಳೆದುಕೊಂಡವರಿಗೆ ತಾವೂ ಎಲ್ಲರಂತೆ ಬದುಕಬೇಕು ಎಂಬ ಕನಸು ಸಹಜವಾಗಿಯೇ ಇರುತ್ತದೆ. ಹಾಲಿ ಲಭ್ಯವಿರುವ ಕೃತಕ ಕೈ-ಕಾಲುಗಳು ಸಂಪೂರ್ಣ ಕಾರ್ಯಕ್ಷಮತೆ ನೀಡುವ ಶಕ್ತಿಯನ್ನು ಹೊಂದಿರುವುದಿಲ್ಲ. ಈ ಕೊರತೆಯನ್ನು ನೀಗಿಸಲು ಈಗ ಹೊಸ ತಂತ್ರಜ್ಞಾನದ ಶೋಧವಾಗಿದೆ. ಬೇಕಾದ ಅಂಗಗಳನ್ನು 3ಡಿ ಪ್ರಿಂಟಿಂಗ್ ಮೂಲಕ ಮುದ್ರಿಸುವ ಹೊಸ ಸಾಧ್ಯತೆ ಲಭಿಸಿದೆ.


ರೊಬೋಟಿಕ್ಸ್ ಕ್ಷೇತ್ರ ಇಂದು ಸಾಕಷ್ಟು ಬೆಳೆದಿದೆ. ಕೃತಕ ಬುದ್ಧಿಮತ್ತೆಯ ಬಳಕೆ ಹೆಚ್ಚಾದಂತೆ ಉತ್ಪನ್ನಗಳ ತಯಾರಿಯ ನಿಖರತೆಯೂ ಹೆಚ್ಚಾಗುತ್ತಿದೆ. ವೈದ್ಯಕೀಯ ಲೋಕದ ಕೃತಕ ಅಂಗಗಳ ಬೇಡಿಕೆಯನ್ನು ನೀಗಿಸಲು ಹಾಗೂ ಭವಿಷ್ಯದಲ್ಲಿ ರೋಬೋಟ್‌ಗಳನ್ನು ಮಾನವಸ್ವಭಾವದ ಸನಿಹಕ್ಕೆ ತರುವ ನಿಟ್ಟಿನಲ್ಲಿ ಈ ಸಂಶೋಧನೆ ಮಹತ್ವದ್ದು ಎಂದು ವ್ಯಾಖ್ಯಾನಿಸಲಾಗಿದೆ. ಸ್ವಿಟ್ಜರ್ಲೆಂಡ್‌ನಲ್ಲಿ ಇರುವ 'ಇಟಿಎಚ್ ಜ್ಯೂರಿಚ್ ಸಂಶೋಧನಾ ವಿಶ್ವವಿದ್ಯಾಲಯ'ದ ಸಂಶೋಧಕರ ತಂಡವು ಈ ಹೊಸ ಸಂಶೋಧನೆಯನ್ನು ಮಾಡಿದೆ. 3ಡಿ ಮುದ್ರಣ ತಂತ್ರಜ್ಞಾನದ ಮೂಲಕ ಮೂಳೆ, 'ಲಿಗಮೆಂಟ್' (ಅಸ್ಥಿರಜ್ಜು) ಹಾಗೂ 'ಟೆಂಡಾನ್'(ಸ್ನಾಯುರಜ್ಜು)ಗಳನ್ನು ಮುದ್ರಿಸಿ ಪ್ರಕೃತಿ ಸಹಜವಾದ ಅಂಗವನ್ನು ಸಂಶೋಧಕರು ತಯಾರಿಸಿದ್ದಾರೆ. ಈಗಿರುವ 'ಪ್ರಾಸ್ಥೆಟಿಕ್' (ಕೃತಕ) ಅಂಗಗಳಲ್ಲಿ ಉಕ್ಕು, ಪ್ಲಾಟಿನಂ, ಫೈಬರ್, ಇಂಗಾಲದಂತಹ ಧಾತುಗಳನ್ನು ಕೀಲುಗಳಿರುವ ಯಾಂತ್ರಿಕ ಸ್ವರೂಪದಲ್ಲಿ ಬಳಸಲಾಗುತ್ತಿದೆ. ಕೈ, ಕಾಲುಗಳಂತಹ ಅಂಗಗಳನ್ನು ಈ ವಿಧಾನದಲ್ಲಿ ನಿರ್ಮಿಸಿದಾಗ ಸಹಜತೆ ತರುವುದು ಕಷ್ಟ. ಅಲ್ಲದೇ, ಈ ಕೃತಕ ಅಂಗಗಳ ಚಲನೆ, ಬಳಕೆಯು ನಿಖರವಾಗಿ ಆಗದ ಕಾರಣ ಬಳಕೆದಾರರು ತಮ್ಮ ದಿನನಿತ್ಯದ ಕೆಲಸಗಳನ್ನು ಪರಿಪೂರ್ಣವಾಗಿ ನಡೆಸಲು ಅಸಮರ್ಥರಾಗುತ್ತಾರೆ. ಅಲ್ಲದೇ, ಈ ಕೃತಕ ಅಂಗಗಳು ಮಾನವ ಅಂಗಗಳ ನೈಸರ್ಗಿಕ ಸ್ವರೂಪವನ್ನು ಹೋಲದ ಕಾರಣ ಸಾರ್ವಜನಿಕವಾಗಿ ಮುಜುಗರ, ಆತ್ಮಬಲದ ಕೊರತೆಯನ್ನೂ ಎದುರಿಸ ಬೇಕಾದ ಪರಿಸ್ಥಿತಿ ಇದೆ. ಅಲ್ಲದೇ, ಸಾರ್ವಜನಿಕರೂ ಕೃತಕ ಅಂಗವನ್ನು ಧರಿಸುವವರನ್ನು ಭಿನ್ನವಾಗಿ ಕಾಣುವ ಮನಃಸ್ಥಿತಿಯಿಂದ ಹೊರಬರದೇ ಇರುವುದು ಅಂಗವಿಕಲರನ್ನು ಮತ್ತಷ್ಟು ಮುಜುಗರಕ್ಕೆ ತಳ್ಳುವಂತೆ ಆಗಿದೆ.

## ಏನಿದು ತಂತ್ರಜ್ಞಾನ?

ಈ ಕೊರತೆಯನ್ನು ನೀಗಿಸುವ ನಿಟ್ಟಿನಲ್ಲಿ ಈ ಸಂಶೋಧನೆ ನಡೆದಿದೆ. ಮಾನವದೇಹದ ಅಂಗಗಳಿಗೆ ಆಧಾರಸ್ತಂಭ ಮೂಳೆಗಳು, ಬಳಿಕ ಸ್ನಾಯುಗಳು, ಅವುಗಳ ಜೊತೆಯಲ್ಲಿ ನರಮಂಡಲ. ಇವುಗಳ ಸರಾಗ ಚಲನೆಗೆ ಪೂರಕವಾದ ರಕ್ತದಂತಹ ದ್ರಾವಣಗಳು. ಇವೆಲ್ಲವನ್ನೂ ಮುಚ್ಚುವ, ರಕ್ಷಣೆ ನೀಡುವ ಹಾಗೂ ಅಂದವನ್ನು ಕೊಡುವ ಚರ್ಮ. ಇವಿಷ್ಟು ಇದ್ದಲ್ಲಿ ಅವನ್ನು ಸಮಗ್ರವಾಗಿ 'ಅಂಗ' ಎಂದು ಕರೆಯಬಹುದು.

ಈ ನೈಸರ್ಗಿಕ ರಚನೆಯನ್ನು ನಕಲು ಮಾಡುವ ಮೂಲಕ ಕೃತಕ ಅಂಗಗಳ ನಿರ್ಮಾಣಕ್ಕೆ ಹೊಸ ಆಯಾಮವನ್ನು ನೀಡುವ ಪ್ರಯತ್ನವನ್ನು ಇಟಿಎಚ್ ಜ್ಯೂರಿಚ್ ವಿಜ್ಞಾನಿಗಳು ಮಾಡಿದ್ದಾರೆ. 3ಡಿ ಮುದ್ರಣ ಈಗ ಪ್ರಸಿದ್ಧಿ ಪಡೆಯುತ್ತಿದೆ. ಲೋಹ, ಫೈಬರ್ ಸೇರಿದಂತೆ ಬಹುತೇಕ ಎಲ್ಲ ಬಗೆಯ ಕೃತಕ ಹಾಗೂ ನೈಸರ್ಗಿಕ ವಸ್ತುಗಳನ್ನು ಬಳಸಿಕೊಂಡು ಮುದ್ರಣಕಾರ್ಯ ಮಾಡಲಾಗುತ್ತಿದೆ.

'ಕೃತಕ ಅಂಗಗಳನ್ನು ನಿರ್ಮಿಸುವಾಗ ಮೂಳೆಯಂತಹ ರಚನೆಗಳಿಗೆ ಹೋಲುವ ವಸ್ತುಗಳನ್ನು ಬಳಸಿಕೊಂಡು ಮುದ್ರಣಕಾರ್ಯ ಆರಂಭವಾಗುತ್ತದೆ. ಬಳಿಕ ಸ್ನಾಯು, ನರಮಂಡಲ ಹಾಗೂ ಚರ್ಮವನ್ನು ಹೋಲುವ ವಸ್ತುಗಳಿಂದ ಮುದ್ರಣಕಾರ್ಯ ನಡೆಯುತ್ತದೆ. ಇದು ಬಲು ಸಂಕೀರ್ಣವಾದ ಯಾಂತ್ರಿಕ ಕಾರ್ಯ. ಏಕೆಂದರೆ ಇಲ್ಲಿ ನಿರ್ಮಾಣವಾಗುವುದು ಮಾನವನ ಬಳಕೆಗೆ ಸಹಾಯವಾಗುವ ಕೃತಕ ಅಂಗ. ಹಾಗಾಗಿ, ಅಂಗವೊಂದು ನೈಸರ್ಗಿಕವಾಗಿ ಕೆಲಸ ಮಾಡಬೇಕಾದರೆ ಅದರಲ್ಲಿ ಎಲ್ಲ ಬಗೆಯ ಕ್ರಿಯೆಗಳು ನಡೆಯಬೇಕು. ಮೂಳೆ, ಸ್ನಾಯು, ನರಮಂಡಲ ಹಾಗೂ ಚರ್ಮವು ಕೆಲಸ ಮಾಡಲು ಬೇಕಾದ ಅವಕಾಶವನ್ನು ಸೃಷ್ಟಿಸಬೇಕು. ಅದಕ್ಕೆ ಪ್ರಮುಖವಾಗಿ ಬೇಕಿರುವುದು ವಿದ್ಯುತ್. ಹಾಗಾಗಿ, ಕೃತಕ ಅಂಗದೊಳಗೆ ಸೂಕ್ಷ್ಮ ಬ್ಯಾಟರಿಗಳನ್ನು ಸಹ ಇಡಲಾಗುತ್ತದೆ. ಇವೆಲ್ಲದಕ್ಕೂ ಜಾಗ ಒದಗಿಸಬೇಕಾದ ಸವಾಲು ವಿಜ್ಞಾನಿಗಳಿಗಿತ್ತು. ಅದನ್ನು ಯಶಸ್ವಿಯಾಗಿ ಪೂರೈಸಲಾಯಿತು' ಎಂದು ವಿಜ್ಞಾನಿ ಹಾಗೂ ರೊಬೋಟಿಕ್ಸ್ ಪ್ರಾಧ್ಯಾಪಕ ಡಾ. ರಾಬರ್ಟ್ ಕ್ಯಾಟ್ಸ್ ಮನ್ ಹೇಳಿದ್ದಾರೆ. ಮುದ್ರಣ ತಂತ್ರಜ್ಞಾನ ಇಂದು ಸಾಕಷ್ಟು ಸುಧಾರಿಸಿದೆ. ಚರ್ಮದ ಮೇಲಿನ ಕೂದಲು, ಚರ್ಮದ ಸುಕ್ಕು, ಬಣ್ಣ - ಹೀಗೇ ಯಾವುದೇ ಬಗೆಯ ರಚನೆ ಹಾಗೂ ಸ್ವರೂಪವನ್ನು ಅಂಗವೊಂದಕ್ಕೆ ನೀಡುವುದು ಈಗ ಸವಾಲಾಗಿಯೂ ಉಳಿದಿಲ್ಲ ಎಂದಿದ್ದಾರೆ.



## ರೋಬೋಟ್ ಕ್ಷೇತ್ರಕ್ಕೆ ಬಲವರ್ಧನೆ

'ಈ ನಮ್ಮ ಸಂಶೋಧನೆಯು ಕೃತಕ ಅಂಗಗಳ ಕ್ಷೇತ್ರಕ್ಕೆ ಮಾತ್ರ ಮೀಸಲಲ್ಲ. ರೋಬೋಟ್‌ಗಳನ್ನು ಮಾನವನಿಗೆ ಹೆಚ್ಚು ಆತ್ಮೀಯಗೊಳಿಸುವ ನಿಟ್ಟಿನಲ್ಲೂ ಮಹತ್ವದ ಪಾತ್ರ ವಹಿಸಲಿದೆ. ರೋಬೋಟ್‌ಗಳು ಮಾನವರಂತೆ ಕಂಡರೆ ಮಾನವಸಮುದಾಯ ರೋಬೋಟನ್ನು ಸ್ವೀಕರಿಸುತ್ತದೆ. ಕೃತಕ ಬುದ್ಧಿಮತ್ತೆ ಹೆಚ್ಚೆಚ್ಚು ವಿಕಸನಗೊಳ್ಳುತ್ತಿರುವುದರಿಂದ, ಭವಿಷ್ಯದಲ್ಲಿ ರೋಬೋಟ್‌ಗಳು ಮಾನವಸಮುದಾಯದ ನಡುವೆ ದೊಡ್ಡ ಸಂಖ್ಯೆಯಲ್ಲಿ ಕಾಣಿಸಿಕೊಳ್ಳಲಿವೆ. ಆಗ ಮಾನವನನ್ನು ಹೋಲುವ ರೋಬೋಟ್‌ಗಳು ಯಶಸ್ವಿಯಾಗುತ್ತದೆ. ಆ ಯಶಸ್ಸಿಗೆ ನಮ್ಮ ಸಂಶೋಧನೆಯು ಪ್ರಮುಖ ಪಾತ್ರ ವಹಿಸಲಿದೆ' ಎಂದೂ ಅವರು ಅಭಿಪ್ರಾಯಪಟ್ಟಿದ್ದಾರೆ.

'ನಮ್ಮ ತಂತ್ರಜ್ಞಾನವು ಈಗ ಕೃತಕ ಅಂಗಕ್ಕೆ ಮೀಸಲಾಗಿದ್ದರೂ, ಇದೇ ತಂತ್ರಜ್ಞಾನವು ರೋಬೋಟ್‌ನ ಸಂಪೂರ್ಣ ದೇಹನಿರ್ಮಾಣಕ್ಕೂ ಬಳಕೆಯಾಗಬಲ್ಲದು. ಈಗ ವಿಜ್ಞಾನ ಆಧಾರಿತ ಸಿನಿಮಾಗಳಲ್ಲಿ ನಾವು ನೋಡುತ್ತಿರುವ ಮಾನವನನ್ನು ಸಂಪೂರ್ಣವಾಗಿ ಹೋಲುವ ರೋಬೋಟ್‌ಗಳನ್ನು ನಮ್ಮ ನಡುವೆಯೇ ಕಾಣುವ ದಿನಗಳು ತೀರಾ ದೂರವೇನಲ್ಲ' ಎಂದು ಡಾ. ರಾಬರ್ಟ್ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

❖

# ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

## ಜೀವ ಕ್ರಿಯೆಗಳು

31) **ಮನುಷ್ಯರ ವಿಸರ್ಜನಾಂಗವ್ಯೂಹದ ಬಗ್ಗೆ ಬರೆಯಿರಿ**

**ಉತ್ತರ:–** ಮನುಷ್ಯರ ವಿಸರ್ಜನಾಂಗವ್ಯೂಹವು ಒಂದು ಜೊತೆ ಮೂತ್ರಪಿಂಡಗಳು, ಒಂದು ಜೊತೆ ಮೂತ್ರನಾಳಗಳು, ಒಂದು ಮೂತ್ರಕೋಶ ಮತ್ತು ಒಂದು ಮೂತ್ರದ್ವಾರವನ್ನು ಒಳಗೊಂಡಿದೆ.

ಮೂತ್ರಪಿಂಡಗಳು ಉದರಭಾಗದಲ್ಲಿ, ಬೆನ್ನುಮೂಳೆಯ ಎರಡೂ ಪಾರ್ಶ್ವಗಳಲ್ಲಿ ಒಂದೊಂದರಂತೆ ಇವೆ. ಮೂತ್ರವು ಮೂತ್ರಪಿಂಡಗಳಲ್ಲಿ ಉತ್ಪತ್ತಿಯಾಗಿ ಮೂತ್ರನಾಳಗಳ ಮೂಲಕ ಹರಿದು ಮೂತ್ರದ್ವಾರದ ಮೂಲಕ ವಿಸರ್ಜನೆಯಾಗುವವರೆಗೂ ಮೂತ್ರಕೋಶದಲ್ಲಿ ಸಂಗ್ರಹವಾಗುತ್ತದೆ


ರಕ್ತದಿಂದ ತ್ಯಾಜ್ಯವಸ್ತುಗಳನ್ನು ಸೋಸಿ ಹೊರತೆಗೆಯುವುದು ಮೂತ್ರ ತಯಾರಿಕೆಯ ಉದ್ದೇಶವಾಗಿದೆ. ಶ್ವಾಸಕೋಶಗಳಲ್ಲಿ ರಕ್ತದಿಂದ ಕಾರ್ಬನ್ ಡೈಆಕ್ಸೈಡ್‌ಅನ್ನು ತೆಗೆದುಹಾಕುವಂತೆ ಮೂತ್ರಪಿಂಡಗಳಲ್ಲಿ ರಕ್ತದಿಂದ ಯೂರಿಯಾ ಅಥವಾ ಯೂರಿಕ್ ಆಮ್ಲಗಳಂಥ ನೈಟ್ರೋಜನ್‌ಯುಕ್ತ ತ್ಯಾಜ್ಯಗಳನ್ನು ತೆಗೆದು ಹಾಕಲಾಗುತ್ತದೆ. ಮೂತ್ರಪಿಂಡಗಳಲ್ಲಿರುವ ಮೂಲಭೂತ ಸೋಸುವ ಘಟಕಗಳೆಂದರೆ ಶ್ವಾಸಕೋಶಗಳಲ್ಲಿರುವಂಥ ಅತ್ಯಂತ ತೆಳುವಾದ ಭಿತ್ತಿಯನ್ನು ಹೊಂದಿರುವ ಲೋಮನಾಳಗಳ ಗುಂಪು ಎಂಬುದು ಆಶ್ಚರ್ಯವಲ್ಲ. ಮೂತ್ರಪಿಂಡದಲ್ಲಿರುವ ಪ್ರತಿಯೊಂದು ಲೋಮನಾಳಗಳ ಗುಂಪು ಸೋಸಲ್ಪಟ್ಟ ದ್ರವವನ್ನು ಸಂಗ್ರಹಿಸುವ ಬಟ್ಟಲಿನಾಕಾರದ ತುದಿ ಇರುವ ಒಂದು ನಾಳದ ಸಂಪರ್ಕದಲ್ಲಿ ಇರುತ್ತದೆ

ಪ್ರತಿಯೊಂದು ಮೂತ್ರಪಿಂಡವು ನೆಫ್ರಾನ್‌ಗಳೆಂದು ಕರೆಯಲ್ಪಡುವ ಒತ್ತೊತ್ತಾಗಿ ಜೋಡಿಸಲ್ಪಟ್ಟ ಈ ಸೋಸುವ ಘಟಕಗಳನ್ನು ಭಾರೀ ಸಂಖ್ಯೆಯಲ್ಲಿ ಹೊಂದಿದೆ. ಪ್ರಾರಂಭಿಕ ಹಂತದ ಸೋಸುವಿಕೆಯಲ್ಲಿ ಶೋಧಿಸಲ್ಪಟ್ಟ ಗ್ಲುಕೋಸ್, ಅಮೈನೋ ಆಮ್ಲ, ಲವಣಗಳು ಮತ್ತು ಹೆಚ್ಚಿನ ಪ್ರಮಾಣದ ನೀರಿನಂಥ ಆಯ್ದ ಕೆಲವು ವಸ್ತುಗಳು ಮೂತ್ರವು ನಾಳದಲ್ಲಿ ಮುಂದೆ ಹರಿದಂತೆ ಪುನಃ ಹೀರಲ್ಪಡುತ್ತವೆ. ಮರುಹೀರಿಕೆಯಾಗುವ ನೀರಿನ ಪ್ರಮಾಣವು ದೇಹದಲ್ಲಿ ನೀರು ಎಷ್ಟು ಅಧಿಕವಾಗಿದೆ ಮತ್ತು ಎಷ್ಟು ಪ್ರಮಾಣದ ಕರಗಿದ ತ್ಯಾಜ್ಯಗಳನ್ನು ವಿಸರ್ಜಿಸಬೇಕಾಗುತ್ತದೆ ಎಂಬುದನ್ನು ಆಧರಿಸಿದೆ.

ಪ್ರತಿಯೊಂದು ಮೂತ್ರಪಿಂಡದಲ್ಲಿ ಉತ್ಪತ್ತಿಯಾದ ಮೂತ್ರವು ಅಂತಿಮವಾಗಿ ಮೂತ್ರಪಿಂಡಗಳನ್ನು ಮೂತ್ರಕೋಶಕ್ಕೆ ಸಂಪರ್ಕಿಸುವ ಮೂತ್ರನಾಳ ಎಂಬ ಉದ್ದನೆಯ ನಾಳವನ್ನು ಪ್ರವೇಶಿಸುತ್ತದೆ. ಹಿಗ್ಗಿದ ಮೂತ್ರಕೋಶದ ಒತ್ತಡವು ಮೂತ್ರವನ್ನು ಮೂತ್ರದ್ವಾರದ ಮೂಲಕ ಹೊರಹಾಕಲು ಪ್ರೇರೇಪಿಸುವವರೆಗೂ ಮೂತ್ರವು ಮೂತ್ರಕೋಶದಲ್ಲಿ ಸಂಗ್ರಹವಾಗುತ್ತದೆ. ಮೂತ್ರಕೋಶವು ಸ್ನಾಯುವಿನಿಂದಾದ ಅಂಗವಾಗಿರುವುದರಿಂದ ಇದು ನರವ್ಯೂಹದ ನಿಯಂತ್ರಣಕ್ಕೆ ಒಳಪಟ್ಟಿದೆ. ಇದರ ಪರಿಣಾಮವಾಗಿ ನಾವು ಮೂತ್ರವಿಸರ್ಜಿಸಬೇಕೆಂಬ ಪ್ರಚೋದನೆಯನ್ನು ಸಾಮಾನ್ಯವಾಗಿ ನಿಯಂತ್ರಿಸಬಹುದಾಗಿದೆ.

**32) ನೆಫ್ರಾನ್ ರಚನೆಯ ಚಿತ್ರ ಬರೆದು ಭಾಗಗಳನ್ನು ಹೆಸರಿಸಿ**

**ಉತ್ತರ:–**




*************

## ನಿಯಂತ್ರಣ ಮತ್ತು ಸಹಭಾಗಿತ್ವ

**ಬಹುಆಯ್ಕೆ ಪ್ರಶ್ನೆಗಳು**

**1.. ಈ ಕೆಳಗಿನವುಗಳಲ್ಲಿ ಯಾವುದು ಸಸ್ಯ ಹಾರ್ಮೋನ್?**

(ಎ) ಇನ್ಸುಲಿನ್ (ಬಿ) ಥೈರಾಕ್ಸಿನ್

(ಸಿ) ಈಸ್ಟ್ರೋಜನ್ (ಡಿ) ಸೈಟೋಕೈನಿನ್

ಉತ್ತರ:– ಡಿ

**2. ಎರಡು ನರಕೋಶಗಳ ನಡುವಿನ ಅಂತರವನ್ನು ಹೀಗೆಂದು ಕರೆಯುತ್ತಾರೆ.**

(ಎ) ಡೆಂಡ್ರೈಟ್ (ಬಿ) ಸಂಸರ್ಗ

(ಸಿ) ಆಕ್ಸಾನ್ (ಡಿ) ಇಂಪಲ್ಸ್

ಉತ್ತರ:– ಬಿ

**3. ಮಿದುಳಿನ ಪ್ರಮುಖ ಕಾರ್ಯವೆಂದರೆ ................**

(ಎ) ಆಲೋಚನೆ

(ಬಿ) ಹೃದಯದ ಬಡಿತವನ್ನು ನಿಯಂತ್ರಿಸುವಿಕೆ

(ಸಿ) ದೇಹದ ಸಮತೋಲನ

(ಡಿ) ಮೇಲಿನ ಎಲ್ಲವೂ.

ಉತ್ತರ:–ಡಿ

**4. ಮಿದುಳು ಮತ್ತು ಮಿದುಳುಬಳ್ಳಿ ಒಟ್ಟಾಗಿ ಈ ಕೆಳಗಿನ ಯಾವುದನ್ನು ರೂಪಿಸುತ್ತವೆ?**

(ಎ) ಕೇಂದ್ರ ನರವ್ಯೂಹ ವ್ಯವಸ್ಥೆ (central nervous system)

(ಬಿ) ವಿಸರ್ಜನಾಂಗ ವ್ಯೂಹ

(ಸಿ) ಹೃದಯ

(ಡಿ) ಮೇಲಿನಯಾವುದೂ ಅಲ್ಲ

ಉತ್ತರ:– ಎ

II PUC MATHEMATICS

## DETERMINANTS

(...............Contd)

$$\Rightarrow \begin{bmatrix} x \\ y \\ z \end{bmatrix} = \begin{bmatrix} 1500 \\ 2000 \\ 1000 \end{bmatrix} \Rightarrow \begin{bmatrix} x \\ y \\ z \end{bmatrix} = \begin{bmatrix} 2000 \\ 1000 \\ 3000 \end{bmatrix}$$

$$\Rightarrow x = 1500,\ y = 2000,\ z = 1000$$

Hence, per day income of person who believe in honesty = Rs. 1,500

Per day income of person who believe in hard work = Rs. 2,000

Per day income of person who believe in unfair means = Rs. 1,000

**II part:**

(i) A person, who believe in hardwork has more per day income.

(ii) A person, who believe in hard work and honesty, are better for country.

**3. Two schools A and B decided to award prizes to their students for their values:**

**Honesty (x), punctuality (y) & obedience (z). School A decided to award a total of Rs. 11,000 for these three values to 5, 4 and 3 students, respectively, while School B decided to award Rs. 10,700 for these three values to 4, 3 and 5 students, respectively. If all the 3 prizes together amount to Rs. 2,700 then,**

**(i) Represent the above situation by a matrix equation and form linear equations by using matrix multiplication.**

**(ii) Is it possible to solve the system of equations so obtained using matrices?**

**(iii) Which value can be preferred to be rewarded most and why?**

**Soln:-** The given situation can be represented as follows -

$$\begin{bmatrix} 5 & 4 & 3 \\ 4 & 3 & 5 \\ 1 & 1 & 1 \end{bmatrix} \begin{bmatrix} x \\ y \\ z \end{bmatrix} = \begin{bmatrix} 11000 \\ 10700 \\ 2700 \end{bmatrix}$$

(or) $5x + 4y + 3z = 11000$

$4x + 3y + 5z = 10700$

$x + y + z = 2700$

(ii) Let $A = \begin{bmatrix} 5 & 4 & 3 \\ 4 & 3 & 5 \\ 1 & 1 & 1 \end{bmatrix}$

$\therefore |A| = 5(-2) - 4(-1) + 3(1)$

$= -10 + 4 + 3 = -3 \neq 0$; Hence $A^{-1}$ exists

So, equations have a unique solution.

(iii) Any of the three values with proper reasoning can be preferred as correct.

[Eg: the value "punctuality" can be preferred for rewards, because a punctual student can study better.]

**4. An amount of Rs. 600 crores is spent by the government in three schemes.**

**Scheme A - is for saving girl child from the cruel parents who don't want girl child and get aborted before her birth.**

**Scheme B - is for saving of newly wed girls from death due to dowry.**

**Scheme C - is planning for good health for senior citizen.**

**Now twice the amount spent on scheme B together with amount spent on scheme A is Rs 700 crores. And three times the amount spent on scheme A together with amount spent on scheme B and scheme C is Rs. 1200 crores. Find the amount spent on each scheme using matrices? What is the importance of saving girl child from the cruel parents who don't want girl child and get aborted before her birth?**

**Soln:-** Let Rs.x crores, Rs.y crores, Rs.z crores be the amount spent on each scheme respectively.

$\therefore x + y + z = 600$ ........ (1)

$x + 2y = 700$ ... (2) (the given condition)

$3x + y + z = 1200$ ... (3)

The above equation can be written in matrix form as

$$\begin{bmatrix} 1 & 1 & 1 \\ 1 & 2 & 0 \\ 3 & 1 & 1 \end{bmatrix} \begin{bmatrix} x \\ y \\ z \end{bmatrix} = \begin{bmatrix} 600 \\ 700 \\ 1200 \end{bmatrix}$$

$$\Rightarrow \begin{bmatrix} x \\ y \\ z \end{bmatrix} = \begin{bmatrix} 1 & 1 & 1 \\ 1 & 2 & 0 \\ 3 & 1 & 1 \end{bmatrix}^{-1} = \begin{bmatrix} 600 \\ 700 \\ 1200 \end{bmatrix}$$

Let $A = \begin{bmatrix} 1 & 1 & 1 \\ 1 & 2 & 0 \\ 3 & 1 & 1 \end{bmatrix}$

$$\therefore |A| = \begin{vmatrix} 1 & 1 & 1 \\ 1 & 2 & 0 \\ 3 & 1 & 1 \end{vmatrix} = \begin{vmatrix} 1 & 1 & 1 \\ 1 & 2 & 0 \\ 2 & 0 & 0 \end{vmatrix}$$

$= 2(-2) = -4 \neq 0$

$\therefore A^{-1}$ exists.

$$Adj.A = \begin{bmatrix} 2 & -1 & -5 \\ 0 & -2 & 2 \\ -2 & 1 & 1 \end{bmatrix}^{-1} = \begin{bmatrix} 2 & 0 & -2 \\ -1 & -2 & 1 \\ -5 & 2 & 1 \end{bmatrix}$$

$$\therefore A^{1} = \frac{adj.A}{|A|} = -\frac{1}{4} \begin{bmatrix} 2 & 0 & -2 \\ -1 & -2 & 1 \\ -5 & 2 & 1 \end{bmatrix}$$

$$\therefore \begin{bmatrix} x \\ y \\ z \end{bmatrix} = -\frac{1}{4} \begin{bmatrix} 2 & 0 & -2 \\ -1 & -2 & 1 \\ -5 & 2 & 1 \end{bmatrix} \begin{bmatrix} 600 \\ 700 \\ 1200 \end{bmatrix}$$

$$= -\frac{1}{4} \begin{bmatrix} 1200 - 2400 \\ -600 - 1400 + 1200 \\ -3000 + 1400 + 1200 \end{bmatrix} = \begin{bmatrix} 300 \\ 200 \\ 100 \end{bmatrix}$$

$\therefore\ x = 300, y = 200, z = 100$

Thus amount spent on each scheme are Rs. 300 crores, Rs.200 crores, Rs.1100 crores.

**II part:** The male population is more than female population in our country, but it is essential for a human being to save the life of all. This will help us to think against cruelty. ***(Contd….)***

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

### ವಾಣಿಜ್ಯ ತೆರಿಗೆ ಇಲಾಖೆ ಅಧಿಕಾರಿಗಳ ಕಾರ್ಯಾಚರಣೆಯಲ್ಲಿ ಪತ್ತೆ

# ₹64 ಕೋಟಿ ಜಿಎಸ್‌ಟಿ ವಂಚನೆ

ಪ್ರಜಾವಾಣಿ ವಾರ್ತೆ




**ಬೆಂಗಳೂರು:** 86 ವರ್ತಕರು ಕಬ್ಬಿಣ, ಉಕ್ಕು ಮತ್ತು ಗುಜರಿ ವ್ಯಾಪಾರದಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಪಾವತಿಸಿರುವುದಾಗಿ ನಕಲಿ ಬಿಲ್‌ಗಳನ್ನು ಸೃಷ್ಟಿಸಿ ₹ 64 ಕೋಟಿ ಹೂಡುವಳಿ ತೆರಿಗೆ ಜಮೆ (ಇನ್‌ಪುಟ್ ಟ್ಯಾಕ್ಸ್ ಕ್ರೆಡಿಟ್) ಪಡೆದು ವಂಚಿಸಿರುವುದನ್ನು ವಾಣಿಜ್ಯ ತೆರಿಗೆ ಇಲಾಖೆ ಪತ್ತೆಹಚ್ಚಿದೆ.

'ವಾಣಿಜ್ಯ ತೆರಿಗೆ ಇಲಾಖೆಯ ಅಧಿಕಾರಿಗಳು ಬೆಂಗಳೂರು ನಗರ ಮತ್ತು ಸುತ್ತಮುತ್ತಲಿನ ಪ್ರದೇಶಗಳಲ್ಲಿ ಎರಡು ತಿಂಗಳ ಕಾಲ ಕಾರ್ಯಾಚರಣೆ ನಡೆಸಿ ಈ ವಂಚನೆಯನ್ನು ಪತ್ತೆ ಹಚ್ಚಿದ್ದಾರೆ. ₹ 352 ಕೋಟಿ ಮೊತ್ತದ ವಹಿವಾಟಿನ ನಕಲಿ ಬಿಲ್‌ಗಳನ್ನು ಸೃಷ್ಟಿಸಿ ಈ ವಂಚನೆ ಮಾಡಿದ್ದಾರೆ' ಎಂದು ವಾಣಿಜ್ಯ ತೆರಿಗೆ ಇಲಾಖೆ ಆಯುಕ್ತೆ ಸಿ. ಶಿಖಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆಲವು ವರ್ತಕರು ವಹಿವಾಟು ನಡೆಸಿದಂತೆ ಬಿಲ್ ಸೃಷ್ಟಿಸಿ ಹೂಡವಳಿ ತೆರಿಗೆ ಜಮೆಗೆ ಕೋರಿಕೆ ಸಲ್ಲಿಸಿ ಸರ್ಕಾರದ ಬೊಕ್ಕಸಕ್ಕೆ ವಂಚಿಸುತ್ತಿರುವ ಮಾಹಿತಿ ಲಭಿಸಿತ್ತು. ಈ ಕುರಿತು ವಿಸ್ತೃತವಾಗಿ ತನಿಖೆ ನಡೆಸಿದಾಗ ವಂಚನೆ ನಡೆದಿರುವುದು ದೃಢಪಟ್ಟಿದೆ ಎಂದು ಮಾಹಿತಿ ನೀಡಿದ್ದಾರೆ.

**ರದ್ದಾದ ಜಿಎಸ್‌ಟಿ ಸಂಖ್ಯೆ ಬಳಕೆ:** ಆರೋಪಿಗಳು ನೋಂದಣಿ ಅಮಾನತಿನಲ್ಲಿರುವ ಮತ್ತು ರದ್ದುಗೊಂಡಿರುವ ಜಿಎಸ್‌ಟಿ ಸಂಖ್ಯೆಗಳನ್ನು ಬಳಸಿಕೊಂಡು ಅಕ್ರಮ ಎಸಗುತ್ತಿದ್ದರು. ಖರೀದಿ ಮಾಡಿದಂತೆ ಬಿಲ್ ಸೃಷ್ಟಿಸಿ ಹೂಡುವಳಿ ತೆರಿಗೆ ಜಮೆ ಸೌಲಭ್ಯ ಪಡೆಯುತ್ತಿದ್ದರು. ಸರ್ಕಾರಕ್ಕೆ ಜಿಎಸ್‌ಟಿ ಪಾವತಿಸದೇ ವಂಚಿಸುತ್ತಿದ್ದರು' ಎಂದು ತಿಳಿಸಿದ್ದಾರೆ.

ಕೆಲವರು ನಕಲಿ ದಾಖಲೆಗಳನ್ನು ಸೃಷ್ಟಿಸಿ ಅಕ್ರಮವಾಗಿ ಜಿಎಸ್‌ಟಿ ನೋಂದಣಿ ಸಂಖ್ಯೆ ಪಡೆಯುತ್ತಿದ್ದರು. ಯಾವುದೇ ವ್ಯವಹಾರದ ಸ್ಥಳ ಇಲ್ಲದೆಯೂ ಅಂತಹ ಜಿಎಸ್‌ಟಿ ಸಂಖ್ಯೆ ಬಳಸಿಕೊಂಡು ನಕಲಿ ಖರೀದಿ ಬಿಲ್‌ಗಳನ್ನು ನೀಡುತ್ತಿದ್ದರು. ಆರೋಪಿಗಳು ತೆರಿಗೆ ವಂಚಿಸುತ್ತಿರುವುದಕ್ಕೆ ಸಂಬಂಧಿಸಿದಂತೆ ಇಲಾಖೆಯ ಅಧಿಕಾರಿಗಳು ಸಾಕ್ಷ್ಯ ಸಂಗ್ರಹಿಸಿದ್ದಾರೆ ಎಂದಿದ್ದಾರೆ.

'ನಕಲಿ ಬಿಲ್‌ಗಳನ್ನು ತಯಾರಿಸುವುದು ಮತ್ತು ತೆರಿಗೆ ವಂಚಿಸುವುದು ಜಿಎಸ್‌ಟಿ ಕಾಯ್ದೆಯಡಿ ಶಿಕ್ಷಾರ್ಹ ಅಪರಾಧವಾಗಿದೆ. ಇಂತಹ ಕೃತ್ಯ ಎಸಗಿದವರಿಗೆ ದಂಡ ವಿಧಿಸುವುದು, ಸರಕುಗಳು, ಸ್ವತ್ತುಗಳು ಮತ್ತು ಬ್ಯಾಂಕ್ ಖಾತೆಗಳನ್ನು ಮುಟ್ಟುಗೋಲು ಹಾಕಿಕೊಳ್ಳಲು ಕಾಯ್ದೆಯಲ್ಲಿ ಅವಕಾಶವಿದೆ. ಈ ಪ್ರಕರಣದಲ್ಲಿ ತೆರಿಗೆ ವಂಚಿಸಿರುವವರ ವಿರುದ್ಧ ಅಂತಹ ಎಲ್ಲ ಕ್ರಮಗಳನ್ನೂ ಜರುಗಿಸಲಾಗುವುದು' ಎಂದು ಶಿಖಾ ತಿಳಿಸಿದ್ದಾರೆ.

# ಹೆಡಿಯಾಲ: ನರಭಕ್ಷಕ ಹುಲಿ ಸೆರೆ

ಪ್ರಜಾವಾಣಿ ವಾರ್ತೆ



ಮೈಸೂರು ಮೃಗಾಲಯದ ಕೂರ್ಗಳ್ಳಿ ಪುನರ್‌ವಸತಿ ಕೇಂದ್ರದಲ್ಲಿರುವ ನರಭಕ್ಷಕ ಹುಲಿ

**ನಂಜನಗೂಡು (ಮೈಸೂರು ಜಿಲ್ಲೆ):** ತಾಲ್ಲೂಕಿನ ಹೆಡಿಯಾಲ ಅರಣ್ಯ ವಲಯದ ಬಳ್ಳೂರುಹುಂಡಿಯಲ್ಲಿ ಮಹಿಳೆಯನ್ನು ಕೊಂದಿದ್ದ 10 ವರ್ಷದ ಗಂಡು ಹುಲಿ ಮಂಗಳವಾರ ಮುಂಜಾನೆ ಸೆರೆಯಾಗಿದೆ.

ಗ್ರಾಮದ ಕಲ್ಲಹಾರಖಂಡಿ ಬಳಿ ಹಸು ಕಳೇಬರ ತಿನ್ನುವಾಗ ಪಶುವೈದ್ಯಾಧಿಕಾರಿ ಡಾ.ವಾಸೀಂ ಮಿರ್ಜಾ ನೀಡಿದ ಅರಿವಳಿಕೆಗೆ ಹುಲಿ ಬಿದ್ದಿದೆ. ಅದನ್ನು ಬಲೆ ಹಾಕಿ ಹಿಡಿದು, ಮೈಸೂರಿನ ಕೂರ್ಗಳ್ಳಿ ಪುನರ್‌ವಸತಿ ಕೇಂದ್ರಕ್ಕೆ ರವಾನಿಸಲಾಯಿತು.

ಎರಡು ದಿನಗಳ ಹಿಂದಷ್ಟೇ ಹಸು ಕೊಂದಿದ್ದ ಜಾಗದಲ್ಲಿ ಅರಣ್ಯ ಇಲಾಖೆಯು ಕ್ಯಾಮೆರಾ ಅಳವಡಿಸಿ ಬೋನು ಇರಿಸಿತ್ತು. ಅದರೊಳಗೆ ಡಾ.ವಾಸೀಂ ಹಾಗೂ ಅರಣ್ಯ ಸಿಬ್ಬಂದಿ ಕಾದು ಕುಳಿತಿದ್ದರು.

'ಜಾನುವಾರು ತಿನ್ನಲು ಬಂದಾಗ ಅರಿವಳಿಕೆ ನೀಡಿ ಸೆರೆ ಹಿಡಿಯಲಾಗಿದ್ದು, ಅದಕ್ಕೆ 'ಬಂಡೀಪುರ 15 ಯು- 2371' ಗುರುತಿನ ಸಂಖ್ಯೆ ನೀಡಲಾಗಿತ್ತು. ಹತ್ತು ವರ್ಷ ವಯಸ್ಸಾಗಿದ್ದು, ಪುನರ್‌ವಸತಿ ಕೇಂದ್ರಕ್ಕೆ ಕಳುಹಿಸಲಾಗಿದೆ' ಎಂದು ಕಾರ್ಯಾಚರಣೆ ನೇತೃತ್ವ ವಹಿಸಿದ್ದ ಬಂಡೀಪುರ ಹುಲಿ ಯೋಜನೆ ನಿರ್ದೇಶಕ ರಮೇಶ್ ಕುಮಾರ್ 'ಪ್ರಜಾವಾಣಿ'ಗೆ ತಿಳಿಸಿದರು.

'ವಿಶೇಷ ಹುಲಿ ಸಂರಕ್ಷಣಾ ದಳ, ಚಿರತೆ ಹಾಗೂ ಆನೆ ಕಾರ್ಯಪಡೆಗಳ 12 ಅಧಿಕಾರಿಗಳು ಹಾಗೂ 195 ಸಿಬ್ಬಂದಿ ಮೂರು ದಿನಗಳಿಂದ ಕೂಂಬಿಂಗ್ ಕಾರ್ಯಾಚರಣೆ ನಡೆಸಿದ್ದರು. ಸಾಕಾನೆಗಳಾದ ಪಾರ್ಥಸಾರಥಿ, ರೋಹಿತ, ಹಿರಣ್ಯ ಜೊತೆಗೆ ನಾಗಣಾಪುರ, ಡೋರನಕಟ್ಟೆ, ವೆಂಕಟಗಿರಿ ಹಾಗೂ ವಡೆಯನಪುರ ಕಾಲೊನಿಗಳ ತಲಾ 25 ಗಿರಿಜನರೂ ಹುಲಿ ಸೆರೆಗೆ ಶ್ರಮಿಸಿದ್ದರು' ಎಂದು ಮಾಹಿತಿ ನೀಡಿದರು.

ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಾದ ಕೆ. ಪರಮೇಶ್, ಕೆ.ಆರ್. ನಾರಾಯಣ, ಡಿ. ಶ್ರೀನಿವಾಸ, ಅಮೃತ ಮಾಯಪ್ಪನವರ ಇದ್ದರು.

## ರಜೆಗಾಗಿ ನೀರಿಗೆ ಇಲಿ ಪಾಷಾಣ ಬೆರೆಸಿದ ವಿದ್ಯಾರ್ಥಿ!

ಪ್ರಜಾವಾಣಿ ವಾರ್ತೆ

**ಬಂಗಾರಪೇಟೆ (ಕೋಲಾರ ಜಿಲ್ಲೆ):** ತಾಲ್ಲೂಕಿನ ಮೊರಾರ್ಜಿ ದೇಸಾಯಿ ವಸತಿ ಶಾಲೆಯಲ್ಲಿ ನೀರು ಕುಡಿದು ಮೂವರು ವಿದ್ಯಾರ್ಥಿಗಳು ಅಸ್ವಸ್ಥಗೊಂಡ ಪ್ರಕರಣದಲ್ಲಿ ಸಹಪಾಠಿ ವಿದ್ಯಾರ್ಥಿಯೇ ವಾಟರ್ ಫಿಲ್ಟರ್‌ಗೆ ಇಲಿ ಪಾಷಾಣ ಹಾಕಿರುವ ವಿಚಾರ ಮಂಗಳವಾರ ಪೊಲೀಸರ ತನಿಖೆಯಲ್ಲಿ ಬಯಲಾಗಿದೆ.

ವಿದ್ಯಾರ್ಥಿಗಳಿಗೆ ಏನಾದರೂ ಸಮಸ್ಯೆ ಆದರೆ ಶಾಲೆಗೆ ರಜೆ ಸಿಗಲಿದ್ದು, ಊರಿಗೆ ಹೋಗಬಹುದು ಎಂಬ ಉದ್ದೇಶದಿಂದ 9ನೇ ತರಗತಿ ವಿದ್ಯಾರ್ಥಿ ವಸತಿ ನಿಲಯದಲ್ಲಿ ಕುಡಿಯುವ ನೀರಿಗೆ ಇಲಿ ಪಾಷಾಣ ಬೆರೆಸಿದ್ದಾನೆ ಎಂದು ಕಾಮಸಮುದ್ರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಬಾಲಕ ಆಗಾಗ್ಗೆ ಖಿನ್ನತೆ ಒಳಗಾಗುತ್ತಿದ್ದ. ಆಗ ಪ್ರಾಂಶುಪಾಲರು ಪೋಷಕರನ್ನು ಕರೆಯಿಸಿ ಮನೋವೈದ್ಯರ ಸಲಹೆ ಪಡೆಯಲು ಸೂಚಿಸಿದ್ದರು. ಬಾಲಕನನ್ನು ಬಾಲಾ ನ್ಯಾಯ ಮಂಡಳಿ ಮುಂದೆ ಹಾಜರುಪಡಿಸಿದ್ದು, ಆತ ತನ್ನ ತಪ್ಪು ಒಪ್ಪಿಕೊಂಡಿದ್ದಾನೆ. ಈ ವೇಳೆ ಆತನ ತಂದೆಯೂ ಇದ್ದರು ಎಂದರು.

ತಾಲ್ಲೂಕಿನ ದೊಡ್ಡಪನ್ನಾಂಡಹಳ್ಳಿ ಕ್ರಾಸ್ ಬಳಿ ಇರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಹಾಸ್ಟೆಲ್‌ನಲ್ಲಿ ಸೋಮವಾರ ಪಾಷಾಣ ಬೆರೆಸಿದ ನೀರು ಕುಡಿದು 10ನೇ ತರಗತಿಯ ಗಿರೀಶ್, ಧನ್ವಂತ್ ಹಾಗೂ 9ನೇ ತರಗತಿಯ ಡಕಣಾಚಾರಿ ಎಂಬ ವಿದ್ಯಾರ್ಥಿಗಳು ಅಸ್ವಸ್ಥಗೊಂಡಿದ್ದರು.

# ಡಿಕೆಶಿ ಪ್ರಕರಣ: ಹೈಕೋರ್ಟ್ ಮೆಟ್ಟಿಲೇರಿದ ಶಾಸಕ ಯತ್ನಾಳ

ಪ್ರಜಾವಾಣಿ ವಾರ್ತೆ



**ಮುಖ್ಯಾಂಶಗಳು**

- ಡಿಕೆಶಿ ಮೇಲ್ಮನವಿ ಹೈಕೋರ್ಟ್‌ನಲ್ಲಿ ಇಂದು ವಿಚಾರಣೆ
- ರಾಜ್ಯ ಸರ್ಕಾರದ ಪರ ಹಿರಿಯ ವಕೀಲ ಕಪಿಲ್ ಸಿಬಲ್ ವಾದ?

**ಬೆಂಗಳೂರು:** 'ಆದಾಯ ಮೀರಿ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಡಿ.ಕೆ. ಶಿವಕುಮಾರ್ ವಿರುದ್ಧ ಸಿಬಿಐ ತನಿಖೆಗೆ ನೀಡಿದ್ದ ಅನುಮತಿಯನ್ನು ರದ್ದುಪಡಿಸಿರುವ ರಾಜ್ಯ ಸರ್ಕಾರದ ಕ್ರಮ ಅಸಾಂವಿಧಾನಿಕವಾಗಿದ್ದು ತನಿಖೆಯನ್ನು ಕುಗ್ಗಿಸುವ ಪ್ರಯತ್ನವಾಗಿದೆ' ಎಂದು ಆಕ್ಷೇಪಿಸಿ ಬಿಜೆಪಿ ಮುಖಂಡ ಹಾಗೂ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

'ಈ ಹಿಂದಿನ ಬಿಜೆಪಿ ಸರ್ಕಾರ ಸಿಬಿಐ ತನಿಖೆಗೆ ಅನುಮತಿ ನೀಡಿ 2021ರ ಸೆಪ್ಟೆಂಬರ್ 25ರಂದು ಹೊರಡಿಸಿರುವ ಆದೇಶವನ್ನು ರದ್ದುಪಡಿಸಬೇಕು ಎಂದು ಕೋರಿ ಶಿವಕುಮಾರ್ ಸಲ್ಲಿಸಿರುವ ಮೇಲ್ಮನವಿಯಲ್ಲಿ ನನ್ನನ್ನೂ ಮಧ್ಯಂತರ ಪ್ರತಿವಾದಿಯನ್ನಾಗಿ ಸೇರ್ಡಡೆ ಮಾಡಿಕೊಳ್ಳಬೇಕು' ಎಂದು ಕೋರಿ ಯತ್ನಾಳ ಅವರು ಮಧ್ಯಂತರ ಅರ್ಜಿ ಸಲ್ಲಿಸಿದ್ದಾರೆ.

ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ.ವರಾಳೆ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರ ವಿಭಾಗೀಯ ನ್ಯಾಯಪೀಠ ಬುಧವಾರ (ನ.29) ವಿಚಾರಣೆ ನಡೆಸಲಿದ್ದು, ನ್ಯಾಯಪೀಠ ಈ ಮಧ್ಯಂತರ ಅರ್ಜಿಯನ್ನೂ ವಿಚಾರಣೆಗೆ ಕೈಗೆತ್ತಿಕೊಳ್ಳುವ ನಿರೀಕ್ಷೆಯಿದೆ. ಯತ್ನಾಳ ಪರ ಹೈಕೋರ್ಟ್ ವಕೀಲ ವೆಂಕಟೇಶ್ ಪಿ.ದಳವಾಯಿ ವಕಾಲತ್ತು ವಹಿಸಿದ್ದಾರೆ.

**ಅರ್ಜಿಯಲ್ಲಿ ಏನಿದೆ?:** 'ಶಿವಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿ ವಜಾ ಮಾಡಿದ ಏಕಸದಸ್ಯ ನ್ಯಾಯಪೀಠದ ಆದೇಶದಲ್ಲಿ ಸಿಬಿಐ ತನಿಖೆ ಈಗಾಗಲೇ ಶೇ 90ರಷ್ಟು ಪೂರ್ಣಗೊಂಡಿದೆ ಎಂಬುದನ್ನು ಉಲ್ಲೇಖಿಸಲಾಗಿದೆ. ಈ ಹಂತದಲ್ಲಿ ರಾಜ್ಯ ಸರ್ಕಾರ ಸಿಬಿಐಗೆ ನೀಡಿರುವ ಅನುಮೋದನೆ ಹಿಂಪಡೆದಿರುವುದು ಸಾರ್ವಜನಿಕ ಹಿತಾಸಕ್ತಿಗೆ ವಿರುದ್ಧವಾಗಿದೆ ಮತ್ತು ಈ ಮೂಲಕ ಶಿವಕುಮಾರ್ ಅವರನ್ನು ರಕ್ಷಿಸಲು ಹೆಜ್ಜೆ ಇರಿಸಿದೆ' ಎಂದು ಅರ್ಜಿದಾರರು ಆಕ್ಷೇಪಿಸಿದ್ದಾರೆ.

'ರಾಜ್ಯ ಸರ್ಕಾರದ ಈ ನಡೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪುಗಳು ಮತ್ತು ಈ ನೆಲದ ಕಾನೂನಿಗೆ ವಿರುದ್ಧವಾಗಿದೆ. ಸಂವಿಧಾನದ 144ನೇ ವಿಧಿಗೆ ತದ್ವಿರುದ್ಧವಾದ ಈ ಕ್ರಮದಿಂದ ಸಾರ್ವಜನಿಕ ಆತ್ಮಸಾಕ್ಷಿಗೆ ಆಘಾತ ಉಂಟಾಗಿದೆ. ಪ್ರಕರಣದ ಕಾನೂನು ಸಿಂಧುತ್ವವನ್ನು ಕೋರ್ಟ್ ನಿರ್ಧರಿಬೇಕಾಗಿದ್ದು ಇಂತಹ ಸಂದರ್ಭದಲ್ಲಿ ತನಿಖೆಗೆ ನೀಡಲಾಗಿದ್ದ ಅನುಮತಿ ಹಿಂಪಡೆಯುವ ನಿರ್ಧಾರವು ನ್ಯಾಯಾಂಗ ಪ್ರಕ್ರಿಯೆಯಲ್ಲಿ ಹಸ್ತಕ್ಷೇಪ ಮಾಡಿದಂತಾಗಿದೆ. ಆದ್ದರಿಂದ, ಈ ಎಲ್ಲಾ ನೆಲೆಗಳಲ್ಲಿ ನನ್ನ ವಾದವನ್ನೂ ಆಲಿಸಬೇಕು' ಎಂದು ಯತ್ನಾಳ ಕೋರಿದ್ದಾರೆ.

**ಸಿಜೆಐಗೆ ಮನವಿ**

'ಸಿಬಿಐ ತನಿಖೆ ಹಿಂಪಡೆದಿರುವ ಸಚಿವ ಸಂಪುಟದ ನಿರ್ಧಾರ ಪ್ರಾಮಾಣಿಕತೆಯ ಮೌಲ್ಯಗಳು ಹಾಗೂ ರಾಜ್ಯಾಡಳಿತದ ಸಮಗ್ರತೆಯನ್ನು ನಾಶ ಮಾಡಿದಂತಾಗಿದೆ' ಎಂದು ಆರೋಪಿಸಿರುವ ಹೈಕೋರ್ಟ್ ವಕೀಲ ಎನ್.ಪಿ.ಅಮೃತೇಶ್, ' ತನ್ನ ನಿರ್ಧಾರವನ್ನು ಕೂಡಲೇ ಹಿಂಪಡೆಯುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಮನವಿಯನ್ನು ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ರಾಜ್ಯಪಾಲ ಥಾವರ್ ಚಂದ್ ಗೆಹಲೋತ್ ಅವರಿಗೂ ರವಾನಿಸಲಾಗಿದೆ.




# ಚಾಮುಂಡೇಶ್ವರಿಗೆ ₹1.18 ಲಕ್ಷ ಸಲ್ಲಿಕೆ

## ಗೃಹಲಕ್ಷ್ಮಿ ಯೋಜನೆ: 59 ತಿಂಗಳ ಹಣ ಪಾವತಿಸಿದ ಸಚಿವೆ ಲಕ್ಷ್ಮಿ ಹೆಬ್ಬಾಳಕರ

ಪ್ರಜಾವಾಣಿ ವಾರ್ತೆ

**ಮೈಸೂರು:** ಚಾಮುಂಡಿ ಬೆಟ್ಟದ ಚಾಮುಂಡೇಶ್ವರಿ ದೇವಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳಕರ 'ಗೃಹಲಕ್ಷ್ಮಿ' ಯೋಜನೆಯ 59 ತಿಂಗಳ ಹಣವನ್ನು ಕಾಣಿಕೆಯಾಗಿ ನೀಡಿದ್ದಾರೆ.

ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರ ಬ್ಯಾಂಕ್ ಖಾತೆಗೆ ಸೋಮವಾರ ₹1.18 ಲಕ್ಷ ಜಮೆ ಮಾಡಿದ್ದ ಸಚಿವೆ, 'ಗೃಹಲಕ್ಷ್ಮಿ ಗ್ಯಾರಂಟಿ' ಹಣ ಸಲ್ಲಿಸುವಂತೆ ಹೇಳಿದ್ದರು. ಅದರಂತೆ ದಿನೇಶ್ ಅವರು ಬೆಟ್ಟಕ್ಕೆ ಭೇಟಿ ನೀಡಿ, ಮಾಸಿಕ ₹ 2 ಸಾವಿರದಂತೆ 59 ತಿಂಗಳ ಹಣ ನೀಡಿ ರಶೀದಿ ಪಡೆದಿದ್ದಾರೆ.

'ಗೃಹಲಕ್ಷ್ಮಿ ಯೋಜನೆ ಹಣವನ್ನು ಪ್ರತಿ ತಿಂಗಳು ಮೊದಲು ನಾಡದೇವಿ ಚಾಮುಂಡೇಶ್ವರಿಗೆ ಸಲ್ಲಿಸಿ ನಂತರ ಫಲಾನುಭವಿಗಳಿಗೆ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಪತ್ರ ಬರೆದಿದ್ದೆ. ಸರ್ಕಾರದ ಖಾತೆ ಅಥವಾ ವೈಯಕ್ತಿಕ ಖಾತೆಯಿಂದ ಹಣ ನೀಡುವಂತೆ ಲಕ್ಷ್ಮಿ ಹೆಬ್ಬಾಳಕರ ಅವರಿಗೆ ಡಿ.ಕೆ.ಶಿವಕುಮಾರ್ ಸೂಚಿಸಿದ್ದರು. ಸಚಿವೆ ಅವರು ವೈಯಕ್ತಿಕ ಖಾತೆಯಿಂದ ನನ್ನ ಖಾತೆಗೆ ಹಣ ಹಾಕಿದ್ದರು. ಅದನ್ನು ದೇವಿಗೆ ಸಲ್ಲಿಸಿದ್ದೇನೆ' ಎಂದು ದಿನೇಶ್ ಗೂಳಿಗೌಡ 'ಪ್ರಜಾವಾಣಿ'ಗೆ ತಿಳಿಸಿದರು.

'ಮೇ 9ರಂದು ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಕೆ.ಜೆ.ಜಾರ್ಜ್ ಅವರೊಂದಿಗೆ ನಾನೂ ದೇವಿಯ ಸನ್ನಿಧಿಯಲ್ಲಿ ಗ್ಯಾರಂಟಿ ಕಾರ್ಡ್‌ಗಳನ್ನು ಇಟ್ಟು ಪ್ರಾರ್ಥನೆ ಸಲ್ಲಿಸಿದ್ದೆವು. ಅಧಿಕಾರಕ್ಕೆ ಬಂದಾಗ ಆ.30ರಂದು ಗೃಹಲಕ್ಷ್ಮಿ ಯೋಜನೆಗೆ ಚಾಲನೆ ನೀಡುವ ಮುಂಚೆ ದೇವಿಗೆ ಮೊದಲ ಹಣ ನೀಡಿದ್ದೆವು' ಎಂದು ಸ್ಮರಿಸಿದರು.

'ಪ್ರತಿ ತಿಂಗಳು ₹ 2 ಸಾವಿರ ನೀಡುವ ಬದಲು ಒಟ್ಟಿಗೆ 5 ವರ್ಷದ ಎಲ್ಲ ತಿಂಗಳ ಹಣವನ್ನು ಕಾಣಿಕೆಯಾಗಿ ಸಲ್ಲಿಸಲಾಗಿದೆ. ವಿರೋಧ ಪಕ್ಷಗಳು ಕಾಂಗ್ರೆಸ್ ಗ್ಯಾರಂಟಿ 6 ತಿಂಗಳು ಮಾತ್ರ ಇರುತ್ತದೆ ಎಂದು ಜನರಲ್ಲಿ ಸುಳ್ಳು ಹರಡುತ್ತಿದ್ದಾರೆ. ದೇವಿಗೆ ಗ್ಯಾರಂಟಿಯ ಹಣ ನೀಡುವ ಮೂಲಕ 2028ರವರೆಗೂ ಯೋಜನೆಯಿರಲಿದೆ. ನಂತರವೂ ಯೋಜನೆ ಮುಂದುವರಿಯಲಿದೆ ಎಂದು ದೇವಿಯ ಮುಂದೆ ನಾಡಿನ ಜನರಿಗೆ ನೀಡಿದ ವಾಗ್ದಾನವಾಗಿದೆ' ಎಂದರು.

'ರಾಜ್ಯದ 1 ಕೋಟಿ 17 ಲಕ್ಷ ಯಜಮಾನಿಯರು ಗೃಹಲಕ್ಷ್ಮಿ ಯೋಜನೆಗೆ ನೋಂದಣಿ ಮಾಡಿಕೊಂಡಿದ್ದಾರೆ. ಇವರಲ್ಲಿ 1 ಕೋಟಿ 10 ಲಕ್ಷ ಯಜಮಾನಿಯರ ಖಾತೆಗಳಿಗೆ ನೇರವಾಗಿ ಹಣ ಜಮಾ ಆಗುತ್ತಿದೆ. ಯೋಜನೆಗಾಗಿ ಸರ್ಕಾರ ₹11,200 ಕೋಟಿ ಬಿಡುಗಡೆ ಮಾಡಿದೆ' ಎಂದು ಮಾಹಿತಿ ನೀಡಿದರು.

# ಆರೋಗ್ಯ ಸಿಬ್ಬಂದಿಗೆ ಮಾಸ್ಕ್ ಕಡ್ಡಾಯ

ಒಂದನೇ ಪುಟದಿಂದ...

ಸರ್ಕಾರಿ ಮತ್ತು ಖಾಸಗಿ ಆರೋಗ್ಯ ಕೇಂದ್ರಗಳ ಸಿಬ್ಬಂದಿ ಮಾಸ್ಕ್ ಧರಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ನ್ಯುಮೋನಿಯಾ ಚಿಕಿತ್ಸೆಗೆ ಅಗತ್ಯವಿರುವ ಒಸೆಲ್ಟಾಮಿವಿರ್ ಮಾತ್ರೆಗಳು ಹಾಗೂ ಆರೋಗ್ಯ ಕ್ಷೇತ್ರದ ಸಿಬ್ಬಂದಿಗೆ ಆಗತ್ಯವಿರುವಷ್ಟು ಪಿಪಿಇ ಕಿಟ್‌ಗಳನ್ನು ದಾಸ್ತಾನು ಮಾಡಿಕೊಳ್ಳುವಂತೆ ಸುತ್ತೋಲೆಯಲ್ಲಿ ಸೂಚಿಸಲಾಗಿದೆ.

ಶೀತ–ಜ್ವರ ಮಾದರಿಯ ಅನಾರೋಗ್ಯ ಸಮಸ್ಯೆ (ಐಎಲ್‌ಐ) ಹಾಗೂ ತೀವ್ರ ಉಸಿರಾಟದ ಸಮಸ್ಯೆಗಳುಳ್ಳ (ಸಾರಿ) ಪ್ರಕರಣಗಳನ್ನು ಆರೋಗ್ಯ ಇಲಾಖೆಯ ಪೋರ್ಟಲ್‌ನಲ್ಲಿ ಕಡ್ಡಾಯವಾಗಿ ದಾಖಲಿಸಬೇಕು. ಯಾವುದೇ ಪ್ರದೇಶಗಳಲ್ಲಿ ಈ ಪ್ರಕರಣಗಳ ಸಂಖ್ಯೆ ಅನಿಯಮಿತ ಪ್ರಮಾಣದಲ್ಲಿ ಹೆಚ್ಚಳವಾದರೆ ವಿಶೇಷ ನಿಗಾ ಇರಿಸಬೇಕು. ಇಂತಹ ಪ್ರಕರಣಗಳ ಪರೀಕ್ಷಾ ವರದಿಗಳ ಕುರಿತು ಆರೋಗ್ಯ ಇಲಾಖೆಯ ಪೋರ್ಟಲ್‌ನಲ್ಲಿ ಮಾಹಿತಿ ದಾಖಲಿಸಬೇಕು ಎಂದು ಸುತ್ತೋಲೆಯಲ್ಲಿ ನಿರ್ದೇಶನ ನೀಡಲಾಗಿದೆ.

ಕೋವಿಡ್ ನಿಯಂತ್ರಣಕ್ಕೆ ಈ ಹಿಂದೆ ಹೊರಡಿಸಿದ್ದ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಕೋವಿಡ್ ಚಿಕಿತ್ಸೆಗೆ ನಿಗದಿಪಡಿಸಿದ್ದ ಎಲ್ಲ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳ ಸನ್ನದ್ಧತೆ ಕುರಿತು ಪರಿಶೀಲನೆ ನಡೆಸಬೇಕು. ಹಾಸಿಗೆಗಳ ಲಭ್ಯತೆ, ವೈದ್ಯರು, ಅರೆವೈದ್ಯಕೀಯ ಮತ್ತು ಇತರ ಸಿಬ್ಬಂದಿಯ ಲಭ್ಯತೆ, ಪಿಪಿಇ ಕಿಟ್, ಆಮ್ಲಜನಕ, ಔಷಧಿಗಳ ದಾಸ್ತಾನಿನ ಕುರಿತು ಖಚಿತಪಡಿಸಿಕೊಳ್ಳಬೇಕು. ನ್ಯುಮೋನಿಯಾ ಸೋಂಕಿನಿಂದ ಉದ್ಭವಿಸಬಹುದಾದ ಪರಿಸ್ಥಿತಿ ಎದುರಿಸಲು ಆಸ್ಪತ್ರೆಗಳನ್ನು ಸಜ್ಜುಗೊಳಿಸಬೇಕು ಎಂದು ಆಯುಕ್ತರು ಸೂಚಿಸಿದ್ದಾರೆ.

ಸಮುದಾಯ ಹಂತದಲ್ಲಿ ತೀವ್ರ ನಿಗಾ ಇರಿಸಬೇಕು. ಒಂದೇ ಪ್ರದೇಶದಲ್ಲಿ ಹೆಚ್ಚಿನ ಸಂಖ್ಯೆಯ ನ್ಯುಮೋನಿಯಾ ಪ್ರಕರಣಗಳು ಪತ್ತೆಯಾದಲ್ಲಿ (ಕ್ಲಸ್ಟರ್) ಆ ಬಗ್ಗೆ ವಿಶೇಷ ನಿಗಾ ಇರಿಸಬೇಕು. ಕೋವಿಡ್ ಸೋಂಕು ದೃಢಪಡದೇ ತೀವ್ರ ಉಸಿರಾಟದಿಂದ ಸಾವು ಸಂಭವಿಸಿದ ಪ್ರಕರಣಗಳಲ್ಲಿ ಹೆಚ್ಚಿನ ಪರೀಕ್ಷೆಗಳನ್ನು ನಡೆಸಬೇಕು. ಎಲ್ಲ ವೈರಾಣು ಸಂಶೋಧನಾ ಕೇಂದ್ರಗಳು ಮತ್ತು ಪ್ರಯೋಗಾಲಯಗಳನ್ನೂ ಸನ್ನದ್ಧ ಸ್ಥಿತಿಯಲ್ಲಿಡಬೇಕು ಎಂದು ಸೂಚಿಸಲಾಗಿದೆ.

# ಬಗರ್‌ಹುಕುಂ: ಅನರ್ಹ ಅರ್ಜಿಗಳೇ ಅಧಿಕ

ಒಂದನೇ ಪುಟದಿಂದ...

30 ಎಕರೆ ಲಭ್ಯತೆ ಇರುವ ಕಡೆಗಳಲ್ಲಿ ಪ್ರಾಥಮಿಕ ಪರಿಶೀಲನೆಯನ್ನೂ ನಡೆಸದೇ 40 ರಿಂದ 50 ಎಕರೆ ಹಂಚಿಕೆ ಮಾಡಲಾಗಿದೆ. ಹಕ್ಕುಪತ್ರ ನೀಡಿದ್ದರೂ ಪೋಡಿ ಮಾಡಿಕೊಡಲು ಸಾಧ್ಯವಾಗಿಲ್ಲ. ಲಕ್ಷಾಂತರ ಎಕರೆ ದರ್ಖಾಸ್ತು ಭೂಮಿಗೆ ಪೋಡಿಯೇ ಆಗಿಲ್ಲ. ಮಾಲೀಕತ್ವದ ಹಕ್ಕೂ ನೀಡಲಾಗಿಲ್ಲ ಎಂದು ಹೇಳಿದರು.

'ಅನರ್ಹರು ಮತ್ತು ಹಿಂದೆ ಆಗಿರುವ ಲೋಪಗಳ ಪ್ರಕರಣಗಳನ್ನು ಒಟ್ಟುಗೂಡಿಸಿ ಅರ್ಹರಿಗೆ ಮಾತ್ರ ಜಮೀನು ಕೊಡುವ ವ್ಯವಸ್ಥೆ ಮಾಡುತ್ತೇವೆ. ಜಮೀನು ಪಡೆದವರಿಗೆ ನೆಮ್ಮದಿ ಸಿಗಬೇಕು. ಮಾಲಿಕತ್ವ ಸಿಗಬೇಕು. ಅದಕ್ಕಾಗಿ ರೂಪುರೇಷೆ ರೂಪಿಸಲಾಗಿದೆ' ಎಂದರು.

'ಬಗರ್‌ಹುಕುಂ ಸಮಿತಿ ಸಭೆಯ ನಡಾವಳಿಯನ್ನು ಗಣಕೀಕರಣಗೊಳಿಸಲು ನಿರ್ಧರಿಸಲಾಗಿದೆ. ಕೆಲವೆಡೆ ಸಭೆಯ ನಡಾವಳಿಗಳೇ ಕಾಣೆಯಾಗಿವೆ. ಶಾಸಕರು ಶಾಸನಸಭೆಯಲ್ಲಿದ್ದಾಗಲೂ ಸಮಿತಿ ಸಭೆಯಲ್ಲಿ ಪಾಲ್ಗೊಂಡಿದ್ದರು ಎಂದು ನಮೂದಾಗಿದೆ' ಎಂದು ಕೃಷ್ಣಬೈರೇಗೌಡ ಹೇಳಿದರು.

**ದಾಖಲೆ: ಡಿಜಿಟಲೀಕರಣ**

ರಾಜ್ಯದ ಎಲ್ಲ ಜಮೀನುಗಳ ಮೂಲ ದಾಖಲೆಗಳ ಡಿಜಿಟಲೀಕರಣ ಕಾರ್ಯವನ್ನು 2024 ರ ಕೊನೆಯೊಳಗೆ ಪೂರ್ಣಗೊಳಿಸಲಾಗುವುದು ಎಂದು ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಪ್ರಾಯೋಗಿಕವಾಗಿ ಕೆಲವು ಜಿಲ್ಲೆಗಳಲ್ಲಿ ಈ ಕಾರ್ಯ ನಡೆದಿವೆ. ಇನ್ನು ಮುಂದೆ ಅಭಿಯಾನದ ರೂಪದಲ್ಲಿ ಭೂದಾಖಲೆಗಳನ್ನು ಸ್ಕ್ಯಾನಿಂಗ್ ಮಾಡಲಾಗುವುದು. ಜಮೀನಿನ ಮಾಲೀಕತ್ವ ಯಾರದ್ದು? ಯಾರಿಂದ ಯಾರಿಗೆ ಹೇಗೆ ಬಂತು, ಮಾರಾಟವಾಯಿತೆ ಅಥವಾ ದಾನದ ರೂಪದಲ್ಲಿ ಬಂದಿತೆ ಎಂಬುದರ ಸ್ಪಷ್ಟ ಮಾಹಿತಿ ಸಿಗುತ್ತದೆ.

ಸುಮಾರು 2.40 ಕೋಟಿಯಷ್ಟು ಸರ್ವೆಸಂಖ್ಯೆಗಳ ಪಹಣಿಗಳಿವೆ. ಅವುಗಳನ್ನು ರಕ್ಷಿಸಲು ಡಿಜಿಟಲೀಕರಣ ಮಾಡಲಾಗುವುದು ಎಂದು ತಿಳಿಸಿದರು.

**THE FEDERAL BANK LIMITED**
**Regd. Office: Aluva, Kerala.**
ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/2023-24 NOTICE FOR PRIVATE SALE OF GOLD 28/11/2023

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 10-12-2023 as shown below:

**Br. Bangalore / Vidyaranyapura : Ground Floor, No. 1123, Khata No. 1066/2744/1123, 6th Block, HMT Layout, Vidyaranyapura, Bangalore, Karnataka- 560097 Ph,. No. 9544597221 :-** 23966400001280,23966400001157,23966400000852,23966400000936,23966400000498,23966400001090,23966400000654,23966400000688,23966400000506,23966400000647,23966400000431,23966400000944,23966400000290,23966400000951,23966400000829,23966400000985,23966400000373,23966400000878,23966400000738,23966400000670,23966400000308,23966400001306,23966400000662,23966400001314,23966400001330,23966400001199,23966400000761,23966400000712.

**Br. Chikkaballapur: No 1153/3, BB Road, Chikkaballapur- 562 101 Ph No. 08156-274088 :-** 20216400039317,20216400038020,20216400038905,20215500005434,20216400038145,20215500005822.

**Br. Chikkajala: Sri Byraveshwara Complex, No 82/3, Chikkajala Village, Chikkajala Post, KIAL Road, Bangalore North Taluk, Bangalore- 562 157 , Ph No. 080-28467032 :-** 20866400036786,20866400036760,20866400041240,20866400043568,20866400032322,20866400033684,20866400032595,20866400039103,20866400037875,20866400043915,20866400037933,20866400033254,20866400037248,20866400037230,20866400042842.

**Br. Doddaballapur: D Cross Road, Doddaballapur, Bangalore Rural- 561 203 Ph No.080-27622105 :-** 16316400094811,16316400091932,16316400091601,16316600001780,16316400083954,16316400091585,16316400076636,16316400076297,16316400084143,16316400091825,16316400091007,16316400085348,16316400085694,16316400090124,16316400072452,16316400087625,16316400074169,16316400092781,16316400080653,16316400093417.

**Br. Devanahalli: 135/9, Next To Corporation Bank, D B Cross, Devanahalli , Bangalore Rural- 562 110, Ph No. 080 27683906 :-** 15296400096456,15296400108244,15296400131576,15296400130792,15296400129224,15296400131733.

**Br. Dommasandra: Khata No. 13 - Gramathana, Dommasandra (Bangalore East), Bidarahalli Hobli, Virgonagar P O, Bangalore- 560 049, Ph No. 080- 29906232 :-** 21656400010322,21656400016147,21656400011874,21656400012161,21656400013219,21656100046592,21656400011882,21656400013441,21656400006908,21656400015644,21656400013904,21656400013458,21656400010983,21656100044134,21656400015404,21656400016253,21656400010991,21656400009555,21656400007369,21656400012112,21656100045503,21656400007971,21656400011866,21656400012211,21656400011320,21656400014340,21656400011957,21656400012559,21656100046618,21656400011791,21656400008425,21656400013185,21656400010900,21656400014613,21656100046840,21656400015438,21656400010918,21656400008094,21656400005074,21656400012443,21656400011403,21656400009654,21656400009381,21656400012518,21656400008912,21656400014829,21656400015644.

**Br. Hirandahalli: Sy. No.81/1, Hirandahalli Main Road, Opp. Aswathakatte, Virgonagar P O, Bangalore- 560 049 Ph No:8867121675 :-** 21636400053761,21636400066037,21636400066862,21636400066557,21636400065187,21636400068298.

**Br. Jangamakote Cross: No. 295, Hosapet Village, Jangamakote Cross, Shidlaghtta Taluk, Chikballapur- 562 102 Ph no. 08158252222 :-** 21696400018909,21696400031183,21696400031258,21696400026332,21696400025938,21696100026723,21696400029971.

**Br. Kunigal: KRS Agrahara, BM Road, Kunigal, Tumkur- 572 130 Ph no. 08132221111 :-** 20706400064539,20706400066336,20706400069603,20706400069645,20706400069637,20706400061956,20706400058226,20706400078489,20706400081103,20706400070700,20706400047245,20706400081632,20706400036495,20706400077861,20706400080246,20706400076376,20706400069447,20706400070759,20706400093454,20706400093462,20706400093470,20706400070650,20706400075295,20706400085948,20706400080600,20706400081640,20706400080287,20706400058697,20706400063119,20706400067730,20706400075790,20706400080436,20706400068811,20706400061501,20706400075907,20706400075915,20706400083554,20706400068092,20706400080444,20706400080436,20706400069447,20706400080246,20706400076277,20706400069264,20706400073522,20706400086706,20706400091425,20706400057988,20706400091714,20706400067235,20706400079255,20706400076798,20706400070543,20706400056014,20706400083869,20706400080998,20706400082333,20706400070460,20706400070569,20706400077390,20706400081079,20706400081632,20706400084958,20706400092530,20706400063119,20706400067730,20706400075709.

**Br. Nelamangala: Paramanna Layout, B H Road, Nelamangala, Bangalore Rural- 562 123 Ph no. 080-27722251 :-** 15536400092736,15536400092561,15536400092587,15536400091571,15536400092231,15536400100927,15536400100968,15536400097099,15536400101438,15536400096463,15536400089070,15536400100299,15536400106742,15536400091423,15536400098584.

**Br. Tumkur: Amogh Mansion, KR Extension, Tumkur-572 101 Ph no. 0816-2255470 :-** 16036400071540,16036400075327,16036400069593,16036400075830,16036100132675,16036400075921,16036400076598,16036400072407,16036400032849.

**Br. Tiptur: 156 & 157 , Opp Janata Deluxe lodge, Vinayaka Nagara, Off B H Road, Tiptur, Tumkur- 572 201 Ph no. 083134250114 :-** 19906400025125,19906400020340,19906400024813,19906400024847,19906400023856,19906400020803,19906400020308,19906400024821.

**Br. Thanisandra : GF, No.89/1, Thanisandra, K Narayanapura Road, Dr.S R K Nagar PO, Bangalore, Karnataka- 560077 :-** 23886400000878,23886400001207,23886400001280,23886400001546,23886400000324.

Bangalore 28-11-2023 Vice President & Zonal Head

ಮೂರು ಖಾಸಗಿ ನರ್ಸಿಂಗ್ ಹೋಂಗಳಿಗೆ ಬೀಗ, ಮೆಡಿಕಲ್ ಸ್ಟೋರ್‌ಗಳಲ್ಲಿ ಶಸ್ತ್ರಚಿಕಿತ್ಸೆ ಕಿಟ್ ಅಕ್ರಮ ಮಾರಾಟ

# ಮಂಡ್ಯ; ದಶಕದಿಂದಲೂ ಹೆಣ್ಣುಭ್ರೂಣ ಹತ್ಯೆ

• ಎಂ.ಎನ್.ಯೋಗೇಶ್

ಮಂಡ್ಯ: ಜಿಲ್ಲೆಯ ಆಲೆಮನೆಯೊಂದರಲ್ಲಿ ಭ್ರೂಣಲಿಂಗ ಪತ್ತೆ ನಡೆಯುತ್ತಿತ್ತು ಎಂಬ ಪ್ರಕರಣ ರಾಜ್ಯದ ಗಮನ ಸೆಳೆದಿದೆ. ಆದರೆ, ಸಕ್ಕರೆ ಜಿಲ್ಲೆಯಲ್ಲಿ ದಶಕಗಳಿಂದಲೂ ಭ್ರೂಣ ಲಿಂಗ ಪತ್ತೆ, ಹೆಣ್ಣುಭ್ರೂಣ ಹತ್ಯೆ ಪ್ರಕರಣಗಳು ಸಾಮಾನ್ಯವಾಗಿದ್ದವು ಎಂಬುದಕ್ಕೆ ನಿದರ್ಶನಗಳಿವೆ.

ನಗರದ ಮಿಮ್ಸ್ ಆಸ್ಪತ್ರೆಯ ಕೂಗಳತೆ ದೂರದಲ್ಲೇ ಇದ್ದ 3 ಖಾಸಗಿ ನರ್ಸಿಂಗ್ ಹೋಮ್‌ಗಳು ಹೆಣ್ಣು ಭ್ರೂಣ ಹತ್ಯೆ ಪ್ರಕರಣದಿಂದಲೇ ಬಾಗಿಲು ಮುಚ್ಚಿವೆ. ವಿವಿಧ ಮೆಡಿಕಲ್ ಸ್ಟೋರ್‌ಗಳಲ್ಲಿ ಭ್ರೂಣಹತ್ಯೆ ಶಸ್ತ್ರಚಿಕಿತ್ಸೆ (ಅಬಾರ್ಷನ್) ಅವಶ್ಯವಿರುವ ಔಷಧ ಕಿಟ್ ಜಿಲ್ಲೆಯಾದ್ಯಂತ ಮೆಡಿಕಲ್ ಸ್ಟೋರ್‌ಗಳಲ್ಲಿ ಅಕ್ರಮವಾಗಿ ಮಾರಾಟವಾಗುತ್ತಿದೆ ಎಂಬ ಮಾಹಿತಿಗಳೂ ಇವೆ.

ಹೆಣ್ಣುಭ್ರೂಣ ಹತ್ಯೆ ಪ್ರಕರಣಗಳು ಜಿಲ್ಲೆಯಲ್ಲಿ 2005ರಿಂದಲೂ ಬೆಳಕಿಗೆ ಬರುತ್ತಿವೆ. ಈ ಅನಿಷ್ಟದ ವಿರುದ್ಧ ವಿವಿಧ ಸಂಘಟನೆಗಳೂ ಹಲವು ಹೋರಾಟ ನಡೆಸಿವೆ. ಆದರೂ ದಂಧೆ ನಿಯಂತ್ರಣಕ್ಕೆ ಬಾರದಿರುವುದು ಆತಂಕ ಸೃಷ್ಟಿಸಿದೆ. ನಗರದ ಆಸ್ಪತ್ರೆ ರಸ್ತೆಯಲ್ಲಿದ್ದ ಜ್ಯೋತಿ ಆಸ್ಪತ್ರೆ, ಸ್ಪಂದನಾ ನರ್ಸಿಂಗ್ ಹೋಮ್‌ಗಳಲ್ಲೂ ಹೆಣ್ಣುಭ್ರೂಣ ಹತ್ಯೆ ಆರೋಪದ ಮೇಲೆಯೇ ಬಾಗಿಲು ಮುಚ್ಚಿವೆ.

2021ರಲ್ಲಿ ವಿವೇಕಾನಂದ ರಸ್ತೆಯಲ್ಲಿದ್ದ 'ನಮ್ಮ ಮನೆ' ನರ್ಸಿಂಗ್ ಹೋಂ ಮೇಲೆ ಪೊಲೀಸರು ದಾಳಿ ನಡೆಸಿ ಶುಶ್ರೂಷಕಿಯೊಬ್ಬರನ್ನು ಬಂಧಿಸಿದ್ದರು. ಆಕೆ ಗ್ರಾಮೀಣ ಮಹಿಳೆಯರನ್ನು ನರ್ಸಿಂಗ್ ಹೋಂಗೆ ಕರೆತಂದು ಭ್ರೂಣಲಿಂಗ ಪರೀಕ್ಷೆ ಮಾಡಿಸುತ್ತಿದ್ದರು ಎಂದು ಪೊಲೀಸರು ಆರೋಪಿಸಿದ್ದರು. ಈ ಘಟನೆಯ ನಂತರ 'ನಮ್ಮ ಮನೆ' ನರ್ಸಿಂಗ್ ಹೋಂ ಕೂಡ ಸ್ಥಗಿತಗೊಂಡಿತ್ತು.

'ಮಂಡ್ಯದ ಆಸ್ಪತ್ರೆ ರಸ್ತೆಯಲ್ಲಿ ಸಾಕಷ್ಟು ಸ್ಕ್ಯಾನಿಂಗ್ ಕೇಂದ್ರ, ಡಯಾಗ್ನೋಸ್ಟಿಕ್ ಕೇಂದ್ರಗಳಿವೆ. ಭ್ರೂಣ ಲಿಂಗ ಪರೀಕ್ಷೆ ನಡೆಯುತ್ತಿರುವ ಆರೋಪ ಸಮಗ್ರ ತನಿಖೆ ನಡೆಸಬೇಕು ಎಂದು ನಾವು ಒತ್ತಾಯ ಮಾಡುತ್ತಲೇ ಬಂದಿದ್ದೇವೆ. ಆದರೆ ಇಲ್ಲಿಯವರೆಗೂ ದಂಧೆ ನಿಲ್ಲಿಸಲು ಏಕೆ ಸಾಧ್ಯವಾಗಿಲ್ಲ, ದಂಧೆಯ ಹಿಂದೆ ಯಾರಿದ್ದಾರೆ' ಎಂದು ಸಿಐಟಿಯು ಸಂಘಟನೆ ನಾಯಕಿ ಸಿ.ಕುಮಾರಿ ಪ್ರಶ್ನಿಸಿದರು.

**ಔಷಧಿ ಕಿಟ್ ಮಾರಾಟ:** ಮೆಡಿಕಲ್ ಸ್ಟೋರ್ ಮಾಲೀಕರೂ ಆಗಿರುವ ಶ್ರೀರಂಗಪಟ್ಟಣ ಪುರಸಭೆ ಸದಸ್ಯರೊಬ್ಬರು ಸಾಮಾನ್ಯ ಸಭೆಯಲ್ಲಿ ಹೆಣ್ಣು ಭ್ರೂಣ ಹತ್ಯೆ ಪ್ರಕರಣದ ಬಗ್ಗೆ ಗಮನ ಸೆಳೆದಿದ್ದರು. 'ಭ್ರೂಣಹತ್ಯೆ ಶಸ್ತ್ರಚಿಕಿತ್ಸೆಗೆ ಅವಶ್ಯವಿರುವ ಔಷಧೀಯ ಕಿಟ್ ಕೊಡುವಂತೆ ಕೇಳಿಕೊಂಡು ಅಪಾರ ಸಂಖ್ಯೆಯ ಜನ ಅಂಗಡಿಗೆ ಬರುತ್ತಾರೆ.

'ವೈದ್ಯರ ಸೂಚನೆ (ಪ್ರಿಸ್ಕ್ರಿಪ್ಷನ್) ಇಲ್ಲದೆ ಶಸ್ತ್ರಚಿಕಿತ್ಸೆ ಕಿಟ್ ಮಾರಾಟ ಮಾಡುವಂತಿಲ್ಲ. ಜಿಲ್ಲೆಯ ಹಲವು ಔಷಧ ಅಂಗಡಿಗಳಲ್ಲಿ ಅಕ್ರಮವಾಗಿ ಕಿಟ್ ಮಾರಾಟವಾಗುತ್ತಿರುವ ಮಾಹಿತಿ ಇದ್ದು, ಈ ಬಗ್ಗೆ ತನಿಖೆ ನಡೆಸಬೇಕು' ಎಂದು ಒತ್ತಾಯಿಸಿದ್ದರು. ಆ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಲಾಗಿತ್ತು' ಎಂದು ಮೂಲಗಳು ತಿಳಿಸಿವೆ. ಪುರಸಭೆ ಸದಸ್ಯರ ಸಂಪರ್ಕಕ್ಕೆ ಸಿಗಲಿಲ್ಲ.

**ಮಳವಳ್ಳಿಯಲ್ಲೂ ದಂಧೆ?:** 'ಬೈಯಪ್ಪನಹಳ್ಳಿ ಠಾಣೆ ಪೊಲೀಸರು ಬಂಧಿಸಿರುವ ಆರೋಪಿ ಶಿವಲಿಂಗೇಗೌಡ ಮಳವಳ್ಳಿ ತಾಲ್ಲೂಕು ಹಾಗೆಪುರದ ನಿವಾಸಿ. ಆತ ಮಳವಳ್ಳಿ ಪಟ್ಟಣದ ಖಾಸಗಿ ನರ್ಸಿಂಗ್ ಹೋಂನಲ್ಲಿ ಕೆಲಸ ಮಾಡುತ್ತಿದ್ದ. ಆತನನ್ನು ಆಸ್ಪತ್ರೆಯಲ್ಲೇ ಬಂಧಿಸಲಾಗಿದ್ದು ವಿಚಾರಣೆಗೆ ಒಳಪಡಿಸಲಾಗಿದೆ. ಮಳವಳ್ಳಿಯಲ್ಲೂ ಭ್ರೂಣಪತ್ತೆ ಪರೀಕ್ಷೆ ನಡೆದಿರುವ ಸಾಧ್ಯತೆ ಇದೆ' ಎಂದು ಲೋಕಾಯುಕ್ತ ಪೊಲೀಸರೊಬ್ಬರು ತಿಳಿಸಿದರು.

'ಪೊಲೀಸರು ನಡೆಸುತ್ತಿರುವ ತನಿಖೆಗೆ ಆರೋಗ್ಯ ಇಲಾಖೆ ಸೇರಿದಂತೆ ಎಲ್ಲಾ ಇಲಾಖೆಯ ಅಧಿಕಾರಿಗಳು ಸಹಕಾರ ನೀಡುತ್ತಿದ್ದಾರೆ. ಗ್ರಾಮೀಣ ಭಾಗದಲ್ಲಿ ಹೆಚ್ಚು ನಿಗಾ ವಹಿಸಲಾಗಿದೆ' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ. ಮೋಹನ್ ಹೇಳಿದರು.

### ಪ್ರಕರಣ ಸಿಐಡಿ ತನಿಖೆಗೆ?

'ಭ್ರೂಣ ಲಿಂಗ ಪರೀಕ್ಷೆ, ಹೆಣ್ಣು ಭ್ರೂಣ ಹತ್ಯೆ ಪ್ರಕರಣಗಳು ಮಂಡ್ಯ, ಮೈಸೂರು, ಬೆಂಗಳೂರು, ರಾಮನಗರ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಪತ್ತೆಯಾಗಿರುವ ಕಾರಣ ಯಾವುದೇ ಒಂದು ಜಿಲ್ಲೆಯ ಪೊಲೀಸರು ಪ್ರತ್ಯೇಕವಾಗಿ ತನಿಖೆ ನಡೆಸಲು ಸಾಧ್ಯವಿಲ್ಲ. ಹೀಗಾಗಿ ಇಡೀ ಪ್ರಕರಣದ ತನಿಖೆಯ ಜವಾಬ್ದಾರಿಯನ್ನು ರಾಜ್ಯ ಸರ್ಕಾರ ಸಿಐಡಿಗೆ ವಹಿಸುವ ಸಾಧ್ಯತೆ ಇದೆ' ಎಂದು ಮೂಲಗಳು ತಿಳಿಸಿವೆ.

### ಗಂಡು ಸಂತಾನಕ್ಕಾಗಿ ಹೆಣ್ಣುಭ್ರೂಣ ಹತ್ಯೆ

'ಗಂಡು ಮಗು ಇಲ್ಲವೆಂದರೆ ವಾರಸುದಾರರು ಯಾರೂ ಇರುವುದಿಲ್ಲ, ತಂದೆ-ತಾಯಿ ಸತ್ತರೆ ಕೊಳ್ಳಿ ಇಡುವವರು ಯಾರೂ ಇಲ್ಲ, ಮುಕ್ತಿ ಸಿಗಬೇಕೆಂದರೆ ಗಂಡು ಸಂತಾನ ಇರಲೇಬೇಕು ಎಂಬ ಮೂಢನಂಬಿಕೆ ವ್ಯಾಪಕವಾಗಿದೆ. ಇದೇ ಕಾರಣಕ್ಕೆ ಲಿಂಗ ಪರೀಕ್ಷೆ ಮಾಡಿಸಿ ಹೆಣ್ಣು ಭ್ರೂಣವನ್ನು ಕಿತ್ತು ಹಾಕಲಾಗುತ್ತಿದೆ. ಸರ್ಕಾರ ಪ್ರಕರಣದ ಸಮಗ್ರ ತನಿಖೆ ನಡೆಸಬೇಕು' ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ದೇವಿ ಒತ್ತಾಯಿಸಿದರು.

ಪ್ರಜಾವಾಣಿ ವಿಶೇಷ

## ಭ್ರೂಣಹತ್ಯೆ: ತನಿಖೆಗೆ ತಂಡ

ಪ್ರಜಾವಾಣಿ ವಾರ್ತೆ


ರಾಜೇಂದ್ರ

ಮೈಸೂರು: 'ಭ್ರೂಣ ಹತ್ಯೆ ಜಾಲದಲ್ಲಿ ಮೈಸೂರಿನ ಆಸ್ಪತ್ರೆಗಳ ಪಾತ್ರದ ಕುರಿತು ವಸ್ತುಸ್ಥಿತಿ ತನಿಖೆಗಾಗಿ ತಂಡ ರಚಿಸಲಾಗುವುದು' ಎಂದು ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ತಿಳಿಸಿದರು.

'ಘಟನೆ ಕುರಿತು ಈಗಾಗಲೇ ಆರೋಗ್ಯ ಇಲಾಖೆ ಅಧಿಕಾರಿಗಳು ಪ್ರಾಥಮಿಕ ವರದಿ ನೀಡಿದ್ದಾರೆ. ನಗರ ಸ್ಥಳೀಯ ಸಂಸ್ಥೆಗಳು, ಪೊಲೀಸರು, ಆರೋಗ್ಯ ಇಲಾಖೆ ಹಾಗೂ ಆಯುಷ್ ಇಲಾಖೆ ಅಧಿಕಾರಿಗಳನ್ನು ಒಳಗೊಂಡ ತಂಡವೊಂದನ್ನು ರಚಿಸಲಾಗುವುದು. ತಂಡವು ಜಿಲ್ಲೆಯ ಪ್ರತಿ ಆಸ್ಪತ್ರೆ, ಕ್ಲಿನಿಕ್‌ಗೆ ಭೇಟಿ ನೀಡಿ ಮಾನ್ಯತೆ, ವೈದ್ಯಕೀಯ ಅರ್ಹತೆ ಮತ್ತಿತರ ದಾಖಲೆಗಳನ್ನು ಪರಿಶೀಲಿಸಲಿದೆ' ಎಂದು ಜಿಲ್ಲಾಧಿಕಾರಿ ಮಂಗಳವಾರ ಸುದ್ದಿಗಾರರಿಗೆ ತಿಳಿಸಿದರು.

'ಆಯುರ್ವೇದ, ಮೂಲವ್ಯಾಧಿ, ಪೈಲ್ಸ್ ಚಿಕಿತ್ಸೆ ಹೆಸರಿನಲ್ಲಿ ಆರಂಭವಾಗುತ್ತಿರುವ ಸಣ್ಣ ಕ್ಲಿನಿಕ್‌ಗಳಲ್ಲಿ ಅನ್ಯ ರೀತಿಯ ಚಟುವಟಿಕೆಗಳು ನಡೆಯುತ್ತಿರುವುದು ಕಂಡುಬಂದಿದೆ. ಈಗ ಆರೋಪ ಕೇಳಿಬಂದಿರುವ ಎರಡು ಕ್ಲಿನಿಕ್‌ಗಳು ಕೆಪಿಎಂಎ ಅಡಿ ಅನುಮತಿ ಪಡೆದಿಲ್ಲ. ಏಪ್ರಿಲ್ ನಂತರ ಅವು ಬಾಗಿಲು ತೆರೆದಿಲ್ಲವೆಂದು ಅಧಿಕಾರಿಗಳು ಹೇಳಿದ್ದಾರೆ. ಅಲ್ಲಿ ಯಾವ ಚಟುವಟಿಕೆಗಳು ನಡೆಯುತ್ತಿದ್ದವು ಎಂಬುದರ ಕುರಿತು ಆರೋಗ್ಯ ಇಲಾಖೆ ಹಾಗೂ ಪೊಲೀಸರು ತನಿಖೆ ನಡೆಸಲಿದ್ದಾರೆ' ಎಂದರು.

## ಕೃಷ್ಣ ಬೈರೇಗೌಡ ಮಾತಿಗೆ ಪಾಟೀಲ ಗರಂ

**ಒಂದನೇ ಪುಟದಿಂದ**

'ಈ ವಿಷಯಕ್ಕೆ ಸಂಬಂಧಿಸಿದಂತೆ ಕಳೆದ ಅಧಿವೇಶನದಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಗಮನ ಸೆಳೆಯಲು ಕಾಮಗಾರಿ ಪೂರ್ಣಗೊಳ್ಳದಿರುವ ಬಗ್ಗೆ ಪ್ರಸ್ತಾಪಿಸಿದ್ದೆ.ಅಂದು ಪ್ರಿಯಾಂಕ್ ಅನುಪಸ್ಥಿತಿಯಲ್ಲಿ ಉತ್ತರ ನೀಡಿದ ಸಚಿವ ಕೃಷ್ಣ ಬೈರೇಗೌಡ, 'ಇಷ್ಟೆಲ್ಲಾ ಗೊತ್ತಿದ್ದರೂ ಕೆಆರ್‌ಐಡಿಎಲ್‌ಗೆ ಏಕೆ ಕಾಮಗಾರಿ ವಹಿಸಿದ್ದೀರಿ' ಎಂದು ಪ್ರಶ್ನಿಸುವ ಮೂಲಕ ನಾನು ಹಣ ಪಡೆದು ಕಾಮಗಾರಿ ವಹಿಸಿದ್ದೇನೆ ಎಂಬ ಅರ್ಥದಲ್ಲಿ ಮಾತನಾಡಿದ್ದು ನನಗೆ ನೋವು ತಂದಿದೆ. ಡಿ. 4ರಿಂದ ಬೆಳಗಾವಿಯಲ್ಲಿ ನಡೆಯುವ ಅಧಿವೇಶನಕ್ಕೆ ಈ ಆರೋಪ ಹೊತ್ತುಕೊಂಡು ಬಂದರೆ, ನನ್ನ ಮೇಲಿನ ಆರೋಪಗಳನ್ನು ಒಪ್ಪಿಕೊಂಡಂತಾಗುತ್ತದೆ. ನೈತಿಕವಾಗಿ ಇದು ಸರಿ ಅಲ್ಲ. ಈ ಬಗ್ಗೆ ತನಿಖೆ ನಡೆಸಬೇಕು. ತಪ್ಪಿತಸ್ಥ ಎಂದು ಕಂಡು ಬಂದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡುತ್ತೇನೆ' ಎಂದು ಪತ್ರದಲ್ಲಿ ಸ್ಪಷ್ಟಪಡಿಸಿದ್ದಾರೆ.

## 'ಸ್ಕ್ಯಾನಿಂಗ್' ಕೊಠಡಿ ಪರಿಶೀಲಿಸಿದ ತಂಡ

### ಭ್ರೂಣಲಿಂಗ ಪತ್ತೆ ನಡೆಯುತ್ತಿದ್ದ ಆಲೆಮನೆಗೆ ಜಿಲ್ಲಾ ಆರೋಗ್ಯಾಧಿಕಾರಿ ಭೇಟಿ

ಪ್ರಜಾವಾಣಿ ವಾರ್ತೆ


ಜಿಲ್ಲಾ ಆರೋಗ್ಯಾಧಿಕಾರಿ, ಉಪ ವಿಭಾಗಾಧಿಕಾರಿ ನೇತೃತ್ವದ ತಂಡ ಆಲೆಮನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿತು

**ಮುಖ್ಯಾಂಶಗಳು**
- 2 ತಿಂಗಳ ಹಿಂದೆಯೇ ಸ್ಕ್ಯಾನಿಂಗ್ ಯಂತ್ರ ವಶ
- ಆಲೆಮನೆಯಲ್ಲಿ ಭ್ರೂಣಲಿಂಗ ಪತ್ತೆ

ಮಂಡ್ಯ: ತಾಲ್ಲೂಕಿನ ಹಾಡ್ಯ ಹಾಗೂ ಹುಳ್ಳೇನಹಳ್ಳಿ ನಡುವಿನ ಆಲೆಮನೆಯಲ್ಲಿ ಭ್ರೂಣಲಿಂಗ ಪರೀಕ್ಷೆ ನಡೆಯುತ್ತಿತ್ತು ಎಂಬ ಆರೋಪದ ಹಿನ್ನೆಲೆಯಲ್ಲಿ ಮಂಗಳವಾರ ಜಿಲ್ಲಾ ಆರೋಗ್ಯಾಧಿಕಾರಿ, ಉಪ ವಿಭಾಗಾಧಿಕಾರಿ, ತಹಶೀಲ್ದಾರ್ ಹಾಗೂ ಲೋಕಾಯುಕ್ತ ಪೊಲೀಸರ ತಂಡ ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿತು.

2 ತಿಂಗಳ ಹಿಂದೆಯೇ ಬೆಂಗಳೂರಿನ ಬೈಯಪ್ಪನಹಳ್ಳಿ ಠಾಣೆ ಪೊಲೀಸರು ಆಲೆಮನೆಗೆ ಭೇಟಿ ನೀಡಿ ಸ್ಕ್ಯಾನಿಂಗ್ ಯಂತ್ರಗಳನ್ನು ವಶಕ್ಕೆ ಪಡೆದಿದ್ದರು. 2 ತಿಂಗಳಿಂದಲೂ ಸ್ಥಳೀಯ ಅಧಿಕಾರಿಗಳು, ಪೊಲೀಸರ ತಂಡ ಆಲೆಮನೆ ಪರಿಶೀಲನೆ ನಡೆಸಿರಲಿಲ್ಲ.

ಕಬ್ಬಿನ ಗದ್ದೆಯ ನಡುವೆ ಇದ್ದ ಆಲೆಮನೆ, ಭ್ರೂಣಲಿಂಗ ಪತ್ತೆ ನಡೆಯುತ್ತಿತ್ತು ಎನ್ನಲಾದ ಅನುಮಾನಾಸ್ಪದ ಕೊಠಡಿಯ ಬಗ್ಗೆ 'ಪ್ರಜಾವಾಣಿ' ಮಂಗಳವಾರ ವರದಿ ಪ್ರಕಟಿಸಿತ್ತು.

ವರದಿಯಿಂದ ಎಚ್ಚೆತ್ತ ಅಧಿಕಾರಿಗಳ ತಂಡ ಮಂಗಳವಾರ ಬೆಳಿಗ್ಗೆ ಸ್ಥಳಕ್ಕೆ ತೆರಳಿ ಪರಿಶೀಲಿಸಿತು. ಆಲೆಮನೆ ಮಾಲೀಕರ ವಿಚಾರಣೆ ನಡೆಸಿತು. ಸ್ಥಳೀಯ ಗ್ರಾಮ ಪಂಚಾಯ್ತಿ ಕಚೇರಿಯಿಂದ ಆಲೆಮನೆಗೆ ಪಡೆದಿರುವ ಅನುಮತಿಯನ್ನೂ ಪರಿಶೀಲಿಸಿತು.

'ಆಲೆಮನೆಯಲ್ಲಿರುವ ಕೊಠಡಿ ಅನುಮಾನಾಸ್ಪದವಾಗಿದ್ದು ಮಾಹಿತಿ ಸಂಗ್ರಹಿಸಲಾಗಿದೆ. ಬೈಯಪ್ಪನಹಳ್ಳಿ ಪೊಲೀಸರು ಬಂದಾಗ ಅವರು ನಮಗೆ ವಿಷಯ ತಿಳಿಸಿರಲಿಲ್ಲ. ಬಂಧಿತ ಆರೋಪಿಗಳಲ್ಲಿ ಮಂಡ್ಯ ಜಿಲ್ಲೆಯವರೂ ಇರುವ ಕಾರಣ ಪರಿಶೀಲಿಸಿದ್ದೇವೆ. 5 ದಿನಗಳಿಂದ ಆಲೆಮನೆ ಕಾರ್ಯ-ಚಟುವಟಿಕೆ ಸ್ಥಗಿತಗೊಂಡಿದೆ. ಈ ಕುರಿತು ಜಿಲ್ಲಾಧಿಕಾರಿಗೆ ವರದಿ ನೀಡಲಾಗುವುದು' ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಮೋಹನ್ ಹೇಳಿದರು.

ವರದಿ ಪರಿಣಾಮ

'ಆಲೆಮನೆ ಚಟುವಟಿಕೆ ಜೊತೆಜೊತೆಗೆ ಭ್ರೂಣಲಿಂಗ ಪತ್ತೆ ಪರೀಕ್ಷೆಯೂ ನಡೆಯುತ್ತಿತ್ತು ಎಂಬ ಮಾಹಿತಿ ಸಿಕ್ಕಿದೆ. ಎರಡು ವರ್ಷಗಳಿಂದ ಮುಕ್ತಾಯವಾಗಿದ್ದ ಆಲೆಮನೆ ಅನುಮತಿಯನ್ನು ಸೆಪ್ಟೆಂಬರ್ ತಿಂಗಳಲ್ಲಿ ಮುಂದುವರಿಸಲಾಗಿದೆ. ಲೋಕಾಯುಕ್ತ ರಾಜ್ಯ ಕಚೇರಿಗೆ ಪ್ರಕರಣದ ವರದಿ ನೀಡಲಾಗುವುದು' ಎಂದು ಲೋಕಾಯುಕ್ತ ಡಿವೈಎಸ್‌ಪಿ ಸುನೀಲ್ ಕುಮಾರ್ ಹೇಳಿದರು.

ಪ್ರಕರಣದ ಪ್ರಮುಖ ಬಂಧಿತ ಆರೋಪಿಗಳು, ಹುಳ್ಳೇನಹಳ್ಳಿಯ ನವೀನ್ ಕುಮಾರ್, ಪಾಂಡವಪುರ ತಾಲ್ಲೂಕು ಸುಂಕಾತಣ್ಣೂರು ಗ್ರಾಮದ ನಯನ್ ಕುಮಾರ್ ಅವರ ಬಗ್ಗೆ ಅಧಿಕಾರಿಗಳು ಸ್ಥಳೀಯರಲ್ಲಿ ವಿಚಾರಿಸಿದರು.

ಇಬ್ಬರೂ ಆರೋಪಿಗಳು ಭಾವ–ಭಾವಮೈದುನರಾಗಿದ್ದು ಹೆಚ್ಚು ಹಣ ಸಂಪಾದಿಸುವ ಉದ್ದೇಶದಿಂದ ಆಲೆಮನೆಯಲ್ಲಿ ಕೊಠಡಿ ಬಾಡಿಗೆ ಪಡೆದು ದಂಧೆ ನಡೆಸುತ್ತಿದ್ದರು. ಚೀನಾದಿಂದ ತರಿಸಿದ್ದ ಅತ್ಯಾಧುನಿಕ ಯಂತ್ರ ಬಳಸಿ ಸರಳ ಪ್ರಕ್ರಿಯೆಯ ಮೂಲಕ ಭ್ರೂಣಲಿಂಗ ಪತ್ತೆ ಮಾಡುತ್ತಿದ್ದರು ಎಂಬ ವಿಷಯ ಗೊತ್ತಾಗಿದೆ ಎಂದು ಅಧಿಕಾರಿಗಳು ತಿಳಿಸಿದರು.

ಬಿಹಾರ ಮೂಲದ ಆಲೆಮನೆ ಕಾರ್ಮಿಕರನ್ನು ಅಧಿಕಾರಿಗಳು ವಿಚಾರಿಸಿದರು. 'ಶನಿವಾರ ಹಾಗೂ ಭಾನುವಾರ ಇಲ್ಲಿಗೆ ಮಹಿಳೆಯರು ಬರುತ್ತಿದ್ದರು' ಎಂದು ಕಾರ್ಮಿಕರು ಮಾಹಿತಿ ನೀಡಿದರು. ಕಾರ್ಮಿಕರೆಲ್ಲರೂ ಭಯಪೀಡಿತರಾಗಿದ್ದು ತಮ್ಮೂರಿಗೆ ತೆರಳಲು ಸಿದ್ಧರಾಗಿದ್ದರು.

## ನೋಟಿಸ್‌ಗೆ ಉತ್ತರ ನೀಡುತ್ತೇವೆ– ಡಿಕೆಶಿ

ಬೆಂಗಳೂರು: 'ನಮ್ಮ ಸರ್ಕಾರದ ಜಾಹೀರಾತಿನಲ್ಲಿ ನಮ್ಮ ಸಾಧನೆಗಳನ್ನು ಹೇಳಿಕೊಂಡಿದ್ದೇವೆಯೇ ಹೊರತು ಮತಯಾಚನೆ ಮಾಡಿಲ್ಲ. ಹೀಗಾಗಿ ಇದು ನೀತಿ ಸಂಹಿತೆ ಉಲ್ಲಂಘನೆ ಆಗುವುದಿಲ್ಲ. ಚುನಾವಣಾ ಆಯೋಗದ ನೋಟಿಸ್‌ಗೆ ಉತ್ತರ ನೀಡುತ್ತೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ತೆಲಂಗಾಣದ ಪತ್ರಿಕೆಗಳಲ್ಲಿ ಕರ್ನಾಟಕ ಸರ್ಕಾರದ ಗ್ಯಾರಂಟಿ ಯೋಜನೆಗಳ ಜಾಹೀರಾತಿಗೆ ಚುನಾವಣಾ ಆಯೋಗ ನೋಟಿಸ್ ನೀಡಿರುವ ಬಗ್ಗೆ ಕೇಳಿದಾಗ ಪ್ರತಿಕ್ರಿಯಿಸಿದ ಅವರು, 'ಜಾಹೀರಾತಿನಲ್ಲಿ ಸರ್ಕಾರದ ಕೆಲಸದ ಬಗ್ಗೆ ಮಾಹಿತಿ ಇದೆ. ಅದರಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕಿ ಎಂದು ಹೇಳಿಲ್ಲ. ಇದು ಉಲ್ಲಂಘನೆ ಹೇಗೆ ಆಗುತ್ತದೆ' ಎಂದರು.

'ನಾವು ಪತ್ರಿಕೆಗಳಲ್ಲಿ ನೀಡುವ ಜಾಹೀರಾತು ಕೆಲವೊಮ್ಮೆ ತೆಲಂಗಾಣ, ತಮಿಳುನಾಡು ಸೇರಿದಂತೆ ಬೇರೆ ರಾಜ್ಯಗಳಿಗೂ ಹೋಗುತ್ತದೆ. ಮತ ಯಾಚನೆ ಮಾಡಿದ್ದರೆ ಆಗ ನಿಯಮ ಉಲ್ಲಂಘನೆ ಆಗುತ್ತಿತ್ತು' ಎಂದರು.

ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಮಾತನಾಡಿ, 'ಕಾನೂನು ಚೌಕಟ್ಟಿನಲ್ಲೇ ಜಾಹೀರಾತು ನೀಡಿದೆ. ನೋಟಿಸ್ ನೀಡಿರುವುದು ಸರಿಯಲ್ಲ. ಚುನಾವಣೆ ಆಯೋಗ ತಪ್ಪು ಮಾಡಿದೆ. ಬಿಜೆಪಿ ಕೂಡ ಇದೇ ರೀತಿ ಜಾಹೀರಾತು ನೀಡಿತ್ತು. ಕರ್ನಾಟಕ ಸರ್ಕಾರ ನೋಟಿಸ್‌ಗೆ ಸೂಕ್ತ ಉತ್ತರ ನೀಡಲಿದೆ' ಎಂದರು.

## ಸುದ್ದಿ 2 ನಿಮಿಷ

### ಸಿ.ಎಂ ಜನಸ್ಪಂದನ ಸ್ವಾಗತಾರ್ಹ ಎಚ್‌.ಡಿ.ಕುಮಾರಸ್ವಾಮಿ


ಮಡಿಕೇರಿ: 'ನಾನು ಎಲ್ಲವನ್ನೂ ಟೀಕಿಸುವುದಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯ ಈಗಲಾದರೂ ಜನಸ್ಪಂದನ ಕಾರ್ಯಕ್ರಮ ಮಾಡಿರುವುದನ್ನು ಅಭಿನಂದಿಸುತ್ತೇನೆ. ಈಗ ಅವರಿಗೆ ರಾಜ್ಯದ ಜನತೆಯ ವಾಸ್ತವದ ಸ್ಥಿತಿ ಅರ್ಥವಾಗಿರಬಹುದು' ಎಂದು ಜೆಡಿಎಸ್ ಅಧ್ಯಕ್ಷ ಎಚ್‌.ಡಿ.ಕುಮಾರಸ್ವಾಮಿ ಹೇಳಿದರು.

ಇಲ್ಲಿಗೆ ಸಮೀಪದ ಹಾಕತ್ತೂರಿನಲ್ಲಿ ಮಂಗಳವಾರ ಅವರು ಸುದ್ದಿಗಾರರೊಂದಿಗೆ ಮಾತನಾಡಿ, 'ನಾನು ಜನತಾ ದರ್ಶನ ಮಾಡಿದಾಗ, ಬಿಜೆಪಿಯ ಆರ್.ಅಶೋಕ ಜಿಲ್ಲಾಧಿಕಾರಿಗಳ ನಡೆ ಹಳ್ಳಿಗಳ ಕಡೆಗೆ ಮಾಡಿದಾಗ ಇದ್ದ ಸಮಸ್ಯೆ ಈಗಲೂ ಮುಂದುವರಿದಿವೆ. ಅಧಿಕಾರಿಗಳ ಕಾರ್ಯವೈಖರಿ ಸಿದ್ದ-ರಾಮಯ್ಯಗೆ ಅರ್ಥವಾಗಿರಬಹುದು ಎಂದುಕೊಂಡಿದ್ದೇನೆ' ಎಂದು ತಿಳಿಸಿದರು.

'ಬರಗಾಲದ ಸ್ಥಿತಿಯಲ್ಲಿ ಶಾಸಕರಿಗೆ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ನೀಡಿ ಸಂಪುಟ ದರ್ಜೆ ಸ್ಥಾನಮಾಡ ನೀಡುತ್ತಿರುವುದು ಎಷ್ಟು ಸರಿ. ಸಂಪುಟ ದರ್ಜೆ ನೀಡಲು ಆಗುವಷ್ಟು ಖರ್ಚನ್ನು ಕಾಂಗ್ರೆಸ್ ಪಕ್ಷ ಭರಿಸುವುದಾದರೆ ಸರಿ. ಅದನ್ನು ಬಿಟ್ಟು ಜನರ ಹಣದಲ್ಲೇ ಈಗ ಮಾಡಿದಂತೆ ಸಚಿವರಿಗೆಲ್ಲ ಹೊಸ ಕಾರು, ಮನೆ ದುರಸ್ತಿ ಮಾಡುವುದು ಸರಿಯಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ಆಲೆಮನೆಯಲ್ಲಿ ಭ್ರೂಣ ಲಿಂಗ ಪತ್ತೆಯಾದ ಪ್ರಕರಣದಲ್ಲಿನ ಆರೋಪಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಪ್ರತಿಪಾದಿಸಿದರು.

### ಕೆಲವೆಡೆ ಗುಡುಗು ಸಹಿತ ಮಳೆ



ಹುಬ್ಬಳ್ಳಿ: ಬಾಗಲಕೋಟೆ, ವಿಜಯಪುರ, ಉತ್ತರ ಕನ್ನಡ, ಗದಗ ಜಿಲ್ಲೆಯ ಕೆಲವೆಡೆ ಮಂಗಳವಾರ ಮಳೆಯಾಗಿದೆ.

ಬಾಗಲಕೋಟೆ ಜಿಲ್ಲೆಯ ವಿವಿಧೆಡೆ ಸಂಜೆ ಗುಡುಗು ಸಹಿತ ಮಳೆಯಾಗಿದೆ. ಮುಧೋಳ, ಬೀಳಗಿ, ಬನಹಟ್ಟಿ, ಮಹಾಲಿಂಗಪುರ, ತೇರದಾಳ ಸೇರಿದಂತೆ ವಿವಿಧೆಡೆ ಕೆಲಕಾಲ ಮಳೆಯಾಯಿತು.

ವಿಜಯಪುರ ನಗರ ವ್ಯಾಪ್ತಿಯಲ್ಲಿ ಗುಡುಗು, ಸಿಡಿಲು ಸಹಿತ ಮಳೆಯಾಗಿದೆ. ಜಿಲ್ಲೆಯ ಇಂಡಿ ಪಟ್ಟಣದಲ್ಲೂ ಕೆಲ ಹೊತ್ತು ಮಳೆಯಾಗಿದೆ.

ಗದಗ ಜಿಲ್ಲೆ ಲಕ್ಷ್ಮೇಶ್ವರ ತಾಲ್ಲೂಕಿನ ಲಕ್ಷ್ಮೇಶ್ವರ ಪಟ್ಟಣ, ಶಿಗ್ಲಿ, ಗೊಜನೂರಿನಲ್ಲಿ ಮತ್ತು ಉತ್ತರ ಕನ್ನಡ ಜಿಲ್ಲೆ ಜೊಯಿಡಾ ತಾಲ್ಲೂಕಿನ ಕುಂಬಾರವಾಡಾ ಭಾಗದಲ್ಲಿ ಮಳೆ ಸುರಿಯಿತು.

## ಹೊಸ ವಿಶ್ವವಿದ್ಯಾಲಯಕ್ಕೆ ₹342 ಕೋಟಿ: ಶಿಫಾರಸು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ವಿಶ್ವವಿದ್ಯಾಲಯದ ಸ್ಥಾಪನೆ ಹಾಗೂ ಅಭಿವೃದ್ಧಿಗೆ ಸರ್ಕಾರ ಐದು ವರ್ಷಗಳ ಅವಧಿಗೆ ಕನಿಷ್ಠ ₹342 ಕೋಟಿ ನೀಡಬೇಕು ಎಂದು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಸಮಿತಿ ಶಿಫಾರಸು ಮಾಡಿದೆ.

ಉನ್ನತ ಶಿಕ್ಷಣದ ಪ್ರಗತಿ ಕುರಿತು ಪರಿಶೀಲಿಸಲು ಕೆಲ ತಿಂಗಳ ಹಿಂದೆ ಉನ್ನತ ಶಿಕ್ಷಣ ಪರಿಷತ್ ಶಿಕ್ಷಣ ತಜ್ಞರನ್ನು ಒಳಗೊಂಡ ಸಮಿತಿ ರಚಿಸಿತ್ತು.

ಒಂದು ಹೊಸ ವಿ.ವಿ ಸ್ಥಾಪಿಸಲು 100ರಿಂದ 200 ಎಕರೆ ಭೂಮಿ ನೀಡಬೇಕು. ರಾಜ್ಯದಲ್ಲಿ ಸ್ಥಾಪಿಸುವ ಯಾವುದೇ ವಿ.ವಿಗಳಿಗೆ 10 ಪ್ರಾಧ್ಯಾಪಕರು, 20 ಸಹ ಪ್ರಾಧ್ಯಾಪಕರು ಹಾಗೂ 40 ಸಹಾಯಕ ಪ್ರಾಧ್ಯಾಪಕರು ಬೇಕು. ಕನಿಷ್ಠ 25 ವಿಭಾಗ ಒಳಗೊಂಡಿರಬೇಕು. ಹಾಗಾಗಿ, ಹೊಸ ವಿ.ವಿಗಳಲ್ಲಿ ಬೋಧಕ, ಬೋಧಕೇತರ ಸಿಬ್ಬಂದಿ ನೇಮಕಾತಿ, ವೇತನ–ಭತ್ಯೆ, ಕಟ್ಟಡಗಳ ನಿರ್ಮಾಣ, ಪೀಠೋಪಕರಣ, ಮೂಲಸೌಕರ್ಯ ಸೇರಿದಂತೆ 5 ವರ್ಷದವರೆಗೆ ಅಗತ್ಯ ಅನುದಾನ ನೀಡಬೇಕು. ಅದಕ್ಕಾಗಿ ಪ್ರತಿ ವಿಶ್ವವಿದ್ಯಾಲಯಕ್ಕೂ ಭೂಮಿ ಹೊರತುಪಡಿಸಿ ₹342 ಕೋಟಿ ನಿಗದಿ ಮಾಡಬೇಕು ಎಂದು ಶಿಫಾರಸು ಮಾಡಿದೆ.

ವರದಿಯನ್ನು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಶೀಘ್ರ ಸಿ.ಎಂಗೆ ಸಲ್ಲಿಸಲಿದ್ದಾರೆ. ಕಳೆದ ವರ್ಷ ಸ್ಥಾಪಿಸಿದ್ದ 7 ಹೊಸ ವಿ. ವಿಗಳ ಸ್ಥಿತಿಗತಿ ಕುರಿತು ವರದಿ ಸಿದ್ಧಪಡಿಸಲು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದಾರೆ. ಜತೆಗೆ, ಕಳೆದ ವರ್ಷ ಸ್ಥಾಪಿಸಿದ್ದ ಚಾಮರಾಜನಗರ, ಹಾಸನ, ಮಂಡ್ಯ, ಬೀದರ್, ಕೊಡಗು, ಕೊಪ್ಪಳ, ಬಾಗಲಕೋಟೆ, ಹಾವೇರಿ ಸೇರಿ ಏಳು ಹೊಸ ವಿಶ್ವವಿದ್ಯಾಲಯಗಳ ಸ್ಥಿತಿಗತಿ ಕುರಿತು ವಿವರವಾದ ವರದಿ ಸಿದ್ಧಪಡಿಸಲು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದ್ದಾರೆ.

## 600 ಪುಟಗಳ ದಾಖಲೆ ಸಲ್ಲಿಸಿದ ಕೆಂಪಣ್ಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿ ವಿವಿಧ ಇಲಾಖೆಗಳ ಕಾಮಗಾರಿಗಳಲ್ಲಿ ಶೇಕಡ 40ರಷ್ಟು ಕಮಿಷನ್ ಪಡೆಯಲಾಗುತ್ತಿತ್ತು ಎಂಬ ಆರೋಪಕ್ಕೆ ಸಂಬಂಧಿಸಿದಂತೆ ರಾಜ್ಯ ಗುತ್ತಿಗೆದಾರರ ಸಂಘವು ನ್ಯಾಯಮೂರ್ತಿ ಎಚ್‌.ಎನ್. ನಾಗಮೋಹನ್ ದಾಸ್ ನೇತೃತ್ವದ ಆಯೋಗಕ್ಕೆ ಮಂಗಳವಾರ ದೂರು ದಾಖಲಿಸಿದೆ.

ಇತರ ಪದಾಧಿಕಾರಿಗಳೊಂದಿಗೆ ನಿಯೋಗದಲ್ಲಿ ತೆರಳಿ ನಾಗಮೋಹನ್ ದಾಸ್ ಅವರನ್ನು ಭೇಟಿ ಮಾಡಿದ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ. ಕೆಂಪಣ್ಣ, ದೂರು ಮತ್ತು 600ಕ್ಕೂ ಹೆಚ್ಚು ಪುಟಗಳಷ್ಟು ದಾಖಲೆಗಳನ್ನು ಸಲ್ಲಿಸಿದರು.

'ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದ ಅವಧಿಯಲ್ಲಿ ಕಾಮಗಾರಿಗಳಲ್ಲಿ ಶೇ 40ರಷ್ಟು ಕಮಿಷನ್ ಪಡೆಯಲಾಗುತ್ತಿದೆ' ಎಂದು ಕೆಂಪಣ್ಣ ಅವರು ಪ್ರಧಾನಿ ನರೇಂದ್ರ ಮೋದಿ, ರಾಜ್ಯಪಾಲರು ಹಾಗೂ ಅಂದಿನ ಮುಖ್ಯಮಂತ್ರಿಯವರಿಗೆ ದೂರು ಸಲ್ಲಿಸಿದ್ದರು. ಅವರ ದೂರೂ ಸೇರಿದಂತೆ ಹಲವು ಅಂಶಗಳ ಕುರಿತು ತನಿಖೆಗಾಗಿ ಆಯೋಗವನ್ನು ನೇಮಿಸಲಾಗಿದೆ.

ದೂರು ಸಲ್ಲಿಸಿದ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಕೆಂಪಣ್ಣ, 'ವಿವಿಧ ಇಲಾಖೆಗಳ ಕಾಮಗಾರಿಗಳಲ್ಲಿನ ಭ್ರಷ್ಟಾಚಾರದ ಕುರಿತು ದಾಖಲೆ ಸಹಿತ ದೂರು ಸಲ್ಲಿಸಿದ್ದೇವೆ. ನಮ್ಮ ಬಳಿ ಲಭ್ಯವಿರುವ ದಾಖಲೆಗಳನ್ನು ಆಯೋಗಕ್ಕೆ ಹಸ್ತಾಂತರಿಸಿದ್ದೇವೆ' ಎಂದರು.

ಆಯೋಗದ ವಿಚಾರಣೆ ವೇಳೆಯೂ ಸಾಕ್ಷ್ಯಗಳನ್ನು ಒದಗಿಸಲಾಗುವುದು ಎಂದು ತಿಳಿಸಿದರು.

'ಬಿಜೆಪಿ ನೇತೃತ್ವದ ಹಿಂದಿನ ಸರ್ಕಾರದಲ್ಲಿ ಇದ್ದಂತೆ ಕಾಂಗ್ರೆಸ್ ನೇತೃತ್ವದ ಈಗಿನ ಸರ್ಕಾರದಲ್ಲೂ ಭ್ರಷ್ಟಾಚಾರವಿದೆ. ಈಗ ಕೆಲವು ಇಲಾಖೆಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಕುರಿತೂ ಆಯೋಗಕ್ಕೆ ದಾಖಲೆ ಸಲ್ಲಿಸಿದ್ದೇವೆ' ಎಂದು ಕೆಂಪಣ್ಣ ಹೇಳಿದರು.

ರಾಜ್ಯ ಗುತ್ತಿಗೆದಾರರ ಸಂಘದ ಕಾರ್ಯಾಧ್ಯಕ್ಷರಾದ ಮಂಜುನಾಥ್, ಸಂಕಾಗೌಡಶಾನಿ, ಉಪಾಧ್ಯಕ್ಷ ಬಿ.ಸಿ. ದಿನೇಶ್, ಪ್ರಧಾನ ಕಾರ್ಯದರ್ಶಿ ಜಿ.ಎಂ. ರವೀಂದ್ರ ನಿಯೋಗದಲ್ಲಿದ್ದರು.

**ತನಿಖೆಗೆ ಸಜ್ಜು:** ದೂರುಗಳ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ನಾಗಮೋಹನ್ ದಾಸ್, 'ಆನ್‌ಲೈನ್ ಮೂಲಕ ಹಾಗೂ ನೇರವಾಗಿ ದೂರುಗಳು ಬಂದಿವೆ. ಆರೋಪಗಳಲ್ಲಿ ಮೇಲ್ನೋಟಕ್ಕೆ ಸತ್ಯಾಂಶವಿದೆಯೇ ಎಂಬುದನ್ನು ಪರಿಶೀಲಿಸಲಾಗುವುದು. ಆ ಬಳಿಕ ವಿಚಾರಣೆ ಆರಂಭಿಸಲಾಗುವುದು' ಎಂದರು.

ಆಯೋಗವು ಆನ್‌ಲೈನ್ ಮೂಲಕ ಹಾಗೂ ನೇರವಾಗಿ ದೂರು ಸಲ್ಲಿಸಲು ಅವಕಾಶ ನೀಡಿದೆ. ದೂರು ಸಲ್ಲಿಸಲು ನೀಡಿರುವ ಗಡುವು ಬುಧವಾರ ಮುಕ್ತಾಯವಾಗಲಿದೆ.

### 'ಅಂಬಿಕಾಪತಿ ಸಾವಿಗೆ ಶಾಸಕರ ಒತ್ತಡ ಕಾರಣ'

'ರಾಜ್ಯ ಗುತ್ತಿಗೆದಾರರ ಸಂಘದ ಉಪಾಧ್ಯಕ್ಷರಾಗಿದ್ದ ಆರ್. ಅಂಬಿಕಾಪತಿ ಅವರ ಮೇಲೆ ಮಾಜಿ ಸಚಿವರೂ ಆಗಿರುವ ಹಾಲಿ ಶಾಸಕರೊಬ್ಬರು ಮತ್ತು ಕೆಲವು ಅಧಿಕಾರಿಗಳು ಒತ್ತಡ ಹೇರುತ್ತಿದ್ದರು. ಮಾಜಿ ಸಚಿವರ ಕಿರುಕುಳವೇ ಅವರ ಸಾವಿಗೆ ಕಾರಣ' ಎಂದು ಡಿ.ಕೆಂಪಣ್ಣ ಆರೋಪಿಸಿದರು.

'ಅಂಬಿಕಾಪತಿ ಯಾವುದೇ ಅವ್ಯವಹಾರದಲ್ಲಿ ಭಾಗಿಯಾಗಿರಲಿಲ್ಲ. ಆದರೆ, ಅವರ ವಿರುದ್ಧ ದುರುದ್ದೇಶದಿಂದ ಆರೋಪ ಮಾಡಲಾಗಿತ್ತು. ಆದಾಯ ತೆರಿಗೆ ಅಧಿಕಾರಿಗಳು ದಾಳಿಮಾಡಿದ ಬಳಿಕ ಒತ್ತಡಕ್ಕೆ ಒಳಗಾಗಿದ್ದರು' ಎಂದರು.

## ಸಾರ್ವಜನಿಕ ವಾಹನಗಳಿಗೆ ಪ್ಯಾನಿಕ್ ಬಟನ್: ಡಿ.1ರಿಂದ ಜಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರ್ವಜನಿಕ ಸೇವಾ ವಾಹನಗಳಿಗೆ ವೆಹಿಕಲ್ ಲೊಕೇಶನ್ ಟ್ರ್ಯಾಕಿಂಗ್ (ವಿಎಲ್‌ಟಿ) ಡಿವೈಸ್ ಮತ್ತು ಎಮರ್ಜೆನ್ಸಿ ಪ್ಯಾನಿಕ್ ಬಟನ್ ಅಳವಡಿಸುವ ಯೋಜನೆ ರಾಜ್ಯದಲ್ಲಿ ಡಿ.1ರಿಂದ ಜಾರಿಗೆ ಬರಲಿದೆ.

ಒಂದು ವರ್ಷದ ಒಳಗೆ ವಾಹನಗಳು ಈ ಸಾಧನಗಳನ್ನು ಅಳವಡಿಸಬೇಕು ಎಂದು ಸಾರಿಗೆ ಇಲಾಖೆ ಹೊರಡಿಸಿದ ಆದೇಶದಲ್ಲಿ ಸೂಚಿಸಿದೆ..

ವೆಹಿಕಲ್ ಲೊಕೇಶನ್ ಟ್ರ್ಯಾಕಿಂಗ್ ಡಿವೈಸ್ ಮತ್ತು ಎಮರ್ಜೆನ್ಸಿ ಪ್ಯಾನಿಕ್ ಬಟನ್ ಸಾಧನಗಳಿಗೆ ಸ್ಪರ್ಧಾತ್ಮಕ ದರ ₹ 7599 (ಜಿಎಸ್‌ಟಿ ಬಿಟ್ಟು) ನಿಗದಿಪಡಿಸಲಾಗಿದೆ. ಅರ್ಹ ಕಂಪನಿಗಳು ಈ ದರದಲ್ಲಿ ಸಾಧನಗಳನ್ನು ಒದಗಿಸಬೇಕು. ಮಹಿಳೆಯರು, ಮಕ್ಕಳು ಸೇರಿದಂತೆ ಎಲ್ಲ ಪ್ರಯಾಣಿಕರ ಸುರಕ್ಷತೆಗಾಗಿ ಇದನ್ನು ಅಳವಡಿಸಿಕೊಳ್ಳಬೇಕಿದೆ. ಇವಲ್ಲದೇ ರಾಷ್ಟ್ರೀಯ ರಹದಾರಿ ಹೊಂದಿರುವ ಸರಕು ಸಾಗಾಣಿಕ ವಾಹನಗಳು ಕೂಡ ವಿಎಲ್‌ಟಿ ಮತ್ತು ಪ್ಯಾನಿಕ್ ಅಳವಡಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಲಾಗಿದೆ. 2024ರ ನ.30ರ ವರೆಗೆ ಈ ಸಾಧನ ಅಳವಡಿಸಿಕೊಳ್ಳಲು ಅವಕಾಶ ನೀಡಲಾಗಿದೆ.

ಹಳದಿ ನಂಬರ್‌ಪ್ಲೇಟ್ ಹೊಂದಿರುವ ಟ್ಯಾಕ್ಸಿಗಳು, ಕ್ಯಾಬ್‌ಗಳು, ಖಾಸಗಿ ಬಸ್‌ಗಳು, ನ್ಯಾಷನಲ್ ಪರ್ಮಿಟ್ ಹೊಂದಿರುವ ಲಾರಿಗಳು ಈ ಆದೇಶದ ಅಡಿಯಲ್ಲಿ ಬರುತ್ತವೆ. ಹಳದಿ ನಂಬರ್ ಪ್ಲೇಟ್ ಹೊಂದಿದ್ದರೂ ಸ್ಟೇಟ್ ಪರ್ಮಿಟ್ ಇರುವ ಗೂಡ್ಸ್ ವಾಹನಗಳಿಗೆ ಇದು ಅನ್ವಯವಾಗುವುದಿಲ್ಲ ಎಂದು ಸಾರಿಗೆ ಇಲಾಖೆಯ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
**ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ**
ಆರೋಗ್ಯ ಸೌಧ, 4ನೇ ಮಹಡಿ, 1ನೇ ಅಡ್ಡರಸ್ತೆ, ಮಾಗಡಿ ರಸ್ತೆ, ಬೆಂಗಳೂರು–560 023
ದೂರವಾಣಿ: 080-2955 7021, ಇ–ಮೇಲ್: pdksaps@gmail.com
ಸಂಖ್ಯೆ : ಕೆಎಸ್‌ಎಪಿಎಸ್/ಪಿಆರ್‌ಸಿ/09/2023–24 ದಿನಾಂಕ :24.11.2023
**ಇ–ಸಂಗ್ರಹಣ ವೇದಿಕೆ ಮೂಲಕ ಟೆಂಡರ್ (ದ್ವಿಲಕೋಟೆ) ಕಾಲ್–2 ಆಹ್ವಾನ ಪ್ರಕಟಣೆ**
ವಿವಿಧ ಬಗೆಯ DBS Collection Kit ಗಳನ್ನು ಸರಬರಾಜು ಮಾಡುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ (ದ್ವಿಲಕೋಟೆ) ಕಾಲ್–2 ಕರೆಯಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : **08.12.2023 ರ ಸಂಜೆ 5.30 ಗಂಟೆಯವರೆಗೆ.** ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ ವೆಬ್‌ಸೈಟ್ https://kppp.karnataka.gov.in
ಸಹಿ/– ಯೋಜನಾ ನಿರ್ದೇಶಕರು
ಕರ್ನಾಟಕ ರಾಜ್ಯ ಏಡ್ಸ್ ಪ್ರಿವೆನ್‌ಷನ್ ಸೊಸೈಟಿ
ವಾಸಾಸಂಇ/ವಾಪ್ರ/ಜಿಎ/2309/2023–24

Bharat Petroleum IndianOil HP
**ಸೂಚನೆ**
ಈ ಪ್ರಕಟಣೆ 11–ನವೆಂಬರ್–2023 ರಂದು ಈ ಪತ್ರಿಕೆಯಲ್ಲಿ ಪ್ರಕಟವಾದ ಡ್ರಾ/ಮರು–ಡ್ರಾ ನೋಟೀಸ್‌ಗೆ ಸಂಬಂಧಿಸಿದಂತೆ. ತಾಂತ್ರಿಕ ದೋಷದಿಂದಾಗಿ ಸ್ಥಳ: ತೂಗಾವ್ ಹಲ್ಸಿ ಜಿಲ್ಲೆ: ಬೀದರ್, ವರ್ಗ: ಎಸ್‌ಸಿ ಸ್ಥಳಕ್ಕೆ ಸೂಚಿತ ದಿನಾಂಕದಂದು ಮರು ಡ್ರಾ ಮಾಡಲಾಗಲಿಲ್ಲ, ಈ ಸ್ಥಳಕ್ಕೆ ಮರು ಡ್ರಾಗಾಗಿ ಪರಿಷ್ಕೃತ ದಿನಾಂಕವನ್ನು ನಂತರ ಪ್ರಕಟಿಸಲಾಗುವುದು.

**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಕುಮಟಾ ಉತ್ತರ ಕನ್ನಡ ಜಿಲ್ಲೆ**
**ಇ–ಟೆಂಡರ ಪ್ರಕಟಣೆ**
2022–23 ನೇ ಸಾಲಿಗೆ ಕಾರವಾರ ಶೈಕ್ಷಣಿಕ ಜಿಲ್ಲೆಯ 08 ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ (KPS) ಯಂತ್ರೋಪಕರಣಗಳು ಮತ್ತು ಸಾಧನಾ ಸಾಮಗ್ರಿಗಳಾದ Mini PC's, LAPTOP, 3 KV ONLINE UPS WITH BATTERY, 2 KV ONLINE UPS WITH BATTERY, 1 KV ONLINE UPS WITH BATTERY, LED PROJECTOR, INTER ACTIVE PANEL BOARD ಖರೀದಿಸಲು ಒಟ್ಟು **ರೂ 51,18,000.00** (ಐವತ್ತೊಂದು ಲಕ್ಷ ಹದಿನೆಂಟು ಸಾವಿರ ರೂಪಾಯಿಗಳು) ಇ.ಎಂ.ಡಿ **2.5%** ರಂತೆ ಒಟ್ಟು ಮೊತ್ತ: **ರೂ. 1,27,950.00** (ಒಂದು ಲಕ್ಷ ಇಪ್ಪತ್ತೇಳು ಸಾವಿರ ಒಂಬೈನೂರ ಐವತ್ತು ರೂಪಾಯಿಗಳು) ನಿಗದಿಪಡಿಸಿದ್ದು, ಇ–ಪ್ರೊಕ್ಯುರಮೆಂಟ್ ಮುಖಾಂತರ **ITEM WISE** ಮರು ಅಲ್ಪಾವದಿ ಇ–ಟೆಂಡರ ಆಹ್ವಾನಿಸಲಾಗಿದೆ. ಟೆಂಡರ್ **ದಿನಾಂಕ: 28/11/2023** ರಿಂದ ಕೊನೆಯ **ದಿನಾಂಕ: 05/12/2023**. ಹೆಚ್ಚಿನ ಮಾಹಿತಿಗಳನ್ನು **https://kppp.karnataka.gov.in** ನಲ್ಲಿ ಪ್ರಕಟಿಸಿದಂತೆ ವಿವರಗಳನ್ನು ಖಚಿತಪಡಿಸಿಕೊಂಡು ಇ–ಟೆಂಡರನಲ್ಲಿ ಭಾಗವಹಿಸಬಹುದು.
**Tender Reference No : DPI/2023-24/IND0055/CALL-2**
ಸಹಿ/–ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ
ಪ್ರಾಚಾರ್ಯರು ಡಯಟ್ ಕುಮಟಾ ಉ.ಕ.
DIPR/KWR/KSMCA/397/23-24 dt. 28.11.23

**MSIL ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್**
ಗ್ರಾಹಕರ ಉತ್ಪನ್ನಗಳ ವಿಭಾಗ, ಎಂಎಸ್‌ಐಎಲ್ ಹೌಸ್, ನಂ. 36,
ಕನ್ನಿಂಗ್‌ಹ್ಯಾಂ ರಸ್ತೆ , ಬೆಂಗಳೂರು – 560 052.
ಸಂ: ಎಂಎಸ್‌ಐಎಲ್/ಸಿಪಿಡಿ/01/2023–24 ದಿನಾಂಕ: 29.11.2023
**ಇ–ಟೆಂಡರ್ ಪ್ರಕಟಣೆ**
ಮೈಸೂರ್ ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್, ವಿವಿಧ ಉತ್ಪನ್ನಗಳು ಮತ್ತು ಸೇವೆಗಳನ್ನು ಮಾರ್ಕೆಟಿಂಗ್ ಮಾಡುವಲ್ಲಿ ತೊಡಗಿಸಿಕೊಂಡಿರುವ ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆಯಾಗಿದೆ. ಈಗ ಎಂಎಸ್‌ಐಎಲ್ ಬ್ರಾಂಡ್ ಹೆಸರಿನಲ್ಲಿ ಪ್ಯಾಕ್‌ಮಾಡಿದ ಕುಡಿಯುವ ನೀರನ್ನು ತಯಾರಿಸಿ ಸರಬರಾಜು ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಿದೆ. ಟೆಂಡರ್‌ಗೆ ಸಂಬಂಧಪಟ್ಟ ದಸ್ತಾವೇಜುಗಳು ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ **https://kppp.karnataka.gov.in** ನಲ್ಲಿ **ದಿನಾಂಕ 29.11.2023 ರಿಂದ 14.12.2023 ಮಧ್ಯಾಹ್ನ 3.30 ಗಂಟೆವರೆಗೆ** ಲಭ್ಯವಿದೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 14.12.2023 ಮಧ್ಯಾಹ್ನ 3.30 ಗಂಟೆವರೆಗೆ.** ಬಿಡ್ ಪೂರ್ವ ಸಭೆ **ದಿನಾಂಕ: 07.12.2023.**
ಸಹಿ/-ಮುಖ್ಯ ಪ್ರಧಾನ ವ್ಯವಸ್ಥಾಪಕರು, (ಗ್ರಾಹಕರ ಉತ್ಪನ್ನಗಳ ವಿಭಾಗ)

**ಉಡುಪಿ ನಿರ್ಮಿತಿ ಕೇಂದ್ರ**
ಎ.ಎಲ್.ಎನ್. ಲೇಔಟ್, 4ನೇ ಅಡ್ಡರಸ್ತೆ, ಮಣಿಪಾಲ, ಉಡುಪಿ ಜಿಲ್ಲೆ–576104.
ದೂ: 0820–2574900, udupinirmithikendra@gmail.com
ಸಂ: ಉನಿಕೇ/ದರಪಟ್ಟಿ/2023–24/1718 ದಿನಾಂಕ: 27.11.2023
**ದರ ಪಟ್ಟಿ ಆಹ್ವಾನ ಪ್ರಕಟನೆ**
ಉಡುಪಿ ಜಿಲ್ಲೆಯ ಬ್ರಹ್ಮಾವರ ತಾಲೂಕಿನ ನೀಲಾವರ ಗ್ರಾಮದಲ್ಲಿ ಶ್ರೀ ವಿಶ್ವೇಶತೀರ್ಥ ಶ್ರೀಪಾದರ (ಶ್ರೀ ಪೇಜಾವರ ಸ್ವಾಮೀಜಿ) ಸ್ಮರಣಾರ್ಥ 'ಸ್ಮೃತಿ ವನ' ನಿರ್ಮಾಣ ಕಾಮಗಾರಿಯಲ್ಲಿನ ಈ ಕೆಳಗಿನ ಅಂಶಕ್ಕೆ ದರಪಟ್ಟಿಯನ್ನು ಆಹ್ವಾನಿಸಲಾಗಿದೆ. ದರಪಟ್ಟಿಯನ್ನು **ದಿನಾಂಕ: 04–12–2023 ಅಪರಾಹ್ನ 4.00** ಗಂಟೆಯೊಳಗೆ ಯೋಜನಾ ನಿರ್ದೇಶಕರು, ಉಡುಪಿ ನಿರ್ಮಿತಿ ಕೇಂದ್ರ, ಎ.ಎಲ್.ಎನ್. ಲೇಔಟ್, 4ನೇ ಅಡ್ಡರಸ್ತೆ, ಅನಂತನಗರ, ಮಣಿಪಾಲ–576104 ಇಲ್ಲಿಗೆ ಅಥವಾ **udupinirmithikendra@gmail.com** ಮೂಲಕ ಸಲ್ಲಿಸುವುದು. ಹೆಚ್ಚಿನ ಮಾಹಿತಿಗಾಗಿ ಕಛೇರಿ **ದೂರವಾಣಿ ಸಂಖ್ಯೆ: 0820–2574900** ಇದಕ್ಕೆ ಸಂಪರ್ಕಿಸುವುದು.

| Sl.No | Item | Unit Rate per |
|---|---|---|
| 1 | Proposed making of clay molding with expert Artist, initially the 3D modeling is transferred to clay molding with a lot of skill and supervision the fine and minute work to be carried out to a desired design as per the model | Rmt |
| 2 | Proposed Fiber mould casting of finalized clay sculpture wok including cost of fiber bracing. Artist work etc complete. | Rmt |
| 3 | Proposed final brass metal casting to the fiber mould at metal casting factory including cost of labour, materials, Transportation / Handling etc complete. | Rmt |
| 4 | Proposed installation of the brass metal sculpture. Including cost of bracings, welding charges, buffing, and polishing to the desired finish as per the design | Rmt |

ಸಹಿ/– ಯೋಜನಾ ನಿರ್ದೇಶಕರು,
ಉಡುಪಿ ನಿರ್ಮಿತಿ ಕೇಂದ್ರ
ವಾಸಾಇ/ಉಡುಪಿ/ಕೆಎಸ್‌ಎಂಸಿಎ/474/23–24 ದಿ: 28.11.23

ಕರ್ನಾಟಕ ಸರ್ಕಾರ
ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರ ಕಛೇರಿ
**ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶ, ಹುಣಸೂರು**
Ph: 08222-252041 e-mail: dirnagarahole@aranya.gov.in
ಸಂಖ್ಯೆ/ಬಿ4/ಎಲ್.ಎನ್.ಡಿ/ರೈಬಾ/ಟೆಂಡರ್/ಸಿಆರ್–16/2023–24 ದಿ: 22.11.2023
**ಅಲ್ಪಾವಧಿ ಮರು ಈ–ಟೆಂಡರ್ ಅಧಿಸೂಚನೆ**
ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ 2023–24ನೇ ಸಾಲಿನಲ್ಲಿ ನಾಗರಹೊಳೆ ಹುಲಿ ಸಂರಕ್ಷಿತ ಪ್ರದೇಶದ ಮೇಟಿಕುಪ್ಪೆ ಮತ್ತು ಆನೆಚೌಕೂರು ವನ್ಯಜೀವಿ ವಲಯದ ವ್ಯಾಪ್ತಿಯಲ್ಲಿ "ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–3ರಲ್ಲಿನ ಷರತ್ತುಗಳಿಗನುಗುಣವಾಗಿ" ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ ಪೋರ್ಟಲ್ (https://kppp.karnataka.gov.in) ಮೂಲಕ ಟೆಂಡರ್ ಕರೆಯಲಾಗಿದೆ
**ಉಪಯೋಗಿತ ರೈಲ್ವೆ ಹಳಿಗಳನ್ನು ವಿವಿಧ ರೈಲು ನಿಲ್ದಾಣಗಳಿಂದ ಸಾಗಾಣಿಕೆ ಮಾಡಿ ಆನೆ ತಡೆ ಬ್ಯಾರಿಕೇಡ್ ನಿರ್ಮಿಸುವುದು. 2.553 ಕಿ.ಮೀ (2 ಯುನಿಟ್) 150.00 ಲಕ್ಷಗಳು***
**(*ಸರ್ಕಾರದಿಂದ ಅನುದಾನ ಬಿಡುಗಡೆ ಮಾಡುವ ನಿರೀಕ್ಷೆ ಮೇರೆಗೆ)**
ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ: 29.11.2023 ಸಂಜೆ 5:30 ಗಂಟೆ. ಸದರಿ ದಿನಾಂಕದಂದು ಟೆಂಡರ್ ಆಗದ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಮರು ಟೆಂಡರ್ ಸಲ್ಲಿಸಲು ಕೊನೆ ದಿನಾಂಕ: ಮತ್ತು ಸಮಯ: 07.12.2023 ಸಂಜೆ 5:30 ಗಂಟೆ. ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದು. ದೂರವಾಣಿ: 08222–252041 E-Mail: dirnagarahole@aranya.gov.in
ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ನಿರ್ದೇಶಕರು
DIPR/DDMYS/KSMCA/690/2023-24

**ಸಹಾಯಕ ನಿರ್ದೇಶಕರ ಕಛೇರಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ನೆಹರೂ ಕ್ರೀಡಾಂಗಣ, ಶಿವಮೊಗ್ಗ ಜಿಲ್ಲೆ**
ದೂರವಾಣಿ ಸಂಖ್ಯೆ:08182–223328
ಸಂಖ್ಯೆ:ಸನಿ/ಯುಸಕ್ರೀಇ/ಶಿ/ಅಲ್ಪಾವಧಿಟೆಂಡರ್/23–24/01 ದಿ:27.11.2023
**ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ**
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ನಿರ್ವಹಣೆ ಮಾಡುತ್ತಿರುವ ಜಿಲ್ಲಾ ಮತ್ತು ತಾಲ್ಲೂಕು ಕ್ರೀಡಾಂಗಣ ಮತ್ತು ಕ್ರೀಡಾಶಾಲೆಗೆ ಹೊರಗುತ್ತಿಗೆ ಆಧಾರದ ಮೇಲೆ ಸಿಬ್ಬಂದಿ ಸೇವೆಯನ್ನು ಪಡೆಯಲು ತೀರ್ಮಾನಿಸಿದ್ದು, ಅದರಂತೆ ಹೊರಗುತ್ತಿಗೆ ಆಧಾರದ ಮೇಲೆ 1 ವರ್ಷದ ಅವಧಿಗೆ ಸಿಬ್ಬಂದಿಗಳ ಅವಶ್ಯಕತೆ ಇದ್ದು, ಇ–ಟೆಂಡರ್‌ನ್ನು ದಿನಾಂಕ:24–11–2023 ರಂದು ಸಂಜೆ 5.00 ಘಂಟೆಗೆ (e-procurement) ನಲ್ಲಿ ಪ್ರಕಟಿಸಿದ್ದು, ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ:11–12–2023 ಆಗಿರುತ್ತದೆ. ಈ ಸಂಬಂಧ ಟೆಂಡರ್ ಫಾರಂಗಳನ್ನು ಮತ್ತು ಇತರೆ ನಿಬಂಧನೆ ಮತ್ತು ಷರತ್ತುಗಳನ್ನು www.kppp.karnataka.gov.in ಪೋರ್ಟಲ್‌ನಲ್ಲಿ ಪಡೆಯ ಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ನೆಹರೂ ಕ್ರೀಡಾಂಗಣ, ಶಿವಮೊಗ್ಗ ಇವರ ದೂರವಾಣಿ ಸಂಖ್ಯೆ 90089–49847ರ ಮೂಲಕ ಸಂಪರ್ಕಿಸಬಹುದಾಗಿರುತ್ತದೆ. ಟೆಂಡರ್‌ಗೆ ಇಟ್ಟಿರುವ ಮೊತ್ತ ಅಂದಾಜು ಮೊತ್ತ ರೂ.55.00ಲಕ್ಷ ಆಗಿರುತ್ತದೆ.
ಸಹಿ/– ಸಹಾಯಕ ನಿರ್ದೇಶಕರು
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಶಿವಮೊಗ್ಗ ಜಿಲ್ಲೆ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/104/11/23–24/820




ಸಿಲ್ಕ್ಯಾರಾ ಸುರಂಗ ಮಾರ್ಗದ ಬಳಿ ಜಮಾವಣೆ ಆಗಿರುವ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆ (ಎನ್‌ಡಿಆರ್‌ಎಫ್) ಮತ್ತು ಇತರ ರಕ್ಷಣಾ ತಂಡಗಳ ಸಿಬ್ಬಂದಿ (ಎಡಚಿತ್ರ). ಕಾರ್ಮಿಕರನ್ನು ಆಂಬುಲೆನ್ಸ್‌ಗಳಲ್ಲಿ ಆಸ್ಪತ್ರೆಗೆ ಕರೆದೊಯ್ಯಲಾಯಿತು —ಎಎಫ್‌ಪಿ/ಪಿಟಿಐ ಚಿತ್ರ

ರಕ್ಷಣಾ ಕಾರ್ಯದಲ್ಲಿ 12 ಮಂದಿ ನಿಪುಣರು ಭಾಗಿ • ಭಾರತೀಯ ಸೇನಾ ತಂಡದಿಂದ ನೆರವು

# ಫಲಿಸಿದ ರ್‍ಯಾಟ್-ಹೋಲ್ ಮೈನಿಂಗ್ ತಂತ್ರ

ಉತ್ತರಕಾಶಿ/ನವದೆಹಲಿ (ಪಿಟಿಐ): ಸಿಲ್ಕ್ಯಾರಾ ಸುರಂಗದಲ್ಲಿ ಸಿಲುಕಿಕೊಂಡಿದ್ದ ಕಾರ್ಮಿಕರ ರಕ್ಷಣೆಗೆ ಅಂತಿಮ ಹಂತದಲ್ಲಿ ನೆರವಿಗೆ ಬಂದಿದ್ದು ಯಂತ್ರಗಳ ನೆರವಿಲ್ಲದ ಸುರಂಗ ಕೊರೆಯುವ ತಂತ್ರ. ಇದನ್ನು ರ್‍ಯಾಟ್-ಹೋಲ್ ಮೈನಿಂಗ್ ಎಂದು ಕರೆಯಲಾಗುತ್ತದೆ. ಈ ತಂತ್ರದಲ್ಲಿ ನಿಪುಣರಾಗಿರುವ 12 ಮಂದಿ, ಕಾರ್ಮಿಕರ ರಕ್ಷಣಾ ಕಾರ್ಯದಲ್ಲಿ ಭಾಗಿಯಾಗಿದ್ದರು.

ರಕ್ಷಣಾ ಸುರಂಗ ಕೊರೆಯಲು ಬಳಸುತ್ತಿದ್ದ ಯಂತ್ರಗಳಿಗೆ ಮತ್ತೆ ಮತ್ತೆ ಅಡ್ಡಿ ಎದುರಾದ ನಂತರದಲ್ಲಿ, ರ್‍ಯಾಟ್-ಹೋಲ್ ಮೈನಿಂಗ್ ತಂತ್ರದಲ್ಲಿ ನಿಪುಣರಾದವರನ್ನು ರಕ್ಷಣಾ ಕಾರ್ಯಕ್ಕೆ ಕರೆಸಿಕೊಳ್ಳಲಾಯಿತು. ಈ ಕೆಲಸದಲ್ಲಿ ಪರಿಣತಿ ಹೊಂದಿರುವ ಭಾರತೀಯ ಸೇನೆಯ ತಂಡವೊಂದು ಇವರಿಗೆ ನೆರವು ನೀಡಿತು. ಇವರು ಸೋಮವಾರ ತಮ್ಮ ಕೆಲಸ ಆರಂಭಿಸಿದರು.

ಕಾರ್ಮಿಕರನ್ನು ರಕ್ಷಿಸಲು ಅಡ್ಡವಾಗಿ ಸುರಂಗ ಕೊರೆಯಲು ಯಂತ್ರವನ್ನು ಅವಲಂಬಿಸಲಾಗಿತ್ತು. ಆದರೆ, ಅದು ಕುಸಿದುಬಿದ್ದ ಮಣ್ಣು, ಕಲ್ಲುಗಳಲ್ಲಿ ಸಿಲುಕಿಕೊಂಡಿತು. ಆಗ ರಕ್ಷಣಾ ಕಾರ್ಯದ ಉಸ್ತುವಾರಿ ಹೊತ್ತಿರುವ ಅಧಿಕಾರಿಗಳು ಪರ್ಯಾಯ ತಂತ್ರದ ಮೊರೆ ಹೋಗಬೇಕಾಯಿತು.

ಈ ಮೈನಿಂಗ್ ತಂತ್ರದಲ್ಲಿ ನಿಪುಣರಾದವರು ಕಿರಿದಾದ ಸುರಂಗವನ್ನು ಸಣ್ಣ-ಪುಟ್ಟ ಸಲಕರಣೆಗಳನ್ನು ಬಳಸಿ ಕೊರೆಯುತ್ತಾರೆ. ಇಂತಹ ಸುರಂಗವು ಸಾಮಾನ್ಯವಾಗಿ 3–4 ಅಡಿಗಳಷ್ಟು ಎತ್ತರ ಇರುತ್ತದೆ. ಇಂತಹ ಸುರಂಗ ಒಬ್ಬ ವ್ಯಕ್ತಿ ನುಸುಳಬಹುದಾದಷ್ಟು ದೊಡ್ಡದಾಗಿರುತ್ತದೆ.

> ರ್‍ಯಾಟ್-ಹೋಲ್ ಮೈನಿಂಗ್ ಅಕ್ರಮವಾಗಿರಬಹುದು. ಆದರೆ ಇಲ್ಲಿ ಬಳಕೆಯಾಗುತ್ತಿರುವುದು ರ್‍ಯಾಟ್-ಹೋಲ್ ಮೈನಿಂಗ್ ನಿಪುಣರ ಸಾಮರ್ಥ್ಯ
>
> **ಲೆಫ್ಟಿನೆಂಟ್ ಜನರಲ್ (ನಿವೃತ್ತ) ಸೈಯದ್ ಅತ್ತಾ ಹಸ್ನೈನ್**, ಎನ್‌ಡಿಎಂಎ ಸದಸ್ಯ

ಯಂತ್ರದಿಂದ ಆಗದೆ ಇದ್ದ ಜಾಗದಲ್ಲಿ ಸುರಂಗ ಕೊರೆಯುವ ಕೆಲಸವನ್ನು, ಯಂತ್ರ ಬಳಸದ ರ್‍ಯಾಟ್-ಹೋಲ್ ಮೈನಿಂಗ್ ನಿಪುಣರಿಂದ ಮಾಡಿಸಲು ಸಿಲ್ಕ್ಯಾರಾದಲ್ಲಿ ರಕ್ಷಣಾ ಕಾರ್ಯದಲ್ಲಿ ತೊಡಗಿದ್ದ ಅಧಿಕಾರಿಗಳು ತೀರ್ಮಾನಿಸಿದರು. ಕಾರ್ಮಿಕರನ್ನು ಸುರಕ್ಷಿತವಾಗಿ ಕರೆತರಲು ಅಳವಡಿಸಿರುವ ಪೈಪ್‌ನ ಮೂಲಕ ಒಳಗೆ ಹೋದ ರ್‍ಯಾಟ್-ಹೋಲ್ ಮೈನಿಂಗ್ ನಿಪುಣರು ತಮ್ಮೊಂದಿಗೆ ಡ್ರಿಲ್ ಹಾಗೂ ಗ್ಯಾಸ್ ಕಟರ್‌ಗಳನ್ನು ಒಯ್ದಿದ್ದರು.

ರ್‍ಯಾಟ್-ಹೋಲ್ ಮೈನಿಂಗ್ ತಂತ್ರವು ಮೇಘಾಲಯದಲ್ಲಿ ವಿವಾದಾತ್ಮಕವೂ ಅಪಾಯಕಾರಿಯೂ ಆಗಿತ್ತು. ಅಲ್ಲಿ ಕಲ್ಲಿದ್ದಲು ಗಣಿಗಾರಿಕೆಯಲ್ಲಿ ಈ ತಂತ್ರವನ್ನು ವ್ಯಾಪಕವಾಗಿ ಬಳಸಲಾಗುತ್ತಿತ್ತು. ಕಿರಿದಾಗ ಸುರಂಗವನ್ನು ಲಂಬವಾಗಿ ಕೊರೆದು, ಹಗ್ಗ ಅಥವಾ ಬಿದಿರಿನ ಏಣಿಯನ್ನು ಬಳಸಿ, ಕಲ್ಲಿದ್ದಲು ಹಾಸು ಇರುವಲ್ಲಿಗೆ ಕಾರ್ಮಿಕರು ತಲುಪುತ್ತಿದ್ದರು. ಅಲ್ಲಿ ಯಂತ್ರ ಬಳಸದೆಯೇ ಕಲ್ಲಿದ್ದಲು ತೆಗೆಯುತ್ತಿದ್ದರು. ಆದರೆ, ಮೇಘಾಲಯದಲ್ಲಿ ಈ ತಂತ್ರವನ್ನು ಕಲ್ಲಿದ್ದಲು ಗಣಿಗಾರಿಕೆಯ ಕೆಲಸಗಳಲ್ಲಿ ನಿಷೇಧಿಸಿ ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು 2014ರಲ್ಲಿ ಆದೇಶಿಸಿದೆ.



ರಕ್ಷಣಾ ಕಾರ್ಯದಲ್ಲಿ ಭಾಗಿಯಾಗಿದ್ದ ತಂಡದ ಸದಸ್ಯರು ಕಾರ್ಯಾಚರಣೆ ಯಶಸ್ವಿಯಾಗಿ ಕೊನೆಗೊಂಡ ನಂತರ ಸಂಭ್ರಮಿಸಿದರು —ಪಿಟಿಐ ಚಿತ್ರ

ಸಿಲ್ಕ್ಯಾರಾದಲ್ಲಿ ಭಾರಿ ಯಂತ್ರದ ನೆರವಿಲ್ಲದೆ (ರ್‍ಯಾಟ್ ಹೋಲ್) ಸುರಂಗ ಕೊರೆಯಲು ಬಂದಿರುವವರು ಈಗಾಗಲೇ ಅಳವಡಿಸಲಾಗಿರುವ ಪೈಪ್‌ನ ಒಳಗೆ ಹೋಗಿ ಸುರಂಗ ಕೊರೆದಿದ್ದಾರೆ.

ಒಬ್ಬ ವ್ಯಕ್ತಿ ಕೊರೆಯುವ ಕೆಲಸ ಮಾಡುತ್ತಾನೆ, ಇನ್ನೊಬ್ಬ ಕಲ್ಲು-ಮಣ್ಣನ್ನು ಎತ್ತಿ ಗುಪ್ಪೆ ಮಾಡುತ್ತಾನೆ. ಮೂರನೆಯ ವ್ಯಕ್ತಿಯು ಅದನ್ನು ಟ್ರಾಲಿಗೆ ಹಾಕಿ ಹೊರಕ್ಕೆ ಕಳುಹಿಸುತ್ತಾನೆ ಎಂದು ರ್‍ಯಾಟ್-ಹೋಲ್ ನಿಪುಣ ರಾಜಪೂತ್ ರಾಯ್ ತಿಳಿಸಿದ್ದಾರೆ. ಉತ್ತರಕಾಶಿಯಲ್ಲಿ ರ್‍ಯಾಟ್-ಹೋಲ್ ಮೈನರ್‌ಗಳು 24 ತಾಸುಗಳಲ್ಲಿ 10 ಮೀಟರ್‌ನಷ್ಟು ಸುರಂಗ ಕೊರೆದಿದ್ದರು.

ಕಲ್ಲಿದ್ದಲು ಗಣಿಗಾರಿಕೆಯಲ್ಲಿ ಈ ತಂತ್ರವನ್ನು ಎನ್‌ಜಿಟಿ ನಿಷೇಧಿಸಿದೆಯಾದರೂ, ನಿರ್ಮಾಣ ಚಟುವಟಿಕೆಗಳಲ್ಲಿಈ ತಂತ್ರದ ಬಳಕೆ ಈಗಲೂ ಇದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

## ಹೀರೊಗಳಾದ ರ್‍ಯಾಟ್ ಮೈನರ್ಸ್‌

ಯಂತ್ರದ ನೆರವಿಲ್ಲದೆ ಸುರಂಗ ಕೊರೆದವರು (ರ್‍ಯಾಟ್ ಮೈನರ್ಸ್‌) ಹೀರೊಗಳಾಗಿ ಹೊರಹೊಮ್ಮಿದರು. ಉಸಿರಾಟ ಕೂಡ ಸವಾಲಾಗಿದ್ದ ಸುರಂಗವನ್ನು ಕೊರೆದು ದಣಿದಿದ್ದರೂ ಅವರ ಮೊಗದಲ್ಲಿನ ನಗು ಬಳಲಿಕೆಯನ್ನು ಮರೆಮಾಚಿತು.

‘ನಮ್ಮನ್ನು ನೋಡಿದ ಮೇಲೆ ಕಾರ್ಮಿಕರು ಸಂತಸಗೊಂಡರು. ನಮ್ಮನ್ನು ಬಿಗಿದಪ್ಪಿದ ಅವರು ನಮಗೆ ಬಾದಾಮಿ ತಿನ್ನುವಂತೆ ಹೇಳಿದರು’ ಎಂದು ಸುರಂಗ ಕೊರೆದ ತಂಡದಲ್ಲಿದ್ದ ದೇವೇಂದ್ರ ‘ಎನ್‌ಡಿಟಿವಿ’ಗೆ ಹೇಳಿದರು.

‘ಸಿಲುಕಿಕೊಂಡಿದ್ದ ಕಾರ್ಮಿಕರನ್ನು ಹೊರತರುವ ಬಗ್ಗೆ ಅವರಿಗೆ ಮನವರಿಕೆ ಆಗಿತ್ತು. ಕಾರ್ಮಿಕರನ್ನು ಹೊರತರಲು ಅವರು 24 ಗಂಟೆ ಕೆಲಸ ಮಾಡಿದರು’ ಎಂದು ಅವರ ತಂಡದ ನಾಯಕ ಸ್ಮರಿಸಿದರು.

## ಕಾರ್ಮಿಕರ ರಕ್ಷಣೆ ಘಟನಾವಳಿ

ಉತ್ತರಕಾಶಿ (ಪಿಟಿಐ): ಸಿಲ್ಕ್ಯಾರಾ ಸುರಂಗದಲ್ಲಿ ಸಿಲುಕಿಕೊಂಡಿದ್ದ ಕಾರ್ಮಿಕರನ್ನು 17 ದಿನಗಳ ರಕ್ಷಣಾ ಕಾರ್ಯಾಚರಣೆ ಬಳಿಕ ಸುರಕ್ಷಿತವಾಗಿ ಹೊರತರಲಾಗಿದೆ. ನ.12 ರಿಂದ ನಡೆದ ರಕ್ಷಣಾ ಕಾರ್ಯಾಚರಣೆಯ ಘಟನಾವಳಿ ಕೆಳಕಂಡಂತಿದೆ.

- **ನ.12:** ಉತ್ತರಕಾಶಿಯ ಸಮೀಪದ ಸಿಲ್ಕ್ಯಾರಾ ಮತ್ತು ಬಡಕೋಟ್ ನಡುವಣ ಸುರಂಗ ಮಾರ್ಗದಲ್ಲಿ ಬೆಳಿಗ್ಗೆ 5.30ರ ವೇಳೆ ಕುಸಿತ. ಒಳಗೆ ಸಿಲುಕಿದ 41 ಕಾರ್ಮಿಕರನ್ನು ಹೊರತರಲು ಜಿಲ್ಲಾಡಳಿತದಿಂದ ರಕ್ಷಣಾ ಕಾರ್ಯಾಚರಣೆ ಆರಂಭ.
- **ನ.13:** ಆಮ್ಲಜನಕ ಪೂರೈಸುವ ಪೈಪ್‌ಲೈನ್ ಮೂಲಕ ಕಾರ್ಮಿಕರ ಜತೆ ಸಂಪರ್ಕ ಸಾಧ್ಯ. ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಸ್ಥಳಕ್ಕೆ ಭೇಟಿ. ಕುಸಿತ ಮತ್ತೆ ಮುಂದುವರಿದಿದ್ದರಿಂದ ಅಂದಾಜು 60 ಮೀ. ಉದ್ದದಷ್ಟು ಸುರಂಗ ಮಣ್ಣು–ಕಲ್ಲುಗಳಿಂದ ಮುಚ್ಚಿಹೋಯಿತು.
- **ನ.14:** ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಬಿಆರ್‌ಒ, ಎನ್‌ಎಚ್‌ಐಡಿಸಿಎಲ್ ಮತ್ತು ಐಟಿಬಿಪಿ ಏಜೆನ್ಸಿಗಳು ರಕ್ಷಣಾ ಕಾರ್ಯಾಚರಣೆಯಲ್ಲಿ ಭಾಗಿ. ಅವಶೇಷಗಳ ನಡುವೆ ರಂಧ್ರ ಕೊರೆದು 800 ಮಿ.ಮೀ. ಮತ್ತು 900 ಮಿ.ಮೀ ವ್ಯಾಸದ ಕೊಳವೆಗಳನ್ನು ಅಳವಡಿಸುವ ಕೆಲಸ ಆರಂಭ.
- **ನ.15:** ಅವಶೇಷಗಳಡಿ ಸ್ಟೀಲ್ ಪೈಪ್‌ಗಳನ್ನು ತೂರಿಸುವ ಕಾರ್ಯ ಸಣ್ಣ ಯಂತ್ರದ ಮೂಲಕ ನಿಧಾನವಾಗಿ ನಡೆಯುತ್ತಿದ್ದ ಕಾರಣ ಅಮೆರಿಕ ನಿರ್ಮಿತ ಅತ್ಯಾಧುನಿಕ ಯಂತ್ರದ ಬಳಕೆಗೆ ಬೇಡಿಕೆಯಿಟ್ಟ ರಾಷ್ಟ್ರೀಯ ಹೆದ್ದಾರಿ ಮತ್ತು ಮೂಲಸೌಕರ್ಯ ಅಭಿವೃದ್ಧಿ ನಿಗಮ (ಎನ್‌ಎಚ್‌ಐಡಿಸಿಎಲ್).
- **ನ.16:** ಭಾರತೀಯ ವಾಯುಪಡೆಯ ವಿಮಾನದ ಮೂಲಕ ದೆಹಲಿಯಿಂದ ಉತ್ತರಕಾಶಿಗೆ ಸಾಗಿಸಿದ ಯಂತ್ರದ ಅಳವಡಿಕೆ ಕಾರ್ಯ ಪೂರ್ಣ. ಮಧ್ಯರಾತ್ರಿಯಿಂದ ಕೊರೆಯುವ ಕೆಲಸ ಆರಂಭ.
- **ನ.17:** ಹೊಸ ಯಂತ್ರದ ಮೂಲಕ 24 ಮೀ. ಸುರಂಗ ನಿರ್ಮಾಣ. ಆರು ಮೀ. ಉದ್ದದ ನಾಲ್ಕು ಕೊಳವೆಗಳನ್ನು ತೂರಿಸಲು ಯಶಸ್ವಿ. ದೊಡ್ಡ ಗಾತ್ರದ ಕಲ್ಲು ಅಡ್ಡಬಂದ ಕಾರಣ ಐದನೇ ಕೊಳವೆ ತೂರಿಸುವ ಕೆಲಸಕ್ಕೆ ಅಡ್ಡಿ.
- **ನ.18, 19:** ಸುರಂಗ ಕೊರೆಯುವ ಯಂತ್ರದಿಂದ ಉಂಟಾಗುವ ಕಂಪನದಿಂದ ಮತ್ತಷ್ಟು ಕುಸಿತ ಉಂಟಾಗಬಹುದು ಎಂದು ತಜ್ಞರು ಎಚ್ಚರಿಸಿದ್ದರಿಂದ ರಕ್ಷಣಾ ಕಾರ್ಯಾಚರಣೆ ಸ್ಥಗಿತ. ಕಾರ್ಮಿಕರನ್ನು ಸುರಕ್ಷಿತವಾಗಿ ಹೊರತರಲು ಸುರಂಗದ ಮೇಲ್ಭಾಗದಿಂದ ಲಂಬವಾಗಿ ಕೊರೆಯುವ ಕಾರ್ಯ ಸೇರಿದಂತೆ ಐದು ಯೋಜನೆಗಳನ್ನು ಕಾರ್ಯಗತಗೊಳಿಸಲು ನಿರ್ಧಾರ.
- **ನ.20:** ಕಾರ್ಮಿಕರಿಗೆ ಆಹಾರ ಮತ್ತು ಇನ್ನಿತರ ಅಗತ್ಯ ವಸ್ತುಗಳನ್ನು ತಲುಪಿಸಲು ಆರು ಇಂಚು ವ್ಯಾಸದ ಪೈಪ್ ಅಳವಡಿಸುವ ಕಾರ್ಯ ಪೂರ್ಣ.
- **ನ.21:** ಸುರಂಗದಲ್ಲಿ ಸಿಲುಕಿಕೊಂಡಿರುವ ಕಾರ್ಮಿಕರ ಮೊದಲ ದೃಶ್ಯಾವಳಿ ಲಭ್ಯ. ಸುರಂಗದ ಒಳಕ್ಕೆ ತೂರಿಸಿರುವ ಆರು ಇಂಚು ವ್ಯಾಸದ ಪೈಪ್ ಮೂಲಕ ಕಳುಹಿಸಲಾಗಿದ್ದ ಎಂಡೊಸ್ಕೋಪಿಕ್ ಕ್ಯಾಮೆರಾ ಮೂಲಕ ದೃಶ್ಯಗಳನ್ನು ಸೆರೆಹಿಡಿಯಾಗಿತ್ತು. ಕಾರ್ಮಿಕರ ಸುರಕ್ಷತೆಯ ಬಗ್ಗೆ ಆತಂಕಗೊಂಡಿದ್ದ ಕುಟುಂಬದ ಸದಸ್ಯರು ಮತ್ತು ಸಂಬಂಧಿಗಳಲ್ಲಿ ಮೂಡಿದ ಆಶಾಭಾವನೆ.
- **ನ.22:** ಅಡ್ಡವಾಗಿ ಸುರಂಗ ಕೊರೆಯುವ ಕಾರ್ಯ ಮತ್ತೆ ಆರಂಭ. 45 ಮೀ.ವರೆಗೂ ಪೈಪ್‌ಗಳ ಅಳವಡಿಕೆ. ಕಾರ್ಮಿಕರು ಸಿಲುಕಿರುವ ಸ್ಥಳ ತಲುಪಲು ಇನ್ನು 12 ಮೀ. ಕೊರೆಯಬೇಕಿದ್ದಾಗ ಯಂತ್ರಕ್ಕೆ ಕಬ್ಬಿಣದ ರಾಡ್‌ಗಳು ಅಡ್ಡ ಬಂದ ಕಾರಣ ಮೊಟಕುಗೊಂಡ ಕಾರ್ಯಾಚರಣೆ.
- **ನ.23:** ಕಬ್ಬಿಣದ ರಾಡ್‌ಗಳನ್ನು ತೆರವುಗೊಳಿಸಿದ ಬಳಿಕ ಮುಂದುವರಿದ ಕಾರ್ಯಾಚರಣೆ. ಆದರೆ ಸುರಂಗ ಕೊರೆಯುವ ಯಂತ್ರ ಇರಿಸಿದ್ದ ಜಾಗದಲ್ಲಿ ಬಿರುಕು ಮೂಡಿದ್ದರಿಂದ ಮತ್ತೆ ಅಡ್ಡಿ.
- **ನ.24:** 25 ಟನ್ ತೂಕದ ಯಂತ್ರವನ್ನು ಮತ್ತೆ ಸ್ವಸ್ಥಾನದಲ್ಲಿರಿಸಿ ಕಾರ್ಯಾಚರಣೆ ಮುಂದುವರಿಸಿದರೂ ಸುರಂಗ ಕೊರೆಯುವ ಯಂತ್ರದ ಬ್ಲೇಡ್‌ಗಳು ಪೈಪ್‌ಗೆ ಬಡಿದ ಕಾರಣ ಕಾರ್ಯಾಚರಣೆ ಸ್ಥಗಿತ.
- **ನ.25, 26:** ಅವಶೇಷಗಳಡಿ ಸಿಲುಕಿಕೊಂಡ ಯಂತ್ರದ ಬ್ಲೇಡ್ ಹಾಗೂ ಇತರ ಭಾಗಗಳನ್ನು ಪ್ಲಾಸ್ಮಾ ಕಟರ್ ಬಳಸಿ ಹೊರ ತೆಗೆಯುವಲ್ಲಿ ಯಶಸ್ವಿ. ಲಂಬವಾಗಿ ಸುರಂಗ ಕೊರೆಯುವ ಕಾರ್ಯ ಆರಂಭ.
- **ನ.27:** ಯಂತ್ರಗಳನ್ನು ಬದಿಗಿಟ್ಟು ‘ರ್‍ಯಾಟ್ ಹೋಲ್ ಮೈನಿಂಗ್’ ತಂತ್ರದ ಮೂಲಕ ಸುರಂಗ ಕೊರೆಯುವ ಕೆಲಸ ಮುಂದುವರಿಕೆ. 12 ಕಾರ್ಮಿಕರು ಈ ಕಾರ್ಯಾಚರಣೆಯಲ್ಲಿ ಭಾಗಿ. ಲಂಬವಾಗಿ ಅಂದಾಜು 36 ಮೀ. ಸುರಂಗ ಕೊರೆಯುವ ಕೆಲಸ ಪೂರ್ಣ.
- **ನ.28:** ರಕ್ಷಣಾ ಕಾರ್ಯಾಚರಣೆಗೆ ತೆರೆ. ರಾತ್ರಿ 7ರ ವೇಳೆಗೆ ಕಾರ್ಮಿಕರು ಸಿಲುಕಿರುವ ಸ್ಥಳ ತಲುಪಿದ ಎನ್‌ಡಿಆರ್‌ಎಫ್ ಮತ್ತು ಎಸ್‌ಡಿಆರ್‌ಎಫ್ ಸಿಬ್ಬಂದಿ. 41 ಕಾರ್ಮಿಕರನ್ನು ಹೊರತರುವಲ್ಲಿ ಯಶಸ್ವಿ.

# ‘ನಮಗೀಗ ದೀಪಾವಳಿ ಸಂಭ್ರಮ...’

ಪ್ರಜಾವಾಣಿ ವಾರ್ತೆ

ಲಖನೌ: ಸುರಂಗದಲ್ಲಿ ಸಿಲುಕಿದ್ದ ಕಾರ್ಮಿಕರಲ್ಲಿ ಒಬ್ಬರಾದ 27 ವರ್ಷದ ಅಖಿಲೇಶ್ ಸಿಂಗ್ ಅವರ ಮನೆಯಲ್ಲಿ ದೀಪಾವಳಿ ಸಂಭ್ರಮ ಇರಲಿಲ್ಲ. ಆದರೆ ಮಂಗಳವಾರ ಅವರ ಮನೆಯಲ್ಲಿ ಹಬ್ಬದ ವಾತಾವರಣ ಕಂಡಿತು.

‘ಈಗ ನಾವು ದೀಪಾವಳಿ ಆಚರಿಸುತ್ತೇವೆ. ನನ್ನ ಮಗ 17 ದಿನಗಳ ಬಳಿಕ ಸುರಂಗದಿಂದ ಸುರಕ್ಷಿತವಾಗಿ ಹೊರಗೆ ಬಂದಿದ್ದಾನೆ’ ಎಂದು ಉತ್ತರ ಪ್ರದೇಶದ ಮಿರ್ಜಾಪುರ ಜಿಲ್ಲೆಯ ಗರ್ವಾಸ್‌ಪುರ ಗ್ರಾಮದ ನಿವಾಸಿ ಅಂಜು ದೇವಿ ಆನಂದಭಾಷ್ಪ ಸುರಿಸುತ್ತಲೇ ಹೇಳಿದರು.

ಸುರಂಗ ನಿರ್ಮಾಣ ಕಾಮಗಾರಿ ಕೈಗೆತ್ತಿಕೊಂಡಿದ್ದ ಕಂಪನಿಯಲ್ಲಿ ಸೂಪರ್‌ವೈಸರ್ ಆಗಿದ್ದ ಅಖಿಲೇಶ್ ಅವರ ಕುಟುಂಬದ ಸದಸ್ಯರು ಮಂಗಳವಾರ ಬೆಳಿಗ್ಗೆಯಿಂದಲೇ ಟಿ.ವಿ ಮುಂದೆ ಕುಳಿತು, ರಕ್ಷಣಾ ಕಾರ್ಯಾಚರಣೆಯ ಪ್ರಗತಿಯ ಮಾಹಿತಿ ಪಡೆಯುತ್ತಿದ್ದರು.

‘ನಮ್ಮ ಪ್ರಾರ್ಥನೆಗೆ ಫಲ ಸಿಕ್ಕಿದೆ. ಕಾರ್ಮಿಕರನ್ನು ಸುರಂಗದಿಂದ ಹೊರತರಲು ಹಗಲಿರುಳೆನ್ನದೆ ಅವಿರತವಾಗಿ ಶ್ರಮಿಸಿದ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇವೆ’ ಎಂದು ಅಖಿಲೇಶ್ ಅವರ ತಂದೆ ರಮೇಶ್ ಸಿಂಗ್ ಮಾಧ್ಯಮಗಳಿಗೆ ತಿಳಿಸಿದರು.


ಕರ್ನಾಟಕ ಸರ್ಕಾರ GOVERNMENT OF KARNATAKA

**ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ, ಬಳ್ಳಾರಿ.**

Cantonment Area, Director:8147796529, PA: 8147796539, website: vims.karnataka.gov.in
e-mail : vimsballaridirector@karnataka.gov.in , directorvimsballari@gmail.com

No:VIMS//TENDER/GNL-1/01/2023-24 Date:27.11.2023

**Amendment**

Postponement of Last Date for Submission of bids towards of Providing Man power for Cleaning & Sanitation Services to Medical College Hospital, VIMS, Ballari vide Tender Notification No:VIMS/TENDER/GNL-1/01/2023-24 Dt:02.11.2023

| SL No. | As Per Tender Bid Document | | Amended as | |
|---|---|---|---|---|
| 01 | Last Date for Submission bid Date & Time | 29.11.2023 @ 5 PM | Last Date for Submission bid | 08.12.2023 @ 5.00 PM |
| 02 | Date & Time Opening of Technical Bid | 01.12.2023@ 11.30 AM | Date & TIME Opening of Technical Bid | 11.12.2023 @ 11.30AM |
| 03 | Date & Time Opening of Financial Bid | 06.12.2023 @11.30 AM | Date & Time Opening of Financial Bid | 13.12.2023 @11.30 AM |
| 04 | Additional Conditions | | 1) Non Conviction Certificate from Labour Department stating that till today no such cases are not filed against the agency, upload the original copy.<br>2) Small scale industry or MSME certificate should be uploaded in original | |

DIPR/Ballari/473/KSMCA/2023-24 Sd/- Director,VIMS, Ballari.

ಕರ್ನಾಟಕ ಸರ್ಕಾರ

**ಗಣಿ ಮತ್ತು ಭೂವಿಜ್ಞಾನ ಇಲಾಖೆ**

#49, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.
ಇ–ಮೇಲ್: dir-mines@karnataka.gov.in

ಸಂಖ್ಯೆ: DMG/MLS/Auction/1st Phase/2023-24 ದಿನಾಂಕ : 28.11.2023

**ಟೆಂಡರ್ ಪ್ರಕಟಣೆ**

ದಿನಾಂಕ 18.10.2023 ಮತ್ತು 17.11.2023 ರ ಸರ್ಕಾರಿ ಪತ್ರ ಸಂಖ್ಯೆ CI 117 MMM 2022 ರ ನಿರ್ದೇಶನಗಳ ಅನುಸಾರ, ಗಣಿ ಮತ್ತು ಭೂವಿಜ್ಞಾನ ಇಲಾಖೆಯು ಅವಧಿ ಮೀರಿದ ಮತ್ತು ರದ್ದುಗೊಂಡಿರುವ ಗಣಿಗಾರಿಕೆ ಗುತ್ತಿಗೆಗಳ ಬಳಿ ಇರುವ ಹಳೆಯ ದಾಸ್ತಾನನ್ನು MSTC ಮೂಲಕ ಹರಾಜು ಮಾಡಲು ಟೆಂಡರ್ ಕರೆಯಲಾಗಿತ್ತು.

ಅರ್ಹತಾ ಷರತ್ತುಗಳು, ನಿಯಮಗಳು ಮತ್ತು ಷರತ್ತುಗಳು, ಎಲೆಕ್ಟ್ರಾನಿಕ್ ಹರಾಜಿನಲ್ಲಿ ಭಾಗವಹಿಸುವ ದಿನಾಂಕ ಮತ್ತು ಸಮಯವನ್ನು ಟೆಂಡರ್ ಡಾಕ್ಯುಮೆಂಟ್‌ನಲ್ಲಿ ನೀಡಲಾಗಿದೆ. MSTC ಪೋರ್ಟಲ್‌ನಲ್ಲಿ ಪ್ರತ್ಯೇಕ ಲಾಟ್ ವೈಸ್ ಹರಾಜು ಅಧಿಸೂಚನೆಗಳನ್ನು ಪ್ರಕಟಿಸಲಾಗಿದೆ. ಆಯಾ ಲಾಟ್‌ಗಳ ಇ–ಹರಾಜು ಪ್ರಕ್ರಿಯೆಗಾಗಿ ಟೆಂಡರ್ ದಾಖಲೆಗಳು, ಅಧಿಸೂಚನೆಗಳು, ಇತ್ತೀಚಿನ ಮಾಹಿತಿಗಳು ಮತ್ತು ಇತರ ವಿವರಗಳು MSTC Ltd ನ ವೆಬ್‌ಸೈಟ್ htpps://www.mstcecommerce.com/auctionhome/aucsearch/search.jsp–ಇದರಲ್ಲಿ ಎಲೆಕ್ಟ್ರಾನಿಕ್ ರೂಪದಲ್ಲಿ ಮಾತ್ರ ಲಭ್ಯವಿರುತ್ತವೆ.

ಪ್ರತಿ ಲಾಟ್‌ಗೆ ಹಳೆಯ ದಾಸ್ತಾನನ್ನು "ಎಲ್ಲಿ ಇದೆಯೋ ಹಾಗೆ ಮತ್ತು ಯಾವುದೇ ದೂರು ರಹಿತ" ಆಧಾರದ ಮೇಲೆ ಹರಾಜು ಮಾಡಲಾಗುತ್ತದೆ. ಭಾಗವಹಿಸುವ ಮೊದಲು ಆಸಕ್ತ ಬಿಡ್ ದಾರರು ಕಬ್ಬಿಣ/ಮ್ಯಾಂಗನೀಸ್ ಅದಿರಿನ ಪ್ರಮಾಣ ಮತ್ತು ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಬೇಕು. ಬಿಡ್‌ನ ದೃಢೀಕರಣದ ನಂತರ ಉದ್ಭವಿಸುವ ಯಾವುದೇ ವಿವಾದಕ್ಕೆ ಇಲಾಖೆಯು ಜವಾಬ್ದಾರಿಯಲ್ಲ.

ಲಾಟ್‌ಗಳ ಹರಾಜಿನ ವೇಳಾಪಟ್ಟಿ MSTC ವೆಬ್‌ಸೈಟ್‌ನಲ್ಲಿ ಲಭ್ಯವಿದೆ. ಆಸಕ್ತ ಬಿಡ್ ದಾರರು MSTC Ltd ವೆಬ್‌ಸೈಟ್‌ಗೆ ಭೇಟಿ ನೀಡಬಹುದು.

ಸಹಿ/–
ನಿರ್ದೇಶಕರು

DIPR/CP/2326/Zenkar/2022-23

**ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ**
**ಕಾಮಗಾರಿ ವಿಭಾಗ, ತುಮಕೂರು–572 101**

ಸಂ: ಕರಾಸಾ/ಕಾನಿಅ/ತುವಿ/ಕಿಅ/566/2023–24 ದಿನಾಂಕ:27.11.2023

**ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂ. 13/2023–24**
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಪದ್ಧತಿಯಲ್ಲಿ)

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಪದ್ಧತಿಯಲ್ಲಿನ ಕೆಲಸಗಳಿಗೆ ಕೆ.ಪಿ.ಡಬ್ಲ್ಯೂ.ಡಿ./ಸಿ.ಪಿ.ಡಬ್ಲ್ಯೂ.ಡಿ/ಎಂ.ಇ.ಎಸ್.ನಲ್ಲಿ ನೋಂದಾಯಿತರಾಗಿರುವ ಅರ್ಹ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿ ಕೆಲಸಕ್ಕೆ ಐಟಂವಾರು ಟೆಂಡರನ್ನು ಆಹ್ವಾನಿಸಲಾಗಿದ್ದು, ಆಸಕ್ತ ಗುತ್ತಿಗೆದಾರರುಗಳು ಇ–ಆಡಳಿತದೊಡನೆ ತಮ್ಮ ಹೆಸರನ್ನು ನೋಂದಾಯಿಸಿಕೊಂಡು ಟೆಂಡರಿನಲ್ಲಿ ಭಾಗವಹಿಸಲು ಕೋರಲಾಗಿದೆ. ದಿನಾಂಕ: 02.12.2023 ರಿಂದ ಯಾವುದೇ ವೆಚ್ಚವಿಲ್ಲದೆ https://kppp.karnataka.gov.in ವೆಬ್‌ಸೈಟ್‌ಗೆ ಲಾಗ್ ಆನ್ ಮಾಡಿ ವಿವರಗಳನ್ನು ಪಡೆದುಕೊಳ್ಳಬಹುದು.

| ಕ್ರ. ಸಂ. | ಕಾಮಗಾರಿಯ ಹೆಸರು | ಟೆಂಡರಿಗಿಟ್ಟ ಅಂದಾಜು ಮೊತ್ತ | ಮುಂಗಡ ಠೇವಣಿ(ರೂ.) |
|---|---|---|---|
| 1 | ತುಮಕೂರು ಪ್ರಾದೇಶಿಕ ಸಾರಿಗೆ ಅಧಿಕಾರಿಗಳ ಕಛೇರಿ ವ್ಯಾಪ್ತಿಯಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥವನ್ನು ನಿರ್ಮಿಸುವುದು. | ರೂ. 753.37 ಲಕ್ಷಗಳು | 11,30,100/– |

ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ : 03.01.2024. ಹೆಚ್ಚಿನ ಮಾಹಿತಿಗಳನ್ನು ಕಾರ್ಯನಿರ್ವಾಹಕ ಅಭಿಯಂತರರು, ಕ.ರಾ.ರ.ಸಾ.ನಿ., ಕಾಮಗಾರಿ ವಿಭಾಗ, ತುಮಕೂರು ಬಸ್ ನಿಲ್ದಾಣ, ತುಮಕೂರು ಇಲ್ಲಿ ಕಛೇರಿ ದಿನಗಳಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಕಾಮಗಾರಿ ವಿಭಾಗ, ತುಮಕೂರು

ವಾಸಾಸಂಇ/ವಾಪ್ರ/ಜಿಎ/2316/2023–24

**ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ**
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ. 49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ,
ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560001. website: www.kiadb.in

ನಂ. ಐಎಡಿಬಿ/ಇಎನ್‌ಜಿಜೆ/ಇಟಿಎನ್‌ಡಿ–ಪಿಎಂಸಿ–04/140/2023–24 ದಿನಾಂಕ: 28.11.2023

**ಯೋಜನಾ ನಿರ್ವಹಣಾ ಸೇವೆಗಳಿಗಾಗಿ (ಪಿಎಂಸಿ)**
**ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ**
(ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕೆ.ಐ.ಎ.ಡಿ.ಬಿ ಯು ಈ ಕೆಳಕಂಡ ಕಾಮಗಾರಿಗಳಿಗೆ ಯೋಜನಾ ನಿರ್ವಹಣಾ ಸೇವೆಗಳಿಗಾಗಿ (ಪಿಎಂಸಿ) ಕ್ವಾಲಿಟಿ ಬೇಸ್ಡ್ ಕನ್ಸಲ್ಟೆನ್ಸಿ ಸಿಸ್ಟಮ್ (ಕ್ಯೂಬಿಸಿಎಸ್) ಅಡಿಯಲ್ಲಿ ಅರ್ಹ ಸಲಹಾ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ದ್ವಿ–ಲಕೋಟೆ ಪದ್ಧತಿಯಡಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ದೇವನಹಳ್ಳಿ ಮತ್ತು ದೊಡ್ಡಬಳ್ಳಾಪುರ ತಾಲ್ಲೂಕು, ದೇವನಹಳ್ಳಿ ಸಾಮಾನ್ಯ ಕೈಗಾರಿಕಾ ಪ್ರದೇಶದಲ್ಲಿ ನೀರು ಸರಬರಾಜು ಯೋಜನೆಯ ಕಾಮಗಾರಿಗೆ ಪಿಎಂಸಿ ಸೇವೆಗಳನ್ನು ಒದಗಿಸುವುದು. (3ನೇ ಕರೆ).

ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 06.12.2023 ಸಂಜೆ 4.00 ಗಂಟೆವರೆಗೆ.

ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in. ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು

DIPR/CP/2327/Zen/2023-24

***THE FEDERAL BANK LIMITED***
***Regd. Office: Aluva, Kerala.***

ZONAL OFFICE: 1st Floor, Halcyon Complex, No.9, St Marks Road, Bangalore-560 001.
e-mail: bgrr-cpc@federalbank.co.in Phone: 080-22074610/604/613/624/625

BGRR/PvtSale/2023-24 **NOTICE FOR PRIVATE SALE OF GOLD** 28/11/2023

Notice is hereby given for the information of all concerned that Gold Ornaments pledged in the following Gold Loan accounts, with the under mentioned Branches of the Bank, which are overdue for redemption and which have not been regularized so far in spite of repeated notices, will be put for Private sale, in the respective Branches on any date after 10-12-2023 as shown below:

**Br. Arsikere: Near LIC Office, B H Road, Arsikere, Hassan, Karnataka- 573 103 Ph. No. 08174230125 :-** 20306400028459, 20306400028483, 20306400031412, 20306400031453, 20306400031461, 20306400032360, 20306400033574, 20306400023385, 20306400023377, 20306400034002.

**Br. Bangalore/St Marks Road: No. 9, Halcyon Complex, St. Marks Road, Bangalore, Karnataka- 560 001, Ph NO. 080-32994454 :-** 11046100114974,11046100114636,11046400009718,11046400010740,11046400010765,11046400010757,11046100115021,11046100113133,11046100113273.

**Br. Bangalore/Rajaji Nagar : No. 60/60, Raj Chambers, Dr. Rajkumar Road, 2nd Block, Rajaji Nagar, Bangalore-560 010, Ph No. 080-23522007:-** 13346400184265,13346400168706,13346400207587,13346400208825,13346400207140,13346400186369,13346400207595,13346400218394,13346400225746,13346400186880,13346400239374,13346400220846,13346400231561,13346400186898,13346400235059,13346400173417,13346400231587,13346400188696,13346400141166,13346400225563,13346400231595,13346400240745,13346400201739,13346400238293,13346400231611,13346400178150,13346400225191,13346400225035,13346400243236,13346400184349,13346400234839,13346400238905,13346400243244,13346400184356,13346400142065,13346400217818,13346400228922,13346400187813,13346400151504,13346400237865,13346400228930,13346400191575,13346400151611,13346400238160,13346400228948,13346400194744,13346400151629,13346400239127,13346400228989,13346400219376,13346400178168,13346400240976,13346400228997,13346400228732,13346400239838,13346400210128,13346400229003,13346400233807,13346400241412,13346400225332,13346400240935,13346400224079,13346400204733,13346400240612,13346400229318,13346400224129,13346400226975,13346400180172,13346400238756,13346400192003,13346400227312,13346400207405,13346400185296,13346400222784,13346400230092,13346400208064,13346400205169,13346100673526,13346400230100,13346400234375,13346400206092,13346400173706,13346400223758,13346400225795,13346400209344,13346400174803,13346400184851,13346400227304,13346400231009,13346400213643,13346400204253,13346400240984,13346400193647,13346400214393,13346400204899, 13346400240992,13346400197853,13346400232395,13346400223766,13346400241016,13346400225456,13346400232403,13346400204725,13346400223162,13346400225464,13346400221802,13346400219889,13346400222537,13346400225472,13346400223808,13346400225662,13346400222545,13346400225498,13346400240877,13346400222032,13346400222552,13346400238830,13346400228559,13346400215630,13346400227684,13346400166700,13346400228591,13346400224764,13346400227692,13346400167823,13346400233567,13346400225639,13346400221711,13346400167831,13346400210342,13346400231918,13346400201820,13346400167849,13346400200632,13346400193282.

**Br. Bangalore/R T Nagar : No.20, Ist Main Road, 108 'B' Bus Station, Ganga Nagar, R T Nagar P O, Bangalore- 560 032 Ph no. 080-234342587:-** 14726400070201,14726400052548,14726400061671,14726400062133,14726400057315,14726400070227,14726400057729,14726400049726,14726400052555,14726400052563,14726400056846,14726500009505,14726400070219,14726400054684,14726400046037.

**Br. Bangalore/Indiranagar: 315/1, 100 Feet Road, Opp Post Office, Indiranagar, Bangalore- 560 038, Ph No. 080-25212341 :-** 15356400038153,15356400042536,15356400045117,15356400043542,15356400037726,15356400041538,15356400043534,15356400041967,15356400042775,15356100088995,15356400043559,15356400037577,15356400026802,15356400039052,15356400043575,15356400037585,15356400041942,15356600000508,15356400037247,15356400042189,15356400037783,15356400042015,15356400038062,15356400040092,15356400035902,15356400042007,15356400042817,15356400042379,15356400037452,15356400037981,15356400042973, 15356400042916.

**Br. Bangalore/Banaswadi: No 13, Banaswadi Main Road, Bangalore- 560 043 Ph No. 080-25420700 :-** 14716400019274,14716400021916,14716100287197,14716400019282,14716400019605,14716400023565,14716400019704,14716400021775,14716100291561,14716400017658,14716100283030,14716100289805,14716400021866,14716100283824,14716400019118,14716100287734.

**Br. Bangalore/Krishnarajapuram: VSR Complex, Old Madras Road, Krishnarajapuram, Bangalore- 560 036 Ph No. 080-25619070:-** 15616100171426,15616100168323,15616400011942,15616100175534,15616100177290,15616100176151,15616100168612,15610051030001,15616100175518,15616400012312,15616100177894, 15616100175526,15616100177720,15616400009763.

**Br. Bangalore/Jalahalli: 17/1, Savithri, S M Road, Jalahalli West, Bangalore-560 015, Ph no. 080-28372201:-** 15826100601393,15826100577213,15826100607382,15826400118098,15826100607986,15826400125861,15826400126331,15826100612382,15826400125622,15826100588020,15826100612358,15826100611707,15826100614172,15826100596536,15826400124856,15826100589168,15356400039052,15826400122389,15826100610519,15826100608984,15826100606509,15826100532424,15826100610345,15826100610352,15826400123999,15826100610543,15826400125929,15826100598144,15826400122215,15826100606442,15826400126190,15826100613232,15826100595421,15826100607556,15826100607564,15826100595603,15826100595611,15826400125184,15826400125192,15826100598102,15826100607333,15826100607341.

**Br. Bangalore/Vignana Nagar: No 124, S R Plaza, Vignana Nagara, Main Road, Bangalore- 560 037 Ph No. 080-25348901:-**16296400050080,16296400044026,16296400051039,16296600001628,16296400043523,16296400050932,16296400051245,16296400051526,16296400050510,16296400050957.

**Br. Bangalore/Vijayanagar: Ground Floor of TRS Arcade, #3, 1st main road, Income Tax Layout, opposite to AM Hospital, Chandra Layout,Vijayanagar, Bangalore- 560 040 Ph No. 080-23159121 :-** 16436400077507,16436400064794,16436400057913,16436400079545,16436400079941,16436400078992,16436400057905,16436400076772,16436400083950,16436400061089,16436400046643,16436400076764,16436400080725,16436400075808,16436400082739,16436400080964,16436400080972,16436400075444,16436400077523,16436400077002,16436400081319,16436400082929,16436400079222,16436400059216.

Bangalore 28-11-2023 Vice President & Zonal Head

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



**ಸುಭಾಷಿತ**

ನಿಮ್ಮ ಮಕ್ಕಳಲ್ಲಿ ಬದಲಾವಣೆ ತರಲು ನೀವು ಮಾಡಬೇಕಾದ ಮೂರು ಕಾರ್ಯಗಳೆಂದರೆ, ಅವರ ಬಗ್ಗೆ ಗಮನಹರಿಸುವುದು, ಪ್ರಶಂಸೆ ವ್ಯಕ್ತಪಡಿಸುವುದು ಮತ್ತು ವಾತ್ಸಲ್ಯ ತೋರುವುದು. -ದೀಪಕ್ ಚೋಪ್ರಾ

# ಆಡಳಿತ ಬಿಗಿಯಾಗಲಿ: ಜನರ ಸಂಕಷ್ಟಕ್ಕೆ ಸಿಗಲಿ ತ್ವರಿತ ಸ್ಪಂದನ

ಜನರ ಸಮಸ್ಯೆಗಳನ್ನು ಆಲಿಸಲು ಮುಂದಾದ ಮುಖ್ಯಮಂತ್ರಿ ಸಿದ್ದರಾಮಯ್ಯ, ಸೋಮವಾರ ಇಡೀ ದಿನ 'ಜನಸ್ಪಂದನ' ನಡೆಸಿದ್ದಾರೆ. ಎಲ್ಲ ಇಲಾಖೆಗಳ ಹಿರಿಯ ಅಧಿಕಾರಿಗಳನ್ನು ಒಂದೆಡೆ ಸೇರಿಸಿಕೊಂಡು, ಜಿಲ್ಲಾಡಳಿತದ ಅಧಿಕಾರಿಗಳನ್ನು ಕೇಂದ್ರ ಕಚೇರಿಗಳಲ್ಲೇ ಇರುವಂತೆ ಸೂಚಿಸಿ ಜನರ ಸಂಕಷ್ಟಗಳನ್ನು ಪರಿಹರಿಸುವ ಪ್ರಯತ್ನ ಮಾಡಿದ್ದಾರೆ. ಜನರ ನೋವಿಗೆ ಕಿವಿಯಾಗುವ ಯತ್ನ ಒಳ್ಳೆಯದೇ. ಪರಿಹಾರವಾಗದೆ ಉಳಿದುಕೊಂಡು ಬರುತ್ತಲೇ ಇರುವ ಸಮಸ್ಯೆಗಳು ಯಾವುವು? ಆಡಳಿತದ ಯಾವ ಹಂತದಲ್ಲಿ ನಿಜವಾದ 'ಸ್ಪಂದನ' ಆಗಬೇಕಿದೆ? ಆಡಳಿತ ಎಲ್ಲಿ ಹಳಿ ತಪ್ಪಿದೆ ಎಂಬುದರ ಅರಿವು ಮುಖ್ಯಮಂತ್ರಿಗೆ ಹಾಗೂ ವಿವಿಧ ಇಲಾಖೆಗಳ ಶಿಖರದಲ್ಲಿ ಕುಳಿತಿರುವ ಐಎಎಸ್ ಅಧಿಕಾರಿಗಳಿಗೆ ಆಗಬೇಕಾದರೆ ಇಂತಹ ಕಾರ್ಯಕ್ರಮ ಅಪರೂಪಕ್ಕೊಮ್ಮೆ ನಡೆಯಲೇಬೇಕು. ದಶದಿಕ್ಕುಗಳಿಂದ ಬೆಂಗಳೂರಿಗೆ ದೌಡಾಯಿಸಿದ ಜನ, ಸರ್ಕಾರದ ಮುಖ್ಯಸ್ಥರ ಮುಂದೆ ತಮ್ಮ ಸಮಸ್ಯೆಗಳ ಮೂಟೆಯನ್ನೇ ಸುರಿದರು. ಅಹವಾಲು ಸಲ್ಲಿಸಿದವರ ಪೈಕಿ ಹಿರಿಯ ನಾಗರಿಕರು, ಅಂಗವಿಕಲರು, ಕಾನೂನಿನ ತೊಡಕುಗಳಿಂದ ತೊಂದರೆಗೆ ಒಳಗಾದವರು, ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಸಿಲುಕಿ ಪರದಾಡುತ್ತಿರುವ ಮಹಿಳೆಯರೇ ಹೆಚ್ಚಿನ ಸಂಖ್ಯೆಯಲ್ಲಿದ್ದರು. ಮುಖ್ಯಮಂತ್ರಿ ಮುಂದೆ ಮಂಡನೆಯಾದ ಅಹವಾಲುಗಳ ಕೆಲ ಮಾದರಿಗಳನ್ನು ಗಮನಿಸಿದರೆ, ಜಡ್ಡುಗಟ್ಟಿದ್ದ ಆಡಳಿತಯಂತ್ರವು ಸರ್ಕಾರದ ಚುಕ್ಕಾಣಿ ಹಿಡಿದ ಪಕ್ಷ ಬದಲಾಗಿ ಆರು ತಿಂಗಳು ಕಳೆದರೂ ಚುರುಕು ಪಡೆದಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಜನಸ್ಪಂದನದ ಹೆಸರಿನಲ್ಲಿ ನಡೆಸಿದ ಕಾರ್ಯಕ್ರಮವು ತಳಹಂತದಲ್ಲಿ ಆಡಳಿತ ನಿಷ್ಕ್ರಿಯಗೊಂಡಿರುವುದನ್ನು ಮುಖ್ಯಮಂತ್ರಿ ಮುಂದೆ ತೆರೆದಿಟ್ಟಿದ್ದಂತೂ ನಿಜ. ಸಲ್ಲಿಕೆಯಾದ ಬಹುತೇಕ ದೂರುಗಳಿಗೆ ಸ್ಥಳೀಯ ಮಟ್ಟದಲ್ಲಿಯೇ ಪರಿಹಾರ ಒದಗಿಸಲು ಸಾಧ್ಯವಿದೆ. ಅಂತಹ ಅಹವಾಲುಗಳನ್ನು ಕಂಡು ರೇಗಿದ ಮುಖ್ಯಮಂತ್ರಿ, 'ಸ್ಥಳೀಯ ಮಟ್ಟದಲ್ಲಿ ಬಗೆಹರಿಯಬೇಕಾದ ಸಮಸ್ಯೆಗಳು ಬೆಂಗಳೂರಿನವರೆಗೂ ಬಂದರೆ ಅದು ನಿಮ್ಮ ವೈಫಲ್ಯ. ಅದನ್ನು ಸಹಿಸುವುದಿಲ್ಲ' ಎಂದು ಜಿಲ್ಲಾಮಟ್ಟದ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದ್ದಾರೆ. ಮುಖ್ಯಮಂತ್ರಿ ಸ್ಥಾನದಲ್ಲಿ ಇರುವವರು ಹೀಗೆ ಅಧಿಕಾರಿಗಳನ್ನು ಗದರುವುದು, ಅವರು ಕೆಲವು ದಿನ ಚುರುಕಾಗುವುದು, ಮತ್ತೆ ಮೈಮರೆವಿಗೆ ಜಾರುವುದು ಹೊಸತೇನಲ್ಲ. 'ಜಿಲ್ಲೆಗಳಲ್ಲಿ ಜನಸ್ಪಂದನ ನಡೆಸಿ ವರದಿ ಸಲ್ಲಿಸುವಂತೆ ಎಲ್ಲ ಜಿಲ್ಲಾ ಉಸ್ತುವಾರಿ ಸಚಿವರಿಗೆ ಪತ್ರ ಬರೆದಿದ್ದೆ. ಕೆಲವು ಜಿಲ್ಲೆಗಳಿಂದ ಮಾತ್ರ ವರದಿ ಬಂದಿದೆ. ಇದನ್ನು ಸಹಿಸುವುದಿಲ್ಲ' ಎಂದು ಸಿದ್ದರಾಮಯ್ಯ ಹೇಳಿದ್ದೂ ವರದಿಯಾಗಿದೆ. ಮುಖ್ಯಮಂತ್ರಿ ಬರೆದ ಪತ್ರವನ್ನೇ ಸಚಿವರು ಲೆಕ್ಕಕ್ಕೆ ತೆಗೆದುಕೊಳ್ಳುವುದಿಲ್ಲ, ಅದನ್ನು ಪಾಲಿಸುವುದಿಲ್ಲ ಎಂದಾದರೆ ಅಂತಹ ಸಚಿವರಿಗೆ ಜಿಲ್ಲಾ ಉಸ್ತುವಾರಿ ವಹಿಸುವುದು ವ್ಯರ್ಥ.



ಜನರ ಸಂಕಷ್ಟಗಳಿಗೆ ತ್ವರಿತವಾಗಿ ಸ್ಪಂದಿಸದ ನೌಕರರ ವಿರುದ್ಧ ಕಠಿಣ ಕ್ರಮ ಜರುಗಿಸದಿದ್ದರೆ, ಎಷ್ಟು 'ಜನಸ್ಪಂದನ' ಕಾರ್ಯಕ್ರಮಗಳನ್ನು ನಡೆಸಿದರೂ ಸಮಸ್ಯೆಗಳು ಪರಿಹಾರವಾಗುವುದಿಲ್ಲ

ಎಲ್ಲ ಇಲಾಖೆಗಳಲ್ಲೂ ತಾಲ್ಲೂಕು, ಜಿಲ್ಲೆ, ರಾಜ್ಯ ಹೀಗೆ ಮೂರು ಹಂತದ ವ್ಯವಸ್ಥೆಗಳಿವೆ. ಆಯಾ ಹಂತದ ಅಧಿಕಾರಿ ಮತ್ತು ಸಿಬ್ಬಂದಿ ತಮ್ಮ ಕೆಲಸವನ್ನು ಸಮರ್ಪಕವಾಗಿ ನಿರ್ವಹಿಸಿದ್ದರೆ ಮುಖ್ಯಮಂತ್ರಿಯವರೇ ಇಡೀ ದಿನ ಅಹವಾಲು ಸ್ವೀಕರಿಸುವ ಪ್ರಮೇಯ ಇರುತ್ತಿರಲಿಲ್ಲ. ಒಂದೇ ದಿನ 3,812 ಅರ್ಜಿಗಳು ಸಲ್ಲಿಕೆಯಾಗಿವೆ. ಕಂದಾಯ, ಪೊಲೀಸ್, ಸಾಮಾಜಿಕ ಭದ್ರತೆ, ಪಿಂಚಣಿ, ವಸತಿ, ಉದ್ಯೋಗಕ್ಕೆ ಸಂಬಂಧಿಸಿದ ಅರ್ಜಿಗಳ ಸಂಖ್ಯೆಯೇ ಹೆಚ್ಚಿದೆ. ಜಮೀನಿನ ಪಕ್ಕಾ ಪೋಡಿ, ಖಾತೆ ಬದಲಾವಣೆಯಂತಹ ಅಹವಾಲುಗಳನ್ನು ಇತ್ಯರ್ಥಪಡಿಸಲೂ ಮುಖ್ಯಮಂತ್ರಿಯವರೇ ಮಧ್ಯಪ್ರವೇಶ ಮಾಡಬೇಕಾದ ಸ್ಥಿತಿ ಉದ್ಭವಿಸಿದೆ ಎಂದಾದರೆ ಕಂದಾಯ ಇಲಾಖೆಯು ಕುಂಭಕರ್ಣ ನಿದ್ದೆಗೆ ಜಾರಿದೆ ಎಂದೇ ಅರ್ಥ. ಬಿಜೆಪಿ ನೇತೃತ್ವದ ಈ ಹಿಂದಿನ ಸರ್ಕಾರದಲ್ಲಿ ಕಂದಾಯ ಸಚಿವರಾಗಿದ್ದ ಆರ್.ಅಶೋಕ, ಪ್ರತಿ ತಿಂಗಳ ಎರಡನೇ ಶನಿವಾರ ತಾವೂ ಗ್ರಾಮವಾಸ್ತವ್ಯ ಮಾಡುವುದರ ಜತೆಗೆ, ಎಲ್ಲ ಜಿಲ್ಲಾಧಿಕಾರಿಗಳೂ ಗ್ರಾಮವಾಸ್ತವ್ಯ ಮಾಡಬೇಕೆಂದು ಸೂಚಿಸಿದ್ದರು. ಈ ಕಾರ್ಯಕ್ರಮ ಬಹಳಷ್ಟು ಪ್ರಚಾರವನ್ನೂ ಪಡೆದಿತ್ತು. ಹಾಗಿದ್ದರೂ ಪೋಡಿ, ಖಾತೆ ಬದಲಾವಣೆಯಂತಹ ಪ್ರಕರಣಗಳು ಮುಖ್ಯಮಂತ್ರಿಯವರೆಗೆ ಬರುತ್ತವೆ ಎಂದರೆ, ತಳಹಂತದ ಕಂದಾಯ ನಿರೀಕ್ಷಕರು, ಭೂಮಾಪಕರು, ತಹಶೀಲ್ದಾರ್, ಉಪವಿಭಾಗಾಧಿಕಾರಿಗಳು ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲ ಎಂಬುದಕ್ಕೆ ಬೇರೆ ಪುರಾವೆಯೇ ಬೇಡ. ಪಡಿತರಚೀಟಿ, ಮಾಸಾಶನದಂತಹ ಸಮಸ್ಯೆಗಳು ಕಾಲಮಿತಿಯಲ್ಲಿ ತಾಲ್ಲೂಕು ಹಂತದ ಆಡಳಿತದಲ್ಲೇ ಇತ್ಯರ್ಥವಾಗಬೇಕು. ಆಡಳಿತ ಚುರುಕಾಗಿದ್ದರೆ ಇಂತಹ ಸಮಸ್ಯೆಗಳ ಪರಿಹಾರಕ್ಕಾಗಿ ಜಿಲ್ಲಾಧಿಕಾರಿ ಕಚೇರಿಗೂ ಜನರು ಎಡತಾಕುವ ಅಗತ್ಯ ಇರುವುದಿಲ್ಲ. ಅಧಿಕಾರದ ಚುಕ್ಕಾಣಿ ಹಿಡಿದವರು ಬದಲಾದರೂ ಅಧಿಕಾರಿಗಳ ಕಾರ್ಯವೈಖರಿ ಬದಲಾಗಿಲ್ಲ ಎಂಬುದನ್ನು ಇದು ತೋರಿಸುತ್ತದೆ. ಜಿಲ್ಲಾ ಉಸ್ತುವಾರಿ ಸಚಿವರು ಜಿಲ್ಲೆಗೆ ಆಗಾಗ್ಗೆ ಭೇಟಿ ಕೊಟ್ಟು, ಕರ್ನಾಟಕ ಅಭಿವೃದ್ಧಿ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆ ನಡೆಸಿದ್ದರೆ, ಸಮಸ್ಯೆಗಳ ಬಾಹುಳ್ಯ ಕುಸಿಯುತ್ತಿತ್ತು. ಈ ದಿಸೆಯಲ್ಲಿ ಸಚಿವರು ಗಂಭೀರವಾಗಿ ತೊಡಗಿಸಿಕೊಳ್ಳುವಂತೆ ಮಾಡುವ ಹೊಣೆ ಮುಖ್ಯಮಂತ್ರಿ ಅವರದು. ಅಧಿಕಾರಿಗಳಿಗೆ ಬರೀ ಎಚ್ಚರಿಕೆ ನೀಡಿದರೆ ಸಾಲದು. ಜನರ ಸಂಕಷ್ಟಗಳಿಗೆ ತ್ವರಿತವಾಗಿ ಸ್ಪಂದಿಸದ ನೌಕರರ ವಿರುದ್ಧ ಕಠಿಣ ಕ್ರಮ ಜರುಗಿಸಬೇಕು. ಇಲ್ಲದಿದ್ದರೆ, ಎಷ್ಟು 'ಜನಸ್ಪಂದನ' ಕಾರ್ಯಕ್ರಮಗಳನ್ನು ನಡೆಸಿದರೂ ಸಮಸ್ಯೆಗಳು ಪರಿಹಾರವಾಗುವುದಿಲ್ಲ. ಅಧಿಕಾರಿಗಳನ್ನು ಜನ ಶಪಿಸುವುದೂ ನಿಲ್ಲುವುದಿಲ್ಲ.

## ದಿನದ ಟ್ವೀಟ್


### ನಿಜವಾದ ನಾಯಕ



**ಅವರ ದೇಶವಲ್ಲ, ಅವರ ಜನರಲ್ಲ, ಅವರ ಕೆಲಸವಲ್ಲ. ಆದರೂ ಇಂಟರ್‌ನ್ಯಾಷನಲ್ ಟನಲಿಂಗ್ ಅಸೋಸಿಯೇಷನ್ ಅಧ್ಯಕ್ಷ, ಆಸ್ಟ್ರೇಲಿಯಾದ ಆರ್ನಾಲ್ಡ್ ಡಿಕ್ಸ್ ಭಾರತಕ್ಕೆ ಧಾವಿಸಿದರು. ರಕ್ಷಣಾ ತಂಡದ ನೇತೃತ್ವ ವಹಿಸಿ, ಈ ವಯಸ್ಸಿನಲ್ಲೂ 24/7 ಕೆಲಸ ಮಾಡಿದರು. ಸುರಂಗದಲ್ಲಿ ಸಿಲುಕಿದ್ದ ಕಾರ್ಮಿಕರೊಂದಿಗೆ ಮಾತನಾಡುತ್ತಾ, ಭರವಸೆ ತುಂಬುತ್ತಾ ಸ್ವಂತ ಮಕ್ಕಳಂತೆ ಅವರನ್ನು ಕಂಡರು. ಸ್ಥಳೀಯರೊಂದಿಗೆ ಸೇರಿ ಅವರಿಗಾಗಿ ಪ್ರಾರ್ಥಿಸಿದರು. ನಾಯಕರ ವ್ಯಕ್ತಿತ್ವ ವಿಭಿನ್ನವಾಗಿರುತ್ತದೆ.**

**ರೋಷನ್ ರಾಯ್**

## ಕಿಡಿನುಡಿ



**ನಮ್ಮ ಮಕ್ಕಳ ಭವಿಷ್ಯದ ಹಿತದೃಷ್ಟಿಯಿಂದ ಅವರಿಗೆ ಉತ್ತಮ ಶಿಕ್ಷಣ ದೊರೆಯಬೇಕೆಂದು ಬಯಸುತ್ತೇವೆ. ಆದರೆ ಅದನ್ನು ಒದಗಿಸುವುದಕ್ಕಾಗಿ ಅವಿದ್ಯಾವಂತ, ಅಸಂಸ್ಕೃತ ವ್ಯಕ್ತಿಗಳಿಗೆ ವೋಟ್ ಮಾಡುವ ವಿರೋಧಾಭಾಸದ ನಿಲುವಿಗೆ ಜೋತುಬೀಳುತ್ತೇವೆ.**

**ಮೇಜರ್ ಜನರಲ್ ಶೈಲ್ ಝಾ,** ನಿವೃತ್ತ ಸೇನಾಧಿಕಾರಿ

## 25 ವರ್ಷಗಳ ಹಿಂದೆ

ಭಾನುವಾರ, 29-11-1998

● **ದೆಹಲಿ, ರಾಜಸ್ಥಾನದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ**

**ನವದೆಹಲಿ, ನ. 28–** ದೆಹಲಿ, ರಾಜಸ್ಥಾನ, ಮಧ್ಯಪ್ರದೇಶ ಮತ್ತು ಮಿಜೋರಾಂ ವಿಧಾನಸಭೆಗೆ 25ರಂದು ನಡೆದ ಚುನಾವಣೆಯಲ್ಲಿ, ಕೇಂದ್ರದಲ್ಲಿ ಆಡಳಿತದಲ್ಲಿರುವ ಭಾರತೀಯ ಜನತಾ ಪಕ್ಷ ದೂಳೀಪಟವಾಗಿದೆ. ಎರಡು ರಾಜ್ಯಗಳಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್, ಮಧ್ಯಪ್ರದೇಶದಲ್ಲಿ ಮುನ್ನಡೆ ಸಾಧಿಸಿದೆ.

ದೆಹಲಿ, ರಾಜಸ್ಥಾನ ಮತ್ತು ಮಿಜೋರಾಂಗಳಲ್ಲಿ ಜನರು ಅಧಿಕಾರಸ್ಥ ಪಕ್ಷದ ವಿರುದ್ಧ ಮತ ಚಲಾಯಿಸಿದ್ದರೆ, ಮಧ್ಯಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷ ಮತ್ತೊಮ್ಮೆ ಜನರ ವಿಶ್ವಾಸ ಗಳಿಸಿ ಅಧಿಕಾರ ಉಳಿಸಿಕೊಳ್ಳುವತ್ತ ಸಾಗಿದೆ.

● **ಕೃಪಾಂಕ: ಎಡವಿದ ಸರ್ಕಾರ ಕಂಗೆಟ್ಟ ಗ್ರಾಮೀಣರು**

**ಬೆಂಗಳೂರು, ನ. 28–** ಸರ್ಕಾರಿ ಉದ್ಯೋಗಗಳ ನೇಮಕಾತಿಯಲ್ಲಿ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ನೀಡುತ್ತಿದ್ದ ಶೇಕಡ 10ರಷ್ಟು ಕೃಪಾಂಕ ಸೌಲಭ್ಯವು ಹೈಕೋರ್ಟಿನ ಇತ್ತೀಚಿನ ತೀರ್ಪಿನಿಂದಾಗಿ ರದ್ದಾಗಿರುವುದರಿಂದ ರಾಜ್ಯ ಸರ್ಕಾರ ಪೇಚಿಗೆ ಸಿಕ್ಕಿದ್ದರೆ, ಹಳ್ಳಿಗಾಡಿನ ವಿದ್ಯಾವಂತ ನಿರುದ್ಯೋಗಿ ಯುವಕ-ಯುವತಿಯರಿಗೆ ಇದ್ದ ಸಣ್ಣದೊಂದು ಆಸರೆಯೂ ಕೈತಪ್ಪಿದಂತಾಗಿದೆ.

## 50 ವರ್ಷಗಳ ಹಿಂದೆ

ಗುರುವಾರ, 29-11-1973

● **ರಾಜ್ಯಗಳಲ್ಲಿ 'ಸ್ಥಳೀಯರಿಗೆ ಉದ್ಯೋಗ' ನೀತಿಗೆ ಕೇಂದ್ರ ವಿರುದ್ಧ: ಮೊಹಿಸಿನ್**

**ನವದೆಹಲಿ, ನ. 28–** ಕೆಲವು ರಾಜ್ಯಗಳಲ್ಲಿ ಇರುವ, ರಾಷ್ಟ್ರೀಯ ಭಾವೈಕ್ಯಕ್ಕೆ ವಿರುದ್ಧವಾದ, 'ಸ್ಥಳೀಯ ಜನರಿಗೇ ಉದ್ಯೋಗ ಕೊಡಬೇಕು' ಎನ್ನುವ ಪ್ರವೃತ್ತಿಗೆ ಕೇಂದ್ರ ಸರ್ಕಾರ ವಿರೋಧ ವ್ಯಕ್ತಪಡಿಸಿದೆ.

ಭಾಷಾ ಅಲ್ಪಸಂಖ್ಯಾತರನ್ನು ಕುರಿತ 1970–71ರ ವರದಿ ಮೇಲೆ ರಾಜ್ಯಸಭೆಯಲ್ಲಿ ನಡೆದ ಚರ್ಚೆಗೆ ಉತ್ತರಿಸಿದ ಕೇಂದ್ರ ಸಚಿವ ಎಫ್.ಎಚ್.ಮೊಹಿಸಿನ್ ಅವರು ಈ ವಿಷಯ ತಿಳಿಸಿದರು.


'ಹಲವು ರಾಜ್ಯಗಳಲ್ಲಿ ಈ ಪ್ರವೃತ್ತಿ ಇರುವುದು ಬಹಳ ವಿಷಾದಕರ. ಕೇಂದ್ರ ಇದಕ್ಕೆ ಪ್ರೋತ್ಸಾಹ ಕೊಡುವುದಿಲ್ಲ' ಎಂದು ಹೇಳಿದರು.

● **ಭಾರತಕ್ಕೆ ರಷ್ಯಾ ಕಚ್ಚಾ ತೈಲ, ಸೀಮೆಎಣ್ಣೆ**

**ನವದೆಹಲಿ, ನ. 28–** ಸೋವಿಯತ್ ಸರ್ಕಾರವು ಮುಂದಿನ ವರ್ಷ ಭಾರತಕ್ಕೆ 30 ಲಕ್ಷ ಟನ್ ಕಚ್ಚಾ ಎಣ್ಣೆ ಮತ್ತು 15 ಲಕ್ಷ ಟನ್ ಸೀಮೆಎಣ್ಣೆ ಸರಬರಾಜು ಮಾಡಲು ಸಮ್ಮತಿಸಿದೆ.

ಹಸಿದವರಿಗೆ ಅನ್ನ ಹಂಚಲು ಹೊರಟಾಗ ಕ್ಯಾತೆ ತೆಗೆಯುವ ಮಂದಿ ಆಗಲೂ ಇದ್ದರು, ಈಗಲೂ ಇದ್ದಾರೆ

# ಇಸವಿ ಬದಲಾದರೂ ಮನಃಸ್ಥಿತಿ ಬದಲಾಗದು!



**ಅನುಸಂಧಾನ**

**ರವೀಂದ್ರ ಭಟ್ಟ**

**ಇಸವಿ** ಬದಲಾಗಿದೆ. ಆದರೆ ಮನಃಸ್ಥಿತಿ ಬದಲಾಗಿಲ್ಲ. 1972ರಲ್ಲಿ ಆಗಿನ ಮುಖ್ಯಮಂತ್ರಿ ದೇವರಾಜ ಅರಸು ಅವರು ಹಿಂದುಳಿದ ವರ್ಗಗಳಿಗೆ ಪ್ರಾತಿನಿಧ್ಯ ಕೊಡಲು ಮುಂದಾದಾಗಲೂ ಲಿಂಗಾಯತರು, ಒಕ್ಕಲಿಗರು, ಬ್ರಾಹ್ಮಣರು ವಿರೋಧ ವ್ಯಕ್ತಪಡಿಸಿದ್ದರು. ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಇಂತಹ ಪ್ರಯತ್ನಕ್ಕೆ ಮುಂದಾದಾಗಲೂ ಅದೇ ಸಮುದಾಯಗಳಿಂದ ಹೋರಾಟದ ಎಚ್ಚರಿಕೆ ಹೊರಬಿದ್ದಿದೆ. ಎಷ್ಟೇ ವಿರೋಧ ಬಂದರೂ ದೇವರಾಜ ಅರಸು ಇಟ್ಟ ಹೆಜ್ಜೆ ಹಿಂದಿಡಲಿಲ್ಲ. ಸಿದ್ದರಾಮಯ್ಯ ಏನು ಮಾಡುತ್ತಾರೆ?

ಹಿಂದಿನ ಬಾರಿ ಮುಖ್ಯಮಂತ್ರಿಯಾಗಿದ್ದ ಅವಧಿಯಲ್ಲಿ ಇದ್ದ ಅವಕಾಶವನ್ನು ಅವರು ಕೈಚೆಲ್ಲಿದ್ದರು. ಈಗ ಅವರಿಗೆ ಮತ್ತೆ ಅವಕಾಶ ಸಿಕ್ಕಿದೆ. ಬಳಸುವ ಛಲ ತೋರಬೇಕು ಅಷ್ಟೆ. 1972ರಲ್ಲಿ ಎಲ್.ಜಿ.ಹಾವನೂರ್ ನೇತೃತ್ವದಲ್ಲಿ ಹಿಂದುಳಿದ ವರ್ಗಗಳ ಆಯೋಗ ರಚನೆಯಾದಾಗಲೂ ಈಗ ಇರುವಂತಹ ರಾಜಕೀಯ ಪರಿಸ್ಥಿತಿಯೇ ಇತ್ತು. ಸಾಮಾಜಿಕ ಪರಿಸ್ಥಿತಿಯೂ ಬಹುತೇಕ ಹಾಗೆಯೇ ಇದೆ.

ಅಂದಿನ ದಿನಗಳನ್ನು ಒಮ್ಮೆ ಮೆಲುಕು ಹಾಕೋಣ. ಎಲ್.ಜಿ.ಹಾವನೂರ್ ಇನ್ನೂ ವಿದ್ಯಾರ್ಥಿ ದೆಸೆಯಲ್ಲಿ ಇದ್ದ ಕಾಲ. ಹಾಸ್ಟೆಲ್‌ನಲ್ಲಿ ಇದ್ದುಕೊಂಡು ಅವರು ಓದುತ್ತಿದ್ದರು. ಆಗ ಹಾಸ್ಟೆಲ್‌ನಲ್ಲಿ ಊಟ ನೀಡುವ ಪದ್ಧತಿ ಹೇಗಿತ್ತೆಂದರೆ, ಮೊದಲು ಬ್ರಾಹ್ಮಣರು ಮತ್ತು ಲಿಂಗಾಯತರಿಗೆ ಊಟ, ನಂತರ ಇತರ ವರ್ಗಗಳಿಗೆ. ಒಂದು ದಿನ ಅತ್ಯಂತ ಹಸಿವಿನಿಂದ ಬಳಲಿದ್ದ ಹಾವನೂರ್ ಮೊದಲು ಊಟ ಕೇಳಿದರು. ಅಡುಗೆಯವರು ಊಟ ಕೊಡಲು ನಿರಾಕರಿಸಿದರು. ಆದರೂ ಹಾವನೂರ್ ಊಟ ಪಡೆದುಕೊಂಡರು. ಇದನ್ನು ಕಂಡು ಕುಪಿತರಾದ ಕೆಲವರು ಅಡುಗೆ ಭಟ್ಟರನ್ನು ಬಡಿದರು. ಕಟ್ಟುಮಸ್ತಾದ ದೇಹ ಹೊಂದಿದ್ದ ಹಾವನೂರ್, ಅಡುಗೆಯವರನ್ನು ಬಿಡಿಸಿದರು.

ಈಗ ಯಾವುದಾದರೂ ಹಾಸ್ಟೆಲ್‌ನಲ್ಲಿ ಮೊದಲು ಬ್ರಾಹ್ಮಣರಿಗೆ, ಲಿಂಗಾಯತರಿಗೆ ಊಟ ಎಂಬ ಕಾನೂನು ಮಾಡಿದರೆ ಅದನ್ನು ಬ್ರಾಹ್ಮಣರು, ಲಿಂಗಾಯತರೂ ಬಹಿರಂಗವಾಗಿ ವಿರೋಧ ಮಾಡುತ್ತಾರೆ. ಪರಿಸ್ಥಿತಿ ಅಷ್ಟರ ಮಟ್ಟಿಗೆ ಸುಧಾರಿಸಿದೆ. ಆದರೂ ಪಾಲನ್ನು ಹಂಚುವ ವಿಷಯ ಬಂದರೆ, ಈಗಲೂ ಪ್ರಬಲ ಜಾತಿ ಎಂದು ಗುರುತಿಸಿಕೊಂಡವರ ಮನಃಸ್ಥಿತಿ ಬದಲಾಗಿಲ್ಲ. ಅದಕ್ಕಾಗಿಯೇ ಈಗಲೂ ಜಾತಿ ಜನಗಣತಿಯ ವಿಷಯ ಬಂದರೆ ಪ್ರಬಲ ಜಾತಿಗಳ ಜನ ಬೆಚ್ಚಿಬೀಳುತ್ತಾರೆ. ಒಮ್ಮೆಲೇ ಹೋರಾಟದ ಮಾತನಾಡುತ್ತಾರೆ. ಅವರಿಗೆ ಈಗಲೂ ಹಸಿದವರಿಗೆ ಅನ್ನ ಕೊಡಬೇಕಾಗುತ್ತದಲ್ಲ ಎನ್ನುವುದಕ್ಕಿಂತ ತಮ್ಮ ಪಾಲು ಕಡಿಮೆಯಾಗುತ್ತದಲ್ಲ ಎಂಬ ಭಯ. ಆದರೆ ನಿಜವಾಗಿ ಜಾತಿ ಜನಗಣತಿಯ ಉದ್ದೇಶ ಯಾರ ಪಾಲನ್ನೂ ಕಸಿಯುವುದಲ್ಲ, ಪಾಲು ಸಿಗದೇ ಇದ್ದವರಿಗೆ ನ್ಯಾಯಯುತವಾದ ಪಾಲನ್ನು ನೀಡುವುದು ಎನ್ನುವುದನ್ನು ಅವರು ನಂಬಲು ತಯಾರಿಲ್ಲ. ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವುದು ಆಡಳಿತಗಾರರಿಗೆ ಸಾಧ್ಯವಾಗುತ್ತಲೂ ಇಲ್ಲ.

ಬಿಹಾರದಲ್ಲಿ ಜಾತಿ ಜನಗಣತಿಯ ಮಾಹಿತಿ ಪ್ರಕಟವಾಗುತ್ತಿದ್ದಂತೆ ಇಡೀ ದೇಶದಲ್ಲಿ ಸಂಚಲನ ಉಂಟಾಗಿದೆ. ಎಲ್ಲ ರಾಜ್ಯಗಳಲ್ಲಿಯೂ ಜಾತಿ ಗಣತಿಗೆ ಬೇಡಿಕೆ ಹೆಚ್ಚಾಗುತ್ತಿದೆ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರು ಇನ್ನೊಂದು ಹೆಜ್ಜೆ ಮುಂದೆ ಹೋಗಿ, ಮುಂದಿನ ಲೋಕಸಭಾ ಚುನಾವಣೆಯಲ್ಲಿ ಕೇಂದ್ರದಲ್ಲಿ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದರೆ ದೇಶದಾದ್ಯಂತ ಜಾತಿ ಜನಗಣತಿ ನಡೆಸುವುದಾಗಿ ಭರವಸೆ ನೀಡಿದ್ದಾರೆ.

ಕರ್ನಾಟಕದಲ್ಲಿ ಈಗಾಗಲೇ ಕಾಂತರಾಜ ನೇತೃತ್ವದ ಸಮಿತಿ ನಡೆಸಿದ ಸಮೀಕ್ಷೆಯ ವರದಿ ಬಹಿರಂಗಕ್ಕೆ ಒತ್ತಡ ಹೆಚ್ಚಾಗುತ್ತಿದೆ. ಈ ವರದಿ 8–10 ವರ್ಷಗಳಷ್ಟು ಹಳೆಯದು. ಈಗ ಅದನ್ನು ಪರಿಗಣಿಸುವುದು ಬೇಡ, ಹೊಸದಾಗಿ ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಬೇಕು ಎಂಬ ಬೇಡಿಕೆಯೂ ಇದೆ.

ವೈಜ್ಞಾನಿಕ ಸಮೀಕ್ಷೆ ಯಾವುದು ಎನ್ನುವುದರ ಬಗ್ಗೆ ಕೂಡ ಭಿನ್ನಮತ ಇದೆ. ತಮಗೆ ಲಾಭವಾದರೆ ವೈಜ್ಞಾನಿಕ, ಇಲ್ಲವಾದರೆ ಅವೈಜ್ಞಾನಿಕ ಎಂಬ ನಡವಳಿಕೆಯೂ ಕಾಣುತ್ತಿದೆ. ಅತ್ಯಂತ ಶೀಘ್ರವಾಗಿ ವೈಜ್ಞಾನಿಕವಾಗಿ ವರದಿ ಸಿದ್ಧಪಡಿಸಬಹುದು ಎನ್ನುವುದನ್ನು ಅರಸು ಮತ್ತು ಹಾವನೂರ್ ತೋರಿಸಿಕೊಟ್ಟಿದ್ದಾರೆ. 1972ರ ಮಾರ್ಚ್ ತಿಂಗಳಿನಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಅರಸು ಅವರು 1972ರ ಜುಲೈ 18ರಂದು ಎಲ್.ಜಿ.ಹಾವನೂರ್ ಅಧ್ಯಕ್ಷತೆಯಲ್ಲಿ ಕರ್ನಾಟಕದ ಪ್ರಥಮ ಹಿಂದುಳಿದ ವರ್ಗಗಳ ಆಯೋಗವನ್ನು ರಚಿಸಿದರು. 1975ರ ನ. 19ರಂದು ಹಾವನೂರ್ ತಮ್ಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದರು.

2013ರಲ್ಲಿ ಸಿದ್ದರಾಮಯ್ಯ ಮೊದಲ ಬಾರಿಗೆ ಮುಖ್ಯಮಂತ್ರಿಯಾದಾಗ, ಹಿಂದುಳಿದ ವರ್ಗಗಳ ಶಾಶ್ವತ ಆಯೋಗದ ಅಧ್ಯಕ್ಷರಾಗಿದ್ದ ಕಾಂತರಾಜ ಅವರು ನಡೆಸಿದ್ದ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷಾ ವರದಿಯ ಮೂಲಪ್ರತಿ ಕಾಣೆಯಾಗಿದೆ ಎಂಬ ಪುಕಾರು ಈಗ ಎದ್ದಿದೆ. ಹಿಂದುಳಿದ ವರ್ಗಗಳ ಆಯೋಗದ ವರದಿ ಕಾಣೆಯಾಗುತ್ತಿರುವುದು ಇದೇ ಮೊದಲಲ್ಲ. ಹಾವನೂರ್ ಅವರು ವರದಿ ಸಿದ್ಧಪಡಿಸುತ್ತಿದ್ದಾಗಲೂ ಕಡತಗಳು ಕಾಣೆಯಾಗಿದ್ದವು.



ಹಾವನೂರ್ ಅವರು 193 ಗ್ರಾಮಗಳು ಮತ್ತು 185 ನಗರ ಪ್ರದೇಶಗಳನ್ನು ಅಲೆದು ಮಾಹಿತಿ ಕಲೆಹಾಕಿದ್ದರು. ತಳ ಸಮುದಾಯಗಳ ಬಗ್ಗೆ ಮೂರು ವರ್ಷಗಳು ಅಧ್ಯಯನ ನಡೆಸಿದ್ದರು. ಹಾವನೂರ್ ವರದಿ ಜಾರಿಗೆ ಬಂದರೆ ಏನಾಗುತ್ತದೆ ಎಂಬ ವಾಸನೆಯನ್ನು ಹಿಡಿದ ಕೆಲವರು, ಅಂತಿಮ ವರದಿಯು ಸಿದ್ಧತೆಯ ಹಂತದಲ್ಲಿ ಇದ್ದಾಗಲೇ ಅದರ ಮಾಹಿತಿಯನ್ನು ಬಹಿರಂಗ ಮಾಡಿಬಿಟ್ಟರು. ಜೊತೆಗೆ ಅವರು ಸಂಗ್ರಹಿಸಿದ ಮಾಹಿತಿಯ ಕಡತಗಳನ್ನು ಕದ್ದುಬಿಟ್ಟಿದ್ದರು. ಈಗಲೂ ಇತಿಹಾಸ ಮರುಕಳಿಸಿದೆ ನೋಡಿ.

ಕಾಂತರಾಜ ಸಮಿತಿ ವರದಿಯ ಮಾಹಿತಿ ಬಹಿರಂಗವಾಗಿದೆ. ಮಾಹಿತಿಯ ಮೂಲಪ್ರತಿಯ ಕಳ್ಳತನವೂ ಆಗಿದೆ. ಇದರ ಅರ್ಥ ಇಷ್ಟೆ. ಆಹಾರ ಹಂಚುವ ಪ್ರಶ್ನೆ ಬಂದಾಗಲೆಲ್ಲಾ ಆಹಾರದ ತಟ್ಟೆಯನ್ನೇ ಕಾಣೆ ಮಾಡುವ ಶೂರರು ಆಗಲೂ ಇದ್ದರು, ಈಗಲೂ ಇದ್ದಾರೆ.


ಮಾಹಿತಿ ಬಹಿರಂಗವಾಗಿದೆ, ಕಡತಗಳು ಕಾಣೆಯಾಗಿವೆ ಎಂದು ಹಾವನೂರ್ ಸುಮ್ಮನೆ ಕೂರಲಿಲ್ಲ. ಮತ್ತೆ ಆರು ತಿಂಗಳು ಶ್ರಮಪಟ್ಟು ವರದಿಯನ್ನು ಸಿದ್ಧಪಡಿಸಿ ಅವರು ಸರ್ಕಾರಕ್ಕೆ ನೀಡಿದರು. ಅರಸು ಕೂಡ ವರದಿಯನ್ನು ಸ್ವೀಕರಿಸಿದರು. ಜಾರಿಗೂ ತಂದರು. ಈಗಲೂ ಕಾಂತರಾಜ ಸಮಿತಿಯ ವರದಿ ಸಿದ್ಧ ಇದೆ. ಅದರಲ್ಲಿ ಲೋಪದೋಷಗಳಿದ್ದರೆ ಸರಿಪಡಿಸಿ ಸರ್ಕಾರಕ್ಕೆ ಪಕ್ಕಾ ವರದಿ ನೀಡುವುದಾಗಿ ಈಗ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾಗಿರುವ ಜಯಪ್ರಕಾಶ ಹೆಗ್ಡೆ ಹೇಳಿದ್ದಾರೆ. ವರದಿ ತರಿಸಿಕೊಂಡು ಜಾರಿಗೊಳಿಸುವ ಬದ್ಧತೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತೋರಿಸಬೇಕಿದೆ.

ಔಷಧಿ ಕುಡಿಸುವಾಗ ಮಕ್ಕಳು ಹಟ ಮಾಡುವುದು, ಪ್ರತಿಭಟಿಸುವುದು ಸಹಜ. ಆದರೂ ತಾಯಿ ಮನವೊಲಿಸಿ ಔಷಧಿ ಕುಡಿಸುತ್ತಾಳೆ. ಯಾಕೆಂದರೆ ಅವಳಿಗೆ ಮಗುವಿನ ಆರೋಗ್ಯವೇ ಮುಖ್ಯ. ಸಮಸಮಾಜ ಸೃಷ್ಟಿಗೆ ಸಮಪಾಲು ವಿತರಣೆಯ ಔಷಧಿಯನ್ನು ಬಲವಂತವಾಗಿಯಾದರೂ ಕುಡಿಸಲೇಬೇಕು.

ಹಾವನೂರ್ ಸಮಿತಿಯ ವರದಿ ಪ್ರಕಟವಾದಾಗ, ವೀರಶೈವ ಮಹಾಸಭಾದ ಅಧ್ಯಕ್ಷರಾಗಿದ್ದ ಜೆ.ಬಿ. ಮಲ್ಲಾರಾಧ್ಯರ ನೇತೃತ್ವದಲ್ಲಿ ಭಾರಿ ಪ್ರತಿಭಟನೆ ನಡೆಯಿತು. ಅದಕ್ಕೆ ಒಕ್ಕಲಿಗರು, ಬ್ರಾಹ್ಮಣರು ಬೆಂಬಲ ನೀಡಿದ್ದರು. ಈಗಲೂ ಜಾತಿ ಗಣತಿ ವರದಿ ಬಹಿರಂಗಕ್ಕೆ ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ಅಧ್ಯಕ್ಷ ಶಾಮನೂರು ಶಿವಶಂಕರಪ್ಪ ವಿರೋಧ ವ್ಯಕ್ತಪಡಿಸಿದ್ದಾರೆ. ಒಕ್ಕಲಿಗರೂ ಬ್ರಾಹ್ಮಣರೂ ಅದಕ್ಕೆ ಜೊತೆಯಾಗಿದ್ದಾರೆ.

'ಕೈಗೆ ಒಂದು ಲೋಟ ನೀರು ಕೊಟ್ಟು ಇದನ್ನು ದಾಹ ಇರುವವರಿಗೆ ಕೊಟ್ಟು ಬನ್ನಿ ಎಂದರೆ ನಮ್ಮ ಪಕ್ಷದವರಿಗೆ, ನಮ್ಮ ಜಾತಿಯವರಿಗೆ ಎಂದು ಹುಡುಕಿ ಕೊಡಬಾರದು. ಅದು ರಾಜಧರ್ಮಕ್ಕೆ ವಿರುದ್ಧ. ಜನತಂತ್ರಕ್ಕೆ ಅಪಚಾರ. ಕುಡಿಯುವ ನೀರಿಗೆ, ಉರಿಯುವ ದೀಪಕ್ಕೆ, ತಿರುಗುವ ರಸ್ತೆಗೆ, ಓದುವ ಶಾಲೆಗೆ, ರೋಗಿಯ ಚಿಕಿತ್ಸೆಗೆ ಜಾತಿ, ಧರ್ಮ, ಜನಾಂಗ, ಭಾಷೆಯ ಹೆಸರಿನಲ್ಲಿ ರಾಜಕಾರಣ ಮಾಡುವುದು ಜನದ್ರೋಹ. ಎಲ್ಲ ವಿಷಯಗಳಲ್ಲೂ ರಾಜಕಾರಣ ಮಾಡುವುದು ಅಪಾಯಕಾರಿ' ಎಂದು ದೇವರಾಜ ಅರಸು ಹೇಳುತ್ತಿದ್ದರು. ಅದನ್ನು ಈಗ ನಮ್ಮ ಆಡಳಿತಗಾರರು ನೆನಪಿಸಿಕೊಳ್ಳಬೇಕಷ್ಟೆ. ಆಡಳಿತದಲ್ಲಿ ಇದ್ದವರು ಆಗ ಬದ್ಧರಾಗಿದ್ದರು. ಈಗ ಆಡಳಿತದಲ್ಲಿ ಇರುವವರು ಬದಲಾಗಬಾರದು. ಆಗ ಅರಸು ಇದ್ದರು. ಈಗ ಅವರಿಲ್ಲ ಅಷ್ಟೆ.

## ಚುರುಮುರಿ



### ಬೆಂಗ್ಳೂರ್ ಕಂಬಳ

● ತುರುವೇಕೆರೆ ಪ್ರಸಾದ್

**'ಪ್ರಪಂಚದ** ಯಾವ ಮೂಲೆನಾಗ್ ಏನ್ ನಡುದ್ರೂ ಅದು ಬೆಂಗಳೂರಲ್ಲೂ ಆಗ್ಬೇಕು ನೋಡು' ಎಂದ ಗುದ್ಲಿಂಗ ಹರಟೆಕಟ್ಟೇಲಿ! 'ಯಾವುದ್ರ ಬಗ್ಗೆ ಯೋಲ್ತಿದೀಯ ನೀನು?' ಕೇಳಿದ ಮಾಲಿಂಗ.

'ಕಂಬಳದ ಬಗ್ಗೆ ಕಣ್ರೋ. ಅಲ್ಲೆಲ್ಲೋ ಕರಾವಳಿ ಅಟ್ಲುಗದ್ದೇಲಿ ಕಂಬಳ ಮಾಡೋರು, ಈಗ ಅದ್ನೂ ಬೆಂಗಳೂರಲ್ಲಿ ಮಾಡೋ ಅಂಗಾಯ್ತಲ್ಲ'.

'ಯಾಕ್ ಮಾಡ್ಬಾರ್ದು? ಅಂಗ್ ನೋಡುದ್ರೆ ಕಂಬಳಕ್ಕೆ ಬೆಂಗಳೂರೇ ಲಾಯಕ್ಕಾದ ಜಾಗ?'

'ಯಾವ ಆಧಾರದ್ ಮ್ಯಾಲೆ ಅಂಗ್ ಯೋಲ್ತಿಯ ನೀನು? ಬೆಂಗಳೂರಲ್ಲೇನು ಅಟ್ಲುಗದ್ದೆ ಅದಾವಾ?' ಕೇಳಿದ ಕಲ್ಲೇಶಿ.

'ಅಲ್ಲಲೇ, ಇದ್‌ಬದ್ ಕೆರೆ ಕಟ್ಟೆನೆಲ್ಲಾ ನುಂಗಿ ನೀರು ಕುಡಿದವ್ರೆ. ಮಳೆ ಬಂದಾಗ ಒಂದೊಂದು ಅಂಡರ್‌ಪಾಸಲ್ಲೂ ನೀರು ಉಕ್ಕಿ ಹರಿಯುತ್ತೆ. ಫ್ಲೈಓವರ್ ಮೇಲಿಂದ ನೀರು ಬಳ ಬಳ ಸುರಿದು ರಸ್ತೆ ರಸ್ತೆನೂ ರಾಡಿ ಆಗುತ್ತೆ. ಇದಕ್ಕಿಂತ ಅಟ್ಲುಗದ್ದೆ ಬೇಕಾ? ಇದರ ಮಧ್ಯೆ ವೆಹಿಕಲ್ಲೇ ಓಡ್ಸೋರಿಗೆ ಕೋಣ ಓಡ್ಸೋದು ಯಾವ ಮಹಾ ಅಲ್ವಾ?'

'ನಿಜನೇ ಬಿಡು. ಮೊದ್ಲೇ ಡ್ಯಾಮ್ಗಳಲ್ಲಿ ನೀರಿಲ್ಲ ಅಂತ ಗೋಳಾಡ್ತಾವ್ರೆ. ಇಂಗೆ ಮೈದಾನಗಳನ್ನೆಲ್ಲಾ ಕೆಸರುಗದ್ದೆ ಮಾಡಿ ಕಂಬಳ ಶುರು ಹಚ್ಕಂಡ್ರೆ ಕುಡಿಯೋ ನೀರಿಗೂ ಬರ ಬತ್ತದೋ ಎಂಗೋ?'

'ಅಂಗಾಗಕ್ಕೆ ನಮ್ ರಾಜಕೀಯದೋರು ಬುಟ್‌ಬುಡ್ತಾರಾ? ಎತ್ತಿನಹೊಳೆ ತರ ಕೋಣದಹೊಳೆ ಅಂತ ಒಂದು ತಿರುವು ಯೋಜನೆ ಮಾಡಿ ಕರಾವಳಿಯಿಂದ ಸಮುದ್ರದ್ ನೀರ್‌ನ ಬೆಂಗ್ಳೂರಿಗೆ ತತ್ತಾರೇಳು'.

'ವ್ಹಾ ಕಣ್ಲಾ, ಅಂಗ್ ಮಾಡುದ್ರೂ ಮಾಡಾರೇ. ಆದ್ರೆ ಅದಕ್ಕೆಲ್ಲಾ ದುಡ್ ಎಲ್ಲಿಂದ ತತ್ತಾರೆ?'

'ಏನ್ ಸಲಸಲಕ್ಕೂ ಕಂಬಳ ನೋಡಕ್ಕೆ ಪುಕ್ಕಟೆ ಬುಟ್ ಬುಡ್ತಾರೆ ಅಂದ್ಕೊಂಡಿದೀಯಾ? ಒಳಕ್ಕೆ ಓಗಕ್ಕೆ ಟಿಕೀಟು ಮಾಡಿ ಕುದುರೆ ರೇಸ್ ತರ ಕೋಣನ್ ಬಾಲಕ್ಕೆ ದುಡ್ಡು ಕಟ್ಟೊ ಅಂಗ್ ಮಾಡ್ಬಿಟ್ರೆ ಸರ್ಕಾರಕ್ಕೆ ಒಳ್ಳೇ ಆದಾಯ ಬತ್ತದಲ್ಲ'.

'ಹೌದೌದು, ವಿಧಾನಸೌಧದ ಮುಂದೆಯೇ ಒಂದು ಅಟ್ಲುಗದ್ದೆ ಮಾಡುಸ್ಕೊಂಡ್ಬುಟ್ರೆ ಜೋಡೆತ್ತಿನ ತರ ಜೋಡಿಕೋಣಗಳು ತಾಲೀಮ್ ಮಾಡಕ್ಕೆ, ರಾಜಕೀಯದೋರು ಪರಸ್ಪರ ಕೆಸರೆರಚಿಕೊಂಡು ಹೋಳಿ ಆಡಕ್ಕೆ ಅನುಕೂಲ ಆಗುತ್ತೆ' ಅಂದ ಪರ್ಮೇಶಿ. ಎಲ್ಲಾ ತಲೆಯಾಡಿಸಿ ಹಲ್ಕಿರಿದರು.

## ಸಂಗತ

# ಪರೀಕ್ಷೆಗಳ 'ಪರೀಕ್ಷಾ ಕಾಲ'

**ಸದಾಶಯದಿಂದ ಜಾರಿಗೊಳಿಸಿದ ಪರೀಕ್ಷಾ ನಿಯಮಗಳನ್ನು ಪಾಲಿಸುವಲ್ಲಿ ಅಭ್ಯರ್ಥಿಗಳು ಅಸಡ್ಡೆ ತೋರಿದರೆ ಪರೀಕ್ಷಾ ಪ್ರಾಧಿಕಾರಗಳು ಏನು ಮಾಡಬೇಕು?**

● ಚನ್ನು ಹಿರೇಮಠ

**ರಾಜ್ಯದಲ್ಲಿ** ಕೆಲವು ವರ್ಷಗಳಿಂದ ಸರ್ಕಾರಿ ಹುದ್ದೆಗಳ ನೇಮಕಾತಿಗಳಿಗಿಂತ ಅವುಗಳ ಆಯ್ಕೆ ಪ್ರಕ್ರಿಯೆಯ ಗೊಂದಲಗಳೇ ಹೆಚ್ಚು ಸುದ್ದಿ ಮಾಡಿವೆ. ನೇಮಕಾತಿ ಪರೀಕ್ಷಾ ಪ್ರಾಧಿಕಾರಗಳು, ಇಲಾಖಾ ಆಯ್ಕೆ ಸಮಿತಿಗಳು, ಯಾರೊಬ್ಬರೂ 'ಚಾಪೆಯ ಕೆಳಗೆ ನುಸುಳದಂತೆ' ಎಷ್ಟೆಲ್ಲ ಎಚ್ಚರ ವಹಿಸಿದರೂ ಇಂದಿಗೂ ಹಲವಾರು ಜನರು 'ರಂಗೋಲಿ ಕೆಳಗೆ ನುಸುಳುವುದನ್ನು' ತಡೆಯಲಾಗುತ್ತಿಲ್ಲ. ತತ್ಪರಿಣಾಮವಾಗಿ, ಪರಿಶ್ರಮಪಟ್ಟು ಅಭ್ಯಸಿಸಿ, ನಿರಂತರ ಪ್ರಯತ್ನಿಸುವ ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತಿದೆ. ಇತ್ತೀಚೆಗೆ ನಡೆದಿರುವ ಕೆಲವು ಪರೀಕ್ಷಾ ಪ್ರಕ್ರಿಯೆಗಳ ಕುರಿತು ಹಲವಾರು ಅಭ್ಯರ್ಥಿಗಳು ವಿವಿಧ ವೇದಿಕೆಗಳಲ್ಲಿ ಆಕ್ಷೇಪವನ್ನು ವ್ಯಕ್ತಪಡಿಸಿದ್ದಾರೆ. ಮುಖ್ಯವಾಗಿ, ವಸ್ತ್ರಸಂಹಿತೆಯ ಬಗ್ಗೆ ಹೆಚ್ಚು ಚರ್ಚೆಗಳು ನಡೆದಿವೆ.

ಪ್ರಸ್ತುತ ಕಾಲಮಾನದ, ಅತ್ಯಾಧುನಿಕ ತಂತ್ರಜ್ಞಾನದ ದುರ್ಬಳಕೆಯನ್ನು ಪರಿಣಾಮಕಾರಿಯಾಗಿ ನಿರ್ಬಂಧಿಸಲು ಪರೀಕ್ಷಾ ಪ್ರಾಧಿಕಾರಗಳು ಪ್ರತಿ ಪರೀಕ್ಷೆಯಲ್ಲಿಯೂ ವಿವಿಧ ಬಗೆಯ ನಿಯಮಗಳನ್ನು ಜಾರಿಗೊಳಿಸುತ್ತಿವೆ. ಅದರಲ್ಲಿ ತುಂಬು ತೋಳಿನ ಅಂಗಿ ಧರಿಸುವುದನ್ನು ನಿರ್ಬಂಧಿಸುವುದೂ ಒಂದು. ನನಗೆ ತಿಳಿದಿರುವ ಪರೀಕ್ಷಾ ಮೇಲ್ವಿಚಾರಕರು ಗಮನಿಸಿದಂತೆ, ಈ ಕುರಿತು ಪ್ರತಿ ಪರೀಕ್ಷಾ ಕೇಂದ್ರದಲ್ಲಿಯೂ ಭದ್ರತಾ ಸಿಬ್ಬಂದಿಯೊಂದಿಗೆ ಬಹಳಷ್ಟು ಅಭ್ಯರ್ಥಿಗಳ ವಾಗ್ಯುದ್ಧ ಸರ್ವೇಸಾಮಾನ್ಯ. ತುಂಬು ತೋಳಿನ ಅಂಗಿ ಧರಿಸದಂತೆ ಪರೀಕ್ಷಾ ಪ್ರವೇಶ ಪತ್ರದಲ್ಲಿ, ಮಾಧ್ಯಮಗಳ ಮೂಲಕ, ಪ್ರಾಧಿಕಾರಗಳ ಜಾಲತಾಣಗಳಲ್ಲಿ ಸ್ಪಷ್ಟವಾದ ಸೂಚನೆ ನೀಡಲಾಗಿದ್ದರೂ ಮತ್ತೆ ತುಂಬು ತೋಳಿನ ಅಂಗಿ ಧರಿಸಿ ಬರುವುದು ಏಕೆಂಬುದೇ ಅರ್ಥವಾಗುವುದಿಲ್ಲ.

ಸೂಕ್ಷ್ಮ ಯಂತ್ರೋಪಕರಣಗಳ ಬಳಕೆಯ ಅವಕಾಶವನ್ನು ತಡೆಗಟ್ಟುವ ಸಲುವಾಗಿ, ಮಾಂಗಲ್ಯಸೂತ್ರ ಹೊರತುಪಡಿಸಿ, ಬೇರೆ ಯಾವ ಆಭರಣವನ್ನೂ ಧರಿಸಿಕೊಂಡು ಬರದಂತೆ ತಿಳಿಸಲಾಗಿರುತ್ತದೆ. ಕೆಲವು ಪುರುಷ ಅಭ್ಯರ್ಥಿಗಳು ಮಹಿಳೆಯರನ್ನೂ ನಾಚಿಸುವಂತೆ ಓಲೆ, ಕಡಗ, ಉಂಗುರ, ಕೊರಳಲ್ಲಿ ದಪ್ಪಚೈನು ಹಾಕಿಕೊಂಡು ಬರುತ್ತಾರೆ. ಭದ್ರತಾ ಸಿಬ್ಬಂದಿ ಪರಿಶೀಲನೆಗೆ ಒಳಪಡಿಸಿದಾಗ ವಾಗ್ವಾದ ಮಾಡುತ್ತಾರೆ. ಸೀಮಿತ ಸಮಯಾವಕಾಶದಲ್ಲಿ ಪ್ರತಿಯೊಬ್ಬರನ್ನೂ ಸಮಗ್ರವಾಗಿ ತಪಾಸಣೆ ಮಾಡಬೇಕಾದ ಒತ್ತಡದಲ್ಲಿರುವ ಭದ್ರತಾ ಸಿಬ್ಬಂದಿ ಸಹಜವಾಗಿ ವ್ಯಗ್ರಗೊಳ್ಳುತ್ತಾರೆ. ಪ್ರತಿ ಅಭ್ಯರ್ಥಿಗೂ ನ್ಯಾಯ ದೊರಕಲಿ, ನಕಲು, ಅವ್ಯವಹಾರದಂತಹ ಸಂದರ್ಭಗಳು ಉದ್ಭವಿಸದಿರಲಿ ಎಂಬ ಸದಾಶಯದಿಂದ ಜಾರಿಗೊಳಿಸಿದ ನಿಯಮಗಳನ್ನು ಪಾಲಿಸುವಲ್ಲಿ ಅಸಡ್ಡೆ ತೋರಿದರೆ ಪ್ರಾಧಿಕಾರಗಳು ಏನು ಮಾಡಬೇಕು?

ಪರೀಕ್ಷಾ ಕೊಠಡಿಯೊಳಗೆ ಕೈಗಡಿಯಾರ, ಬೂಟು ಹಾಕಿಕೊಂಡು ಪ್ರವೇಶಿಸುವುದನ್ನು, ಕಾಲುಚೀಲ, ಸ್ವೆಟರ್ ಧರಿಸುವುದನ್ನು ನಿರ್ಬಂಧಿಸಿದ್ದರೂ ಹಲವಾರು ಅಭ್ಯರ್ಥಿಗಳು ಈ ನಿಯಮ ಉಲ್ಲಂಘಿಸಲೆಂದೇ ಪಣ ತೊಟ್ಟಿರುವಂತೆ ವರ್ತಿಸುತ್ತಾರೆ. ಇನ್ನು ಕೆಲವು ಅಭ್ಯರ್ಥಿಗಳು ಇರುತ್ತಾರೆ. ಇವರು ಮೂಲ ಗುರುತಿನ ಚೀಟಿ, ಮೂಲ ಪ್ರವೇಶಪತ್ರ, ಭಾವಚಿತ್ರದಂತಹ ಪರೀಕ್ಷೆಗೆ ಅಗತ್ಯವಾದ ದಾಖಲಾತಿಗಳನ್ನು ತರದೆ ಪರೀಕ್ಷಾ ಕೇಂದ್ರದ ಬಳಿ ಹಿರಿಯ ಅಧಿಕಾರಿಗಳನ್ನು ಹೇಗಾದರೂ ಮಾಡಿ ಪರೀಕ್ಷೆಗೆ ಹಾಜರಾಗಲು ಅನುಮತಿಸುವಂತೆ ಪರಿಪರಿಯಾಗಿ ಪ್ರಾರ್ಥಿಸುತ್ತಿರುತ್ತಾರೆ. ಇಲ್ಲಿ ಮಾನವೀಯತೆ ಮೆರೆಯಬೇಕೋ ಅದನ್ನು ಮರೆತು ಕಾನೂನು ಪಾಲಿಸಬೇಕೋ ಎಂಬ ಜಿಜ್ಞಾಸೆ ಈ ಅಧಿಕಾರಿಗಳಿಗೆ!

ಪ್ರಶ್ನೆಪತ್ರಿಕೆಯ ಒಳಗೆ ಏನನ್ನೂ ಬರೆಯದಂತೆ ಪ್ರಶ್ನೆಪತ್ರಿಕೆಯ ಮುಖಪುಟದಲ್ಲಿ ಅತ್ಯಂತ ಸ್ಪಷ್ಟವಾಗಿ ಸೂಚನೆ ನೀಡಿದ್ದರೂ ಬಹಳಷ್ಟು ಅಭ್ಯರ್ಥಿಗಳು ಪ್ರಶ್ನೆಪತ್ರಿಕೆಯಲ್ಲಿ ಸರಿ ಉತ್ತರವನ್ನು ಗುರುತು ಹಾಕುತ್ತಾರೆ, ಚಿತ್ತುಬರಹಕ್ಕಾಗಿ ಮೀಸಲಿಟ್ಟ ಜಾಗವನ್ನು ಬಳಸದೇ ಪ್ರಶ್ನೆಪತ್ರಿಕೆಯ ತುಂಬೆಲ್ಲ ಲೆಕ್ಕ ಮಾಡುವ, ತಾರ್ಕಿಕ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಪ್ರಯತ್ನ ಮಾಡುತ್ತಾರೆ. ಪ್ರತಿ ಅಭ್ಯರ್ಥಿಯೂ ಪ್ರಶ್ನೆಪತ್ರಿಕೆಯ ಮೇಲೆ ತನ್ನ ನೋಂದಣಿ ಸಂಖ್ಯೆ ನಮೂದಿಸುವುದನ್ನು ಕಡ್ಡಾಯಗೊಳಿಸಿದ್ದರೂ ಬಹಳಷ್ಟು ಅಭ್ಯರ್ಥಿಗಳು ಆ ಬಗ್ಗೆ ಗಮನಹರಿಸುವುದೇ ಇಲ್ಲ.



ಪಾರದರ್ಶಕತೆ, ಅಭ್ಯರ್ಥಿಗಳಲ್ಲಿ ಪ್ರಾಮಾಣಿಕತೆ ಇದ್ದಿದ್ದರೆ, ಅವ್ಯವಹಾರಗಳಿಗೆ ಆಸ್ಪದ ಇರದಿದ್ದರೆ ಇಂಥ ಕಠಿಣ ನಿಯಮಗಳ ಅವಶ್ಯಕತೆ ಇರುತ್ತಿರಲಿಲ್ಲ. ಪರೀಕ್ಷಾ ಪ್ರಾಧಿಕಾರಗಳಾಗಲೀ ನೇಮಕಾತಿ ಸಂಸ್ಥೆಗಳಾಗಲೀ ಪಾರದರ್ಶಕವಾದ ಪರೀಕ್ಷಾ ಪ್ರಕ್ರಿಯೆಯನ್ನು ಮಾಡಲು ಮುಂದಾದಾಗ ಕೆಲವೊಂದು ಸಣ್ಣಪುಟ್ಟ ತೊಂದರೆಗಳಾಗುವುದು ಸ್ವಾಭಾವಿಕ. ಇಂತಹ ಸನ್ನಿವೇಶದಲ್ಲಿ, ಪರೀಕ್ಷಾ ಕರ್ತವ್ಯದ ಹೊಣೆಗಾರಿಕೆ ಹೊಂದಿರುವ ಸಂಸ್ಥೆಯೊಂದಿಗೆ, ಅಧಿಕಾರಿಗಳೊಂದಿಗೆ ಪ್ರತಿಯೊಬ್ಬರೂ ಸಹಕರಿಸಿದಲ್ಲಿ ನ್ಯಾಯಪರತೆಯನ್ನು ವರ್ಧಿಸಬಹುದು.

ನಿಯಮಾವಳಿಗೆ ಅನುಸಾರವಾಗಿ ಅನಗತ್ಯ ಆಭರಣ, ವಸ್ತ್ರಗಳನ್ನು ತೆಗೆದು ಪರೀಕ್ಷಾ ಸಮಯಕ್ಕೆ ಮುಂಚಿತವಾಗಿಯೇ ಕೇಂದ್ರದ ಬಳಿ ಹಾಜರಿರುವುದು ಅವಶ್ಯಕ. ವಿಳಂಬವಾಗಿ ಹಾಜರಾಗುವುದರಿಂದ ಆತಂಕ, ಒತ್ತಡ ಉಂಟಾಗಿ, ಎಷ್ಟೇ ಪೂರ್ವಸಿದ್ಧತೆ ಮಾಡಿಕೊಂಡಿದ್ದರೂ ಪರೀಕ್ಷೆಗಳಲ್ಲಿ ನಿರೀಕ್ಷಿತ ಫಲಿತಾಂಶ ದೊರೆಯದಿರುವ ಸಾಧ್ಯತೆಯೂ ಉಂಟು. ಬರುವ ದಿನಗಳಲ್ಲಿ ಪರೀಕ್ಷಾ ನಿಯಮಾವಳಿಗಳು ಇನ್ನೂ ಬಿಗಿಯಾಗುತ್ತವೆ ಎಂಬ ವರದಿಗಳಿದ್ದು, ನೇಮಕಾತಿ ಆಕಾಂಕ್ಷಿಗಳು ಸಮಯಪಾಲನೆ, ನಿಯಮಪಾಲನೆಯ ಬಗ್ಗೆ ಹೆಚ್ಚು ಜಾಗರೂಕರಾಗಿ, ಜವಾಬ್ದಾರಿಯುತವಾಗಿ ಇರಬೇಕಾಗುತ್ತದೆ.

## ವಾಚಕರ ವಾಣಿ

### ಬಡ್ಡಿ ದಂಧೆಕೋರರಿಗೆ ಬೀಳಲಿ ಕಡಿವಾಣ

ತುಮಕೂರಿನಲ್ಲಿ ಒಂದೇ ಕುಟುಂಬದ ಐವರು ಆತ್ಮಹತ್ಯೆ ಮಾಡಿಕೊಂಡ ಪ್ರಕರಣದ ಹಿಂದೆ ಬಡ್ಡಿ ವ್ಯವಹಾರ ಇದೆ ಎನ್ನಲಾಗುತ್ತಿರುವುದು ಆತಂಕಕಾರಿ. ಜನರನ್ನು ಕಾಡುತ್ತಿರುವ ಬಡ್ಡಿ ಮಾಫಿಯಾವನ್ನು ಸರ್ಕಾರ ನಿಯಂತ್ರಿಸಲೇಬೇಕು. ಇತ್ತೀಚೆಗೆ ತುಮಕೂರಿನಿಂದ ಬಂದು ಕುಣಿಗಲ್ ಬಸ್ ನಿಲ್ದಾಣದಲ್ಲಿ ರಾತ್ರಿ ಏಳು ಗಂಟೆಯ ಹೊತ್ತಿಗೆ ಮಂಗಳೂರಿಗೆ ಹೋಗುವ ಬಸ್‌ಗಾಗಿ ಕಾಯುತ್ತಿದ್ದೆ. ಒಬ್ಬ ಹಣ್ಣಿನ ವ್ಯಾಪಾರಿಯ ಮೇಲೆ ಏರಿ ಹೋದ ಒಬ್ಬ ಬಡ್ಡಿ ವ್ಯಾಪಾರಸ್ಥ, ಅವಾಚ್ಯವಾಗಿ ನಿಂದಿಸಿ ಸಾಲ ವಸೂಲಾತಿಗಾಗಿ ಪೀಡಿಸುತ್ತಿದ್ದ. ಆತನ ಮಾತುಗಳೇ ಇದು ಬಡ್ಡಿ ವಸೂಲಾತಿ ಎಂಬುದನ್ನು ಸ್ಪಷ್ಟಪಡಿಸುತ್ತಿದ್ದವು. ಕೊನೆಗೆ ಆತ ಹಣ್ಣಿನ ವ್ಯಾಪಾರಿಯ ಕೊರಳಪಟ್ಟಿಯನ್ನು ಹಿಡಿದು ಹೊಡೆಯಲು ಮುಂದಾದ. ಅಷ್ಟರಲ್ಲಿ ನನ್ನ ಬಸ್ ಬಂದದ್ದರಿಂದ ನಾನು ಹೊರಟೆ.

ಇಂತಹ ಬಡ್ಡಿ ವ್ಯವಹಾರಗಳು ಬಡ ಕುಟುಂಬಗಳನ್ನು ನಾಶಪಡಿಸುತ್ತಿವೆ. ಆಸೆಗಣ್ಣಿನಿಂದ ನೋಟಿನ ಕಂತೆಗಳನ್ನು ಪಡೆಯುವ ಕುಟುಂಬಗಳು ಕೊನೆಗೆ ಸಾಲ ತೀರಿಸಲಾಗದೆ ಒದ್ದಾಡುತ್ತವೆ. ಜನರ ಅಸಹಾಯಕ ಸ್ಥಿತಿಯನ್ನು ಬಡ್ಡಿ ದಂಧೆಕೋರರು ಸುಲಿಗೆ ಮಾಡಲು ಬಳಸಿಕೊಳ್ಳುತ್ತಿದ್ದಾರೆ. ಸರ್ಕಾರ ಈ ಪಿಡುಗನ್ನು ಕೂಡಲೇ ನಿಯಂತ್ರಿಸಬೇಕು.

**ಸಲೀಮ್ ಬೋಳಂಗಡಿ,** ಮಂಗಳೂರು

### ಸ್ಥಳೀಯ ಮಟ್ಟದಲ್ಲೇ ಸಮಸ್ಯೆ ಬಗೆಹರಿಸಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗೃಹ ಕಚೇರಿ ಕೃಷ್ಣಾದಲ್ಲಿ ಸೋಮವಾರ ನಡೆದ ಜನಸ್ಪಂದನ ಕಾರ್ಯಕ್ರಮಕ್ಕೆ ರಾಜ್ಯದ ಮೂಲೆ ಮೂಲೆಯಿಂದ ಸಾರ್ವಜನಿಕರು ಸಮಸ್ಯೆಗಳನ್ನು ಹೊತ್ತು ಬಂದಿದ್ದುದು ವರದಿಯಾಗಿದೆ. ರಾತ್ರಿಯಿಡೀ ವೃದ್ಧರು, ಅಂಗವಿಕಲರು, ಮಹಿಳೆಯರು ನೂರಾರು ಕಿಲೊಮೀಟರ್ ಪ್ರಯಾಣಿಸಿ ರಾಜಧಾನಿಯತ್ತ ದೌಡಾಯಿಸಿದ್ದು, ಅಧಿಕಾರಿಗಳ ಆಡಳಿತ ವೈಖರಿಗೆ ಹಿಡಿದ ಕೈಗನ್ನಡಿಯಂತಿದೆ. ಯಾವುದೇ ಸಾರ್ವಜನಿಕ ಸಮಸ್ಯೆಯು ಸ್ಥಳೀಯ ಮಟ್ಟದಲ್ಲಿಯೇ ಬಗೆಹರಿದಿದ್ದರೆ ಇಷ್ಟೊಂದು ಶ್ರಮಪಟ್ಟು ಅವರು ರಾಜಧಾನಿಗೆ ಬರುವ ಅವಶ್ಯಕತೆ ಇರುತ್ತಿರಲಿಲ್ಲ. ಜನರ ಸಮಸ್ಯೆಗಳನ್ನು ಬಗೆಹರಿಸಲು ಆದಷ್ಟು ಸ್ಥಳೀಯ ಮಟ್ಟದಲ್ಲಿಯೇ ಜಿಲ್ಲಾಧಿಕಾರಿ, ಶಾಸಕರು, ಅಧಿಕಾರಿಗಳ ನೇತೃತ್ವದಲ್ಲಿ ಆಗಾಗ್ಗೆ ಅಹವಾಲು ಆಲಿಸುವ ಕಾರ್ಯಕ್ರಮ ಪರಿಣಾಮಕಾರಿಯಾಗಿ ಜರುಗಲಿ.

**ಮುರುಗೇಶ ಡಿ.,** ದಾವಣಗೆರೆ

### ಬೇಕು ಇಲ್ಲೊಂದು ಸುಸಜ್ಜಿತ ಆಸ್ಪತ್ರೆ

ಉಪಮುಖ್ಯಮಂತ್ರಿ ಹಾಗೂ ಮಾಜಿ ಮುಖ್ಯಮಂತ್ರಿ ಅವರ ರಾಜಕೀಯ ಜಿದ್ದಾಜಿದ್ದಿಯಿಂದ ರಾಮನಗರ ಮತ್ತು ಕನಕಪುರಕ್ಕೆ ಸರ್ಕಾರಿ ವೈದ್ಯಕೀಯ ಕಾಲೇಜುಗಳ ಸೌಲಭ್ಯ ಒದಗುತ್ತಿದೆ. ಆದರೆ ಉತ್ತರ ಕನ್ನಡ ಜಿಲ್ಲೆಯ ಜನರು ಮೂರು ವರ್ಷಗಳಿಂದಲೂ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಾಗಿ ಒಕ್ಕೊರಲಿನಿಂದ ಮನವಿ ಮಾಡುತ್ತಿದ್ದರೂ ಸರ್ಕಾರ ಅದನ್ನು ಕಿವಿಯ ಮೇಲೆ ಹಾಕಿಕೊಂಡಂತಿಲ್ಲ. ಹಿಂದೊಮ್ಮೆ ಉದ್ಯಮಿ ಬಿ.ಆರ್.ಶೆಟ್ಟಿ ಈ ದಿಸೆಯಲ್ಲಿ ಪ್ರಯತ್ನಿಸಿದ್ದರಾದರೂ ಅವರೇ ಸ್ವತಃ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದ್ದರಿಂದ ಅದು ಕೂಡ ನಿಂತುಹೋಯಿತು.

ಈಗಂತೂ ಉತ್ತರ ಕನ್ನಡ ಜಿಲ್ಲೆಯಲ್ಲಿ ರಸ್ತೆ ಅಪಘಾತವಾದಾಗ, ಹೃದಯ ಸಮಸ್ಯೆ ಉಲ್ಬಣಿಸಿದಾಗ ನೆರೆಯ ಉಡುಪಿ ಜಿಲ್ಲೆಯ ಮಣಿಪಾಲ ಅಥವಾ ಮಂಗಳೂರನ್ನೇ ಅವಲಂಬಿಸಬೇಕಾದ ಪರಿಸ್ಥಿತಿ ಇದೆ. ಆದರೆ ಮಂಗಳೂರು ಮತ್ತು ಮಣಿಪಾಲ ಬಹಳ ದೂರ ಇರುವುದರಿಂದ, ತೀವ್ರ ಹೃದಯಾಘಾತ ಅಥವಾ ರಸ್ತೆ ಅಪಘಾತಕ್ಕೆ ಈಡಾದವರು ಅಲ್ಲಿಗೆ ಕರೆದೊಯ್ಯುವ ಮುನ್ನವೇ ಪ್ರಾಣ ಬಿಡುವ ಸಾಧ್ಯತೆಯೇ ಹೆಚ್ಚು. ಇಂತಹ ಸಮಯದಲ್ಲಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಜನಸಂಖ್ಯೆಯ ಆಧಾರದ ಮೇಲೆ ಒಂದು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಆರಂಭಿಸುವುದು ಒಳ್ಳೆಯದು.

**ಚಂದ್ರಕಾಂತ ನಾಮಧಾರಿ,** ಅಂಕೋಲಾ

**ಕೋಣ... ಜಾಣ!**

ಬೆಂಗಳೂರು ಕಂಬಳದಲ್ಲಿ
ಜಾಣ ಕೋಣಗಳು
ಹತ್ತು ಹಲವು
ಬಹುಮಾನಗಳನ್ನು ಗೆದ್ದು
ಕೋಡು ಮೂಡಿಸಿಕೊಂಡವಂತೆ!
ಸೋತ ಕೋಣಗಳು ಸಹ
ಅರಮನೆ ಮೈದಾನದಲ್ಲಿ
ಓಡಾಡಿದೆವಲ್ಲ ಎಂದು
ಹೆಮ್ಮೆಯಿಂದ ಬೀಗಿದವಂತೆ!

**ಮ.ಗು.ಬಸವಣ್ಣ,** ನಂಜನಗೂಡು

### ವಿವೇಚನಾರಹಿತ ನಿರ್ಧಾರ ಮತ್ತು ಜನರ ಆಕ್ರೋಶ

ಸೋಲಾಪುರ- ಕಲಬುರಗಿ- ಹಾಸನ ಮಾರ್ಗದ ರೈಲು ಕಲಬುರಗಿಯಿಂದ ಬೆಂಗಳೂರಿಗೆ ಹೋಗಿ ಬರಲು ಅತ್ಯಂತ ಅನುಕೂಲಕರವಾಗಿರುವ ಜನಪ್ರಿಯ ರೈಲು. ಈ ರೈಲಿಗೆ ಬೆಂಗಳೂರು ತಲುಪಲು 10 ಗಂಟೆ ಸಾಕು. ಅಂತೆಯೇ, ವಿಪರೀತ ಪ್ರಯಾಣಿಕರ ಸಂದಣಿ ಇರುತ್ತದೆ. ಇಂತಹ ರೈಲನ್ನು ಒಂದು ದಿನದ ಮಟ್ಟಿಗೆ ರದ್ದು ಮಾಡಲು ಸಹ ರೈಲ್ವೆ ಇಲಾಖೆ ಹತ್ತು ಸಲ ಯೋಚಿಸಬೇಕು. ಎಷ್ಟೋ ಸಲ ರದ್ದು ಮಾಡಿ ನೆಟ್ಟಿಗರಿಂದ ಟೀಕೆಗೊಳಗಾಗಿ ಪುನರಾರಂಭಿಸಿದ್ದೂ ಇದೆ. ಪರಿಸ್ಥಿತಿ ಹೀಗಿರುವಾಗ, ನಮ್ಮ ಹುಬ್ಬಳ್ಳಿಯ ನೈರುತ್ಯ ರೈಲ್ವೆ ಈ ರೈಲಿನ ಸಂಚಾರವನ್ನು ಇದೇ 30ರಿಂದ ಮುಂದಿನ ವರ್ಷದ ಫೆಬ್ರುವರಿ 1ರವರೆಗೆ ತಾಂತ್ರಿಕ ಕಾರಣ ಹೇಳಿ ಏಕಾಏಕಿ ರದ್ದು ಮಾಡಿತ್ತು. ಇದನ್ನು ತಿಳಿದ ಪ್ರಯಾಣಿಕರಲ್ಲಿ ಕೆಲವರಾದರೂ ಹೌಹಾರಿ ಬೇರೆ ರೈಲು, ಬಸ್‌ನಲ್ಲಿ ಕಾದಿರಿಸಿ ಬದಲಿ ವ್ಯವಸ್ಥೆ ಮಾಡಿಕೊಂಡಿದ್ದರು.

ನೆಟ್ಟಿಗರಿಂದ ಟೀಕಾಪ್ರಹಾರ ಶುರುವಾಗುವ ಮುನ್ನವೇ ಎಚ್ಚೆತ್ತ ಕಲಬುರಗಿ ಸಂಸದ ಡಾ. ಉಮೇಶ್ ಜಾಧವ ಅವರು ನೈರುತ್ಯ ರೈಲ್ವೆಯ ಪ್ರಧಾನ ವ್ಯವಸ್ಥಾಪಕರಿಗೆ ಸದರಿ ರೈಲು ಸಂಚಾರದ ಅನಿವಾರ್ಯವನ್ನು ಮನವರಿಕೆ ಮಾಡಿಕೊಟ್ಟು, ಇತರ ಕೆಲ ರೈಲಿನ ಹಾಗೆ ಮಾರ್ಗ ಬದಲಿಸಿ ಓಡಿಸಲು ಕೋರಿದ್ದರು. ಪರಿಸ್ಥಿತಿಯ ತೀವ್ರತೆ ಅರಿತ ಇಲಾಖೆ, ರದ್ದು ಮಾಡಿದ ಆದೇಶವನ್ನು ಅಂತಿಮವಾಗಿ ಹಿಂಪಡೆದು ನಮಗೆಲ್ಲ ನಿರಾಳ ಭಾವ ತಂದುಕೊಟ್ಟಿತು. ಆದರೆ ನನ್ನ ಪ್ರಶ್ನೆ ಇಷ್ಟೇ, ಕಲ್ಯಾಣ ಕರ್ನಾಟಕದ ಕಲಬುರಗಿಗೆ ಹೊಸ ರೈಲನ್ನು ಕೊಡದ ರೈಲ್ವೆ ಇಲಾಖೆಗೆ, ಇರುವ ರೈಲನ್ನೂ ಕಿತ್ತುಕೊಂಡರೆ ಜನರ ಆಕ್ರೋಶಕ್ಕೆ ಗುರಿಯಾಗಬೇಕಾಗುತ್ತದೆ ಎಂಬುದೂ ತಿಳಿಯಲಾರದಷ್ಟು ಅರಿವಿನ ಕೊರತೆಯೇ? ವಿವೇಚನೆ ಇಲ್ಲದೆ ಕೈಗೊಂಡ ಇಂತಹ ನಿರ್ಧಾರದಿಂದ ಬದಲಿ ವ್ಯವಸ್ಥೆ ಮಾಡಿಕೊಂಡವರಿಗೆ ರೈಲ್ವೆ ಇಲಾಖೆ ಪರಿಹಾರ ಕೊಡುತ್ತದೆಯೇ?

**ವೆಂಕಟೇಶ್ ಮುದಗಲ್,** ಕಲಬುರಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
© All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬೀಜ ಬಿತ್ತುವ ಸಮಯದಲ್ಲಿ ಆ ಒಂದು ಫಸಲಿನ ಒಟ್ಟಾರೆ ವಿಸ್ತೀರ್ಣ, ಮಾರುಕಟ್ಟೆಗಳ ಆಗುಹೋಗುಗಳು ಮುಂಚಿತವಾಗಿ ರೈತರಿಗೆ ತಿಳಿದಿರುವುದಿಲ್ಲ. ಬೀಜ ಬಿತ್ತಿದ ನಂತರ, ಫಸಲು ಕಟಾವಿಗೆ ಬರುವವರೆಗೂ ಅದನ್ನೇ ಬೆಳೆಸುವ ಕೆಲಸ ಮಾಡಬೇಕೇ ಹೊರತು ಹೆಜ್ಜೆ ಹಿಂದೆ ಹಾಕಲು ಸಾಧ್ಯವಿಲ್ಲ

# ರೈತಕೇಂದ್ರಿತ ಕೃಷಿಯ ಸವಾಲುಗಳು

## ಕಾನೂನು ಮತ್ತು ತಂತ್ರಜ್ಞಾನದ ಸಾಧ್ಯತೆಗಳು

• ಎಂ.ಎಸ್.ಶ್ರೀರಾಮ್



**ಹಸಿರು ಕ್ರಾಂತಿಯ** ದಿನಗಳಲ್ಲಿ ಕೃಷಿಯು ರೈತ ಕೇಂದ್ರಿತವಾಗಿತ್ತು ಎಂದು ಹೇಳಬಹುದು. ದೊಡ್ಡ ನೀರಾವರಿ ಯೋಜನೆಗಳು, ಸಹಕಾರಿ ಮತ್ತು ರಾಷ್ಟ್ರೀಕೃತ ಬ್ಯಾಂಕುಗಳ ಮೂಲಕ ಸುಲಭ ಸಾಲದ ವ್ಯವಸ್ಥೆ, ಮಿಶ್ರತಳಿ ಬೀಜ, ರಸಗೊಬ್ಬರ ಮತ್ತು ಕೀಟನಾಶಕಗಳ ಸರಬರಾಜು, ಅವುಗಳ ಉಪಯೋಗಿಸುವುದು ಹೇಗೆಂದು ತಿಳಿಸುವ ಕೃಷಿ ವಿಭಾಗದ ಸರ್ಕಾರಿ ಯಂತ್ರಾಂಗ ಮತ್ತು ಕನಿಷ್ಠ ಬೆಂಬಲ ಬೆಲೆಯ (ಎಂ.ಎಸ್.ಪಿ) ಚೌಕಟ್ಟು ವಿಕಸನಗೊಳ್ಳುತ್ತಿದ್ದ ಕಾಲವದು. ಆದರೆ, ಕಾಲಾಂತರದಲ್ಲಿ ಸಹಕಾರ ವ್ಯವಸ್ಥೆ ದುರ್ಬಲಗೊಂಡಿತು. ಅರ್ಥವ್ಯವಸ್ಥೆಯ ಉದಾರೀಕರಣದಿಂದಾಗಿ ಮಾರುಕಟ್ಟೆಗಳ ಮಹತ್ವ ಹೆಚ್ಚುತ್ತಾ ಸರ್ಕಾರದ ಪಾಲು ಕುಂಠಿತವಾಗುತ್ತಾ ಹೋಯಿತು. ಮುಂದಿನ ಎರಡೂವರೆ ದಶಕಗಳಲ್ಲಿ ಕೃಷಿ ಕ್ಷೇತ್ರವು ಯಾವ ದಿಕ್ಕಿನಲ್ಲಿ ಹೋಗಬಹುದೆನ್ನುವುದನ್ನು ಯೋಚಿಸುವುದು ಕಷ್ಟವಾದರೂ, ಯಾವ ದಿಕ್ಕಿನತ್ತ ಪಯಣಿಸಿದರೆ ಉತ್ತಮ ಎಂದು ನಾವು ಊಹಿಸಬಹುದು. ಇದನ್ನು ನಾವು ಮೂರು ಭಾಗಗಳಲ್ಲಿ ವಿಭಜಿಸಿ ಪರಿಶೀಲಿಸಬಹುದು.

### ಭೂಮಿ

ಕೃಷಿಗೆ ಬೇಕಿರುವ ಮೂಲಭೂತ ಸಂಪನ್ಮೂಲ – ನೆಲ, ಭೂಮಿ. ನಮ್ಮಲ್ಲಿ ಕೃಷಿಗೆ ಮೀಸಲಾಗಿರುವ ಭೂವಿಸ್ತೀರ್ಣ ದಶಕದಿಂದ ದಶಕಕ್ಕೆ ಕಮ್ಮಿಯಾಗುತ್ತಿದೆ. ಬೆಳೆಯುತ್ತಿರುವ ಜನಸಂಖ್ಯೆ ನಡುವೆ ಕಡಿಮೆ ವಿಸ್ತೀರ್ಣದ ಕೃಷಿ ಭೂಮಿಯಲ್ಲಿ ನಾವು ನಮ್ಮ ದೇಶದ ಆಹಾರ ಭದ್ರತೆಯನ್ನು ಕಾಪಾಡುತ್ತಿರುವುದಲ್ಲದೇ, ರಫ್ತು ಕೂಡಾ ಮಾಡುತ್ತಿದ್ದೇವೆಂದರೆ ಅದಕ್ಕೆ ಕಾರಣ ವೈಜ್ಞಾನಿಕ ಆವಿಷ್ಕಾರಗಳಿಂದಾದ ಉತ್ಪಾದಕತೆ ಹೆಚ್ಚುತ್ತಿರುವುದು. ಆದರೆ ಇನ್ನೂ ದಶಕಗಳಲ್ಲಿ ನಮ್ಮ ಜನಸಂಖ್ಯೆ ಬೆಳೆದು ನಂತರ ಒಂದು ಸ್ಥಿರತೆಯನ್ನು ಕಾಯ್ದುಕೊಳ್ಳುತ್ತದೆ. ಅಲ್ಲಿಯ ತನಕ ಬೆಳೆಯುತ್ತಿರುವ ಜನಸಂಖ್ಯೆಗೆ ಉದ್ಯೋಗ-ಉಪಾಧಿಗಳನ್ನು ಕಲ್ಪಿಸಬೇಕು. ಇದಕ್ಕೆ ನಗರೀಕರಣವೂ ಕೃಷಿಯೇತರ ಕ್ಷೇತ್ರಗಳ ಬೆಳವಣಿಗೆಯೂ ಆಗಬೇಕು. ಇದಕ್ಕಾಗಿ ಕೃಷಿಯ ಭೂಮಿಯನ್ನು ಬಳಸಬೇಕಾಗುತ್ತದೆ. ಉದಾಹರಣೆಗೆ ಹೆದ್ದಾರಿಗಳ ನಿರ್ಮಾಣ, ರೈಲು ಮಾರ್ಗಗಳು, ಹೊಸ ನಗರಗಳು, ಇರುವ ನಗರಗಳ ವಿಸ್ತರಣೆ ಈ ಎಲ್ಲದಕ್ಕೂ ಕೃಷಿ ಭೂಮಿಯನ್ನೇ ಸ್ವಾಧೀನಪಡಿಸಿಕೊಂಡು ಬಳಸಬೇಕು.

ಬಂಜರು ಮತ್ತು ಮರಳುಗಾಡುಗಳನ್ನು ವೈಜ್ಞಾನಿಕ ಆವಿಷ್ಕಾರದಿಂದ ಕೃಷಿಯೋಗ್ಯವಾಗಿ ಮಾಡಬಹುದೇ? ಆಗಬಹುದೇನೋ. ಭೂಮಿಯಿಲ್ಲದೆಯೂ ಜಲಸಂಪನ್ಮೂಲದಿಂದ ಬೆಳೆ ಬೆಳೆಯಬಹುದೇ? ಹೈಡ್ರೋಪೋನಿಕ್ಸ್ ಮೂಲಕ ಇದೂ ಸಾಧ್ಯವಿದೆ. ಆದರೆ, ವಿಸ್ತೃತವಾಗಿ ಇಂತಹ ಎಲ್ಲ ಬಗೆಯ ಬೆಳೆಗಳಿಗೂ ಅಳವಡಿಸುವ ತಂತ್ರಜ್ಞಾನ ನಮ್ಮಲ್ಲಿ ಇನ್ನೂ ಇಲ್ಲ.

ಈ ಎರಡು ಮಾರ್ಗಗಳನ್ನು ಬಿಟ್ಟರೆ ನಮಗಿರುವ ಮೂರನೇ ಮಾರ್ಗ ಅರಣ್ಯಗಳನ್ನು ಕಡಿದು ಕೃಷಿಯೋಗ್ಯ ಮಾಡುವುದು. ಅದರಿಂದ ಪರಿಸರಕ್ಕೆ ಕುತ್ತು ಎನ್ನುವುದು ಎಲ್ಲರಿಗೂ ತಿಳಿದ ವಿಚಾರ. ಹೀಗಾಗಿ ಕೃಷಿಗೆಂದು ಮೀಸಲಿಟ್ಟಿರುವ ಭೂಮಿಯ ಪ್ರಮಾಣ ತೀವ್ರಗತಿಯಲ್ಲಿ ಕಡಿಮೆಯಾಗದಂತೆ ನೋಡಿಕೊಳ್ಳುವುದು ಸರ್ಕಾರದ ಪ್ರಾಥಮಿಕ ಆದ್ಯತೆಯಾಗಬೇಕು. ನಮ್ಮ ಆಹಾರ ಭದ್ರತೆಯನ್ನು ಬಲಿಕೊಟ್ಟು ದೊಡ್ಡ ಇಮಾರತುಗಳನ್ನು ನಿರ್ಮಿಸುವುದರಲ್ಲಿ ಅರ್ಥವಿಲ್ಲ. ವ್ಯಾಪಕವಾದ ಅಧ್ಯಯನ ನಡೆಸಿ ನಗರೀಕರಣದ ಗತಿ, ಅದರಿಂದ ಕೃಷಿಯ ಇಳುವರಿ, ಆರ್ಥಿಕತೆಯ ಮೇಲೆ ಆಗುವ ಪರಿಣಾಮವನ್ನು ಅಂದಾಜು ಮಾಡುವುದು ಮುಖ್ಯ. ಆಧುನಿಕತೆಯನ್ನು ಅಪ್ಪಿಕೊಳ್ಳುವಾಗಲೂ ಮೂಲಭೂತ ಸಂಪನ್ಮೂಲಗಳನ್ನು ಕಾಪಿಟ್ಟುಕೊಳ್ಳುವ ಯೋಜನೆ ಮತ್ತು ಅದಕ್ಕೆ ತಕ್ಕ ಕಾನೂನಿನ ಚೌಕಟ್ಟಿನ ಬಗ್ಗೆ ಸರ್ಕಾರ ತುರ್ತಾಗಿ ಯೋಚಿಸಬೇಕು. ಆಹಾರದ ಸ್ವಾವಲಂಬನೆ ಮತ್ತು ಸುರಕ್ಷತೆಯಿಲ್ಲದ ಆರ್ಥಿಕ ಸಮೃದ್ಧಿ ಇದ್ದು ಏನು ಪ್ರಯೋಜನ? ಹೀಗಾಗಿ ಕೃಷಿ ಕ್ಷೇತ್ರದಲ್ಲಿ ಭೂಮಿಯ ಮೂಲಭೂತ ಪಾತ್ರವನ್ನು ಗಮನಿಸಿ ಅದನ್ನು ಕಾಪಿಟ್ಟುಕೊಳ್ಳುವುದು ಮುಂದಿನ ಎರಡೂವರೆ ದಶಕಗಳ ಆದ್ಯತೆಗಳಲ್ಲಿ ಒಂದಾಗಬೇಕು.

ಕೃಷಿಗೆ ಮೀಸಲಿಟ್ಟುರುವ ಭೂಮಿಯ ಪ್ರಮಾಣ ಕುಗ್ಗದಿರಬೇಕೆಂದರೆ ಭೂಮಿಯ ಮಾಲೀಕತ್ವ ಮತ್ತು ಅದರ ಉಪಯೋಗದ ದಾಖಲೀಕರಣ, ಗಣಕೀಕರಣ ವಿಸ್ತೃತವಾಗಿ ಆಗಬೇಕು. ಈ ಎಲ್ಲವನ್ನು ಬಾಹ್ಯಾಕಾಶದಿಂದ ಗ್ರಹಿಸುವ ಚಿತ್ರಗಳಿಂದ ದಾಖಲಾತಿಯನ್ನು ಗಟ್ಟಿ ಮಾಡಿ ಭೂಮಿಯನ್ನು ಬೇರೆ ಉಪಯೋಗಕ್ಕಾಗಿ ಪರಿವರ್ತಿಸುವುದನ್ನು ತಡೆಯಬಹುದು.

**ಮಾರುಕಟ್ಟೆಗಳು:** ರೈತರ ಮಟ್ಟದ ಆರ್ಥಿಕತೆಯಲ್ಲಿ ಮತ್ತೊಂದು ಆಯಾಮ ಮಾರುಕಟ್ಟೆಗೆ ಸಂಬಂಧಿಸಿದ್ದು. ಯಾವುದೇ ವ್ಯಾಪಾರ ಮಾಡುವಾಗ ಮಾರುಕಟ್ಟೆಯಲ್ಲಿ ಎಷ್ಟು ಬೆಲೆ ಸಿಕ್ಕಬಹುದು ಎನ್ನುವ ಅಂದಾಜು ಉತ್ಪಾದಕರಿಗೆ ಇರುತ್ತದೆ. ಹಾಗೂ ಈ ದರಗಳಲ್ಲಿ ಏರುಪೇರಾದಾಗ ಉತ್ಪಾದನೆಯನ್ನು ಹೆಚ್ಚು-ಕಮ್ಮಿ ಮಾಡುವ ಪ್ರಕ್ರಿಯೆಯನ್ನು ನಾವು ನೋಡಿದ್ದೇವೆ. ಒಪೆಕ್ ದೇಶಗಳು ತೈಲೋತ್ಪನ್ನಗಳ ದರವನ್ನು ಉತ್ಪಾದನೆಯ ಏರುಪೇರಿನ ಮೂಲಕ ತಮಗೆ ಅನುಕೂಲವಾಗುವಂತೆ ಸರಿದೂಗಿಸುವುದನ್ನು ನಾವು ಕಂಡಿದ್ದೇವೆ. ಆದರೆ, ಕೃಷಿಯಲ್ಲಿ ಒಂದು ವಿಶಿಷ್ಟ ಸಮಸ್ಯೆಯಿದೆ. ಬೀಜ ಬಿತ್ತುವ ಸಮಯದಲ್ಲಿ ಆ ಒಂದು ಫಸಲಿನ ಒಟ್ಟಾರೆ ವಿಸ್ತೀರ್ಣ, ಮಾರುಕಟ್ಟೆಗಳ ಆಗುಹೋಗುಗಳು ಮುಂಚಿತವಾಗಿ ರೈತರಿಗೆ ತಿಳಿದಿರುವುದಿಲ್ಲ. ಬೀಜ ಬಿತ್ತಿದ ನಂತರ, ಫಸಲು ಕಟಾವಿಗೆ ಬರುವವರೆಗೂ ಅದನ್ನೇ ಬೆಳೆಸುವ ಕೆಲಸ ಮಾಡಬೇಕೇ ಹೊರತು ಹೆಜ್ಜೆ ಹಿಂದೆ ಹಾಕಲು ಸಾಧ್ಯವಿಲ್ಲ. ಹೀಗಾಗಿಯೇ ನಮ್ಮಲ್ಲಿ ರಸ್ತೆಯ ಮೇಲೆ ಈರುಳ್ಳಿ – ಟೊಮೆಟೊ ಚೆಲ್ಲಾಡುವಷ್ಟು ಅಧಿಕ ಉತ್ಪಾದನೆ ಮತ್ತು ಕನಿಷ್ಠ ದರ ದೊರಕಿದರೆ, ಕೆಲವೊಮ್ಮೆ ಸರ್ಕಾರಗಳೇ ಅಲ್ಲಾಡುವ ಮಟ್ಟಕ್ಕೆ ಈರುಳ್ಳಿಯ ದರಗಳು ತಾರಕಕ್ಕೇರುವುದನ್ನು ಕಂಡಿದ್ದೇವೆ. ಎಂಎಸ್‌ಪಿಯ ಚೌಕಟ್ಟು ಈ ಕಾರಣದಿಂದಾಗಿ ಕೃಷಿಗೆ ಅತ್ಯವಶ್ಯಕವಾಗುತ್ತದೆ. ಎಂಎಸ್‌ಪಿಯನ್ನು ಮೊದಲೇ ನಿಗದಿ ಮಾಡುವ ಮೂಲಕ ಸರ್ಕಾರವೂ ಯಾವ ಫಸಲಿಗೆ ಎಷ್ಟು ಪ್ರೋತ್ಸಾಹ ಕೊಡುತ್ತಿದೆ ಎನ್ನುವುದಕ್ಕೆ ಒಂದು ಸಾಂಕೇತಿಕ ಚೌಕಟ್ಟನ್ನೂ ಒದಗಿಸಿದಂತಾಗುತ್ತದೆ. ಜತೆಗೆ, ವಿಕೇಂದ್ರೀಕೃತ ಖರೀದಿಯ ಚೌಕಟ್ಟನ್ನೂ ಸರ್ಕಾರ ಹಾಕಿಕೊಳ್ಳಬೇಕು. ಇದರಿಂದಾಗಿ ಮಾರುಕಟ್ಟೆಯಲ್ಲಿರಬಹುದಾದ ಏರುಪೇರನ್ನು ನಿರ್ವಹಿಸಲು ಸಾಧ್ಯವಾಗತ್ತದೆ.

ಇದು ಪ್ರಸ್ತುತ ಚೌಕಟ್ಟಿನಲ್ಲಿ ಸರ್ಕಾರ ಮಾಡಬಹುದಾದ ಕೆಲಸ. ಆದರೆ, ಮಾರುಕಟ್ಟೆಗಳ ಆಧುನೀಕರಣ ಒಂದು ಭಿನ್ನವಾದ ಸವಾಲೇ ಆಗಿದೆ. ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಮಾರಾಟದ ದರ, ಖರೀದಿ ಮಾಡುವವರ ಬೇಡಿಕೆಗಳನ್ನು ಕಂಪ್ಯೂಟರ್ ತೆರೆಯ ಮೇಲೆ ತೋರಿಸಿ ವ್ಯವಹರಿಸವ ಅನುಕೂಲವನ್ನು ಕಲ್ಪಿಸುವುದು ಷೇರುಬಜಾರಿಗೆ ಸಾಧ್ಯವಿದೆ ಎಂದಾದರೆ ಅದನ್ನು ಕೃಷಿಯ ವ್ಯಾಪಾರಕ್ಕೂ ವಿಸ್ತರಿಸಬಹುದು.

ಅಂದರೆ ಕೃಷಿ ಮಾರುಕಟ್ಟೆಯೂ ತಂತ್ರಜ್ಞಾನದಿಂದ ಲಾಭ ಪಡೆಯುವಂತಾಗಬೇಕು. ಇಲ್ಲಿ ಕೃಷಿ ಉತ್ಪನ್ನಗಳ ವ್ಯಾಪಾರದ ಪ್ರಕ್ರಿಯೆಯಲ್ಲಿ ಮೂಲಭೂತ ಬದಲಾವಣೆಯಾಗಬೇಕು. ಭೌತಿಕವಾಗಿ ಕೃಷಿ ಉತ್ಪನ್ನಗಳನ್ನು ಆಧುನಿಕ ಉಗ್ರಾಣಗಳಿಗೆ ಸರಬರಾಜು ಮಾಡಿ ಅಲ್ಲಿಂದ ಒಂದು ಡೀ-ಮೆಟೀರಿಯಲೈಸ್ಡ್ ವೇರ್‌ಹೌಸ್ ರಸೀದಿಯನ್ನು ರೈತರು ಪಡೆಯುವ ಸವಲತ್ತು ಸೃಷ್ಟಿಸಿದರೆ, ಆ ವೇರ್‌ಹೌಸ್ ರಸೀದಿಯೇ ಒಂದು ಆರ್ಥಿಕ ಆಸ್ತಿಯಾಗಲು ಸಾಧ್ಯ. ಹಾಗಾದಾಗ ಮಾಲನ್ನು ಉಗ್ರಾಣಕ್ಕೆ ಸರಬರಾಜು ಮಾಡಿ ಅದರ ಗುಣಮಟ್ಟ ಮತ್ತು ತೂಕವನ್ನು ರಸೀದಿಯಲ್ಲಿ ದಾಖಲಿಸಿದರೆ, ರೈತರಿಗೆ ಇಷ್ಟವಾದ ಅನುಕೂಲಕರವಾದ ಸಮಯದಲ್ಲಿ ಆ ರಸೀದಿಯನ್ನು ಆಗಿನ ಬೆಲೆಗೆ ತಕ್ಕಂತೆ ದುಡ್ಡಿನ ರೂಪದಲ್ಲಿ ಪಡೆಯಲು ಸಾಧ್ಯವಾಗುತ್ತದೆ. ಈಗ ಸರ್ಕಾರ ಬಂಗಾರವನ್ನು ಕಾಗದದ ರೂಪದಲ್ಲಿ ಗೋಲ್ಡ್ ಬಾಂಡ್ ರೂಪದಲ್ಲಿ ಮಾರಾಟ ಮಾಡಲು ಸಾಧ್ಯವಾದಂತೆಯೇ, ಸೋನಾ ಮಸೂರಿ ಅಕ್ಕಿಗೆ ಸಂಬಂಧಿಸಿದ ವೇರ್‌ಹೌಸ್ ರಸೀದಿಯನ್ನೂ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಸಾಧ್ಯವಾಗುತ್ತದೆ.

ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿರುವ ಕರ್ನಾಟಕ ರಾಜ್ಯ ಈ ಪ್ರಕ್ರಿಯೆಯಲ್ಲಿ ನಾಯಕತ್ವ ವಹಿಸಿದರೆ ಕೃಷಿಯ ಕಾಯಕಲ್ಪಕ್ಕೆ ಒಂದು ದಾರಿ ಮಾಡಿಕೊಟ್ಟಂತಾಗುತ್ತದೆ. ನಾವು ಮಾರುಕಟ್ಟೆ ಮತ್ತು ಸುಧಾರಣೆ ಎಂದಾಕ್ಷಣಕ್ಕೆ ಖಾಸಗಿ ಜನರು ದೊಡ್ಡ ಭೂ ಹಿಡುವಳಿಗಳನ್ನು ಖರೀದಿಸಿ ಆಧುನಿಕ ಫಾರಂಗಳನ್ನು ಮಾಡುವುದು, ರೈತ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಖಾಸಗಿ ಕೈಗೆ ಒಡ್ಡುವುದನ್ನೇ ಯೋಚಿಸುತ್ತೇವೆ. ಆದರೆ ಮಾರುಕಟ್ಟೆಯಲ್ಲಿ ರೈತರು ಸಶಕ್ತರಾಗಿ ವ್ಯವಹರಿಸಲು ಈಗಿನ ರೈತರನ್ನೇ ಸಬಲಗೊಳಿಸುವ ಮಾರ್ಗಗಳನ್ನು ಕಂಡುಕೊಳ್ಳುತ್ತಿಲ್ಲ. ಆಧುನಿಕೀಕರಣ ಮತ್ತು ತಂತ್ರಜ್ಞಾನದ ಬಳಕೆ ಎಂದಮಾತ್ರಕ್ಕೆ ಅದು ಖಾಸಗೀಕರಣದತ್ತ ಹೋಗಲೇ ಬೇಕೆಂದೇನೂ ಇಲ್ಲ. ದರ್ಶನ್ ಪುಟ್ಟಣ್ಣಯ್ಯ ಮತ್ತು ಯೋಗೇಂದ್ರ ಯಾದವ್ ಅವರು ನಂದನ್ ನಿಲೇಕಣಿಯ ಕೈಕುಲುಕಿದರೆ ಇದು ಸಾಧ್ಯ. ಈ ಕೈಕುಲುಕುವ ಪ್ರಕ್ರಿಯೆಯನ್ನು ಸರ್ಕಾರಗಳ ನೀತಿಯನುಸಾರ ನೋಡಬೇಕಾದ ಜವಾಬ್ದಾರಿಯನ್ನು ನಮ್ಮ ರಾಜಕೀಯ ಪ್ರತಿನಿಧಿಗಳು ಮಾಡಬೇಕಾಗಿದೆ.

ಕರ್ನಾಟಕದ ಮುಂದಿನ ಇಪ್ಪತ್ತೈದು ವರ್ಷಗಳಲ್ಲಿ ಕೃಷಿಯನ್ನು ಲಾಭದಾಯಕ ಮತ್ತು ಆಧುನಿಕ ಮಾಡುವಲ್ಲಿ ಮಾರುಕಟ್ಟೆಗಳಿಗಿಂತ ಸರ್ಕಾರದ ಪಾತ್ರವೇ ದೊಡ್ಡಮಟ್ಟದಲ್ಲಿದೆ. ನಮ್ಮ ಹೈನುಗಾರಿಕೆಯ ಅಭಿವೃದ್ಧಿಗೆ ಸರ್ಕಾರಗಳು ರೂಪಿಸಿದ ನೀತಿಗಳ ಫಲವಾಗಿಯೇ ಇಂದು ಹೈನುಗಾರಿಕೆ ಲಾಭದಾಯಕವಾಗಿದೆ, ಮಾರುಕಟ್ಟೆಯ ಸೂತ್ರದ ಮೇಲೆ ಮುಂದುವರಿಯುತ್ತಲೇ ರೈತಪರವಾಗಿದೆ. ಹೈನುಗಾರಿಕೆಯಲ್ಲಿ ಹೊರಪದರ ಮಾರುಕಟ್ಟೆಯನ್ನು ನೋಡುತ್ತಿದ್ದಂತೆ ಕಂಡರೂ ಒಟ್ಟಾರೆ ಆತ್ಮ ರೈತಪರವಾಗಿಯೇ ಇತ್ತು. ಆದರೆ ಹೈನುಗಾರಿಕಾ ಕ್ಷೇತ್ರವು ಹಾಲಿನ ಗುಣಮಟ್ಟದ ಪರೀಕ್ಷೆ, ಕೃತಕ ಗರ್ಭಧಾರಣೆ, ಶೀತಲೀಕರಣ, ಪಾಶ್ಚರೀಕರಣ, ಪ್ಯಾಕೇಜಿಂಗ್, ಮಾರಾಟ ವ್ಯವಸ್ಥೆ – ಎಲ್ಲದರಲ್ಲಿಯೂ ಆಧುನಿಕತೆ ಮತ್ತು ತಂತ್ರಜ್ಞಾನ ವನ್ನು ಅಳವಡಿಸಿಕೊಂಡು ಮುಂದುವರಿಯಿತು. ಇದೇ ಮಾದರಿಯನ್ನು ಭಿನ್ನ ರೀತಿಯಲ್ಲಿ ನಾವು ಫಸಲುಗಳಿಗೂ ಅನ್ವಯಿಸಿದರೆ ಕೃಷಿಯ ಸುವರ್ಣಕಾಲಕ್ಕೆ ನಾಂದಿ ಹಾಕಬಹುದು. ಸರ್ಕಾರ ಮನಸ್ಸು ಮಾಡಬೇಕಷ್ಟೇ.

ಲೇಖಕ: ಪ್ರಾಧ್ಯಾಪಕ, ಐಐಎಂ – ಬೆಂಗಳೂರು


### ರೈತರ ಮಟ್ಟದ ಆರ್ಥಿಕತೆ

ರೈತರ ಮಟ್ಟದ ಆರ್ಥಿಕತೆಯನ್ನು ನಾವು ಪರಿಗಣಿಸಬೇಕು. ನಮ್ಮಲ್ಲಿರುವ ವ್ಯಾಪಾರಗಳಿಗೆ ನಿಯಮಿತ ಬಾಧ್ಯತೆಯ ಚೌಕಟ್ಟಿನಲ್ಲಿ ಕೆಲಸ ಮಾಡುವ ಸಾಧ್ಯತೆಯಿದೆ. ಇದೇ ಚೌಕಟ್ಟಿನಲ್ಲಿ ನವೋದ್ಯಮಗಳೂ ಆಧುನಿಕ ಕಂಪನಿಗಳೂ ನಡೆಯುತ್ತವೆ. ಪಾಲುದಾರಿಕೆಯ ಸಂಸ್ಥೆಗಳೂ ಲಿಮಿಟೆಡ್ ಲಯಬಲಿಟಿ ಪಾರ್ಟನರ್‌ಶಿಪ್ ಆಗಿ ಕಟ್ಟಿಕೊಳ್ಳುವ ಸಾಧ್ಯತೆಯಿದೆ. ಈ ಚೌಕಟ್ಟಿನಲ್ಲಿ ವ್ಯಾಪಾರದಲ್ಲಿ ಆಗುವ ನಷ್ಟವು ಹೂಡಿಕೆಗೆ ನಿಯಮಿತವಾಗಿರುತ್ತದೆಯೇ ಹೊರತು, ಖಾಸಗಿ ಬಾಧ್ಯತೆಯಾಗುವುದಿಲ್ಲ. ಆದರೆ ಕೃಷಿಯಲ್ಲಿ ಈ ಏರ್ಪಾಟಿಲ್ಲ. ಮಿಕ್ಕ ವ್ಯಾಪಾರಗಳಿಗಿಂತ ಕೃಷಿಯಲ್ಲಿ ವೈಫಲ್ಯದ ಸಾಧ್ಯತೆ ಹೆಚ್ಚಿದೆ.

ಅದಕ್ಕೆ ಕಾರಣ ಮಿಕ್ಕ ವ್ಯಾಪಾರಗಳಲ್ಲಿ ಹೆಚ್ಚುವರಿ ಉತ್ಪಾದನೆ ಮತ್ತು ಉತ್ಪಾದನಾ ವೈಫಲ್ಯಗಳ ಅಪಾಯ ಕಡಿಮೆ. ಒಂದು ಸಾಬೂನನ್ನು ತಯಾರಿಸಲು ಬೇಕಾದ ತಂತ್ರಜ್ಞಾನ (ಕೃಷಿಯ ತಂತ್ರಜ್ಞಾನದಂತೆ) ವ್ಯಾಪಕವಾಗಿ ಲಭ್ಯವಾಗಿರುವುದರಿಂದ, ಯಾರು ಬೇಕಾದರೂ ಸಾಬೂನನ್ನು ತಯಾರಿಸಬಹುದು. ಈ ಬಗೆಯ ವ್ಯಾಪಾರಗಳಲ್ಲಿ ಮಾರಾಟದಲ್ಲಿ ವಿಫಲವಾಗುವ ಅಪಾಯವಿದೆ. ಆದರೆ, ಕೃಷಿಯಲ್ಲಿ ಉತ್ಪಾದಕತೆ ಕುಸಿಯುವುದಕ್ಕೆ ತಂತ್ರಜ್ಞಾನದ ಅಸಮರ್ಥ ಉಪಯೋಗ ಸಣ್ಣಕಾರಣವಿರಬಹುದು. ಆದರೆ, ಉತ್ಪಾದಕತೆ ಕಮ್ಮಿಯಾಗಲು ಮಳೆ, ಪರಿಸರ, ಶಾಖ ಹಾಗೂ ಇತರೆ ನೈಸರ್ಗಿಕ ಕಾರಣಗಳು ರೈತರ ಕೌಶಲವನ್ನು ಮೀರಿದ್ದು. ಹೀಗಾಗಿ ಕೃಷಿಯಲ್ಲಿ ವೈಫಲ್ಯದ ಸಾಧ್ಯತೆಗಳು ಮಿಕ್ಕ ವ್ಯಾಪಾರಗಳಿಗಿಂತ ಹೆಚ್ಚಿರುವುದು ಸಹಜವೇ. ಇದನ್ನು ಒಂದು ಚೌಕಟ್ಟಿನಲ್ಲಿ ಹಾಕಬೇಕಾದರೆ ಭೂಮಿಯ ಕ್ರೋಡೀಕರಣದೊಂದಿಗೆ ಕಾರ್ಪೊರೇಟ್ ಕೃಷಿಯತ್ತ ಹೋಗಬೇಕಾಗುತ್ತದೆ. ಆದರೆ, ನಮ್ಮ ಸಂದರ್ಭದಲ್ಲಿ ಇದನ್ನು ಪ್ರತಿಪಾದಿಸುವುದೂ ಸರಿಯಲ್ಲ. ಕಾರ್ಪೊರೇಟ್ ಕೃಷಿಯಿಂದಾಗಿ ಸಮಾಜದಲ್ಲಿ ಅಸಮಾನತೆ ಹೆಚ್ಚುತ್ತದಲ್ಲದೇ, ಅದು ಪರಿಸರಕ್ಕೂ ಮಾರಕವಾಗಿರುತ್ತದೆ. ಕಾರ್ಪೊರೇಟ್ ಸಂಸ್ಥೆಗಳು ಉತ್ಪಾದಕತೆ ಹೆಚ್ಚಿಸಲು ಪರಿಸರದಲ್ಲಿರುವ ಸಂಪನ್ಮೂಲಗಳನ್ನು ಬೇಜವಾಬ್ದಾರಿಯಿಂದ ಬಳಸುತ್ತವೆ ಎನ್ನುವುದನ್ನು ನೆನಪಿಟ್ಟುಕೊಳ್ಳಬೇಕು.

ಸಣ್ಣ ಹಿಡುವಳಿ ಮತ್ತು ಅದರಲ್ಲಿರುವ ನೈಸರ್ಗಿಕ ಅಪಾಯಗಳನ್ನು ಪರಿಗಣಿಸಿ, ಸಾಲಮನ್ನಾಗಿಂತ ಉತ್ತಮವಾದ ಚೌಕಟ್ಟನ್ನು ನಾವು ಹಾಕಿಕೊಳ್ಳಬೇಕಿದೆ. ವಿಕ್ಷಿಪ್ತ ಕಾಲದಲ್ಲಿ ರೈತರ ಸಾಲಗಳನ್ನು ಮನ್ನಾ ಮಾಡುವುದು ಸರಿಯಾದ ವಿಚಾರವಾದರೂ, ಕೃಷಿಯ ಬಿಕ್ಕಟ್ಟು ಮತ್ತು ಸಾಲಮನ್ನಾಗಳು ಚುನಾವಣೆಯ ಕಾಲಕ್ಕೆ ಮಾತ್ರ ಸಂಭವಿಸುವ ಒಗಟನ್ನು ಬಿಡಿಸಿ, ಸಾಲಮನ್ನಾ ಯಾವ ರೀತಿಯಲ್ಲಿ ಕೈಗೊಳ್ಳಬೇಕು ಎನ್ನುವುದರ ಬಗೆಗೂ ಒಂದು ಮೌಲಿಕವಾದ ಚೌಕಟ್ಟನ್ನು ಕಟ್ಟಿಕೊಳ್ಳಬೇಕು. ಇದಕ್ಕೂ ಒಂದು ಸರಿಯಾದ ಕಾನೂನನ್ನು ಏರ್ಪಾಟು ಮಾಡಿಕೊಳ್ಳಬೇಕಾಗಿದೆ.



## ಕದಂಬರ ಕಾಲಕ್ಕೆ ರಿಷಬ್



**ನಟ ರಿಷಬ್ ಶೆಟ್ಟಿ** ‘ಕಾಂತಾರ–ಒಂದು ದಂತಕಥೆ’ಯ ಮೊದಲ ಅಧ್ಯಾಯದ ಚಿತ್ರೀಕರಣಕ್ಕೆ ಮುನ್ನುಡಿ ಬರೆದಿದ್ದಾರೆ. ಚಿತ್ರದ ಮುಹೂರ್ತ ನಡೆದಿದ್ದು, ಡಿಸೆಂಬರ್ ಅಂತ್ಯದಿಂದ ಚಿತ್ರೀಕರಣ ಆರಂಭವಾಗಲಿದೆ. 2024ರ ದ್ವಿತೀಯಾರ್ಧದಲ್ಲಿ ಸಿನಿಮಾ ಬಿಡುಗಡೆಯಾಗಲಿದೆ.

2022ರಲ್ಲಿ ಹೊಂಬಾಳೆ ಫಿಲ್ಮ್ಸ್ ನಿರ್ಮಾಣದ ‘ಕೆ.ಜಿ.ಎಫ್. ಚಾಪ್ಟರ್–2’ ಹಾಗೂ ‘ಕಾಂತಾರ’ ವಿಶ್ವದಾದ್ಯಂತ ₹1,600 ಕೋಟಿ ಗಳಿಸಿತ್ತು. ಹೀಗಾಗಿ ದೊಡ್ಡ ಬಜೆಟ್‌ನಲ್ಲೇ ‘ಕಾಂತಾರ– ಮೊದಲ ಅಧ್ಯಾಯ’ ಸಿನಿಮಾ ನಿರ್ಮಾಣವಾಗಲಿದೆ ಎನ್ನುವುದು ಸ್ಪಷ್ಟ. ಈ ಟೀಸರ್‌ನ ಮತ್ತೊಂದು ವೈಶಿಷ್ಟ್ಯವೆಂದರೆ, ಚಿತ್ರವು ಕನ್ನಡ, ಇಂಗ್ಲಿಷ್ ಸೇರಿದಂತೆ ಏಳು ಭಾಷೆಗಳಲ್ಲಿ ಮೂಡಿಬರುತ್ತಿದ್ದು, ಪ್ರತಿಯೊಂದು ಭಾಷೆಯ ಟೀಸರ್ ಒಂದೊಂದು ರಾಗದ ಮೂಲಕ ಅಂತ್ಯವಾಗಿದೆ. ಕದಂಬರ ಆಳ್ವಿಕೆಯ ಕಾಲದಲ್ಲಿ ಹುಟ್ಟಿದ ದಂತಕಥೆಯ ಕಥಾಹಂದರ ಎಂದು ಟೀಸರ್‌ನಲ್ಲಿ ಉಲ್ಲೇಖಿಸಲಾಗಿದೆ. ಪಾತಾಳ ಲೋಕದಲ್ಲಿ ಕೊಡಲಿ ಹಾಗೂ ತ್ರಿಶೂಲ ಹಿಡಿದಿರುವ ರಿಷಬ್ ಅವರು ಯಾವ ಪಾತ್ರವನ್ನು ತೆರೆಗೆ ತರುತ್ತಿದ್ದಾರೆ ಎನ್ನುವುದು ನಿಗೂಢವಾಗಿದೆ. ಈ ಪಾತ್ರ ಹೊಸದೊಂದು ಕೌತುಕ ಸೃಷ್ಟಿಸಿದೆ.

ಪೋಸ್ಟರ್, ಟೀಸರ್ ವೀಕ್ಷಿಸಿದ ಜನರು ಸಾಮಾಜಿಕ ಮಾಧ್ಯಮಗಳಲ್ಲಿ ತಮ್ಮ ಕಲ್ಪನೆಯ ಕಥೆಗಳನ್ನು, ಪಾತ್ರಗಳನ್ನು ಸೃಷ್ಟಿಸುತ್ತಿದ್ದಾರೆ. ರಿಷಬ್ ಅವರು ಪಂಜುರ್ಲಿ, ಗುಳಿಗ ದೈವ ಅಥವಾ ಪರಶುರಾಮನ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದಾರೆ ಎಂಬ ಊಹಾಪೋಹಗಳು ಹರಿದಾಡುತ್ತಿವೆ. ‘ರಿಷಬ್ ಧರಿಸಿರುವ ಕಿವಿಯೋಲೆ, ಪಂಜುರ್ಲಿ ದೈವದ ಕೋರೆಗಳಂತಿವೆ’ ಎಂದು ನಟ ರಕ್ಷಿತ್ ಶೆಟ್ಟಿ ಉಲ್ಲೇಖಿಸಿದ್ದಾರೆ. ‘ಕಾಂತಾರ–ಮೊದಲ ಅಧ್ಯಾಯ’ ಹೊಸ ಪರ್ಯಾಯ ಜಗತ್ತೊಂದನ್ನು ವೀಕ್ಷಕರಿಗೆ ಪರಿಚಯಿಸುವಂತೆ ತೋರುತ್ತಿದೆ.




## ಡಿ.6ರಂದು ‘ನಂದಿ’ ಪ್ರಶಸ್ತಿ ಪ್ರದಾನ

**ಮನರಂಜನಾ** ಕ್ಷೇತ್ರದ ಸಾಧಕರನ್ನು ಗುರುತಿಸಿ, ಗೌರವಿಸುವ ‘ನಂದಿ ಚಲನಚಿತ್ರ ಪ್ರಶಸ್ತಿ–2023’ ಸಮಾರಂಭವು ಡಿ.6ರಂದು ಬೆಂಗಳೂರಿನ ಒರಾಯನ್ ಮಾಲ್‌ನ ಆವರಣದಲ್ಲಿ ನಡೆಯಲಿದೆ.

ಇತ್ತೀಚೆಗೆ ನಟ ಸುದೀಪ್ ಅವರು ಈ ಪ್ರಶಸ್ತಿಯನ್ನು ಅನಾವರಣಗೊಳಿಸಿ ಕಾರ್ಯಕ್ರಮಕ್ಕೆ ಶುಭ ಕೋರಿದರು. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ ನಿಕಟಪೂರ್ವ ಅಧ್ಯಕ್ಷ ಭಾ.ಮ.ಹರೀಶ್, ನಿರ್ಮಾಪಕ ನಿತ್ಯಾನಂದ ಪ್ರಭು, ಪದ್ಮಾವತಿ ಚಂದ್ರಶೇಖರ್ ಹಾಗೂ ಅನಿತಾ ರೆಡ್ಡಿ ಈ ಪ್ರಶಸ್ತಿಯ ಸಂಸ್ಥಾಪಕರಾಗಿದ್ದಾರೆ. ಭಾ.ಮ.ಗಿರೀಶ್, ಹರ್ಷಿತಾ, ನಂದಿತಾ ಹಾಗೂ ಅಶೋಕ್ ಅವರು ಪ್ರಶಸ್ತಿಯ ನಿರ್ದೇಶಕ ಸ್ಥಾನದಲ್ಲಿದ್ದಾರೆ. ಇದು ಪ್ರಶಸ್ತಿಯ ಇದು ಮೊತ್ತಮೊದಲ ಆವೃತ್ತಿಯಾಗಿದೆ.

‘ಈ ಪ್ರಶಸ್ತಿಗಳು ಯಾರಿಗೆ ಸಲ್ಲಬೇಕೋ ಅವರಿಗೆ ಸಲ್ಲಲಿ. ಪ್ರಶಸ್ತಿಗೆ ಗೌರವ ಕೊಟ್ಟು ಅದಕ್ಕಾಗಿ ಬಾಳಿ ಬದುಕುವವರಿಗೆ ನೀಡಿ. ನಂದಿ ಬಹಳ ಶ್ರೇಷ್ಠ. ಆ ಹೆಸರಲ್ಲಿ ಪ್ರಶಸ್ತಿ ನೀಡುತ್ತಿದ್ದೀರಿ ಎಂದರೆ, ಅದು ಅಷ್ಟೇ ಶುದ್ಧವಾಗಿರಲಿ’ ಎಂದು ಸುದೀಪ್ ಹಾರೈಸಿದರು. ನಂದಿ ಪ್ರಶಸ್ತಿಯಲ್ಲಿ ಕನ್ನಡ ಸಿನಿಮಾಗಳು, ಪ್ರಾದೇಶಿಕ ಭಾಷೆಗಳಾದ ತುಳು, ಕೊಡವ, ಕೊಂಕಣಿ, ಬ್ಯಾರಿ ಹಾಗೂ ಬಂಜಾರ ಈ ಭಾಷೆಗಳ ಸಿನಿಮಾಗಳಿಗೂ ಪ್ರಾಮುಖ್ಯ ನೀಡಲಾಗಿದೆ. ಸಾಹಿತ್ಯ, ಮುದ್ರಣ ಹಾಗೂ ದೃಶ್ಯ ಮಾಧ್ಯಮಗಳಿಗೂ ಪ್ರಶಸ್ತಿ ನೀಡಲಾಗುತ್ತದೆ ಎಂದು ಆಯೋಜಕರು ತಿಳಿಸಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

## ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ಸಚಿನ್ ತೆಂಡೂಲ್ಕರ್ ಅವರ ಮಗಳು ಸಾರಾ ತೆಂಡೂಲ್ಕರ್ ತಾವು ಕ್ರಿಕೆಟರ್ ಶುಭಮನ್ ಗಿಲ್ ಜತೆಗೆ ಡೇಟಿಂಗ್ ನಡೆಸುತ್ತಿದ್ದೇನೆ ಎಂಬುದನ್ನು ಈ ಫೋಟೊ ಮೂಲಕ ಬಹಿರಂಗಪಡಿಸಿದ್ದಾರೆ’ ಎಂಬ ವಿವರ ಇರುವ ಚಿತ್ರ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಆದರೆ ಇದು ತಿರುಚಲಾದ ಚಿತ್ರ.







ಸಾರಾ ತೆಂಡೂಲ್ಕರ್ ಅವರು ತಮ್ಮ ಸೋದರ ಅರ್ಜುನ್ ತೆಂಡೂಲ್ಕರ್ ಅವರ ಜತೆಗೆ ಇರುವ ಚಿತ್ರವನ್ನು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿದ್ದರು. ಅದರಲ್ಲಿ ಅರ್ಜುನ್ ಅವರ ಮುಖವನ್ನು ಅಳಿಸಿ, ಆ ಜಾಗದಲ್ಲಿ ಕ್ರಿಕೆಟರ್ ಶುಭಮನ್ ಗಿಲ್ ಅವರ ಮುಖವನ್ನು ಇರಿಸಿ ಚಿತ್ರವನ್ನು ತಿರುಚಲಾಗಿದೆ. ಸಾರಾ ಅವರು ತಮ್ಮ ಸೋದರ ಅರ್ಜುನ್ ಜತೆಗಿರುವ ನಿಜವಾದ ಚಿತ್ರ ಇದು ಎಂದು ಪಿಟಿಐ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

## ಗುಂಡಣ್ಣ




## ಮಾಯಾವಿ ದೀಪದ ಕಂಬ

ನುಡಿ ಬೆಳಗು



ಕಲೀಮ್ ಉಲ್ಲಾ, ಕನ್ನಡ ಉಪನ್ಯಾಸಕ

**ಒಂದೂರಿನಲ್ಲಿ** ದರವೇಶಿ ಒಬ್ಬನಿದ್ದ. ಅವನ ಬಟ್ಟೆಗಳು ಮಾಸಲಾಗಿ ಹರಿದ್ದವು. ಅನ್ನವಿಲ್ಲದೆ ಹಸಿದು ಕಂಗಾಲಾಗಿದ್ದ. ಭಿಕ್ಷೆ ಬೇಡುತ್ತಾ ಅಲೆಯುತ್ತಿದ್ದ. ಈತನ ಕಂಡು ಕನಿಕರ ಪಟ್ಟ ಒಬ್ಬಳು ತಾಯಿ ಅವನ ಕರೆದು ಆರೈಕೆ ಮಾಡಿದಳು. ಅನ್ನ ಬಟ್ಟೆ ಕೊಟ್ಟು ಇರಲು ನೆಲೆಕೊಟ್ಟಳು. ಆ ತಾಯಿಗೊಬ್ಬ ಅಬ್ದುಲ್ಲ ಎಂಬ ಮಗನಿದ್ದ. ಅವನು ಕಾಡಿನಿಂದ ಸೌದೆ ತಂದು ವ್ಯಾಪಾರ ಮಾಡುತ್ತಿದ್ದ. ಇದರಿಂದಲೇ ಅವರ ಬದುಕು ನಡೆಯುತ್ತಿತ್ತು. ಅವರು ತುಂಬಾ ಬಡವರಾಗಿದ್ದರೂ ದರವೇಶಿಗೆ ಆಶ್ರಯ ಕೊಟ್ಟಿದ್ದರು.

ತನ್ನ ಮೇಲೆ ಇಷ್ಟೊಂದು ಪ್ರೀತಿ, ದಯೆ ತೋರಿದ ಆ ಅವ್ವ ಮಗನಿಗೆ ಪ್ರತಿಯಾಗಿ ಕೊಡಲು ದರವೇಶಿಯಲ್ಲಿ ಏನು ಇರಲಿಲ್ಲ. ಬದಲಿಗೆ ಆತ ಒಂದು ದಿನ ‘ಅಮ್ಮ ನನ್ನ ಬಳಿ ಹಣ, ಆಸ್ತಿ ಎರಡೂ ಇಲ್ಲ. ಆದರೆ ನಾ ಕಷ್ಟಪಟ್ಟು ಕಲಿತ ವಿದ್ಯೆ ಇದೆ. ಊರೂರು ತಿರುಗುತ್ತಾ ಹೊಸದನ್ನು ಕಲಿಯುವ, ಹಂಬಲದ ಮನುಷ್ಯ ನಾನು. ನಿನ್ನ ಮಗನನ್ನು ನನ್ನ ಜೊತೆ ಕಳಿಸಿಕೊಟ್ಟರೆ ನಾ ಕಲಿತ ಅಷ್ಟೂ ವಿದ್ಯೆಯನ್ನು ಅವನಿಗೆ ಕಲಿಸಿಬಲ್ಲೆ. ನಿನಗೆ ನಂಬುಗೆ ಇದ್ದರೆ ಕಳಿಸು’ ಎಂದನು.

ವಿದ್ಯೆ ಇಲ್ಲದ ಮಗ ಕಲಿತಾದರೂ ಉದ್ಧಾರವಾಗಲೆಂದು ದರವೇಶಿಯ ಜೊತೆ ಪುತ್ರನನ್ನು ತಾಯಿ ಕಳುಹಿಸಿಕೊಟ್ಟಳು. ತುಂಬಾ ಊರುಗಳನ್ನು ದರವೇಶಿಯ ಜೊತೆ ಸುತ್ತಿದ ಅಬ್ದುಲ್ಲ ಜೀವನಾನುಭವ ಬಿಟ್ಟು ಮತ್ತೇನು ಪಡೆಯಲಿಲ್ಲ. ದರವೇಶಿ ತನಗೇನೋ ತುಂಬಾ ಮಹತ್ವದ ವಿದ್ಯೆ ಕಲಿಸುತ್ತಾನೆಂದು ಅಬ್ದುಲ್ಲ ನಿರೀಕ್ಷಿಸಿದ್ದ. ಅಬ್ದುಲ್ಲನಿಗೆ ನಿರಾಶೆ ಹೆಚ್ಚಾಗಿ ಒಂದು ದಿನ ‘ನೀವು ಕಲಿತ ವಿದ್ಯೆ ಕಲಿಸದೆ ನನಗೆ ಮೋಸ ಮಾಡುತ್ತಿದ್ದೀರ’ ಎಂದು ಆರೋಪಿಸಿದ.

ಆಗ ದರವೇಶಿ ತಣ್ಣಗೆ ಮುಗುಳ್ನಕ್ಕು ‘ಇರು ನಾಳೆ ನನ್ನ ವಿದ್ಯಾಶಕ್ತಿಯಿಂದ ಈ ಭೂಮಿ ಬಾಯಿ ತೆರೆಯುವುದನ್ನು ತೋರಿಸುತ್ತೇನೆ. ಆಗ ನೀನು ಅದರೊಳಗೆ ಇಳಿದು ಹೋಗುವಿಯಂತೆ. ಅಲ್ಲಿ ಬೆಳ್ಳಿ, ಬಂಗಾರ, ವಜ್ರ, ಮುತ್ತು, ಹವಳದ ರಾಶಿಗಳೇ ಇರುತ್ತವೆ. ಆದರೆ, ಅವು ಯಾವುದನ್ನೂ ನೀನು ಮುಟ್ಟಬಾರದು. ನೋಡಿ ಆಸೆಯೂ ಪಡಬಾರದು. ಅಲ್ಲೊಂದು ದೀಪದ ಕಂಬವಿರುತ್ತದೆ. ಅದನ್ನು ಮಾತ್ರ ತೆಗೆದುಕೊಂಡು ಬಾ. ಆ ದೀಪದ ಬೆಳಕೇ ನಿನಗೆ ವಿದ್ಯೆ, ಬುದ್ಧಿ ಕಲಿಸುತ್ತದೆ’ ಎಂದು ಹೇಳಿದ.

ಮಾರನೆಯ ದಿನ ಅಬ್ದುಲ್ಲ ಸಂಪತ್ತನ್ನು ನೋಡಿ ದುರಾಸೆಗೊಂಡ. ದೀಪದ ಕಂಬದ ಜೊತೆಗೆ ಸಿಕ್ಕಷ್ಟು ಬಂಗಾರ, ವಜ್ರ, ಮುತ್ತು, ಹವಳಗಳ ದೋಚಿದ. ಗುರುವಿನ ಕಣ್ಣು ತಪ್ಪಿಸಿ ಮನೆಗೆ ಓಡಿ ಬಂದ. ತೆರೆದು ನೋಡಿದಾಗ ದೋಚಿದ್ದ ಸಂಪತ್ತು ಬೂದಿ ಉಂಡೆಯಾಗಿದ್ದವು. ಬೆಳಗುವ ದೀಪ ಮಾತ್ರ ಅಬ್ದುಲ್ಲನಲ್ಲಿ ಉಳಿದು ನಗುತ್ತಿತ್ತು.

ಮನುಷ್ಯನಿಗೆ ಹಣವೆಂದರೆ ವ್ಯಾಮೋಹ. ವಿದ್ಯೆ, ಬುದ್ಧಿ ಎಂದರೆ ತಾತ್ಸಾರ. ಸಂಪತ್ತು ಕಂಡಾಗ ದೋಚಿಕೊಳ್ಳಬೇಕೆಂಬ ಆತುರ. ಗಳಿಸಿದ ಹಣ ಬಳಸುವ ವಿವೇಕವನ್ನು ಕೂಡ ಜ್ಞಾನವೇ ನೀಡುವುದು. ಸಂಪತ್ತು ಕೊಡುವ ಸುಖ ಕ್ಷಣಿಕ. ತಿಳಿವಳಿಕೆ, ಜೀವನಾನುಭವ ಕೊಡುವ ನೆಮ್ಮದಿ ಶಾಶ್ವತ. ದರವೇಶಿಯಾಗಿದ್ದ ತನ್ನ ಗುರು ಇಷ್ಟೊಂದು ಸಂಪತ್ತು ಇದ್ದರೂ ಭಿಕ್ಷುಕನಾಗಿ ಏಕೆ ತಿರುಗುತ್ತಿದ್ದ? ಅವನು ಏನನ್ನು ಹುಡುಕುತ್ತಿದ್ದ? ಯಕಃಶ್ಚಿತ್ ದೀಪದ ಕಂಬ ಕೊಟ್ಟು ಅಮೂಲ್ಯ ಸಂಪತ್ತನ್ನು ಬೂದಿ ಮಾಡಿದ ದರವೇಶಿ ಮೋಸಗಾರನಲ್ಲವೇ ಎಂದು ಅಬ್ದುಲ್ಲ ಸಿಟ್ಟಾದ ತಕ್ಷಣ ಆ ದೀಪವು ಅವನ ಕೈಯಿಂದ ಕಣ್ಮರೆಯಾಯಿತು.

## ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಬುಧವಾರ ನವೆಂಬರ್ 29, 2023

**ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ:** ಕಾರ್ತಿಕ ಕೃಷ್ಣ ದ್ವಿತೀಯ ಗಂ. 13-57 ನಕ್ಷತ್ರ: ಮೃಗಶಿರಾ ಗಂ. 13-59 ಯೋಗ: ಸಾಧ್ಯಾ ಗಂ 20-54 ಕರಣ: ಗರ ಗಂ 13-57, ವೃಶ್ಚಿಕ ಮಾಸದ 13 ನೇ ದಿನ, ಮಳೆನಕ್ಷತ್ರ: ಅನುರಾಧ 3.
**ರಾಹುಕಾಲ:** ಮಧ್ಯಾಹ್ನ 12-00 - 01-30
ಸೂರ್ಯೋದಯ : 06-40 ಸೂರ್ಯಾಸ್ತ : 05-57
**ಮುಸ್ಲಿಂ ದಿನಾಂಕ :** 14 ಜುಮಾದುಲ್ಲಾವಲ್
**ಅದೃಷ್ಟ ಸಂಖ್ಯೆ :** 2, 5

**ಮೇಷ:** ಇಂದಿನ ಕೆಲಸ ನಾಳೆ ಮಾಡಿದಾಯಿತು ಎಂದು ಮುಂದೂಡುವುದು ಸರಿಯಲ್ಲ. ಆರೋಗ್ಯದ ಬಗ್ಗೆ ಕಾಳಜಿ ಇರಲಿ. ಮನೆಯಲ್ಲಿ ಉದ್ವೇಗದ ವಾತಾವರಣ ಎದುರಾಗಬಹುದು.

**ವೃಷಭ:** ಖರ್ಚು-ವೆಚ್ಚಗಳಲ್ಲಿ ಹಿಡಿತವಿರಲಿ. ಇತರರು ನಿಮ್ಮ ವಿಶ್ವಾಸ ದುರುಪಯೋಗಪಡಿಸಿಕೊಳ್ಳುವ ಬಗ್ಗೆ ಎಚ್ಚರವಾಗಿರಿ. ಇಂದು ನಿರೀಕ್ಷೆಗೆ ತಕ್ಕಂತೆ ಶುಭ ಕಾಲ ಕೂಡಿಬರಲಿದೆ. ಮಹಾಲಕ್ಷ್ಮಿಯನ್ನು ಪ್ರಾರ್ಥಿಸಿ.

**ಮಿಥುನ:** ಸಂಬಂಧಿಕರ ಅತಿ ವಿಶ್ವಾಸ, ಪ್ರೀತಿಗೆ ಮರುಳಾಗಬೇಡಿ. ನಿಮ್ಮ ಬುದ್ಧಿಯನ್ನು ನಿಮ್ಮ ಕೈಯಲ್ಲಿ ಇಟ್ಟುಕೊಳ್ಳುವುದರಿಂದ ಒಳಿತು. ಮನೆಯಲ್ಲಿ ಎಳ್ಳೆಣ್ಣೆ ದೀಪ ಹಚ್ಚುವುದರಿಂದ ಪಾಪ ಪರಿಹಾರವಾಗಲಿದೆ.

**ಕರ್ಕಾಟಕ:** ಕಾರ್ಯರಂಗದಲ್ಲಿ ಸತತ ಪ್ರಯತ್ನ ಮತ್ತು ಅನುಭವಸ್ತರ ಸಹಯೋಗದಿಂದಾಗಿ ಪ್ರಗತಿ ಕಾಣಬಹುದು. ಮನೆಯಲ್ಲಿನ ಅಹಿತರ ಘಟನೆಯಿಂದ ದೈಹಿಕ ಮತ್ತು ಮಾನಸಿಕ ನೆಮ್ಮದಿ ಇಲ್ಲದಂತಾಗಲಿದೆ.

**ಸಿಂಹ:** ಇಂದಿನ ನಿಮ್ಮ ನಡವಳಿಕೆ ಎಲ್ಲರ ಕೇಂದ್ರ ಬಿಂದುವಾಗಲಿದೆ. ಈ ದಿನ ದೊರೆತ ಖ್ಯಾತಿ ಉಳಿಸಿಕೊಳ್ಳುವತ್ತ ಹೆಚ್ಚಿನ ಗಮನವಿರಲಿ. ಮನರಂಜನೆಗೂ ಸಮಯ ಮೀಸಲಿಟ್ಟು ಮಡದಿ, ಮಕ್ಕಳ ಜತೆ ಸಂಸತದಿಂದ ಇರುವಿರಿ.

**ಕನ್ಯಾ:** ಕೊಡು ಕೊಳ್ಳುವಿಕೆಯ ವ್ಯವಹಾರದಿಂದ ಅಧಿಕ ಲಾಭ ಬರಲಿದೆ. ಸಗಟು ವ್ಯಾಪಾರಿಗಳಿಗೆ ಹೇರಳ ವ್ಯಾಪಾರ ಇರುತ್ತದೆ. ರಾಜಕಾರಣಿಗಳು ಚುನಾವಣಾ ದೃಷ್ಟಿಯಿಂದ ಸಾಮಾಜಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಉತ್ತಮ.

**ತುಲಾ:** ತೈಲ ಲೇಪನದಂತಹ ಆಯ್ಕೆಯಿಂದಾಗಿ ಕಾಲು ನೋವು ಸಂಪೂರ್ಣವಾಗಿ ಉಪಶಮನವಾಗಲಿದೆ. ವಿದ್ಯಾರ್ಥಿ ಸಮೂಹಕ್ಕೆ ಉತ್ತಮ ಅವಕಾಶಗಳಿವೆ. ತೈಲ ಉದ್ಯಮಿಗಳಿಗೆ ಶತ್ರು ಬಾಧೆ ನಿವಾರಣೆ ಆಗಲಿದೆ.

**ವೃಶ್ಚಿಕ:** ನಂಬಿಕಸ್ಥರಿಂದ ಮೋಸ ಕೃತ್ಯಗಳು ನಡೆಯುವ ಸಾಧ್ಯತೆಯೇ ಹೆಚ್ಚು. ಆದ್ದರಿಂದ ನಿಮ್ಮ ವ್ಯವಹಾರಗಳ ಬಗ್ಗೆ ನೀವೇ ಹೆಚ್ಚಿನ ಗಮನಹರಿಸುವುದು ಮುಖ್ಯ. ಮನೆಯಲ್ಲಿ ಪರಿಸ್ಥಿತಿಗಳು ಸುಧಾರಿಸಲಿವೆ.

**ಧನು:** ಹಣಕಾಸು ಸಂಸ್ಥೆಯ ಜವಾಬ್ದಾರಿ ನೋಡುವವರಿಗೆ ಆತಂಕವಾಗಲಿದೆ. ಮಕ್ಕಳ ಸಂತಸ ಸಡಗರ ಕಂಡು ಮನಸ್ಸಿಗೆ ಸಂತೋಷವಾಗಲಿದೆ. ಉದ್ಯೋಗ ಆಕಾಂಕ್ಷಿಗಳಿಗೆ ಉತ್ತಮ ವೇತನದ ನೌಕರಿ ಸಿಗಲಿದೆ.

**ಮಕರ:** ಹಲವಾರು ಕಾರಣಗಳಿಗೆ ಸ್ನೇಹಿತರು ನಿಮ್ಮ ಮಾರ್ಗದರ್ಶನ, ಬೆಂಬಲ ಹಾಗೂ ಸಹಕಾರ ಅಪೇಕ್ಷಿಸಲಿದ್ದಾರೆ. ಕೃಷಿ ಮತ್ತು ಹೈನು ಉತ್ಪನ್ನಗಳಲ್ಲಿನ ಹೆಚ್ಚಿನ ವ್ಯಾಪಾರಗಳಿಂದ ಹೇರಳ ಲಾಭವಾಗಲಿದೆ.


**ಕುಂಭ:** ಕೌಟುಂಬಿಕ ವಿಷಯಗಳಲ್ಲಿ ಸಹೋದರ, ಸಹೋದರಿಯರ ಪ್ರೀತಿ ವಿಶ್ವಾಸದಿಂದ ಬಹಳ ಖುಷಿ ಸಿಗಲಿದೆ. ವನಸ್ಪತಿ ವ್ಯಾಪಾರಿಗಳಿಗೆ ಹೆಚ್ಚಿನ ಲಾಭ ಸಿಗಲಿದೆ. ಷೇರು ವ್ಯಾಪಾರವು ಇಂದು ಅದೃಷ್ಟದಾಯಕವಾಗಿರುತ್ತದೆ.

**ಮೀನ:** ನಿಮ್ಮ ಪ್ರೀತಿ ಪಾತ್ರರೊಂದಿಗೆ ಹೊಸ ಯೋಜನೆ ಆರಂಭಿಸುವ ಬಗ್ಗೆ ಚರ್ಚೆ ನಡೆಸುವಿರಿ. ದೈವಬಲ ಒದಗುವುದರಿಂದ ನಿಮ್ಮ ಪ್ರಯತ್ನ ಕಾರ್ಯಗಳೆಲ್ಲ ಹೆಚ್ಚಿನ ಶುಭ ಫಲಗಳನ್ನೇ ನೀಡಲಿದೆ.

## ಪದಬಂಧ 5514 – ವಿದ್ಯಾ ವಿನಯ್

**ಎಡದಿಂದ ಬಲಕ್ಕೆ**
1. ಊರ ಹತ್ತಿರ ಕಾಣಿಸಿದ ಹಾವು (3)
3. ಎಲ್ಲೆಯ ಬಳಿಯಿರುವ ಮಡಿಕೆ (3)
5. ಅಲೆಯುತ್ತಿರುವಾಗ ಕಾಣಿಸಿದ ತರಂಗ (2)
6. ಕೊನೆಗೆ ರಾಟೆ ಇಟ್ಟಾಗಲೇ ಈ ಆಕ್ಷೇಪಣೆ! (3)
7. ಉಲ್ಟಾಪಲ್ಟಾ ಅಗಿರುವ ಬುದ್ಧಿ (2)
9. ದರ್ಜಿಯ ಇಷ್ಟ! (2)
11. ಕದಕ್ಕೆ ಒರಗಿಸಿದ ಕೆನ್ನೆ (3)
13. ಆಕಳು ಹಿಡಿದಿರುವ ಸೇವಕ (2)
14. ಹೊಗೆ ಹಿಡಿದ ಸಣ್ಣ ನೂಲಿನಂಥ ಕಸ (3)
15. ಈತ ಹಳ್ಳಿಯವನು(3)

**ಮೇಲಿಂದ ಕೆಳಕ್ಕೆ**
1. ಜೋಕಾಲಿ ಇಲ್ಲಿದೆ (3)
2. ಗಣಿಯ ಧಣಿ ಕಲಿಸಿದ ಲೆಕ್ಕ ಶಾಸ್ತ್ರ (3)
3. ಗದ್ದಲವನ್ನು ಹೀಗೆನ್ನಿ (3)
4. ಗೆಳೆಯನ ಜೊತೆಯಿರುವ ಸ್ನೇಹಿತೆ (3)
5.ಅರ್ಥಪೂರ್ಣವಾದ ಹೆಸರು (5)
8.ಈಕೆ ಲಗ್ನವಾಗುತ್ತಿರುವವಳು (5)
10.ಉಲ್ಟಾ ಕಾಣುತ್ತಿರುವ ಕ್ರೈಸ್ತರ ದೇವಾಲಯ (3)
11.ಕಣದಲ್ಲಿ ನಡೆದ ಮದುವೆ (3)
12.ವ್ಯಾಕರಣದಲ್ಲಿ ಗಂಡುಜಾತಿಯನ್ನು ಸೂಚಿಸುವ ಶಬ್ದ (3)
13. ಕೊನೆಗೆ ದರವುಳ್ಳ ಅಕ್ಕರೆ! (3)



### 5513ರ ಪದಬಂಧದ ಉತ್ತರ

ಎಡದಿಂದ ಬಲಕ್ಕೆ
1.ಹುಸಿಮುನಿಸು 3.ಪ್ರಸಂಗ
5.ಮನೋನಿಗ್ರಹ 7.ಟಗರು
9.ಸಂಧಾನ 11.ಕುಸುಮ
13.ಉದಯರಾಗ 5.ಇಸವಿ
16.ಹುಲುಮನುಜ

ಮೇಲಿಂದ ಕೆಳಕ್ಕೆ
1.ಹುಡುಗಾಟ 2.ನಿಯಮ
4.ಸಂದೇಹ 6.ನಿಧಾನ
8.ಗಡ್ಡ 9.ಸಂದಾಯ
10.ಕೂಸು 12.ಮಹಾರಾಜ
13.ಉಲ್ಲಾಸ 14.ಗರ್ನಾಲು

### ಸುಡೊಕು 5900

| | | | | | | | | |
|---|---|---|---|---|---|---|---|---|
| 3 | 4 | | 2 | | 9 | 6 | | 1 |
| | | 1 | | 8 | | 2 | 7 | |
| | 7 | | 1 | | 4 | | | 8 |
| | | 4 | | | | 1 | | |
| 2 | 8 | | 6 | 9 | 1 | | | |
| | | 7 | | | | | 6 | 5 |
| | 5 | | | 1 | | | | 7 |
| | 1 | 6 | 8 | | 2 | 5 | | |
| 4 | 2 | | | 5 | | | | 6 |

**ಆಡುವುದು ಹೇಗೆ?**


ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

### 5899 ಸುಡೊಕು

| | | | | | | | | |
|---|---|---|---|---|---|---|---|---|
| 3 | 5 | 1 | 7 | 4 | 2 | 9 | 8 | 6 |
| 6 | 9 | 2 | 1 | 5 | 8 | 3 | 7 | 4 |
| 4 | 7 | 8 | 3 | 6 | 9 | 2 | 1 | 5 |
| 1 | 6 | 4 | 8 | 9 | 5 | 7 | 2 | 3 |
| 9 | 2 | 5 | 4 | 3 | 7 | 8 | 6 | 1 |
| 8 | 3 | 7 | 6 | 2 | 1 | 4 | 5 | 9 |
| 2 | 1 | 3 | 9 | 7 | 6 | 5 | 4 | 8 |
| 5 | 4 | 6 | 2 | 8 | 3 | 1 | 9 | 7 |
| 7 | 8 | 9 | 5 | 1 | 4 | 6 | 3 | 2 |

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

## ಷೇರುಪೇಟೆ ವಹಿವಾಟು




## ಎನ್‌ಎಸ್‌ಇ ನಿಫ್ಟಿ

| | |
|---|---|
| ಹಿಂದಿನ ಅಂತ್ಯ | 19,795 |
| ಇಂದಿನ ಅಂತ್ಯ | 19,890 |
| ▲ | 95 |
| ದಿನದ ಕನಿಷ್ಠ | 19,916 |

## ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

| | |
|---|---|
| ಬೆಂಗಳೂರು | |
| 100 ಮೊಟ್ಟೆಗೆ | ₹550 |
| 12 ಮೊಟ್ಟೆಗೆ | ₹75 |
| ಮೈಸೂರು | |
| 100 ಮೊಟ್ಟೆಗೆ | ₹550 |

## ಖಾದ್ಯ ತೈಲ ಮುಂಬೈ

(10 ಕೆಜಿಗೆ)

| | |
|---|---|
| ಶೇಂಗಾ (ರಿಫೈನ್ಡ್) | ₹1590 (1590) |
| ಸೋಯಾ (ರಿಫೈನ್ಡ್) | ₹955 (950) |
| ಸೂರ್ಯಕಾಂತಿ (ರಿಫೈನ್ಡ್) | ₹957 (955) |
| ಪಾಮೋಲಿನ್ | ₹840 (840) |

## ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)

| | |
|---|---|
| ದಪ್ಪ | ₹3800-4400 |
| ಮಧ್ಯಮ | ₹3000-3800 |
| ಸಣ್ಣ | ₹2000-3000 |

## ರಾಮನಗರ ರೇಷ್ಮೆಗೂಡು ಧಾರಣೆ

| | |
|---|---|
| ಮಿಶ್ರತಳಿ (ಸಿ.ಬಿ) | ₹222-485 |
| ದ್ವಿತಳಿ (ಬಿ.ವಿ) | ₹333-598 |

## ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

| | |
|---|---|
| ಆರ್‌ಎಸ್‌ಎಸ್-4 | ₹150.50 |
| ಆರ್‌ಎಸ್‌ಎಸ್-5 | ₹146.50 |
| ಗುಡ್ ಲಾಟ್ | ₹130 |

# 4 ಟ್ರಿಲಿಯನ್ ಡಾಲರ್ ಹತ್ತಿರಕ್ಕೆ ಬಿಎಸ್‌ಇ ಮೌಲ್ಯ

ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆಯಲ್ಲಿ ಬಂಡವಾಳ ಮೌಲ್ಯವು 4 ಟ್ರಿಲಿಯನ್ ಡಾಲರ್ ಸಮೀಪಕ್ಕೆ ಬಂದಿದೆ. ಮಂಗಳವಾರ ದಿನದ ವಹಿವಾಟಿನ ಅಂತ್ಯದ ವೇಳೆಗೆ 3.97 ಟ್ರಿಲಿಯನ್ ಡಾಲರ್ (₹331 ಲಕ್ಷ ಕೋಟಿ) ಆಗಿದ್ದು, ಸಾರ್ವಕಾಲಿಕ ಗರಿಷ್ಠ ಮಟ್ಟವನ್ನು ತಲುಪಿದೆ.

2021ರ ಮೇ 24ರಂದು ಬಿಎಸ್‌ಇ ಮೌಲ್ಯವು 3 ಟ್ರಿಲಿಯನ್ ಡಾಲರ್ ತಲುಪಿತು. ಈ ವರ್ಷದ ಸೆಪ್ಟೆಂಬರ್ 15ರಂದು ಬಿಎಸ್‌ಇ ಸೆನ್ಸೆಕ್ಸ್ ಸಾರ್ವಕಾಲಿಕ ಗರಿಷ್ಠ ಮಟ್ಟ 67,927 ಅಂಶಗಳಿಗೆ ತಲುಪಿತ್ತು. ಮಂಗಳವಾರ 66,174 ಅಂಶಗಳಲ್ಲಿ ವಹಿವಾಟು ಅಂತ್ಯಗೊಂಡಿದೆ.

**ಸೆನ್ಸೆಕ್ಸ್ ಏರಿಕೆ:** ಎರಡು ದಿನಗಳ ಬಳಿಕ ಬಿಎಸ್‌ಇ ಸೆನ್ಸೆಕ್ಸ್ 204 ಅಂಶ ಏರಿಕೆ ಕಂಡು 66,174 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 39 ಅಂಶ ಏರಿಕೆ ಕಂಡು 19,889 ಅಂಶಗಳಿಗೆ ತಲುಪಿತು.

ಸೆನ್ಸೆಕ್ಸ್‌ನಲ್ಲಿ ಟಾಟಾ ಮೋಟರ್ಸ್, ಬಜಾಜ್ ಫಿನ್‌ಸರ್ವ್, ಅಲ್ಟ್ರಾ ಟೆಕ್ ಸಿಮೆಂಟ್, ಭಾರ್ತಿ ಏರ್‌ಟೆಲ್, ಬಜಾಜ್ ಫಿನ್ ಸರ್ವ್ ಕಂಪನಿಗಳ ಷೇರು ಮೌಲ್ಯ ಗಳಿಕೆ ಕಂಡಿತು.

ಬೆಂಗಳೂರಿನಲ್ಲಿ ಉತ್ಕೃಷ್ಟತಾ ಕೇಂದ್ರ: ಇಂದು ಉದ್ಘಾಟನೆ

# ಬುಕಿಂಗ್ ಹೋಲ್ಡಿಂಗ್ಸ್‌ನಿಂದ ₹2,084 ಕೋಟಿ ಹೂಡಿಕೆ

• ವಿಶ್ವನಾಥ ಎಸ್.

**ಮುಖ್ಯಾಂಶಗಳು**

- 2026ರ ವೇಳೆಗೆ 1 ಸಾವಿರಕ್ಕೆ ಹೆಚ್ಚಲಿದೆ ಸಿಬ್ಬಂದಿ ಸಂಖ್ಯೆ
- ಪ್ರಯಾಣ ಉದ್ಯಮದ ಯೋಜನೆ ರೂಪಿಸಲು ಕೇಂದ್ರ ನೆರವು

ಬೆಂಗಳೂರು: ಆನ್‌ಲೈನ್ ಮೂಲಕ ಪ್ರಯಾಣ ಮತ್ತು ಅದಕ್ಕೆ ಸಂಬಂಧಿಸಿದ ಸೇವೆಗಳನ್ನು ಒದಗಿಸುವ ಅಮೆರಿಕದ ಬುಕಿಂಗ್ ಹೋಲ್ಡಿಂಗ್ಸ್ ಕಂಪನಿಯು ಬೆಂಗಳೂರಿನ ಬೆಳ್ಳಂದೂರಿನಲ್ಲಿ ಉತ್ಕೃಷ್ಟತಾ ಕೇಂದ್ರ ಸ್ಥಾಪಿಸಿದ್ದು, ಬುಧವಾರ ಉದ್ಘಾಟನೆ ಆಗಲಿದೆ.

ಈ ಕುರಿತು 'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಬುಕಿಂಗ್ ಹೋಲ್ಡಿಂಗ್ಸ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕ ಮತ್ತು ಉತ್ಕೃಷ್ಟತಾ ಕೇಂದ್ರದ ಮುಖ್ಯಸ್ಥ ರಣಧೀರ್ ಬಿಂದ್ರಾ, 'ಕಂಪನಿಯು ಭಾರತದಲ್ಲಿ ಆರಂಭಿಸುತ್ತಿರುವ ಮೊದಲ ಕೇಂದ್ರ ಇದಾಗಿದ್ದು, ಜಾಗತಿಕವಾಗಿ ಎರಡನೆಯದ್ದಾಗಿದೆ' ಎಂದು ಮಾಹಿತಿ ನೀಡಿದರು. ಕಂಪನಿಯ ಮೊದಲ ಕೇಂದ್ರವು ರೊಮಾನಿಯಾದಲ್ಲಿದೆ.

ಬೆಂಗಳೂರಿನ ಬೆಳ್ಳಂದೂರಿನ ಆರ್‌ಎಂಜೆಡ್ ಇಕೊವರ್ಲ್ಡ್ 30ನಲ್ಲಿ 48,500 ಚದರ ಅಡಿ ವಿಸ್ತೀರ್ಣದಲ್ಲಿ ಈ ಕೇಂದ್ರ ಸ್ಥಾಪಿಸಲಾಗಿದೆ. ಇದಕ್ಕಾಗಿ ₹2,084 ಕೋಟಿ ಹೂಡಿಕೆ ಮಾಡಲಾಗಿದೆ. ಸದ್ಯ 300 ಸಿಬ್ಬಂದಿ ಇದ್ದು, 2026ರ ವೇಳೆಗೆ ಒಟ್ಟು ಸಿಬ್ಬಂದಿ ಸಂಖ್ಯೆಯನ್ನು 1 ಸಾವಿರಕ್ಕೆ ಹೆಚ್ಚಿಸಲಾಗುವುದು. ಕಂಪನಿಯ ಬ್ರ್ಯಾಂಡ್‌ಗಳಿಗೆ ಅಗತ್ಯವಾದ ಬೆಂಬಲ ನೀಡುವುದರ ಜೊತೆಗೆ ಫಿನ್‌ಟೆಕ್, ಹಣಕಾಸು ಸೇವೆಗಳು, ಸೈಬರ್ ಭದ್ರತೆ ವಿಷಯಗಳ ಬಗ್ಗೆ ಈ ಕೇಂದ್ರವು ಗಮನ ಹರಿಸಲಿದೆ.

ಯಾವುದೇ ಸಮಸ್ಯೆಗಳಿಲ್ಲದೇ, ಆರಾಮವಾಗಿ ಪ್ರಯಾಣಿಸುವಂತೆ ಮಾಡಲು ಅಗತ್ಯವಾದ ಡಿಜಿಟಲ್ ಸೌಲಭ್ಯಗಳನ್ನು ಒದಗಿಸಲು ಈ ಕೇಂದ್ರವು ಪ್ರಮುಖ ಪಾತ್ರ ವಹಿಸಲಿದೆ ಎಂದು ಅವರು ತಿಳಿಸಿದರು.

ಕೋವಿಡ್ ಸಾಂಕ್ರಾಮಿಕದ ಬಳಿಕ ಪ್ರಯಾಣ ಉದ್ಯಮವು ಮತ್ತೆ ಬೇಡಿಕೆ ಕಂಡುಕೊಂಡಿದೆ. ಜಗತ್ತಿನಾದ್ಯಂತ ಪ್ರಯಾಣಿಸುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ. ಹೀಗಾಗಿ ಈ ಹೂಡಿಕೆ ಮಾಡಲಾಗಿದೆ. ಈ ಕೇಂದ್ರವು ಕಂಪನಿಯ ಬೆಳವಣಿಗೆ, ಗುರಿ ಸಾಧನೆ ಮತ್ತು ಪ್ರಯಾಣ ಉದ್ಯಮದ ಭವಿಷ್ಯದಲ್ಲಿ ಯೋಜನೆಗಳನ್ನು ರೂಪಿಸಲು ನೆರವಾಗಲಿದೆ ಎಂದರು.


ರಣಧೀರ್ ಬಿಂದ್ರಾ

ಬೆಂಗಳೂರೇ ಏಕೆ ಎನ್ನುವ ಪ್ರಶ್ನೆಗೆ, 'ಹಲವು ಆಯಾಮಗಳನ್ನು ಗಮನದಲ್ಲಿ ಇಟ್ಟುಕೊಂಡು ಬೆಂಗಳೂರಿನಲ್ಲಿ ಕೇಂದ್ರ ಸ್ಥಾಪಿಸುವ ನಿರ್ಧಾರಕ್ಕೆ ಬರಲಾಯಿತು. ಮುಖ್ಯವಾಗಿ ವಿಶ್ವದರ್ಜೆಯ ತಂತ್ರಜ್ಞಾನ, ಕೌಶಲಯುಕ್ತ ಮಾನವ ಸಂಪನ್ಮೂಲ, ಡಿಜಿಟಲ್ ಮೂಲಸೌಕರ್ಯ ಮತ್ತು ಕಚೇರಿ ಸ್ಥಾಪನೆಗೆ ಅಗತ್ಯವಾದ ಮೂಲಸೌಕರ್ಯವು ಇಲ್ಲಿ ಉತ್ತಮವಾಗಿವೆ' ಎಂದು ಅವರು ತಮ್ಮ ಆಯ್ಕೆಯನ್ನು ಸಮರ್ಥಿಸಿಕೊಂಡರು.

'ಕಂಪನಿಯು 220 ದೇಶಗಳಲ್ಲಿ ವಹಿವಾಟು ನಡೆಸುತ್ತಿದ್ದು, ಅಗೋಡಾ, ಪ್ರೈಸ್‌ಲೈನ್, ರೆಂಟಲ್‌ಕಾರ್ಸ್ ಡಾಟ್ ಕಾಂ, ಕಯಾಕ, ಬುಕಿಂಗ್ ಡಾಟ್ ಕಾಂ ಮತ್ತು ಓಪನ್ ಟೇಬಲ್ ಹೀಗೆ ಪ್ರಮುಖ ಆರು ಬ್ರ್ಯಾಂಡ್‌ಗಳನ್ನು ಹೊಂದಿದೆ' ಎಂದರು.

## ಪ್ರಶ್ನೋತ್ತರ


**ಪ್ರಮೋದ ಶ್ರೀಕಾಂತ ದೈತೋಟ**
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

**ನಾಗಾನಂದ,** ಮಾರತ್ ಹಳ್ಳಿ, ಬೆಂಗಳೂರು

• **ಪ್ರಶ್ನೆ: ನಾನು ಮುಂದಿನ ಒಂದು ವರ್ಷದೊಳಗೆ ನಿವೃತ್ತನಾಗುವ ಹಂತದಲ್ಲಿದ್ದೇನೆ. ಪ್ರಸ್ತುತ ಸಾರ್ವಜನಿಕ ಸೇವಾ ಸಂಸ್ಥೆಯೊಂದರಲ್ಲಿ ಇಂಜಿನಿಯರಿಂಗ್ ವಿಭಾಗದ ಪ್ರಧಾನ ವ್ಯವಸ್ಥಾಪಕನಾಗಿ ಸೇವೆಯಲ್ಲಿದ್ದೇನೆ. ನನ್ನ ಇಬ್ಬರು ಹೆಣ್ಣು ಮಕ್ಕಳಿಗೆ ವಿವಾಹವಾಗಿ ತಮ್ಮ ಜೀವನ ನಡೆಸುತ್ತಿದ್ದಾರೆ ಹಾಗೂ ಮೊಮ್ಮಕ್ಕಳಿದ್ದಾರೆ. ನನ್ನ ಪ್ರಶ್ನೆ ಏನೆಂದರೆ ನಿವೃತ್ತಿಯ ಸಮಯ ಒಟ್ಟಾರೆ ನನ್ನ ಪಿಎಫ್, ಇನ್ಶೂರೆನ್ಸ್ ಉಳಿತಾಯ, ಗ್ರಾಚ್ಯುಟಿ ಇತ್ಯಾದಿ ಎಲ್ಲಾ ಮೊತ್ತ ಸೇರಿಸಿ ಸುಮಾರು ಒಂದು ಕೋಟಿ ರೂಪಾಯಿ ಬರಬಹುದೆಂದು ಅಂದಾಜು. ಪೆನ್ಷನ್ ಮೊತ್ತ ಸುಮಾರು ₹ 60 ಸಾವಿರ ಬರಬಹುದು. ಈ ಹಂತದಲ್ಲಿ ನಾನು, ಮುಂದೆ ಸಿಗುವ ಮೊತ್ತವನ್ನು ಬಳಸಿ ತಿಂಗಳಿಗೆ ₹ 1 ಲಕ್ಷ ಹೆಚ್ಚುವರಿ ಆದಾಯ ನಿರೀಕ್ಷಿಸಬಹುದೇ. ಇದಕ್ಕೆ ಯಾವುದರಲ್ಲಿ ಹೂಡಿಕೆ ಮಾಡಬಹುದು ಎಂಬುದನ್ನು ತಿಳಿಸಿ. ಇದಲ್ಲದೆ ನಾನು ದೇಣಿಗೆ ರೂಪದಲ್ಲಿ ಒಂದು ವರ್ಷಕ್ಕೆ ₹ 1 ಲಕ್ಷ ಮೊತ್ತವನ್ನು ಕೊಡಬೇಕೆಂದಿದ್ದೇನೆ. ಇದಕ್ಕೆ ತೆರಿಗೆ ರಿಯಾಯಿತಿ ಇದೆ ಎಂಬುದನ್ನು ತಿಳಿದಿದ್ದೇನೆ. ಈ ಬಗ್ಗೆಯೂ ಮಾಹಿತಿ ನೀಡಿ. ಪ್ರಸ್ತುತ ಸ್ವಂತ ಮನೆಯಿದೆ ಹಾಗೂ ಮನೆಗೆ ಸಂಬಂಧಿಸಿ ಯಾವುದೇ ಸಾಲವಿಲ್ಲ.**

**ಉತ್ತರ:** ನೀವು ನಿವೃತ್ತಿ ಬದುಕಿಗೆ ಸಜ್ಜಾಗಿ ಆ ಬಗ್ಗೆ ಅಗತ್ಯವಿರುವ ಹಣಕಾಸಿನ ಮಾಹಿತಿ ಹಾಗೂ ಪೂರ್ವ ತಯಾರಿ ಮಾಡುತ್ತಿರುವುದು ನಿಜಕ್ಕೂ ಸಂತೋಷಕರ ವಿಚಾರ. ಮೊದಲ ಹಂತದಲ್ಲೇ ನೀವು ನಿಮ್ಮ ಗುರಿ ಹಾಗೂ ಅಗತ್ಯಗಳನ್ನು ಸ್ಪಷ್ಟವಾಗಿ ನಿರೂಪಿಸಿರುವುದು ಇನ್ನೂ ಒಳ್ಳೆಯ ವಿಚಾರ. ನಮ್ಮ ಅಗತ್ಯ ಏನೆಂಬುದರ ಬಗ್ಗೆ ಖಚಿತತೆ ಇದ್ದಾಗ ಮಾತ್ರ ಹೂಡಿಕೆಯಿಂದ ಉತ್ತಮ ಪ್ರತಿಫಲ ನಿರೀಕ್ಷಿಸಬಹುದು.

ನಿಮ್ಮ ನಿರೀಕ್ಷೆ ಸರಿದೂಗಿಸಲು ಕೇವಲ ಸಾಂಪ್ರದಾಯಿಕ ರೀತಿಯ ಹೂಡಿಕೆಯಿಂದ ಸಾಧ್ಯವಾಗಲಾರದು ಹಾಗೂ ಒಂದೇ ಉದ್ದೇಶದ ಹೂಡಿಕೆಯಿಂದ ಸಾಧ್ಯವಾಗಲಾರದು. ಹೀಗಾಗಿ ಒಂದಷ್ಟು ಮೊತ್ತವನ್ನು 'ಸಾಮಾನ್ಯ ಬಡ್ಡಿ' ಗಿಂತ 'ಅಧಿಕ ಲಾಭ' ನೀಡುವ ಹೂಡಿಕೆಗಳನ್ನು ಆಯ್ಕೆ ಮಾಡಿದಾಗ ಮಾತ್ರ ಸಾಧ್ಯ. ಮೊದಲ ಹಂತದಲ್ಲಿ ನೀವು ಅರ್ಧದಷ್ಟು ಮೊತ್ತವನ್ನು ಯಾವುದೇ ಆರ್ಥಿಕ ಅಪಾಯವಿರದ ಹೂಡಿಕೆಗಳಲ್ಲಿ ಹಣ ತೊಡಗಿಸಿ. ನಿವೃತ್ತಿ ಜೀವನಕ್ಕೆ ಕಾಲಿಡುವ ಮಂದಿಗಾಗಿಯೇ ಇರುವ ಅಂಚೆ ಕಚೇರಿಯ ಹಿರಿಯ ನಾಗರಿಕರ ಜಂಟಿ ಖಾತೆಯಲ್ಲಿ ₹ 30 ಲಕ್ಷ (ಬಡ್ಡಿ ದರ 8.20 %) , ಪಿಪಿಎಫ್ ₹ 1.50 ಲಕ್ಷ (ಬಡ್ಡಿ ದರ 7.10 %), ಅಂಚೆ ಕಚೇರಿಯ ಮಾಸಿಕ ಬಡ್ಡಿ ಯೋಜನೆ (ಬಡ್ಡಿ ದರ 7.40 %) ಯ ಜಂಟಿ ಖಾತೆಯಲ್ಲಿ ₹15 ಲಕ್ಷ ಹಣ ತೊಡಗಿಸಿ. ಹಾಗೂ ಆಪತ್ಕಾಲಕ್ಕಾಗಿ ಸುಮಾರು ₹ 10 ರಿಂದ 15 ಲಕ್ಷ ಮೊತ್ತವನ್ನು ಶೇಕಡಾ 7-8 ದ ದರದಲ್ಲಿ ಯಾವುದೇ ಸಮಯ ಹಿಂಪಡೆಯಬಹುದಾದ ನಿಶ್ಚಿತ ಠೇವಣಿ ಖಾತೆಯಲ್ಲಿ ತೊಡಗಿಸಿ.

ಉಳಿದ ₹40 ರಿಂದ ₹ 45 ಲಕ್ಷ ಮೊದಲ ಹಂತದಲ್ಲಿ ಹೈಬ್ರಿಡ್ ಈಕ್ವಿಟಿ ಸೇವಿಂಗ್ಸ್ ಫಂಡ್‌ನಲ್ಲಿ ಹಾಗೂ ಮುಂದೆ ಹಂತ ಹಂತವಾಗಿ ಬ್ಯಾಲೆನ್ಸ್ಡ್ ಮ್ಯೂಚುವಲ್ ಫಂಡ್, ಹೈಬ್ರಿಡ್ ಅಗ್ರೆಸ್ಸಿವ್ ಫಂಡ್, ಫ್ಲೆಕ್ಸಿ ಕ್ಯಾಪ್ ಹಾಗೂ ಮಲ್ಟಿ ಕ್ಯಾಪ್ ಫಂಡ್‌ಗಳಲ್ಲಿ ವ್ಯವಸ್ಥಿತವಾಗಿ ವರ್ಗಾವಣೆ ಮಾಡಿ. ಇದು ನಿಮಗೆ ಎರಡರಿಂದ ಮೂರು ವರ್ಷಗಳಲ್ಲಿ ಸಾಮಾನ್ಯ ಬಡ್ಡಿಗಿಂತ ಅಧಿಕ ಆದಾಯ ನೀಡುವಲ್ಲಿ ನೆರವಾದೀತು. ಏನಿದ್ದರೂ ಈ ಬಗ್ಗೆ ಇನ್ನಷ್ಟು ಸಮಯ ನಿಮಗೆ ಇರುವುದರಿಂದ ಹೆಚ್ಚಿನ ಮಾರ್ಗದರ್ಶನ ಅಗತ್ಯ. ಆ ಬಗ್ಗೆ ನುರಿತವರನ್ನು ಸಂಪರ್ಕಿಸಿ ಹಾಗೂ ಆ ಬಗ್ಗೆ ಓದಿ ತಿಳಿದುಕೊಳ್ಳಿ.

ಇನ್ನು ದೇಣಿಗೆ ನೀಡುವಾಗ ಸಿಗುವ 80ಜಿ ತೆರಿಗೆ ರಿಯಾಯಿತಿ ಬಗ್ಗೆ ಹೇಳುವುದಾದರೆ, ವಿವಿಧ ರೂಪದ ದೇಣಿಗೆಗಳು , ನಾವು ಪಾವತಿಸುವ ಪೂರ್ಣ ಮೊತ್ತ ಅಥವಾ ಅದರ ಶೇಕಡಾ 50 ರ ಮಿತಿಯೊಳಗೆ ಆದಾಯದಿಂದ ವಿನಾಯಿತಿ ಪಡೆಯುವಲ್ಲಿ ನೆರವಾಗುತ್ತವೆ. ಇದಲ್ಲದೆ ಈ ವಿನಾಯಿತಿ ನೀಡಿವ ಮೊದಲು ನಿರ್ಣಯವಾಗುವ ಆದಾಯದ ಶೇ 10 ರ ಮಿತಿಯನ್ನೂ ಹೇರಲಾಗಿದೆ. ಹೀಗಾಗಿ ದೇಣಿಗೆ ನೀಡುವ ಮೊದಲು ಈ ಬಗ್ಗೆಯೂ ಗಮನವಿರಲಿ.

**ಮಹೇಶ್ ಪಿ.,** ಬಿಡದಿ

• **ಪ್ರಶ್ನೆ: ನಾನು ಒಂದು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದೇನೆ. ನಮ್ಮ ಕಂಪನಿಯವರು ವೇತನಕ್ಕೆ ಸಂಬಂಧಿಸಿದ ಸ್ಟ್ರಕ್ಚರ್ ಮುಂದಿನ ವರ್ಷದಿಂದ ನಾವು ಆಂತರಿಕವಾಗಿ ಬದಲಾಯಿಸುವುದಕ್ಕೆ ಅವಕಾಶ ಕಲ್ಪಿಸಿದ್ದಾರೆ. ನಮ್ಮ ಒಟ್ಟಾರೆ ಸಿಟಿಸಿ ಪ್ರಸ್ತುತ ಇರುವ ಮೌಲ್ಯದ್ದೇ ಇರುತ್ತದೆ. ಆದರೆ ಬದಲಾವಣೆಯಿಂದ ತೆರಿಗೆ ಉಳಿತಾಯ ಮಾಡುವ ಸೌಲಭ್ಯ ಇದೆ. ನಾವು ಲೀಸ್ ಮೂಲಕ ಕಾರು ತೆಗೆದುಕೊಳ್ಳಬಹುದು ಹಾಗೂ ನಮ್ಮ ಪಿಎಫ್ ದೇಣಿಗೆಗೆ ಸಂಬಂಧಿಸಿ ತಿಂಗಳ ಪಾವತಿ ವೃದ್ಧಿಗೊಳಿಸಬಹುದು, ಮೀಲ್ ಕೂಪನ್ ಪಡೆಯಬಹುದು ಹಾಗೂ ಎಲ್‌ಟಿಸಿಗೆ ಸಂಬಂಧಿಸಿ ತೆರಿಗೆ ವಿನಾಯಿತಿ ಪಡೆಯುವ ಅವಕಾಶಗಳಿವೆ. ಇವನ್ನು ಹೇಗೆ ಸರಿದೂಗಿಸಬಹುದು ಹಾಗೂ ಇವುಗಳನ್ನು ಹೊಂದುವುದರಿಂದ ಯಾವುದಾದರೂ ತೊಂದರೆಗಳಿವೆಯೇ.**

**ಉತ್ತರ:** ಸಾಮಾನ್ಯವಾಗಿ ಕಂಪನಿಗಳಲ್ಲಿ ವಿಶೇಷ ಭತ್ಯೆಗಳನ್ನು ಕಡಿತಗೊಳಿಸಿ ನೀವು ಉಲ್ಲೇಖಿಸಿರುವ ವಿವಿಧ ರೀತಿಯ ಸವಲತ್ತುಗಳನ್ನು ನೀಡಲಾಗುತ್ತದೆ. ಇವು ಒಟ್ಟು ವೇತನದ ಭಾಗವೇ ಆಗಿರುವುದರಿಂದ ನೇರ ವೇತನದ ಬದಲು ಪರೋಕ್ಷವಾಗಿ ವಿವಿಧ ಸವಲತ್ತುಗಳ ರೂಪದಲ್ಲಿ ನೀಡುವ ಕಾರಣ ಉದ್ಯೋಗಿಗಳಿಗೆ ತೆರಿಗೆ ಉಳಿತಾಯ ಮಾಡುವ ನೆರವಾಗುತ್ತದೆ. ನೀವು ಈಗಾಗಲೇ ಕಾರು ಹೊಂದಿದವರಾಗಿದ್ದರೆ ಹೊಸದಾಗಿ ಲೀಸ್ ಮೂಲಕ ವಾಹನ ಪಡೆಯಬೇಕೆ ಎಂಬುದನ್ನು ನಿಮ್ಮ ವೈಯಕ್ತಿಕ ಅಗತ್ಯದ ಹಿನ್ನೆಲೆಯಲ್ಲಿ ಹಾಗೂ ಈ ಬದಲಾವಣೆಯಿಂದ ತಗಲುವ ಒಟ್ಟಾರೆ ಲೀಸ್ ಮೊತ್ತ ಹಾಗೂ ಮುಂದೆ ಉಳಿತಾಯ ಮಾಡಬಹುದಾದ ತೆರಿಗೆ ಪ್ರಮಾಣ ಇತ್ಯಾದಿಗಳನ್ನು ತುಲನೆ ಮಾಡಿ ಲಾಭದಾಯಕವೇ ಎಂಬುದನ್ನು ನೋಡಿ.

ಪ್ರಸ್ತುತ ಕಾರು ಹೊಂದಿಲ್ಲದಿದ್ದರೂ , ಖರೀದಿಸುವ ಯೋಚನೆ ಇದ್ದರೆ, ಕಂಪನಿ ಲೀಸ್ ಮೂಲಕ ಕೊಳ್ಳುವ ಹಾಗೂ ನೀವೇ ಸಾಲ ಪಡೆದು ವಾಹನ ಕೊಳ್ಳುವ ಯೋಜನೆಯಲ್ಲಿ ಯಾವುದು ಒಟ್ಟಾರೆ ಬಡ್ಡಿ ಉಳಿತಾಯಕ್ಕೆ ಪೂರಕವಾದೀತು ಎಂಬುದನ್ನು ಗಮನಿಸಿ. ಇನ್ನು ಮೀಲ್ ಕೂಪನ್ ಇತ್ಯಾದಿ ಪ್ರತಿ ತಿಂಗಳಿಗೆ ನಿರ್ದಿಷ್ಟ ಮಿತಿಯೊಳಗೆ ಪಡೆಯುವ ಆಯ್ಕೆ ಉತ್ತಮ. ಇನ್ನು ಖಾಸಗಿ ಕಂಪನಿಯ ಉದ್ಯೋಗಿಗಳಿಗೆ ಎಲ್‌ಟಿಸಿ ಬಗ್ಗೆ ಆದಾಯ ತೆರಿಗೆ ನಿಯಮದಡಿ 4 ವರ್ಷಗಳ ಅವಧಿಯಲ್ಲಿ ಪ್ರತಿ ಎರಡು ವರ್ಷದ ಅವಧಿಗೊಮ್ಮೆ ಈ ರಿಯಾಯಿತಿ ಪಡೆಯುವ ಅವಕಾಶವಿದೆ. ಪ್ರಯಾಣಕ್ಕೆ ಸಂಬಂಧಿತ ಅಗತ್ಯ ದಾಖಲೆ ಹೊಂದಿರುವುದು ಸೂಕ್ತ. ಇನ್ನು ಪಿಎಫ್ ಮೊತ್ತವನ್ನು ನಿಮ್ಮ ಉಳಿತಾಯ ಅಧಿಕಗೊಳಿಸುವ ದೃಷ್ಟಿಯಲ್ಲಿ ಹೆಚ್ಚಿಸಬಹುದು. ಆದರೆ ನೀವು ಹಳೆಯ ತೆರಿಗೆ ಪದ್ಧತಿ ಆಯ್ಕೆ ಮಾಡುವವರಿದ್ದರೆ ನಿಮ್ಮ ಎಲ್ಲಾ ಹೂಡಿಕೆಗಳಿಗೆ ಸಂಬಂಧಿಸಿ ಒಟ್ಟಾರೆ ವಿನಾಯಿತಿ ಮಿತಿ ₹ 1.50 ಲಕ್ಷ ಎಂಬುದು ಗಮನದಲ್ಲಿರಲಿ.

(ಕಳೆದ ವಾರದ ಸಂಚಿಕೆಯಲ್ಲಿ ಕೇಳಲಾಗಿದ್ದ ಸದಾನಂದ ಗಂಜಿಯವರ ಪ್ರಶ್ನೆಗೆ ನೀಡಿರುವ ಉತ್ತರದಲ್ಲಿ ವಯಸ್ಸು 75 ಕ್ಕೂ ಮೇಲ್ಪಟ್ಟವರಿಗೆ ಅನ್ವಯವಾಗುವ ರಿಟರ್ನ್ಸ್ ಸಲ್ಲಿಕೆ ವಿನಾಯಿತಿಗೆ ಸಂಬಂಧಿಸಿದ 'ಸೆಕ್ಷನ್ 194 ಪಿ' ಇದಕ್ಕೆ ಬದಲಾಗಿ ಒಂದೆಡೆ 'ಸೆಕ್ಷನ್ 80ಪಿ' ಎಂಬುದಾಗಿ ಪ್ರಕಟವಾಗಿತ್ತು. ಈ ತಿದ್ದುಪಡಿಯನ್ನು ಓದುಗರು ಗಮನಿಸಬೇಕಾಗಿ ವಿನಂತಿ)

**ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ**

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್:businessdesk@prajavani.co.in

MAJOR AKSHAY GIRISH
51 Engineer Regiment
7th Year Remembrance



Led his team and courageously sacrificed his life to save many people from terrorists in Nagrota on 29.11.2016.
Immortal Patriot.
Forever Thirty. Always Missed.
Major Akshay Girish Memorial Trust
https://majorakshaytrust.org/

ಏಳನೇ ವರ್ಷದ ಸವಿನೆನಪು



ಕೆ.ಆರ್. ಆಂಜನಪ್ಪನವರು
ಮಾಜಿ ಛೇರ್ಮನ್
ಜನನ: 1-1-1917 – ಮರಣ: 29-11-2016
ನಿಮ್ಮ ನೆನಪು ನಮ್ಮ ಮನದಲ್ಲಿ ಸದಾ ಹಚ್ಚ ಹಸಿರು. ನಿಮ್ಮ ನಡೆ, ನುಡಿ ಮತ್ತು ತತ್ವಗಳು ನಮಗೆಲ್ಲ ದಾರಿದೀಪ. ನಿಮ್ಮ ಆತ್ಮಕ್ಕೆ ಶಾಂತಿ ಕೋರುವ
ಪಟೇಲ್ ರಾಮೇಗೌಡರ ಕುಟುಂಬದವರಿಂದ
ಕೋಡಿಹಳ್ಳಿ, ದೊಡ್ಡಬಳ್ಳಾಪುರ ತಾಲ್ಲೂಕು
ಎ. ಪಾಪಯ್ಯ ಗೌಡ (ಎ.ಜಿ.ಎಸ್. ಆಫೀಸ್) ಮತ್ತು ಮಂಜುನಾಥ್ ಪಿ.ಜಿ
ಫೋನ್: 9342512441, 9845750704

## ದೇಶದಾದ್ಯಂತ ಮಾರುಕಟ್ಟೆ ಧಾರಣೆ

| | |
|---|---|
| **ಏಲಕ್ಕಿ ಧಾರಣೆ** | |
| **ಸಕಲೇಶಪುರ** | |
| ಕೂಳೆ | 850-900 |
| ನಡುಗೋಲು | 1000-1100 |
| ರಾಶಿ | 1200-1250 |
| ರಾಶಿ ಉತ್ತಮ | 1300-1350 |
| ಹೆರಕಿದ್ದು | 2000-2100 |
| ಹಸಿರು ಸಾಧಾರಣ | 1350-1450 |
| ಹಸಿರು ಉತ್ತಮ | 1500-1600 |
| ಹಸಿರು ಅತಿ ಉತ್ತಮ | 2000-2100 |
| ಕಾಳು ಮೆಣಸು | 580 |
| **ಅಡಿಕೆ** | |
| **ಬಂಟ್ವಾಳ** | |
| ಹಳತು | 43500-47000 |
| ಕೋಕ | 15000-27500 |
| **ಕಾರ್ಕಳ** | |
| ಹಳತು | 30000-47000 |
| **ಪುತ್ತೂರು** | |
| ಕೋಕ | 11000-25000 |
| ಹೊಸತು | 27000-36500 |
| **ಸಾಗರ** | |
| ಬಿಳಿಗೋಟು | 32789-32789 |
| ಚಾಲಿ | 36709-38099 |
| ಕೋಕ | 34499-34499 |
| ಕೆಂಪುಗೋಟು | 34499-34299 |
| ರಾಶಿ | 37699-46809 |
| ಸಿಪ್ಪೆಗೋಟು | 20510-21089 |
| **ಶಿವಮೊಗ್ಗ** | |
| ಬೆಟ್ಟೆ | 45500-53009 |
| ಗೊರಬಾಲು | 17879-37669 |
| ಹೊಸತು | 35819-47259 |
| ರಾಶಿ | 39000-47189 |
| ಸರಕು | 52900-82596 |
| **ಸಿದ್ದಾಪುರ** | |
| ಬಿಳಿಗೋಟು | 31609-34000 |
| ಚಾಲಿ | 37809-40218 |
| ಕೋಕ | 30189-34089 |
| ಕೆಂಪುಗೋಟು | 33099-33099 |
| ರಾಶಿ | 43399-46699 |
| ತಟ್ಟಿಬೆಟ್ಟೆ | 40509-46699 |
| **ಶಿರಸಿ** | |
| ಬೆಟ್ಟೆ | 35029-44699 |
| ಬಿಳಿಗೋಟು | 28099-36209 |
| ಚಾಲಿ | 37000-40299 |
| ಕೆಂಪುಗೋಟು | 30099-36099 |
| ರಾಶಿ | 44899-47899 |
| **ಯಲ್ಲಾಪುರ** | |
| ಅಪಿ | 66379-66379 |
| ಬಿಳಿಗೋಟು | 24899-35639 |
| ಚಾಲಿ | 24899-35639 |
| ಕೋಕ | 18099-32699 |
| ಕೆಂಪುಗೋಟು | 26099-36399 |
| ರಾಶಿ | 46000-55450 |
| ತಟ್ಟಿಬೆಟ್ಟೆ | 36919-45699 |

### ಕಾಫಿ (50 ಕೆ.ಜಿಗೆ ₹ ಗಳಲ್ಲಿ)

| | ಮೂಡಿಗೆರೆ | ಹಾಸನ | | |
|---|---|---|---|---|
| | ಮುದ್ರೆಮನೆ | ಪ್ಲಾಂಟರ್ಸ್ | ಅಲ್ಲಾನಾ | ನ್ಯೂಯಾರ್ಕ್ |
| ಎಪಿ | 11800 | 12100 | - | 169.05 ಸೆಂಟ್ಸ್ |
| ಎಸಿ | 6300 | 6700 | - | |
| ಆರ್‌ಪಿ | 9800 | 10000 | - | ಲಂಡನ್ |
| ಆರ್‌ಸಿ | 6075 | 245 on OT | - | 2546 ಡಾಲರ್ಸ್ |

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

# ಬೆಂಗಳೂರಿನಲ್ಲಿ ಎಎಂಡಿ ಜಾಗತಿಕ ವಿನ್ಯಾಸ ಕೇಂದ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕ ಮೂಲದ ಸೆಮಿಕಂಡಕ್ಟರ್ ಕಂಪನಿ ಎಎಂಡಿ, ಬೆಂಗಳೂರಿನಲ್ಲಿ ತನ್ನ ಅತಿ ದೊಡ್ಡ ಜಾಗತಿಕ ವಿನ್ಯಾಸ ಕೇಂದ್ರವನ್ನು ಆರಂಭಿಸಿದೆ. ಕೇಂದ್ರ ಎಲೆಕ್ಟ್ರಾನಿಕ್ಸ್ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ಅಶ್ವಿನಿ ವೈಷ್ಣವ್ ಅವರು ಈ ಕೇಂದ್ರ ಉದ್ಘಾಟಿಸಿದರು.

ಭಾರತದಲ್ಲಿ ₹3,300 ಕೋಟಿ ಹೂಡಿಕೆ ಮಾಡುವುದಾಗಿ ಕಂಪನಿಯು ಜುಲೈನಲ್ಲಿ ಘೋಷಿಸಿತ್ತು. ಇದರ ಭಾಗವಾಗಿ ಈ ಹೆಜ್ಜೆ ಇಟ್ಟಿದೆ. 5 ಲಕ್ಷ ಚದರ ಅಡಿ ವಿಸ್ತೀರ್ಣದಲ್ಲಿ ಇದ್ದು, 3 ಸಾವಿರ ಎಂಜಿನಿಯರ್‌ಗಳನ್ನು ನೇಮಿಸಿಕೊಳ್ಳುವ ಯೋಜನೆಯನ್ನು ಕಂಪನಿ ಹೊಂದಿದೆ. ಸೆಮಿಕಂಡಕ್ಟರ್ ತಂತ್ರಜ್ಞಾನದ ಅಭಿವೃದ್ಧಿ ಮತ್ತು ವಿನ್ಯಾಸ ಸೇರಿದಂತೆ ಕೃತಕ ಬುದ್ಧಿಮತ್ತೆ, ಮಷಿನ್ ಲರ್ನಿಂಗ್ ಕಡೆಗೂ ಈ ಕೇಂದ್ರವು ಗಮನ ಹರಿಸಲಿದೆ ಎಂದು ಕಂಪನಿಯು ತಿಳಿಸಿದೆ. ಎಎಂಡಿ ಬೆಂಗಳೂರಿನಲ್ಲಿ ತನ್ನ ಅತಿದೊಡ್ಡ ವಿನ್ಯಾಸ ಕೇಂದ್ರವನ್ನು ಸ್ಥಾಪಿಸಿರುವುದು ಜಾಗತಿಕ ಕಂಪನಿಗಳು ಭಾರತದ ಮೇಲೆ ಹೊಂದಿರುವ ವಿಶ್ವಾಸಕ್ಕೆ ಸಾಕ್ಷಿಯಾಗಿದೆ ಎಂದು ಅಶ್ವಿನಿ ವೈಷ್ಣವ್ ತಿಳಿಸಿದರು.

**ಇನ್ನೂ 3 ಸೆಮಿಕಂಡಕ್ಟರ್ ಘಟಕ:** ಭಾರತವು ಮುಂದಿನ ಕೆಲವು ತಿಂಗಳುಗಳಲ್ಲಿ ₹1 ಲಕ್ಷ ಕೋಟಿವರೆಗಿನ ಹೂಡಿಕೆಯೊಂದಿಗೆ ಇನ್ನೂ ಮೂರು ಸೆಮಿಕಂಡಕ್ಟರ್ ತಯಾರಿಕಾ ಘಟಕಗಳು ಬರಲಿವೆ ಎಂದು ಸಚಿವ ಅಶ್ವಿನಿ ವೈಷ್ಣವ್ ಹೇಳಿದರು. ತಮಿಳುನಾಡು, ಕರ್ನಾಟಕ, ತೆಲಂಗಾಣ, ಗುಜರಾತ್ ಮತ್ತು ಉತ್ತರಪ್ರದೇಶ ರಾಜ್ಯ ಸರ್ಕಾರಗಳೊಂದಿಗೆ ಈ ಸಂಬಂಧ ಮಾತುಕ ನಡೆಯುತ್ತಿದೆ. ಕೆಲವೇ ತಿಂಗಳಲ್ಲಿ ಸ್ಥಳ ಅಂತಿಮಗೊಳ್ಳಲಿದೆ ಎಂದು ತಿಳಿಸಿದರು.

ಎಎಂಡಿ ಕಾರ್ಯನಿರ್ವಾಹಕ ಉಪಾಧ್ಯಕ್ಷ ಮಾರ್ಕ್ ಪೇಪರ್‌ಮಾಸ್ಟರ್, ಈ ಹೂಡಿಕೆಯು ಭಾರತದೊಂದಿಗಿನ ನಮ್ಮ ಸಂಬಂಧವನ್ನು ಬಲಪಡಿಸುತ್ತದೆ. ಈ ಕೇಂದ್ರವು ತಂತ್ರಜ್ಞಾನ ಮತ್ತು ಉತ್ಪನ್ನ ಅಭಿವೃದ್ಧಿಗೆ ಸಹಾಯ ಮಾಡಲಿದೆ ಎಂದು ಹೇಳಿದರು.


ಬಳ್ಳಾರಿ ನಗರದ ತೇರು ಬೀದಿಯ ಬಳಿ ಮಲಬಾರ್ ಗೋಲ್ಡ್ ಆ್ಯಂಡ್ ಡೈಮಂಡ್ಸ್‌ನ ನವೀಕೃತ ಮಳಿಗೆ ಆರಂಭವಾಗಿದೆ. ಮಹಾನಗರ ಪಾಲಿಕೆಯ ಮೇಯರ್ ತ್ರಿವೇಣಿ ಅವರು ಮಳಿಗೆಯನ್ನು ಉದ್ಘಾಟಿಸಿದರು. ಮಲಬಾರ್‌ನ ಕರ್ನಾಟಕ ಪ್ರಾದೇಶಿಕ ಮುಖ್ಯಸ್ಥ ಫಿಲ್ಸರ್ ಬಾಬು ಇದ್ದರು

## ಮುಂಬೈ ಧಾರಣೆ

**ಶೇಂಗಾ**

28-11-2023

| | |
|---|---|
| ಜಾವಾ 70/80(ಹೊಸ) | 11100-11200 |
| ಜಾವಾ 80/90(ಹೊಸ) | 10500-10600 |
| ದಪ್ಪ ಮಧ್ಯಪ್ರದೇಶ(ಹೊಸ) | 10000-10100 |
| ದಪ್ಪ ಗುಜರಾತ್(ಹೊಸ) | 10700-10800 |

**ಶೇಂಗಾ ಎಣ್ಣೆ (10 ಕೆಜಿಗೆ)**

| | |
|---|---|
| ಕಚ್ಚಾ (ತೆರಿಗೆ ಬಿಟ್ಟು) | 1600 (1600) |
| ಒಂದು ವಾರದ ಡೆಲಿವರಿ | 1595 (1595) |
| ಸೋಯಾ ಕಚ್ಚಾ | 932 (930) |
| ಪಾಮ್ ವಾರದ ಡೆಲಿವರಿ | 842 (842) |
| ಸೂರ್ಯಕಾಂತಿ ಎಣ್ಣೆ ಕಚ್ಚಾ | 900 (900) |

**ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)**

| | |
|---|---|
| ಅಪರಂಜಿ ಚಿನ್ನ 10ಗ್ರಾಂ | 61,700 (61,800) |
| ಬೆಳ್ಳಿ ಕೆ.ಜಿ | 74,900 (74,850) |

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

REQUIRED SECURITY CONTRACTOR
Karnataka Antibiotics & Pharmaceuticals Limited (KAPL), (A Govt. of India Enterprise), Bangalore, "Looking for Supply of Security personnel on contract basis to our Peenya, Bangalore Factory. The contractor should have well-established firm and should be well versed with legal, statutory compliance and labour laws. The interested parties with requisite experience may visit our unit at the following address for collecting application forms and other details and submit quotations on or before 18.12.2023 to Human Resources Department, KAPL, No.14, Peenya Industrial Area, 2nd Phase, Bangalore-560058. Phone : 080 28395186/187/188.

ಬೆಂಗಳೂರಿನಲ್ಲಿರುವ SLV ಹೋಂ ನರ್ಸಿಂಗ್ ನಲ್ಲಿ ಕೆಲಸ ಮಾಡಲು ಹುಡುಗಿಯರು, ಹುಡುಗರು ಮತ್ತು ಮಹಿಳೆಯರು ಬೇಕಾಗಿದ್ದಾರೆ. ವಯಸ್ಸು (18ರಿಂದ45). ಊಟ ವಸತಿಯೊಂದಿಗೆ ಟ್ರೈನಿಂಗ್ ಕೊಟ್ಟು ಸಂಬಳ 10000/ ರಿಂದ 20000/ ವರೆಗೆ ಕೊಡಲಾಗುವುದು. ಆಸಕ್ತಿ ಉಳ್ಳವರು ಕರೆ ಮಾಡಿ. 7019869181, 9886922255

ತಕ್ಷಣ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 17,000- 65,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯುಟವಿದೆ. 7259552930

Cook

ಜಯನಗರ 5ನೇ ಬ್ಲಾಕ್ ನಲ್ಲಿ ವಾಸವಾಗಿರುವ ಒಂದು ಬ್ರಾಹ್ಮಣ ಕುಟುಂಬಕ್ಕೆ ನುರಿತ ಸಸ್ಯಾಹಾರ ತಯಾರಿಸಬಲ್ಲ ಅಡುಗೆಯವರು (ಹೆಂಗಸರು ಮಾತ್ರ) ಬೇಕಾಗಿದ್ದಾರೆ. ಸುತ್ತಮುತ್ತ ವಾಸಿಸುವವರಿಗೆ ಮೊದಲ ಆದ್ಯತೆ. ಸಂಬಳ ಅನುಭವಕ್ಕೆ ತಕ್ಕಂತೆ. ಸಂಪರ್ಕಿಸಿ: ಆರ್. ಶಂಕರ್, ಮೊಬೈಲ್: 9449405317

Multiple Vacancy

ವೆಜ್ ಹೋಟೆಲ್ಗೆ ದೋಸ ಮಾಸ್ಟರ್, ಟೀ ಮಾಸ್ಟರ್, ಸೌತ್ ಚೆಫ್ ಅಸಿಸ್ಟೆಂಟ್, ಕಟಿಂಗ್, ಗ್ರೈಂಡಿಂಗ್, ಕ್ಲೀನರ್ಸ್, ಕೌಂಟರ್ಸ್ ಬೇಕಾಗಿದ್ದಾರೆ. ಸ್ಥಳ: ಜಯನಗರ, ಬೆಂಗಳೂರು. +91 7019299055/ 8861453552

REQUIRED EXPERIENCED Telecaller and Field_Executive For Bank_loan Collection. Direct Recruitment to Company. Contact: 7899040499, 9620206756.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000ರಿಂದ20,000 ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ: 6366430266 /6366430366

ಉಚಿತ 50ಕೆ.ಜಿ. ಬೆಳೆಯುವ ಅಣಬೆ ಬೀಜವನ್ನು ಪಡೆದು ಮನೆಯಿಂದಲೇ ತಿಂಗಳಿಗೆ 20,000ಕ್ಕು ಹೆಚ್ಚು ಸಂಪಾದಿಸಿ ಜಾಗದವಶ್ಯಕತೆಯಿಲ್ಲ. ತರಬೇತಿಗಾಗಿ 9036900002/ 8095555516

ಪ್ರವಾಸ

Travel

6 ದಿನಗಳ ದುಬೈ, 7/11 ದಿನಗಳ ಸಿಂಗಪುರ, ಮಲೇಷ್ಯಾ ಥೈಲ್ಯಾಂಡ್, 6 ದಿನಗಳ ಅಂಡಮಾನ್, 10 ದಿನಗಳ ಕಾಂಬೋಡಿಯಾ ವಿಯಟ್ನಾಂ. ಭಟ್ ಟ್ರಾವೆಲ್ಸ್: 9844037295

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಕೆಲಸ ಹುಡುಕಾಟ
ನಿಮ್ಮ ನೇಮಕಾತಿ ಅಗತ್ಯಗಳಿಗೆ ಪೂರಕ ವೇದಿಕೆ
ನಿಮ್ಮ ಕಂಪನಿಗೆ ಸೂಕ್ತವಾದ ಅಭ್ಯರ್ಥಿಗಳನ್ನು ಪಡೆಯಿರಿ...ಈಗಲೇ ನಿಮ್ಮ ಜಾಹೀರಾತು ಬುಕ್ ಮಾಡಿರಿ!
JOB
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9886213331 |
+91 9900428036 | +91 9731810277 |
+91 9901641752 | 080-45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

# ನಲ್ಲಿ ನೀರು ಕುಡಿದ ಪರಿಶಿಷ್ಟ ವ್ಯಕ್ತಿಯ ಮೇಲೆ ಹಲ್ಲೆ, ಸಾವು

ಬದೌನ್(ಉತ್ತರಪ್ರದೇಶ)(ಪಿಟಿಐ): 'ಸಾರ್ವಜನಿಕ ನಲ್ಲಿಯಲ್ಲಿ ನೀರು ಕುಡಿದಿದ್ದಕ್ಕಾಗಿ ಹಲವರಿಂದ ಥಳಿತಕ್ಕೆ ಒಳಗಾಗಿದ್ದ ಎನ್ನಲಾದ ಪರಿಶಿಷ್ಟ ವ್ಯಕ್ತಿ ಮೃತಪಟ್ಟಿದ್ದಾನೆ' ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

ಬದೌನ್ ಜಿಲ್ಲೆಯ ಉಸಹೈತ್ ಪೊಲೀಸ್ ಠಾಣೆ ವ್ಯಾಪ್ತಿಯ ಸಾತ್ರ ಗ್ರಾಮದಲ್ಲಿ ಸೋಮವಾರ ರಾತ್ರಿ ಈ ಘಟನೆ ನಡೆದಿದೆ. ಕಮಲೇಶ್ ಮೃತ ವ್ಯಕ್ತಿ. ಸೂರಜ್ ರಾಠೋಡ್ ಹಾಗೂ ಆತನ ಸಹಚರರು ಕಮಲೇಶ್ ಅವರಿಗೆ ಬಡಿಗೆಗಳಿಂದ ಹೊಡೆದಿದ್ದರು. ತೀವ್ರವಾಗಿ ಗಾಯಗೊಂಡಿದ್ದ ಕಮಲೇಶ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಮಂಗಳವಾರ ಅವರು ಮೃತಪಟ್ಟರು ಎಂದು ಎಎಸ್ಪಿ ಅಮಿತ್ ಕಿಶೋರ್ ಶ್ರೀವಾಸ್ತವ ತಿಳಿಸಿದ್ದಾರೆ.

'ಮೃತನ ತಂದೆ ಜಗದೀಶ್ ನೀಡಿರುವ ದೂರಿನ ಆಧಾರದ ಮೇಲೆ ರಾಠೋಡ್‌ನನ್ನು ಬಂಧಿಸಿ, ಆತನ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ' ಎಂದು ತಿಳಿಸಿದ್ದಾರೆ.

# ಭಾರತ ಸೇರಿ 7 ದೇಶದ ಪ್ರಜೆಗಳಿಗೆ ಶ್ರೀಲಂಕಾಗೆ ಉಚಿತ ವೀಸಾ

ಕೊಲಂಬೊ (ಪಿಟಿಐ): ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಭಾರತ ಸೇರಿದಂತೆ ಏಳು ದೇಶಗಳ ಪ್ರಜೆಗಳಿಗೆ ತತ್‌ಕ್ಷಣದಿಂದಲೇ ಉಚಿತ ವೀಸಾ ನೀಡುವುದಾಗಿ ಶ್ರೀಲಂಕಾದ ವಲಸೆ ಇಲಾಖೆ ಘೋಷಿಸಿದೆ.

ಭಾರತ, ಚೀನಾ, ರಷ್ಯಾ, ಜಪಾನ್, ಮಲೇಷ್ಯಾ, ಇಂಡೋನೇಷ್ಯಾ ಮತ್ತು ಥಾಯ್ಲೆಂಡ್ ಪ್ರಜೆಗಳಿಗೆ ಉಚಿತ ಪ್ರವಾಸಿ ವೀಸಾ ನೀಡಲು ಕಳೆದ ಅಕ್ಟೋಬರ್‌ನಲ್ಲಿ ಸಂಪುಟ ನಿರ್ಧಾರ ಕೈಗೊಂಡಿತ್ತು. ಈ ವೀಸಾ ಪಡೆದ ಪ್ರವಾಸಿಗರು 30 ದಿನ ದೇಶದಲ್ಲಿ ನೆಲೆಸಬಹುದು.

ಯುದ್ಧದಿಂದ ಪ್ಯಾಲೆಸ್ಟೀನ್‌ನ 6 ಸಾವಿರ ಮಕ್ಕಳ ಸಾವು: ಡಬ್ಲ್ಯುಎಚ್‌ಒ

# ಗಾಜಾ ನಾಗರಿಕರಿಗೆ ರೋಗ ಭೀತಿ

ಜಿನೀವಾ (ರಾಯಿಟರ್ಸ್): ಗಾಜಾ ಪಟ್ಟಿಯಲ್ಲಿ ಆರೋಗ್ಯ ವ್ಯವಸ್ಥೆ ತೀರಾ ಹದಗೆಟ್ಟಿದೆ. ಇದನ್ನು ಸರಿಪಡಿಸದಿದ್ದರೆ ಇಸ್ರೇಲ್‌ನ ಬಾಂಬ್ ದಾಳಿಗೆ ಸಿಲುಕಿ ಸತ್ತವರಿಗಿಂತಲೂ ಹೆಚ್ಚಿನ ಸಂಖ್ಯೆಯ ಜನರು ರೋಗರುಜಿನದಿಂದ ಬಳಲಿ ಸಾಯುತ್ತಾರೆ ಎಂದು ವಿಶ್ವ ಆರೋಗ್ಯ ಸಂಸ್ಥೆ (ಡಬ್ಲ್ಯುಎಚ್‌ಒ) ಎಚ್ಚರಿಕೆ ನೀಡಿದೆ.

ಇಸ್ರೇಲ್ ಸೇನೆ ನಡೆಸಿದ ದಾಳಿಗೆ ಇಲ್ಲಿಯವರೆಗೂ ಪ್ಯಾಲೆಸ್ಟೀನ್‌ನ 15 ಸಾವಿರಕ್ಕೂ ಹೆಚ್ಚು ನಾಗರಿಕರು ಮೃತಪಟ್ಟಿದ್ದಾರೆ. ಇವರಲ್ಲಿ 18 ವರ್ಷದ ಒಳಗಿನ 6 ಸಾವಿರಕ್ಕೂ (ಶೇ 40ರಷ್ಟು) ಹೆಚ್ಚು ಮಕ್ಕಳಿದ್ದಾರೆ. ಅಲ್ಲದೇ, ಸಾವಿರಾರು ಜನರು ಅವಶೇಷಗಳ ಅಡಿಯಲ್ಲಿ ಸಿಲುಕಿದ್ದಾರೆ ಎಂದು ಗಾಜಾ ಆರೋಗ್ಯ ಸಚಿವಾಲಯ ನೀಡಿರುವ ಮಾಹಿತಿ ಉಲ್ಲೇಖಿಸಿ ಡಬ್ಲ್ಯುಎಚ್‌ಒ ಹೇಳಿಕೆ ನೀಡಿದೆ.

ವಿಶ್ವಸಂಸ್ಥೆಯಲ್ಲಿ ಮಂಗಳವಾರ ಮಾತನಾಡಿದ ವಿಶ್ವ ಆರೋಗ್ಯ ಸಂಸ್ಥೆಯ ವಕ್ತಾರೆ ಮಾರ್ಗರೇಟ್ ಹ್ಯಾರಿಸ್, 'ಗಾಜಾದ ಆರೋಗ್ಯ ವ್ಯವಸ್ಥೆಯನ್ನು ಮತ್ತೆ ಸರಿದಾರಿಗೆ ತರಬೇಕಿದೆ.

> **ಎಲ್ಲಾ ಒತ್ತೆಯಾಳುಗಳ ಬಿಡುಗಡೆ,ಪ್ಯಾಲೆಸ್ಟೀನ್ ಜನರ ಸುರಕ್ಷತೆ ಅತಿಮುಖ್ಯ. ಹಾಗಾಗಿ, ಮಾನವೀಯ ದೃಷ್ಟಿಯಿಂದ ದೀರ್ಘ ಕಾಲ ಕದನ ವಿರಾಮ ವಿಸ್ತರಣೆಯಾಗಲಿ**
> **ಆ್ಯಂಟೊನಿಯೊ ಗುಟೆರಸ್,** ಮಹಾಪ್ರಧಾನ ಕಾರ್ಯದರ್ಶಿ, ವಿಶ್ವಸಂಸ್ಥೆ

ಇಲ್ಲವಾದರೆ ಅಪಾಯ ಕಟ್ಟಿಟ್ಟಬುತ್ತಿ. ಸೋಂಕಿನ ಪ್ರಮಾಣ ಹೆಚ್ಚಲಿದೆ. ಅದರಲ್ಲೂ ಅತಿಸಾರದಿಂದ ಹೆಚ್ಚಿನ ಸಾವು ಸಂಭವಿಸುವ ಸಾಧ್ಯತೆಯಿದೆ' ಎಂದು ಆತಂಕ ವ್ಯಕ್ತಪಡಿಸಿದರು.

ಉತ್ತರ ಗಾಜಾ ಪ್ರದೇಶಕ್ಕೆ ಸಂಬಂಧಿಸಿದಂತೆ ವಿಶ್ವಸಂಸ್ಥೆ ಸಿದ್ಧಪಡಿಸಿರುವ ವರದಿ ಉಲ್ಲೇಖಿಸಿದ ಅವರು, 'ಅಲ್ಲಿ ಔಷಧ ಪೂರೈಕೆ ಸ್ಥಗಿತಗೊಂಡಿದೆ. ಲಸಿಕೆ ನೀಡುವ ಸಿಬ್ಬಂದಿ ಇಲ್ಲ. ಶುದ್ಧ ಕುಡಿಯುವ ನೀರು, ಆಹಾರ ಸಿಗುತ್ತಿಲ್ಲ. ನೈರ್ಮಲ್ಯ ಸಂಪೂರ್ಣ ಹದಗೆಟ್ಟಿದೆ. ಅತಿಹೆಚ್ಚು ಶಿಶುಗಳು ಅತಿಸಾರದಿಂದ ಬಳಲುತ್ತಿವೆ' ಎಂದು ಹೇಳಿದರು.

ಅಲ್ ಶಿಫಾ ಆಸ್ಪತ್ರೆ ಕಟ್ಟಡ ಕುಸಿದು ಬಿದ್ದಿದ್ದು ದುರಂತ ಎಂದು ಕಳವಳ ವ್ಯಕ್ತಪಡಿಸಿದ ಅವರು, ಕೆಲವು ವೈದ್ಯಕೀಯ ಸಿಬ್ಬಂದಿಯನ್ನು ಇಸ್ರೇಲ್ ಸೇನಾ ಯೋಧರು ವಿಚಾರಣೆಗೆ ಒಳಪಡಿಸಿದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

'ಗಾಜಾದ ಆಸ್ಪತ್ರೆಗಳಲ್ಲಿ ಗಾಯಗೊಂಡ ಮಕ್ಕಳು ತುಂಬಿ ಹೋಗಿದ್ದಾರೆ. ಕಲುಷಿತ ನೀರು ಸೇವನೆಯಿಂದ ಜಠರದ ಉರಿಯೂತ ಕಾಯಿಲೆಗೆ ಒಳಗಾಗಿರುವ ಮಕ್ಕಳು ಕೂಡ ದಾಖಲಾಗಿದ್ದಾರೆ' ಎಂದು ಗಾಜಾದಲ್ಲಿರುವ ವಿಶ್ವಸಂಸ್ಥೆಯ ಮಕ್ಕಳ ಏಜೆನ್ಸಿಯ ವಕ್ತಾರ ಜೇಮ್ಸ್ ಎಲ್ಡರ್ ಹೇಳಿದ್ದಾರೆ.

'ನಾವು ಸಂತ್ರಸ್ತ ಮಕ್ಕಳ ಹಲವು ಪೋಷಕರನ್ನು ಭೇಟಿ ಮಾಡಿದ್ದೇವೆ. ತಮ್ಮ ಮಕ್ಕಳಿಗೆ ಏನು ಬೇಕಿದೆ ಎಂದು ಅವರೆಲ್ಲರೂ ವಿವರಿಸಿದ್ದಾರೆ. ಅವರಿಗೆ ಶುದ್ಧ ಕುಡಿಯುವ ನೀರು ಸಿಗುತ್ತಿಲ್ಲ' ಎಂದು ಹೇಳಿದ್ದಾರೆ.

'ಕಾಲು ಮುರಿದು ಹೋದ ಮಗುವೊಂದು ಹಲವು ಗಂಟೆಗಳಿಂದಲೂ ಚಿಕಿತ್ಸೆ ಇಲ್ಲದೆ ಆಸ್ಪತ್ರೆಯ ನೆಲದ ಮೇಲೆ ಮಲಗಿರುವುದನ್ನು ನಾನು ನೋಡಿದ್ದೇನೆ. ಸೂಕ್ತ ಚಿಕಿತ್ಸೆ ನೀಡಲು ಅಗತ್ಯ ವೈದ್ಯಕೀಯ ಸಿಬ್ಬಂದಿಯ ಕೊರತೆ ತಲೆದೋರಿದೆ' ಎಂದು ಹೇಳಿದ್ದಾರೆ.

## 11 ಒತ್ತೆಯಾಳುಗಳ ಬಿಡುಗಡೆ

ಜೆರುಸಲೇಂ (ಎಪಿ): ಇಸ್ರೇಲ್ ನಾಯಕರು ಹಾಗೂ ಹಮಾಸ್ ಬಂಡುಕೋರರು ಬುಧವಾರದವರೆಗೂ ಕದನ ವಿರಾಮ ವಿಸ್ತರಣೆಗೆ ಒಪ್ಪಿಕೊಂಡಿದ್ದಾರೆ. ಹಾಗಾಗಿ, ಹೆಚ್ಚಿನ ಸಂಖ್ಯೆಯಲ್ಲಿ ಒತ್ತೆಯಾಳುಗಳು ಹಾಗೂ ಪ್ಯಾಲೆಸ್ಟೀನ್ ನಾಗರಿಕರು ಬಿಡುಗಡೆಯಾಗುವ ನಿರೀಕ್ಷೆ ಗರಿಗೆದರಿದೆ.

ನಾಲ್ಕು ದಿನಗಳ ಕದನ ವಿರಾಮ ಒಪ್ಪಂದದ ಅನ್ವಯ ಕೊನೆಯ ಹಂತದಲ್ಲಿ ಇಸ್ರೇಲ್‌ನ 11 ಮಹಿಳೆಯರು ಮತ್ತು ಮಕ್ಕಳನ್ನು ಹಮಾಸ್ ಬಂಡುಕೋರರು ಸೋಮವಾರ ತಡರಾತ್ರಿ ಬಿಡುಗಡೆ ಮಾಡಿದ್ದಾರೆ. ಇದಕ್ಕೆ ಪ್ರತಿಯಾಗಿ ಮಂಗಳವಾರ ಪ್ಯಾಲೆಸ್ಟೀನ್‌ನ 33 ನಾಗರಿಕರನ್ನು ಬಿಡುಗಡೆ ಮಾಡಲಾಗಿದೆ ಎಂದು ಇಸ್ರೇಲ್ ಸೇನೆ ತಿಳಿಸಿದೆ.

# ತೆಲಂಗಾಣ ಕಾಂಗ್ರೆಸ್‌ನ 'ಫೀನಿಕ್ಸ್' ಕಥನ...


ಚುನಾವಣಾ ಯಾತ್ರೆ
ತೆಲಂಗಾಣ
ಸುದೇಶ ದೊಡ್ಡಪಾಳ್ಯ

ಹೈದರಾಬಾದ್: ತೆಲಂಗಾಣ ರಾಜ್ಯ ಉದಯದ ನಂತರ ನಡೆದ ವಿಧಾನಸಭೆಯ ಎರಡೂ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ನೆಲಕಚ್ಚಿ ಮಲಗಿತ್ತು. ಒಟ್ಟು 119 ಸ್ಥಾನಗಳಲ್ಲಿ ಕಾಂಗ್ರೆಸ್ 2014ರಲ್ಲಿ 21 ಸ್ಥಾನ, 2018ರಲ್ಲಿ 19 ಸ್ಥಾನ ಗಳಿಸುವಷ್ಟರಲ್ಲೇ ಸುಸ್ತಾಗಿತ್ತು. ಸೋಲಿನ ನಂತರ ಕಾಂಗ್ರೆಸ್ ಗಾಢನಿದ್ರೆಗೆ ಜಾರಿತ್ತು. ಮೂರು ವರ್ಷಗಳ ಹಿಂದೆ ನಡೆದ ಗ್ರೇಟರ್ ಹೈದರಾಬಾದ್ ಮುನಿಸಿಪಲ್ ಕಾರ್ಪೊರೇಷನ್ ಚುನಾವಣೆಯಲ್ಲಿ ಕಾಂಗ್ರೆಸ್ ಗೆದ್ದಿದ್ದು 150 ಸ್ಥಾನಗಳಲ್ಲಿ 2 ಕಡೆ ಮಾತ್ರ. ಈ ಎಲ್ಲಾ ಘಟನೆಗಳಿಂದ ಬಹಳ ಹಳೆ ಪಕ್ಷವಾದ ಕಾಂಗ್ರೆಸ್‌ನ ಕತೆ ಮುಗಿದೇ ಹೋಯಿತು ಎನ್ನುವ ಮಾತು ಎಲ್ಲೆಡೆ ಕೇಳಿ ಬಂದಿತ್ತು. ಪಕ್ಷದ ನಾಯಕರೂ ಕೂಡ ಇದಕ್ಕೆ ಇಂಬು ಕೊಡುವಂತೆಯೇ ನಿಷ್ಕ್ರಿಯರಾಗಿದ್ದರು.

ಮತದಾನಕ್ಕೆ ಕೇವಲ ಒಂದು ದಿನ ಬಾಕಿ ಇದೆ. ಆದರೆ, ಕಾಂಗ್ರೆಸ್‌ನ ಇಂದಿನ ಪರಿಸ್ಥಿತಿಯನ್ನು ಗಮನಿಸಿದರೆ ಅಚ್ಚರಿ ಆಗುತ್ತದೆ. ಕತೆ ಮುಗಿದೇ ಹೋಯಿತು ಎನ್ನುತ್ತಿರುವಾಗಲೇ ಇದ್ದಕ್ಕಿದ್ದಂತೆ ಕಾಂಗ್ರೆಸ್ ಮೈಕೊಡವಿ ಎದ್ದು ನಿಂತಿರುವ ಬಗೆಯಾದರೂ ಹೇಗೆ ಎನ್ನುವ ನನ್ನ ಪ್ರಶ್ನೆಗೆ ಸುತ್ತಾಟದ ಸಮಯದಲ್ಲಿ ಉತ್ತರ ಸಿಗುತ್ತಾ ಹೋಯಿತು.

'ಪಕ್ಕದ ಕರ್ನಾಟಕದಲ್ಲಿ ಆರು ತಿಂಗಳ ಹಿಂದೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಭರ್ಜರಿ ಗೆಲುವು ಸಾಧಿಸಿದ್ದು, ನಂತರದ ದಿನಗಳಲ್ಲಿ ನಮ್ಮ ರಾಜ್ಯದಲ್ಲಿ ಕಾಂಗ್ರೆಸ್‌ಗೆ 'ಬೂಸ್ಟರ್ ಡೋಸ್'ನಂತೆ ಆಯಿತು' ಎಂದು ಮುಚಿಂತಲ್ ಗ್ರಾಮದಲ್ಲಿ ಸಿಕ್ಕ ಕಾರ್ಯಕರ್ತ ವಿನೋದ್‌ಕುಮಾರ್ ಹೇಳಿದರು. ನನ್ನ ಮುಂದಿನ ಸುತ್ತಾಟದ ಸಮಯದಲ್ಲಿ ಇದು ನಿಜವೆನಿಸತೊಡಿತು.

ಹೈದರಾಬಾದ್ ಸೇರಿದಂತೆ ತೆಲಂಗಾಣದಲ್ಲಿ ಮುಸ್ಲಿಮರ ಸಂಖ್ಯೆ ಗಣನೀಯವಾಗಿಯೇ ಇದೆ. ಕಳೆದ ಎರಡೂ ಚುನಾವಣೆಯಲ್ಲಿ ಮುಸ್ಲಿಮರು ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಪಕ್ಷದ ಪರವಾಗಿಯೇ ಇದ್ದರು. ಇದಕ್ಕೆ ಕಾರಣ, ಕೆಸಿಆರ್ ಅಲ್ಪಸಂಖ್ಯಾತರಿಗಾಗಿ ತಂದಿದ್ದ ಯೋಜನೆಗಳು ಮತ್ತು ಕೋಮುಗಲಭೆ ತಲೆ ಎತ್ತದಂತೆ ಮಾಡಿದ್ದು. ಆದರೆ, ಈಗ ಕಾಲ ಬದಲಾಗಿದೆ. ಕರ್ನಾಟಕದ ಚುನಾವಣೆ ವೇಳೆ ಜೆಡಿಎಸ್, ಬಿಜೆಪಿಯ 'ಬಿ ಟೀಂ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಸಾರಿ ಸಾರಿ ಹೇಳಿದ್ದರು. ಇದರಿಂದಾಗಿ ಮುಸ್ಲಿಮರು 'ತೆನೆ ಹೊತ್ತ ಮಹಿಳೆ'ಗೆ ಬೆನ್ನು ತೋರಿಸಿದ್ದರು. ಜೆಡಿಎಸ್‌ನ ಶಾಸಕರ ಸಂಖ್ಯೆ 19ಕ್ಕೆ ಕುಸಿಯಿತು. ಅದೇ ತಂತ್ರವನ್ನು ತೆಲಂಗಾಣದಲ್ಲೂ ರಾಹುಲ್ ಗಾಂಧಿ ಬಳಸುತ್ತಿದ್ದಾರೆ. ಬಿಆರ್‌ಎಸ್, ಬಿಜೆಪಿಯ 'ಬಿ ಟೀಂ' ಎನ್ನುವ ಮಾತನ್ನು ಪ್ರತಿ ಸಭೆಯಲ್ಲೂ ಕೂಗಿ ಕೂಗಿ ಹೇಳುತ್ತಿದ್ದಾರೆ. ರಾಜಕೀಯ ಕುರಿತು ಆಸಕ್ತಿ ಇರುವ ತರಕಾರಿ ವ್ಯಾಪಾರಿ ಮನ್ಮಥಪ್ಪಸ್ವಾಮಿ, 'ಕರ್ನಾಟಕದಲ್ಲಿ ಮುಸ್ಲಿಮರು ಕಾಂಗ್ರೆಸ್‌ಗೆ ಒಮ್ಮತದಿಂದ ಮತ ಹಾಕಿದ್ದರಿಂದಲೇ ಭರ್ಜರಿಯಾಗಿ ಗೆದ್ದು ಅಧಿಕಾರಕ್ಕೆ ಬಂದಿದೆ. ಇಲ್ಲಿನ ಮುಸ್ಲಿಮರೂ ಅದೇ ಹಾದಿ ತುಳಿದರೆ ಕಾಂಗ್ರೆಸ್‌ಗೆ ಸಿಹಿ, ಬಿಆರ್‌ಎಸ್‌ಗೆ ಕಹಿ...' ಎಂದು ತಮ್ಮದೇ ಧಾಟಿಯಲ್ಲಿ ವಿಶ್ಲೇಷಿಸಿದರು.

ಈಟೆಲ ರಾಜೇಂದರ್ ಹಿಂದುಳಿದ ಮುದಿರಾಜ ಜಾತಿಯ ಪ್ರಭಾವಿ ನಾಯಕ. ಬಿಆರ್‌ಎಸ್ ಸರ್ಕಾರದಲ್ಲಿ ಸಚಿವರಾಗಿದ್ದರು. ಮುಖ್ಯಮಂತ್ರಿ ಕೆಸಿಆರ್‌ಗೆ ಬಲಗೈನಂತೆ ಇದ್ದರು. ಕೆಸಿಆರ್ ಮುಂದಿನ ದಿನಗಳಲ್ಲಿ ತಮ್ಮನ್ನು ಮುಖ್ಯಮಂತ್ರಿ ಮಾಡುವ ಬದಲು ಪುತ್ರ, ಸಚಿವ ಕೆ.ಟಿ.ರಾಮರಾವ್ ಅವರನ್ನು ಆ ಕುರ್ಚಿಗೆ ತರಲು ತಯಾರಿ ನಡೆಸುತ್ತಿದ್ದಾರೆ ಎನ್ನುವ ಸೂಚನೆ ಅವರಿಗೆ ಸಿಕ್ಕಿತ್ತು. ಅಸಮಾಧಾನ ಹೊಗೆಯಾಡಿತು. ಇಬ್ಬರ ನಡುವೆ ಕಂದಕ ದೊಡ್ಡದಾಯಿತು. ಕೆಸಿಆರ್, ಈಟೆಲ ಅವರನ್ನು ಮಂತ್ರಿ ಸ್ಥಾನದಿಂದ ತೆಗೆದುಹಾಕಿದಲ್ಲದೇ ಕೇಸುಗಳನ್ನೂ ಹಾಕಿಸಿದ್ದರು. ಇಷ್ಟಲ್ಲದೇ ಈ ಚುನಾವಣೆಯಲ್ಲಿ ಈಟೆಲ ಪ್ರತಿನಿಧಿಸುವ ಜಾತಿಗೆ ಬಿಆರ್‌ಎಸ್ ಒಂದೂ ಟಿಕೆಟ್ ನೀಡಿಲ್ಲ. ಈ ಕಾರಣಕ್ಕಾಗಿ ಮುದಿರಾಜ ಜಾತಿ ಮತಗಳಲ್ಲಿ ಒಂದಷ್ಟು ಮತಗಳು ಕಾಂಗ್ರೆಸ್‌ಗೂ ಬರುತ್ತವೆ ಎನ್ನುವುದು ಮುಖಂಡರ ನಂಬಿಕೆ.

ಜನಪ್ರಿಯ ಮತ್ತು ಧಾಡಸಿ ಗುಣದ ಕೆಸಿಆರ್ ಅವರನ್ನು ಪ್ರಶ್ನಿಸುವ ಧೈರ್ಯವನ್ನು ಯಾವ ರಾಜಕಾರಣಿಯೂ ಮಾಡುತ್ತಿರಲಿಲ್ಲ. ಇದಕ್ಕೆ ಪೂರಕ ಎನ್ನುವಂತೆ ಕಾಂಗ್ರೆಸ್ ನಾಯಕರು ಕೆಸಿಆರ್ ಜೊತೆ ಗುಟ್ಟಾಗಿ ಉತ್ತಮ ಬಾಂಧವ್ಯ ಹೊಂದಿರುತ್ತಿದ್ದರು. ಹೀಗಾಗಿಯೇ ಯಾದಗಿರಿಗುಟ್ಟದ ಶ್ರೀನಿವಾಸ್, 'ಕಾಂಗ್ರೆಸ್ ಅನ್ನ ಗೆಲ್ಲಿಸಿದರೂ, ಕೆಸಿಆರ್ ಅವರನ್ನು ಹೇಗಿದ್ದರೂ ಖರೀದಿ ಮಾಡುತ್ತಾರೆ' ಎಂದು ಗೇಲಿ ಮಾಡಿದರು. ಆದರೆ, ಇದಕ್ಕೆ ಅಪವಾದ ಎನ್ನುವಂತೆ ತೆಲಂಗಾಣ ಕಾಂಗ್ರೆಸ್ ಅಧ್ಯಕ್ಷ ರೇವಂತ ರೆಡ್ಡಿ 'ಸೇರಿಗೆ ಸವ್ವಾಸೇರು' ಎನ್ನುವಂತೆ ಕೆಸಿಆರ್ ವಿರುದ್ಧ ತೊಡೆತಟ್ಟಿ ನಿಂತಿದ್ದಾರೆ. ರೇವಂತ ರೆಡ್ಡಿ, ಕೆಸಿಆರ್ ಜೊತೆ ರಾಜಿ ಮಾಡಿಕೊಳ್ಳುವ ಸಾಧ್ಯತೆಗಳೇ ಇಲ್ಲ ಎನ್ನುವ ನಂಬಿಕೆ ಜನರಿಗೆ ಬಂದಂತೆ ಕಾಣುತ್ತಿದೆ.

ಕರ್ನಾಟಕದಲ್ಲಿ ಕಾಂಗ್ರೆಸ್‌ಗೆ 'ಚುನಾವಣಾ ತಂತ್ರಗಾರಿಕೆ'ಯನ್ನು ಹೇಳಿಕೊಟ್ಟ ಬಳ್ಳಾರಿ ಮೂಲದ ಸುನಿಲ್ ಕನುಗೋಲ್, ಇಲ್ಲಿಯೂ ಅದೇ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಕರ್ನಾಟಕದಲ್ಲಿ ಐದು ಗ್ಯಾರಂಟಿಗಳನ್ನು ಕೊಟ್ಟರೆ, ಇಲ್ಲಿ ಒಂದು ಬೋನಸ್ ಎನ್ನುವಂತೆ ಆರು ಗ್ಯಾರಂಟಿಗಳನ್ನು ಘೋಷಿಸಲಾಗಿದೆ. ಕರ್ನಾಟಕದಲ್ಲಿ ಗ್ಯಾರಂಟಿಗೆ ಮತದಾರರು ಮಾರುಹೋಗಿದ್ದಾರೆಂದು ಎಲ್ಲ ಪಕ್ಷಗಳ ನಂಬಿಕೆ. ಆದ್ದರಿಂದಲೇ ಕಾಂಗ್ರೆಸ್ ಇಲ್ಲಿ ಬಿಆರ್‌ಎಸ್ ಮತ್ತು ಬಿಜೆಪಿಗಿಂತ ಮೊದಲೇ ಗ್ಯಾರಂಟಿಗಳನ್ನು ಘೋಷಣೆ ಮಾಡಿತು. ಅವುಗಳ ಬಗೆಗೆ ಜನರು ಒಲವು ತೋರುವ ಲಕ್ಷಣವನ್ನು ಗುರುತಿಸಿದ ಮುಖ್ಯಮಂತ್ರಿ ಕೆ.ಚಂದ್ರಶೇಖರ ರಾವ್, ಅವರ ಪುತ್ರ, ಸಚಿವ ಕೆ.ಟಿ.ರಾಮರಾವ್ ಪ್ರತಿದಾಳಿಗೆ ಮುಂದಾದರು. ಆಡಳಿತ ಪಕ್ಷದ ಕ್ರಿಯೆಗೆ, ವಿರೋಧ ಪಕ್ಷಗಳು ಪ್ರತಿಕ್ರಿಯೆ ಕೊಡುವುದು ಸಾಮಾನ್ಯ. ಇಲ್ಲಿ ವಿರೋಧ ಪಕ್ಷದ ಕ್ರಿಯೆಗೆ ಆಡಳಿತ ಪಕ್ಷ ಪ್ರತಿಕ್ರಿಯೆ ಕೊಡುವಂತಾಗಿದೆ. ಇದೇ ರೀತಿ ಕರ್ನಾಟಕದಲ್ಲಿ, ಅಂದಿನ ಆಡಳಿತ ಪಕ್ಷ ಬಿಜೆಪಿ, ವಿರೋಧ ಪಕ್ಷ ಕಾಂಗ್ರೆಸ್‌ನ ಕ್ರಿಯೆಗೆ, ಪ್ರತಿಕ್ರಿಯೆ ಕೊಡುವುದರಲ್ಲೇ ಕಾಲಹರಣ ಮಾಡಿತ್ತು.

ರಾಹುಲ್ ಗಾಂಧಿ ಕೈಗೊಂಡ ಭಾರತ್ ಜೋಡೊ ಯಾತ್ರೆ ತೆಲಂಗಾಣದಲ್ಲಿ 375 ಕಿಲೊಮೀಟರ್ ಸಾಗಿ ಹೋದ ಹಾದಿಯಲ್ಲಿ ನಾನು ಇಡೀ ದಿನ ಸುತ್ತಾಡಿದೆ. ಮೆಹಬೂಬ್ ನಗರದ ರಸ್ತೆಬದಿ ಎಳನೀರು ವ್ಯಾಪಾರ ಮಾಡುತ್ತಿದ್ದ ಗೋಪಾಲ, 'ಇದೇ ರಸ್ತೆಯಲ್ಲಿ ರಾಹುಲ್ ಗಾಂಧಿ ಅವರ ಭಾರತ್ ಜೋಡೊ ಯಾತ್ರೆ ಸಾಗಿತ್ತು. ನಾನು ಅದನ್ನು ಇಲ್ಲೇ ನಿಂತು ನೋಡಿದೆ. ಐದು ಕಿಲೊಮೀಟರ್ ವರೆಗೆ ಜನ ಸಾಗರದಂತೆ ಇದ್ದರು' ಎಂದು ಕಣ್ಣುಗಳನ್ನು ಅರಳಿಸಿ ಹೇಳಿದರು.

ತೆಲಂಗಾಣದಲ್ಲಿ ಕಾಂಗ್ರೆಸ್‌ಗೆ ಹೊಸ ಖದರ್ ತಂದುಕೊಟ್ಟಿದ್ದು ರಾಹುಲ್ ಗಾಂಧಿಯ ಯಾತ್ರೆ ಎಂದರೆ ತಪ್ಪಾಗಲಾರದು. 'ಈ ಚುನಾವಣೆ ಬಿಆರ್‌ಎಸ್ ಮತ್ತು ಕಾಂಗ್ರೆಸ್ ನಡುವಿನ ಯುದ್ಧವಲ್ಲ, ಬದಲಿಗೆ 'ದೊರಲ ತೆಲಂಗಾಣ V/S ಪ್ರಜಲ ತೆಲಂಗಾಣ' ದ ಯುದ್ಧ. ತೆಲಂಗಾಣದ ನಾಲ್ಕು ಕೋಟಿ ಜನರು, ನಾಲ್ಕು ದೊರೆಗಳ (ಕೆಸಿಆರ್, ಪುತ್ರ ಕೆ.ಟಿ.ರಾಮರಾವ್, ಪುತ್ರಿ ಕೆ.ಕವಿತಾ, ಸೋದರಳಿಯ, ಸಚಿವ ಹರೀಶ್ ರಾವ್) ಮೇಲೆ ಮಾಡುತ್ತಿರುವ ಯುದ್ಧ' ಎಂದು ಆರಂಭದಲ್ಲೇ ರಾಹುಲ್ ಗುಡುಗಿದರು. ಇದರ ಪರಿಣಾಮವೆಂಬಂತೆ 'ಕೆಸಿಆರ್ ಅವರ ಅಹಂಕಾರವನ್ನು ಈ ಬಾರಿ ಕೊನೆಗಾಣಿಸುತ್ತೇವೆ' ಎಂದು ಕಾಂಗ್ರೆಸ್ ಕಾರ್ಯಕರ್ತರು ತುರುಸಿನಿಂದ ಓಡಾಡುತ್ತಿದ್ದಾರೆ.

'ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಆರು ಗ್ಯಾರಂಟಿಗಳಿಗೆ ಆರು ಮುಖ್ಯಮಂತ್ರಿಗಳನ್ನು ಮಾಡುತ್ತಾರೆ' ಎಂದು ಪೆದ್ದಾಪುರದ ಬಿಆರ್‌ಎಸ್ ಕಾರ್ಯಕರ್ತ ವೆಂಕಟೇಶ್ ವ್ಯಂಗ್ಯವಾಡಿದರು. ಏಕೆಂದರೆ, ಕಾಂಗ್ರೆಸ್‌ನಲ್ಲಿ ರೇವಂತ ರೆಡ್ಡಿ, ಮಲ್ಲು ಭಟ್ಟಿ ವಿಕ್ರಮಾರ್ಕ, ಉತ್ತಮಕುಮಾರ್ ರೆಡ್ಡಿ, ಕೋಮಟಿ ರೆಡ್ಡಿ, ವೆಂಕಟ ರೆಡ್ಡಿ ಅವರ ಮಧ್ಯೆ ಮುಖ್ಯಮಂತ್ರಿ ಸ್ಥಾನಕ್ಕಾಗಿ ಪೈಪೋಟಿ ಆರಂಭವಾಗಿದೆ. ಇಷ್ಟೇ ಅಲ್ಲದೇ ಕಾಂಗ್ರೆಸ್ ಅನ್ನು ಇಲ್ಲಿನ ಜನರು 'ರೆಡ್ಡಿಗಳ ಪಕ್ಷ' ಎಂದು ಕರೆಯುತ್ತಾರೆ. ಪ್ರಮುಖ ನಾಯಕರೆಲ್ಲಾ ರೆಡ್ಡಿ ಸಮುದಾಯಕ್ಕೆ ಸೇರಿದವರಾಗಿದ್ದಾರೆ. ತೆಲಂಗಾಣವನ್ನೇ ಧ್ಯಾನಿಸುವ ಮತ್ತು ಇಲ್ಲಿನ ಸಂಸ್ಕೃತಿ, ಸಮಾಜ, ಆರ್ಥಿಕತೆ, ರಾಜಕೀಯ, ಜನರ ನಾಡಿಮಿಡಿತವನ್ನು ಅರಿಯುವುದರಲ್ಲಿ ನಿಸ್ಸೀಮನಾದ ಕೆಸಿಆರ್‌ನಂತಹ ನಾಯಕ ಕಾಂಗ್ರೆಸ್‌ನಲ್ಲಿಲ್ಲ.

ಇಷ್ಟೆಲ್ಲಾ ಕೊರತೆಗಳ ನಡುವೆ ಬೂದಿಯಿಂದ ಮೇಲೆದ್ದು ಬಂದ ಫೀನಿಕ್ಸ್ ಹಕ್ಕಿಯ ಕತೆಯಂತೆ ಕಾಂಗ್ರೆಸ್ ನಳನಳಿಸುತ್ತಿರುವುದು ಎಲ್ಲೆಲ್ಲೂ ಕಂಡುಬರುತ್ತಿದೆ. ಬಹುಶಃ ಆಡಳಿತ ಪಕ್ಷದ ಮೇಲಿನ ಅತೃಪ್ತಿಯಿಂದಾಗಿ ಕಾಂಗ್ರೆಸ್ ನ ಹಲವಾರು ಕೊರತೆಗಳು ಗೌಣವಾಗಿಬಿಟ್ಟಿವೆ.

ರಾಜಕಾರಣದಲ್ಲಿ ಎಲ್ಲವೂ ಮುಗಿದೇ ಹೋಯಿತು, ಸರ್ವನಾಶವಾಯಿತು ಎನ್ನುವ ಮಾತು ಸುಳ್ಳಾಗುತ್ತಲೇ ಇರುವುದನ್ನು ಇತಿಹಾಸ ನೆನಪಿಸುತಿರುವಂತಿದೆ.


ರಾಹುಲ್ ಗಾಂಧಿ ಹಾಗೂ ರೇವಂತ ರೆಡ್ಡಿ

## ಅಭ್ಯರ್ಥಿಗಳು: ಅಪರಾಧ ಹಿನ್ನೆಲೆ, ಕೋಟ್ಯಧಿಪತಿಗಳು...

**ರಾಜ್ಯಗಳು**
- ಮಧ್ಯಪ್ರದೇಶ
- ಛತ್ತೀಸಗಢ
- ರಾಜಸ್ಥಾನ
- ತೆಲಂಗಾಣ
- ಮಿಜೋರಾಂ

8,054 ಅಭ್ಯರ್ಥಿಗಳು | 831 ಮಹಿಳೆಯರು
8,051 ಪರಿಶೀಲಿಸಲಾದ ಪ್ರಮಾಣಪತ್ರಗಳು | 2 ಲಿಂಗತ್ವ ಅಲ್ಪಸಂಖ್ಯಾತರು

* ಮೂವರು ಅಭ್ಯರ್ಥಿಗಳ ಪ್ರಮಾಣಪತ್ರಗಳು ಅಸ್ಪಷ್ಟವಾಗಿದ್ದು, ಪರಿಶೀಲಿಸಲಾಗಿಲ್ಲ

**ಅಪರಾಧ ಪ್ರಕರಣ**

959 ಗಂಭೀರ ಅಪರಾಧ ಪ್ರಕರಣ ಎದುರಿಸುತ್ತಿರುವ ಅಭ್ಯರ್ಥಿಗಳು

| | |
|---|---|
| ಮಿಜೋರಾಂ | 7 |
| ಛತ್ತೀಸಗಢ | 72 |
| ಮಧ್ಯಪ್ರದೇಶ | 291 |
| ರಾಜಸ್ಥಾನ | 236 |
| ತೆಲಂಗಾಣ | 353 |

| | |
|---|---|
| ಕಾಂಗ್ರೆಸ್ | 162 |
| ಬಿಜೆಪಿ | 129 |
| ಬಿಎಸ್‌ಪಿ | 54 |
| ಬಿಆರ್‌ಎಸ್ | 34 |
| ಎಎಪಿ | 40 |

22 ಕೊಲೆ
82 ಕೊಲೆಯತ್ನ
5 ಅತ್ಯಾಚಾರ
107 ಮಹಿಳೆಯರ ಮೇಲಿನ ಅಪರಾಧ

241 ರೆಡ್ ಅಲರ್ಟ್ ಕ್ಷೇತ್ರಗಳು (ಅಪರಾಧ ಪ್ರಕರಣ ಹೊಂದಿರುವ ಮೂರು ಅಥವಾ ಅದಕ್ಕಿಂತ ಹೆಚ್ಚು ಅಭ್ಯರ್ಥಿಗಳು ಇರುವ ಕ್ಷೇತ್ರಗಳು)

**ಕೋಟ್ಯಧಿಪತಿಗಳು 2,371**

| | |
|---|---|
| ಮಿಜೋರಾಂ | 114 |
| ಛತ್ತೀಸಗಢ | 299 |
| ಮಧ್ಯಪ್ರದೇಶ | 727 |
| ರಾಜಸ್ಥಾನ | 651 |
| ತೆಲಂಗಾಣ | 580 |

| | |
|---|---|
| ಕಾಂಗ್ರೆಸ್ | 584 |
| ಬಿಜೆಪಿ | 549 |
| ಬಿಎಸ್‌ಪಿ | 135 |
| ಬಿಆರ್‌ಎಸ್ | 114 |
| ಎಎಪಿ | 94 |

**ಅಭ್ಯರ್ಥಿಗಳ ಸರಾಸರಿ ಆಸ್ತಿ ₹ 3.36 (ಕೋಟಿ ₹ ಗಳಲ್ಲಿ)**

| | |
|---|---|
| ಮಿಜೋರಾಂ | ₹ 4.90 |
| ಛತ್ತೀಸಗಢ | ₹ 1.87 |
| ಮಧ್ಯಪ್ರದೇಶ | ₹ 2.89 |
| ರಾಜಸ್ಥಾನ | ₹ 3.12 |
| ತೆಲಂಗಾಣ | ₹ 4.71 |

| ಅಭ್ಯರ್ಥಿಗಳ ಶಿಕ್ಷಣ | |
|---|---|
| 5–12ನೇ ತರಗತಿ | 3,645 |
| ಪದವೀಧರರು | 3,794 |
| ಡಿಪ್ಲೊಮಾ | 146 |
| ಅನಕ್ಷರಸ್ಥರು | 136 |
| ಮಾಹಿತಿ ನೀಡದವರು | 10 |

| ವಯಸ್ಸು | |
|---|---|
| 25 - 40 ವರ್ಷ | 3,101 |
| 41- 60 ವರ್ಷ | 3,872 |
| 61 - 80 ವರ್ಷ | 1,066 |
| 80 ವರ್ಷಕ್ಕಿಂತ ಮೇಲಿನವರು | 12 |

ಮೂಲ: ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್

# ತೆಲಂಗಾಣ: ಚುನಾವಣಾ ಪ್ರಚಾರಕ್ಕೆ ತೆರೆ

ಪ್ರಜಾವಾಣಿ ವಾರ್ತೆ

ಹೈದರಾಬಾದ್: ತೆಲಂಗಾಣ ವಿಧಾನಸಭೆ ಚುನಾವಣೆಯ ಬಹಿರಂಗ ಪ್ರಚಾರಕ್ಕೆ ಮಂಗಳವಾರ ಸಂಜೆ 5 ಗಂಟೆಗೆ ತೆರೆಬಿದ್ದಿತು. 119 ಸದಸ್ಯ ಬಲದ ರಾಜ್ಯ ವಿಧಾನಸಭೆಗೆ ಗುರುವಾರ ಚುನಾವಣೆ ನಡೆಯಲಿದೆ. ಇನ್ನು ಎರಡು ದಿವಸ ತೆರೆಮರೆಯ ಕಸರತ್ತುಗಳ ಕಡೆಗೆ ಪಕ್ಷಗಳು ಗಮನ ಹರಿಸಲಿವೆ.

ಚುನಾವಣಾ ಆಯೋಗವು ಅಕ್ಟೋಬರ್ 9ರಂದು ಐದು ರಾಜ್ಯಗಳ ವಿಧಾನಸಭೆ ಚುನಾವಣಾ ದಿನಾಂಕ ಘೋಷಿಸಿದ ಬಳಿಕವೇ ತೆಲಂಗಾಣದಲ್ಲಿ ರಾಜಕೀಯ ಪಕ್ಷಗಳು ಚುನಾವಣಾ ಪ್ರಚಾರ ಆರಂಭಿಸಿದ್ದವು. ಸುದೀರ್ಘ ಅವಧಿಗೆ ಪ್ರಚಾರ ಕಾರ್ಯ ನಡೆದದ್ದು ತೆಲಂಗಾಣದಲ್ಲಿಯೇ.

'ತೆಲಂಗಾಣವನ್ನು ಉತ್ತಮದಿಂದ ಅತ್ಯುತ್ತಮ ಮಾಡೋಣ' ಎಂಬ ಘೋಷಣೆಯೊಂದಿಗೆ ಆಡಳಿತಾರೂಢ ಬಿಆರ್‌ಎಸ್ ಕಣಕ್ಕಿಳಿದಿದೆ. 'ಮಾರ್ಪು ಕಾವಾಲಿ, ಕಾಂಗ್ರೆಸ್ ರಾವಾಲಿ' (ಬದಲಾವಣೆ ಬೇಕು, ಕಾಂಗ್ರೆಸ್ ಬರಬೇಕು) ಎಂಬ ಘೋಷಣೆ ಜೊತೆ ಕಾಂಗ್ರೆಸ್ ಪ್ರಚಾರ ನಡೆಸಿದರೆ, ಬಿಜೆಪಿ ತನ್ನ 'ಡಬಲ್ ಎಂಜಿನ್ ಸರ್ಕಾರ' ಘೋಷಣೆಯನ್ನು ಇಲ್ಲೂ ಮೊಳಗಿಸಿತು. ಚುನಾವಣಾ ದಿನಾಂಕ ಆರಂಭವಾಗುವ ಮೊದಲೇ ತೆಲಂಗಾಣಕ್ಕೆ ಬಂದು ಎರಡು ಸಾರ್ವಜನಿಕ ಸಭೆಗಳನ್ನು ನಡೆಸಿದ್ದ ಪ್ರಧಾನಿ ನರೇಂದ್ರ ಮೋದಿ ಅವರು, ದಿನಾಂಕ ಘೋಷಣೆಯಾದ ಬಳಿಕ ರಾಜ್ಯಕ್ಕೆ ಐದು ಬಾರಿ ಆಗಮಿಸಿ, ಎಂಟು ರ‍್ಯಾಲಿಗಳನ್ನು ನಡೆಸಿದರು. ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು 17 ರ‍್ಯಾಲಿಗಳನ್ನು ನಡೆಸಿದರು.

ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ಅವರೂ ಹಲವು ಬಾರಿ ರಾಜ್ಯಕ್ಕೆ ಆಗಮಿಸಿ ಬಿರುಸಿನ ಪ್ರಚಾರ ನಡೆಸಿದರು. ರಾಹುಲ್ 23 ಸಾರ್ವಜನಿಕ ಸಭೆ ಮತ್ತು ರೋಡ್‌ಶೋಗಳಲ್ಲಿ ಪಾಲ್ಗೊಂಡಿದ್ದರೆ, ಪ್ರಿಯಾಂಕಾ ಅವರು 26 ಪ್ರಚಾರ ಕಾರ್ಯಕ್ರಮಗಳಲ್ಲಿ ಭಾಗಿಯಾಗಿದ್ದರು.

ತೆಲಂಗಾಣ ಮುಖ್ಯಮಂತ್ರಿ, ಬಿಆರ್‌ಎಸ್ ಮುಖ್ಯಸ್ಥ ಕೆ. ಚಂದ್ರಶೇಖರ ರಾವ್ ಅವರು ಸುಮಾರು 96 ಸಾರ್ವಜನಿಕ ಸಭೆಗಳನ್ನು ನಡೆಸಿದರು.

## ಚುನಾವಣಾ ಕಣದಲ್ಲಿ

- **ಮತ ಯಾಚಿಸಿದ ಸೋನಿಯಾ:** 'ನಾವೆಲ್ಲರೂ ಸೇರಿ ಊಳಿಗಮಾನ್ಯ ತೆಲಂಗಾಣವನ್ನು ಪ್ರಜಾ ತೆಲಂಗಾಣವನ್ನಾಗಿ ಬದಲಾಯಿಸಬೇಕು ಎಂದು ನಾನು ಆಶಿಸುತ್ತೇನೆ' ಎಂದು ತೆಲಂಗಾಣದ ಮತದಾರರನ್ನು ಉದ್ದೇಶಿಸಿ ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಹೇಳಿದ್ದಾರೆ. 'ಎಕ್ಸ್'ನಲ್ಲಿ ಎರಡು ನಿಮಿಷಗಳ ವಿಡಿಯೊವನ್ನು ಅವರು ಪೋಸ್ಟ್ ಮಾಡಿದ್ದಾರೆ. 'ರಾಜ್ಯದಲ್ಲಿ ಬದಲಾವಣೆ ತರುವ ನಿಟ್ಟಿನಲ್ಲಿ ಮತ ಚಲಾಯಿಸಿ ಎಂದು ನಾನು ರಾಜ್ಯದ ತಾಯಂದಿರು, ಸಹೋದರ, ಸಹೋದರಿಯರು ಮತ್ತು ಮಕ್ಕಳಿಗೆ ಮನವಿ ಮಾಡುತ್ತೇನೆ. ಕಾಂಗ್ರೆಸ್‌ಗೆ ಮತ ಚಲಾಯಿಸಿ. ಪ್ರಾಮಾಣಿಕ ಸರ್ಕಾರವನ್ನು ಆರಿಸಿ' ಎಂದಿದ್ದಾರೆ.
- **ಮುಖ್ಯ ಚುನಾವಣಾಧಿಕಾರಿ ಆಸ್ಪತ್ರೆಗೆ:** ರಾಜಸ್ಥಾನ ಮುಖ್ಯ ಚುನಾವಣಾ ಅಧಿಕಾರಿ ಪ್ರವೀಣ್ ಗುಪ್ತಾ ಅವರು ಅನಾರೋಗ್ಯದ ಕಾರಣ ಜೈಪುರದ ಸರ್ಕಾರಿ ಆಸ್ಪತ್ರೆಗೆ ದಾಖಲಾಗಿದ್ದಾರೆ. ಅವರಿಗೆ ಇಸಿಜಿ ಮತ್ತು ಆರೋಗ್ಯ ತಪಾಸಣೆ ಮಾಡಲಾಗಿದ್ದು ಐಸಿಯುಗೆ ವರ್ಗಾಯಿಸಲಾಗಿದೆ.

## ನುಡಿ–ಕಿಡಿ

ತೆಲಂಗಾಣ ನೀಡಿರುವುದಕ್ಕಿಂತ ಒಂದು ಹೆಚ್ಚು ಉದ್ಯೋಗವನ್ನು ಕಾಂಗ್ರೆಸ್ ಆಡಳಿತವಿರುವ ಯಾವುದೇ ರಾಜ್ಯ ನೀಡಿರುವುದನ್ನು ರಾಹುಲ್ ಗಾಂಧಿ ಸಾಬೀತುಪಡಿಸಿದರೆ ನಾನು ರಾಜಕೀಯ ತೊರೆಯುತ್ತೇನೆ
**ಕೆ. ಕವಿತಾ**, ಬಿಆರ್‌ಎಸ್ ವಿಧಾನ ಪರಿಷತ್ ಸದಸ್ಯೆ



### ಉತ್ತರ ಪ್ರದೇಶದ ಸಿದ್ಧಾರ್ಥನಗರ ಜಿಲ್ಲೆಯಲ್ಲಿ ಘಟನೆ

# ಮುಸ್ಲಿಂ ಶಾಸಕಿ ಭೇಟಿ ನೀಡಿದ್ದ ಹಿಂದೂ ದೇವಾಲಯದ ಶುದ್ಧೀಕರಣ

ಸಿದ್ಧಾರ್ಥನಗರ (ಉತ್ತರ ಪ್ರದೇಶ) (ಪಿಟಿಐ): ಉತ್ತರ ಪ್ರದೇಶದ ಸಿದ್ಧಾರ್ಥನಗರ ಜಿಲ್ಲೆಯ ರಾಪ್ತಿ ನದಿಯ ದಂಡೆ ಮೇಲೆ ಇರುವ ಸಮಯ್ ಮಾತಾ ಹಿಂದೂ ದೇಗುಲಕ್ಕೆ ಮುಸ್ಲಿಂ ಶಾಸಕಿ ಭೇಟಿ ನೀಡಿದ್ದರಿಂದ ಅಪವಿತ್ರಗೊಂಡಿದೆ ಎಂದು ಆರೋಪಿಸಿ ಬಿಜೆಪಿ ಹಾಗೂ ಹಿಂದೂ ಯುವ ವಾಹಿನಿಗೆ ಸೇರಿದ ಕಾರ್ಯಕರ್ತರು ಗಂಗಾಜಲದಿಂದ ದೇವಸ್ಥಾನವನ್ನು ಶುದ್ಧೀಕರಣ ಮಾಡಿದ್ದಾರೆ.

ನೆರೆಯ ನೇಪಾಳ ಸೇರಿದಂತೆ ಉತ್ತರ ಪ್ರದೇಶದ ಹಲವು ಜಿಲ್ಲೆಗಳಿಂದ ಸಾವಿರಾರು ಭಕ್ತರು ಈ ದೇಗುಲಕ್ಕೆ ಭೇಟಿ ನೀಡಿ ಪೂಜೆ ಸಲ್ಲಿಸುತ್ತಾರೆ. ಸ್ಥಳೀಯರ ಆಹ್ವಾನದ ಮೇರೆಗೆ ಭಾನುವಾರ ಸಮಾಜವಾದಿ ಪಕ್ಷದ ಮುಸ್ಲಿಂ ಶಾಸಕಿ ಸಯೀದಾ ಖಾತೂನ್, ದೇಗುಲಕ್ಕೆ ಭೇಟಿ ನೀಡಿದ್ದರು. ಬಳಿಕ ಅಲ್ಲಿ ಹಮ್ಮಿಕೊಂಡಿದ್ದ ಷಟ್ಚಂಡಿ ಮಹಾಯಜ್ಞದಲ್ಲಿಯೂ ಪಾಲ್ಗೊಂಡಿದ್ದರು.

ಶಾಸಕಿಯು ಅಲ್ಲಿಂದ ನಿರ್ಗಮಿಸಿದ ನಂತರ ಬಧಾನಿ ಚಾಫಾನಗರ ಪಂಚಾಯಿತಿಯ ಮುಖ್ಯಸ್ಥ ಧರ್ಮರಾಜ್ ವರ್ಮಾ ಹಾಗೂ ಆತನ ಬೆಂಬಲಿಗರು, ದೇಗುಲದ ಶುದ್ಧೀಕರಣ ಮಾಡಿ ಮಂತ್ರ ಪಠಣ ಮಾಡಿದ್ದಾರೆ ಎಂದು ಹೇಳಲಾಗಿದೆ.

'ಶಾಸಕಿಯನ್ನು ಕೆಲವು ಅಪ್ರಮಾಣಿಕ ವ್ಯಕ್ತಿಗಳು ಆಹ್ವಾನಿಸಿದ್ದಾರೆ. ಸಯೀದಾ ಮುಸ್ಲಿಂ ಸಮುದಾಯಕ್ಕೆ ಸೇರಿದ್ದಾರೆ. ಅವರು ಗೋಮಾಂಸ ಭಕ್ಷಿಸುತ್ತಾರೆ. ಅವರ ಭೇಟಿಯಿಂದ ಪವಿತ್ರ ಸ್ಥಳವು ಮೈಲಿಗೆಯಾಗಿದೆ. ಇಂತಹ ಕೃತ್ಯವನ್ನು ನಾವು ಎಂದಿಗೂ ಸಹಿಸುವುದಿಲ್ಲ' ಎಂದು ವರ್ಮಾ ಹೇಳಿದ್ದಾರೆ.

'ಶಾಸಕಿಯನ್ನು ಮಹಾಯಜ್ಞಕ್ಕೆ ಆಹ್ವಾನಿಸಿದ್ದರಿಂದ ಅವರು ಸಂಜೆ ಆಗಮಿಸಿದ್ದರು. ಮಾರನೇ ದಿನ ಬೆಳಿಗ್ಗೆ ದೇಗುಲಕ್ಕೆ ಬಂದ ವರ್ಮಾ ಹಾಗೂ ಅವರ ತಂಡದ ಸದಸ್ಯರು ಈ ಬಗ್ಗೆ ನನ್ನನ್ನು ಪ್ರಶ್ನಿಸಿದರು. ಶಾಸಕಿಯ ಭೇಟಿಯಿಂದ ದೇಗುಲ ಅಪವಿತ್ರವಾಗಿದೆ ಎಂದು ದೂರಿ ಶುದ್ಧೀಕರಣದಲ್ಲಿ ತೊಡಗಿದರು' ಎಂದು ದೇಗುಲದ ಪೂಜಾರಿ ಶ್ರೀಕೃಷ್ಣ ದತ್ತ ಶುಕ್ಲಾ ಹೇಳಿದ್ದಾರೆ.

### ಸಯೀದಾ ಖಾತೂನ್ ಹೇಳಿದ್ದೇನು?

'ನಾನು ಚುನಾಯಿತ ಜನಪ್ರತಿನಿಧಿ. ಎಲ್ಲಾ ಧರ್ಮ ಹಾಗೂ ಸಮುದಾಯದ ದೇಗುಲಗಳಿಗೆ ಭೇಟಿ ನೀಡುತ್ತೇನೆ. ಇದಕ್ಕೆ ಯಾರೂ ಅಡ್ಡಿಪಡಿಸಲಾಗದು' ಎಂದು ಶಾಸಕಿ ಸಯೀದಾ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

'ನನ್ನ ಸುತ್ತಮುತ್ತಲಿನ ಪ್ರದೇಶದಲ್ಲಿ ಬ್ರಾಹ್ಮಣರು ಹಾಗೂ ಸಂತರು ಇದ್ದಾರೆ. ಹತ್ತು ದಿನಗಳ ಹಿಂದೆ ದೇಗುಲಕ್ಕೆ ಆಹ್ವಾನಿಸಿದ್ದರು. ನಾನು ಎಲ್ಲಾ ಧರ್ಮಗಳನ್ನು ಗೌರವಿಸುತ್ತೇನೆ. ಕ್ಷೇತ್ರದಲ್ಲಿ ಹಲವು ದೇವಸ್ಥಾನಗಳ ಜೀರ್ಣೋದ್ಧಾರ ಮಾಡಲಾಗಿದೆ. ಯಾರು ಆಹ್ವಾನಿಸಿದರೂ ನಾನು ಹೋಗುತ್ತೇನೆ' ಎಂದು ಪ್ರತಿಕ್ರಿಯಿಸಿದ್ದಾರೆ.

'ವರ್ಮಾ ಕೂಡ ಚುನಾಯಿತ ಪ್ರತಿನಿಧಿಯಾಗಿದ್ದಾರೆ. ಬಿಜೆಪಿ ಮುಖಂಡರಾಗಿದ್ದಾರೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ಸ್ಥಾಪಿಸಿರುವ ಹಿಂದೂ ಯುವ ವಾಹಿನಿಯಲ್ಲಿ ಸಕ್ರಿಯರಾಗಿದ್ದಾರೆ' ಎಂದು ಹೇಳಿದ್ದಾರೆ.

## ಯುಎಪಿಎ ಅಡಿ ಕಾಶ್ಮೀರದ ಏಳು ವಿದ್ಯಾರ್ಥಿಗಳ ಬಂಧನ

ಶ್ರೀನಗರ (ಪಿಟಿಐ): ವಿಶ್ವಕಪ್ ಕ್ರಿಕೆಟ್ ಫೈನಲ್ ಪಂದ್ಯದಲ್ಲಿ ಭಾರತದ ಸೋಲನ್ನು ಸಂಭ್ರಮಿಸಿದ್ದಾರೆ ಮತ್ತು ಆಕ್ಷೇಪಾರ್ಹ ಘೋಷಣೆ ಕೂಗಿದ್ದಾರೆ ಎಂಬ ಆರೋಪದ ಮೇಲೆ ಏಳು ವಿದ್ಯಾರ್ಥಿಗಳನ್ನು ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ) ಅಡಿಯಲ್ಲಿ ಬಂಧಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಂಧಿತರು ಕಾಶ್ಮೀರದ 'ಶೇರ್-ಎ-ಕಾಶ್ಮೀರ್' ಕೃಷಿ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು ಎಂದು ತಿಳಿಸಿದ್ದಾರೆ.

'ಆಸ್ಟ್ರೇಲಿಯಾ ವಿರುದ್ಧ ಭಾರತ ಸೋತ ನಂತರ ಕೆಲ ಸಹಪಾಠಿಗಳು ಆಕ್ಷೇಪಾರ್ಹ ಘೋಷಣೆ ಕೂಗುತ್ತಾ, ಕಿರುಕುಳ ನೀಡಿದರು' ಎಂದು ಕಾಶ್ಮೀರದ ಹೊರಗಿನ ವಿದ್ಯಾರ್ಥಿಯೊಬ್ಬರು ದೂರು ನೀಡಿದ್ದರು. ಇದರನ್ವಯ ತನಿಖೆ ನಡೆಸಿದ ಪೊಲೀಸರು ಏಳು ಮಂದಿಯನ್ನು ಬಂಧಿಸಿದ್ದಾರೆ.

**ಮೆಹಬೂಬಾ ಮುಫ್ತಿ ಕಿಡಿ:** ವಿದ್ಯಾರ್ಥಿಗಳನ್ನು ಬಂಧಿಸಿರುವುದಕ್ಕೆ ಜಮ್ಮು– ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಹಾಗೂ ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಕಿಡಿಕಾರಿದ್ದು, ಇದು ಆಘಾತಕಾರಿ ಸಂಗತಿ ಎಂದು ಹೇಳಿದ್ದಾರೆ.

'ಕೂಡಲೇ, ಲೆಫ್ಟಿನೆಂಟ್ ಗವರ್ನರ್ ಮನೋಜ್ ಸಿನ್ಹಾ ಅವರು ಈ ವಿಷಯದಲ್ಲಿ ಮಧ್ಯಪ್ರವೇಶಿಸಿ ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಿಕೊಡಬೇಕು' ಎಂದೂ ಆಗ್ರಹಿಸಿದ್ದಾರೆ.

'ವಿಶ್ವಕಪ್ ವಿಜೇತ ತಂಡದ ಪರವಾಗಿ ಘೋಷಣೆ ಕೂಗುವುದೂ ಕಾಶ್ಮೀರದಲ್ಲಿ ಅಪರಾಧವಾಗಿದೆ. ಯುಎಪಿಎ ಅಂಥ ಕಠಿಣ ಕಾಯ್ದೆಯನ್ನು ಪತ್ರಕರ್ತರು ಮತ್ತು ಹೋರಾಟಗಾರರ ಮೇಲೆ ಹೇರುವುದು ಸಾಮಾನ್ಯವಾಗಿತ್ತು. ಆದರೆ, ಈಗ ವಿದ್ಯಾರ್ಥಿಗಳ ವಿರುದ್ಧವೂ ಈ ಕಠಿಣ ಕಾಯ್ದೆಯನ್ನು ಬಳಸಲಾಗುತ್ತಿದೆ' ಎಂದು ಅವರು 'ಎಕ್ಸ್'ನಲ್ಲಿ ಹೇಳಿದ್ದಾರೆ.

## ಚಂದ್ರಬಾಬುಗೆ ನೋಟಿಸ್ ಜಾರಿ

ನವದೆಹಲಿ (ಪಿಟಿಐ): ಕೌಶಲ ಅಭಿವೃದ್ಧಿ ನಿಗಮದ ಹಗರಣದಲ್ಲಿ ಹೈಕೋರ್ಟ್ ನೀಡಿರುವ ಜಾಮೀನು ಪ್ರಶ್ನಿಸಿ ಆಂಧ್ರಪ್ರದೇಶ ಸರ್ಕಾರ ಸಲ್ಲಿಸಿರುವ ಅರ್ಜಿಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಸುಪ್ರೀಂ ಕೋರ್ಟ್, ಟಿಡಿಪಿ ಮುಖ್ಯಸ್ಥ ಎನ್. ಚಂದ್ರಬಾಬು ನಾಯ್ಡು ಅವರಿಗೆ ಸೂಚಿಸಿದೆ.

ನಾಯ್ಡು ಅವರಿಗೆ ನೋಟಿಸ್ ಜಾರಿಗೆ ಆದೇಶಿಸಿರುವ ಸುಪ್ರೀಂ ಕೋರ್ಟ್‌ನ ವಿಭಾಗೀಯ ಪೀಠವು ಡಿಸೆಂಬರ್ 8ರವರೆಗೆ ಯಾವುದೇ ರ‍್ಯಾಲಿಗಳಲ್ಲಿ ಭಾಗವಹಿಸಬಾರದು ಎಂದು ಸೂಚಿಸಿದೆ. ಪ್ರಕರಣದ ವಿಚಾರಣೆಯು ಡಿಸೆಂಬರ್ 8ಕ್ಕೆ ನಿಗದಿಯಾಗಿದೆ.

ನಾಯ್ಡು ಅವರನ್ನು ಸೆಪ್ಟೆಂಬರ್ 9ರಂದು ಬಂಧಿಸಲಾಗಿತ್ತು. ಅವರನ್ನು ಅಕ್ಟೋಬರ್ 31ರಂದು ಮಧ್ಯಂತರ ವೈದ್ಯಕೀಯ ಜಾಮೀನಿನ ಅಡಿಯಲ್ಲಿ ಬಿಡುಗಡೆ ಮಾಡಲಾಯಿತು. ಆ ಜಾಮೀನನ್ನು ನಂತರ ನಿಯಮಿತ ಜಾಮೀನಾಗಿ ಪರಿವರ್ತಿಸಲಾಗಿದೆ.

## ಉಗ್ರರಿಗೆ ಹಣಕಾಸು ನೆರವು ಸ್ವತ್ತು ಮುಟ್ಟುಗೋಲು

ನವದೆಹಲಿ(ಪಿಟಿಐ): ಭಯೋತ್ಪಾದನೆ ಮತ್ತು ಉಗ್ರರಿಗೆ ಹಣಕಾಸು ನೆರವು ನೀಡುವ ಸಂಸ್ಥೆಗಳ ಕುಣಿಕೆಯನ್ನು ಕೇಂದ್ರ ಸರ್ಕಾರ ಮತ್ತಷ್ಟು ಬಿಗಿಗೊಳಿಸಿದೆ,

ಉಗ್ರರಿಗೆ ಹಣಕಾಸು ನೆರವು ನೀಡುವ ಸಂಸ್ಥೆಗಳು ಹಾಗೂ ಇವುಗಳೊಂದಿಗೆ ನಂಟು ಹೊಂದಿರುವ ಸಂಸ್ಥೆಗಳನ್ನು ವಿಶ್ವಸಂಸ್ಥೆಯ ಭದ್ರತಾ ಮಂಡಳಿ (ಯುಎನ್‌ಎಸ್‌ಸಿ) ಗುರುತಿಸಿದೆ.

ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಗುರುತಿಸಿರುವ ಇಂತಹ ಸಂಸ್ಥೆಗಳ ಮೇಲೆ ಯಾವುದೇ ವಿಳಂಬ ಮಾಡದೇ ಆರ್ಥಿಕ ನಿರ್ಬಂಧಗಳನ್ನು ವಿಧಿಸಬೇಕು. ಈ ಸಂಸ್ಥೆಗಳಿಗೆ ಸೇರಿದ ಸ್ವತ್ತುಗಳನ್ನು ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ (ಯುಪಿಪಿಎ) ಹಾಗೂ ಸಾಮೂಹಿಕ ವಿನಾಶ ಶಸ್ತ್ರಾಸ್ತ್ರಗಳ ಬಳಕೆ ತಡೆ ಕಾಯ್ದೆಯಡಿ 24 ಗಂಟೆಗಳ ಒಳಗಾಗಿ ಜಪ್ತಿ ಮಾಡಬೇಕು ಎಂದು ವಿವಿಧ ಕೇಂದ್ರೀಯ ಸಂಸ್ಥೆಗಳಿಗೆ ಹಣಕಾಸು ಸಚಿವಾಲಯ ನಿರ್ದೇಶನ ನೀಡಿದೆ.

ಉಗ್ರರಿಗೆ ಹಣಕಾಸು ನೆರವು ಒದಗಿಸುವ ಸಂಸ್ಥೆಗಳನ್ನು ಗುರುತಿಸುವುದು, ಅವುಗಳ ಬಗ್ಗೆ ಅಧಿಸೂಚನೆ ಹೊರಡಿಸಿ ಹಾಗೂ ಅವುಗಳ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವುದಕ್ಕೆ ಸಂಬಂಧಿಸಿ ಆರ್ಥಿಕ ಗುಪ್ತಚರ ಘಟಕವನ್ನು(ಎಫ್‌ಐಯು) ನೋಡಲ್ ಏಜೆನ್ಸಿಯನ್ನಾಗಿ ಮಾಡಲಾಗಿದೆ.

ಆರ್‌ಬಿಐ, ಸೆಬಿ, ಐಆರ್‌ಡಿಎ, ಐಬಿ, ಎನ್‌ಐಎ, ಎಲ್ಲ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳ ಮುಖ್ಯ ಕಾರ್ಯದರ್ಶಿಗಳು ಹಾಗೂ ಡಿಜಿಪಿಗಳಿಗೆ ನಿರ್ದೇಶನ ಸಹ ನೀಡಲಾಗಿದೆ.

ಉಗ್ರರಿಗೆ ಹಣಕಾಸು ನೆರವು ನೀಡುವುದನ್ನು ನಿರ್ಬಂಧಿಸುವುದಕ್ಕೆ ಸಂಬಂಧಿಸಿ ವಿಶ್ವಸಂಸ್ಥೆ (ಭದ್ರತಾ ಮಂಡಳಿ) ಕಾಯ್ದೆ,1947ರ ಸೆಕ್ಷನ್ 2ರಲ್ಲಿ ವಿವರಿಸಿರುವ ಪ್ರಕಾರ, ಭಾರತ ಈ ಕುರಿತು ಕಾಯ್ದೆಯನ್ನು ರೂಪಿಸಿದೆ.

## ಸೆಂಥಿಲ್ ಜಾಮೀನು ಅರ್ಜಿ ವಿಚಾರಣೆಗೆ ನಿರಾಕರಣೆ


ಸೆಂಥಿಲ್ ಬಾಲಾಜಿ

ನವದೆಹಲಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಆರೋಪದ ಮೇಲೆ ಬಂಧಿತರಾಗಿರುವ ತಮಿಳುನಾಡಿನ ಸಚಿವ ವಿ.ಸೆಂಥಿಲ್ ಬಾಲಾಜಿ ಅವರು ವೈದ್ಯಕೀಯ ವರದಿಗಳ ಆಧಾರದ ಮೇಲೆ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಗೆ ಸುಪ್ರೀಂ ಕೋರ್ಟ್ ಮಂಗಳವಾರ ನಿರಾಕರಿಸಿದೆ.

ಜಾಮೀನು ನೀಡಲು ನಿರಾಕರಿಸಿದ್ದ ಮದ್ರಾಸ್ ಹೈಕೋರ್ಟ್ ತೀರ್ಪನ್ನು ಪ್ರಶ್ನಿಸಿ, ಸೆಂಥಿಲ್ ಸುಪ್ರೀಂ ಕೋರ್ಟ್ ಮೊರೆ ಹೋಗಿದ್ದರು.

ವೈದ್ಯಕೀಯ ವರದಿಗಳನ್ನು ಪರಿಶೀಲಿಸಿದ ನ್ಯಾಯಮೂರ್ತಿಗಳಾದ ಬೇಲಾ ಎಂ. ತ್ರಿವೇದಿ ಮತ್ತು ಎಸ್‌.ಸಿ. ಶರ್ಮಾ ಅವರಿದ್ದ ನ್ಯಾಯಪೀಠವು, ಅವರ ಅನಾರೋಗ್ಯವು 'ಗಂಭೀರ ಅಥವಾ ಪ್ರಾಣಕ್ಕೆ ಅಪಾಯವಾಗುವಂತೆ ತೋರುತ್ತಿಲ್ಲ' ಎಂದು ಹೇಳಿತು. ಆದರೆ, ಜಾಮೀನು ಕೋರಿ ವಿಚಾರಣಾ ನ್ಯಾಯಾಲಯದ ಮೊರೆ ಹೋಗಲು ಸ್ವತಂತ್ರರು ಎಂದಿತು.

'ಸೆಂಥಿಲ್ ಅವರು ಜಾಮೀನಿನ ಮೇಲೆ ಹೊರಬಂದರೆ ಸಾಕ್ಷಿಗಳ ಮೇಲೆ ಪ್ರಭಾವ ಬೀರುವ ಸಾಧ್ಯತೆ ಇದೆ' ಎಂದು ಮದ್ರಾಸ್ ಹೈಕೋರ್ಟ್ ಅ.19ರಂದು ನೀಡಿದ್ದ ತೀರ್ಪಿನಲ್ಲಿ ತಿಳಿಸಿತ್ತು.

## ಕಾಲಾವಕಾಶ ಕೋರಿದ ಎಎಸ್‌ಐ

ವಾರಾಣಸಿ (ಪಿಟಿಐ): ಜ್ಞಾನವಾಪಿ ಮಸೀದಿ ಆವರಣದಲ್ಲಿ ನಡೆಸಲಾಗಿರುವ ವೈಜ್ಞಾನಿಕ ಸಮೀಕ್ಷೆಯ ವರದಿ (ಎಎಸ್‌ಐ) ಸಲ್ಲಿಸಲು ಇನ್ನೂ ಮೂರು ವಾರಗಳ ಸಮಯಾವಕಾಶವನ್ನು ನೀಡಬೇಕು ಎಂದು ಕೋರಿ ಪುರಾತತ್ವ ಇಲಾಖೆಯು ಜಿಲ್ಲಾ ನ್ಯಾಯಾಲಯಕ್ಕೆ ಮಂಗಳವಾರ ಅರ್ಜಿ ಸಲ್ಲಿಸಿದೆ.

ನ್ಯಾಯಾಲಯವು ಅರ್ಜಿಯ ವಿಚಾರಣೆಯನ್ನು ಬುಧವಾರ ನಡೆಸಲಿದೆ.

ಹಲವು ತಜ್ಞರಿಂದ ಮತ್ತು ಹಲವು ಸಾಧನಗಳನ್ನು ಬಳಸಿ ಕಲೆಹಾಕಿರುವ ಮಾಹಿತಿಯನ್ನು ಸಮೀಕರಿಸಿ ವರದಿ ತಯಾರಿಸಲು ಹೆಚ್ಚು ಸಮಯ ಬೇಕಾಗುತ್ತದೆ ಎಂದು ಎಎಸ್‌ಐ ಅರ್ಜಿಯಲ್ಲಿ ತಿಳಿಸಿದೆ ಎಂದು ಹಿಂದೂ ಅರ್ಜಿದಾರರ ಪರ ವಕೀಲ ಮದನ್ ಮೋಹನ್ ಯಾದವ್ ಅವರು ಹೇಳಿದರು.



**ಅನುದಾನಕ್ಕೆ ಪಟ್ಟು** ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಅನುದಾನ ಬಿಡುಗಡೆಗೆ ಕೇಂದ್ರ ಸರ್ಕಾರ ವಿಳಂಬ ಮಾಡುತ್ತಿದೆ ಎಂದು ಆರೋಪಿಸಿ ಪಶ್ಚಿಮ ಬಂಗಾಳ ಕೋಲ್ಕತ್ತದಲ್ಲಿ ಮಂಗಳವಾರ ಟಿಎಂಸಿ ಸಚಿವರು ಮತ್ತು ಶಾಸಕರು ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

## 'ಬಾಹ್ಯಾಕಾಶ ನಿಲ್ದಾಣ ಸ್ಥಾಪನೆ: ಭಾರತ ಜತೆ ಕೈಜೋಡಿಸಲು ನಾಸಾ ಸಿದ್ಧ'


ಬಿಲ್ ನೆಲ್ಸನ್

ನವದೆಹಲಿ (ಪಿಟಿಐ): ತನ್ನದೇ ಆದ ಬಾಹ್ಯಾಕಾಶ ನಿಲ್ದಾಣ ಸ್ಥಾಪಿಸುವ ಭಾರತದ ಕಾರ್ಯಕ್ಕೆ ಕೈಜೋಡಿಸಲು ಅಮೆರಿಕ ಮುಕ್ತವಾಗಿದೆ ಎಂದು ನಾಸಾ ಆಡಳಿತಾಧಿಕಾರಿ ಬಿಲ್ ನೆಲ್ಸನ್ ಮಂಗಳವಾರ ಹೇಳಿದ್ದಾರೆ.

ಭಾರತ ಪ್ರವಾಸದಲ್ಲಿರುವ ಅವರು ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದರು.

'ವಾಣಿಜ್ಯ ಬಳಕೆ ಉದ್ದೇಶಕ್ಕಾಗಿ ಭಾರತವು 2040ರ ವೇಳೆಗೆ ತನ್ನದೇ ಆದ ಬಾಹ್ಯಾಕಾಶ ನಿಲ್ದಾಣ ಹೊಂದಲು ಯೋಜಿಸಿದೆ. ಈ ಕಾರ್ಯದಲ್ಲಿ ಅಮೆರಿಕದ ಸಹಯೋಗ ಬೇಕು ಎಂದು ಭಾರತ ಬಯಸುವುದಾದಲ್ಲಿ ಕೈಜೋಡಿಸಲು ನಾವು ಸಿದ್ಧ. ಈ ಬಗ್ಗೆ ನಿರ್ಧರಿಸುವುದು ಭಾರತಕ್ಕೆ ಬಿಟ್ಟದ್ದು' ಎಂದರು.

'ಮುಂದಿನ ವರ್ಷದ ಅಂತ್ಯದ ವೇಳೆಗೆ ಭಾರತೀಯ ಗಗನಯಾತ್ರಿಯನ್ನು ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ಕಳುಹಿಸಲು ಉಭಯ ದೇಶಗಳು ಯೋಜನೆ ರೂಪಿಸುತ್ತಿವೆ. ಗಗನಯಾತ್ರಿ ಕುರಿತು ಇಸ್ರೊ ನಿರ್ಧಾರ ಕೈಗೊಳ್ಳಲಿದ್ದು, ಈ ವಿಷಯದಲ್ಲಿ ನಾಸಾ ಪಾತ್ರ ಇರುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

### ಯುದ್ಧವಿಮಾನ ವಾಹಕ ನೌಕೆ ಅಭಿವೃದ್ಧಿ: ತಾತ್ವಿಕ ಒಪ್ಪಿಗೆ

ನವದೆಹಲಿ(ಪಿಟಿಐ): ಯುದ್ಧವಿಮಾನ ವಾಹಕ ಎರಡನೇ ನೌಕೆಯನ್ನು ಅಭಿವೃದ್ಧಿಪಡಿಸುವ ಕುರಿತ ನೌಕಾಪಡೆಯ ಪ್ರಸ್ತಾವಕ್ಕೆ ರಕ್ಷಣಾ ಖರೀದಿ ಮಂಡಳಿಯು (ಡಿಪಿಬಿ) ತಾತ್ವಿಕ ಅನುಮೋದನೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ದೇಶೀಯವಾಗಿಯೇ ಯುದ್ಧವಿಮಾನ ವಾಹಕ ನೌಕೆಯನ್ನು ಅಭಿವೃದ್ಧಿಪಡಿಸುವ ರಕ್ಷಣಾ ಸಚಿವಾಲಯದ ಮಹತ್ವಾಕಾಂಕ್ಷೆ ಯೋಜನೆ ಇದಾಗಿದೆ. ₹40 ಸಾವಿರ ಕೋಟಿ ವೆಚ್ಚದಲ್ಲಿ ಅಭಿವೃದ್ಧಿಪಡಿಸುವ ಈ ನೌಕೆಯನ್ನು 'ಐಎಸಿ–2' ಎಂದು ಕರೆಯಲಾಗುವುದು. ರಕ್ಷಣಾ ಸಚಿವ ರಾಜನಾಥ್ ಸಿಂಗ್ ನೇತೃತ್ವದ ರಕ್ಷಣಾ ಸ್ವಾಧೀನ ಮಂಡಳಿ (ಡಿಎಸಿ) ಸಭೆ ಗುರುವಾರ ನಡೆಯಲಿದ್ದು, 'ಐಎಸಿ–2' ಕುರಿತ ಪ್ರಸ್ತಾವವನ್ನು ಪರಿಶೀಲನೆ ನಡೆಸಲಿದೆ ಎಂದು ಮೂಲಗಳು ಹೇಳಿವೆ.

ಹಿಂದೂ ಮಹಾಸಾಗರ ಪ್ರದೇಶದಲ್ಲಿ ಚೀನಾ ತನ್ನ ಮಿಲಿಟರಿ ಪ್ರಾಬಲ್ಯವನ್ನು ಹೆಚ್ಚಳ ಮಾಡುತ್ತಿರುವುದಕ್ಕೆ ಜಾಗತಿಕವಾಗಿ ಆತಂಕ ವ್ಯಕ್ತವಾಗುತ್ತಿದೆ. ಈ ಹಿನ್ನೆಲೆಯಲ್ಲಿ, 'ಐಎಸಿ–2' ಅಭಿವೃದ್ಧಿಪಡಿಸುವ ಕೇಂದ್ರ ಸರ್ಕಾರದ ನಿರ್ಧಾರಕ್ಕೆ ಮಹತ್ವ ಬಂದಿದೆ.

**ಹೆಚ್ಚುವರಿ 'ತೇಜಸ್' ಖರೀದಿ:** ಹೆಚ್ಚುವರಿಯಾಗಿ 97 'ತೇಜಸ್ ಮಾರ್ಕ್–1ಎ' ಯುದ್ಧವಿಮಾನಗಳ ಖರೀದಿಗಾಗಿ ವಾಯುಪಡೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಸಹ ಡಿಎಸಿ ಪರಿಗಣಿಸುವ ಸಾಧ್ಯತೆ ಇದೆ. ಒಟ್ಟು ₹ 1.15 ಲಕ್ಷ ಕೋಟಿ ವೆಚ್ಚದಲ್ಲಿ ಈ ಯುದ್ಧವಿಮಾನಗಳನ್ನು ಖರೀದಿಸಲು ವಾಯುಪಡೆ ಪ್ರಸ್ತಾವನೆ ಸಲ್ಲಿಸಿದೆ ಎಂದು ಮೂಲಗಳು ಹೇಳಿವೆ.

**ಒಪ್ಪಂದ:** ಯುದ್ಧನೌಕೆಗಳಲ್ಲಿ ಅಳವಡಿಸಲು ಅತ್ಯಾಧುನಿಕ ಕ್ಷಿಪಣಿ ನಿರೋಧಕ ವ್ಯವಸ್ಥೆ 'ಸೂಪರ್ ರ‍್ಯಾಪಿಡ್ ಗನ್ ಮೌಂಟ್' (ಎಸ್‌ಆರ್‌ಜಿಎಂ) ಹಾಗೂ ಅದರ ಬಿಡಿಭಾಗಗಳನ್ನು ಖರೀದಿಸುವ ಸಂಬಂಧ ರಕ್ಷಣಾ ಸಚಿವಾಲಯವು ಬಿಎಚ್‌ಇಎಲ್ ಜೊತೆ ಮಂಗಳವಾರ ಒಪ್ಪಂದಕ್ಕೆ ಸಹಿ ಹಾಕಿದೆ. ಈ ಆಯುಧಗಳನ್ನು ₹ 2,956 ಕೋಟಿ ವೆಚ್ಚದಲ್ಲಿ ಖರೀದಿಸಲಾಗುತ್ತದೆ.

ಟಿ20 ಕ್ರಿಕೆಟ್: ಋತುರಾಜ್ ಗಾಯಕವಾಡ್ ಚೊಚ್ಚಲ ಶತಕ; ಆಸ್ಟ್ರೇಲಿಯಾಕ್ಕೆ ಸರಣಿ ಗೆಲುವಿನ ಆಸೆ ಜೀವಂತ

# ಮ್ಯಾಕ್ಸ್‌ವೆಲ್ ಶತಕಕ್ಕೆ ಒಲಿದ ಜಯ

**ಗುವಾಹಟಿ (ಪಿಟಿಐ):** ಆಸ್ಟ್ರೇಲಿಯಾದ 'ಸೂಪರ್ ಹ್ಯೂಮನ್ ಬ್ಯಾಟರ್' ಗ್ಲೆನ್ ಮ್ಯಾಕ್ಸ್‌ವೆಲ್ ಮಂಗಳವಾರ ರಾತ್ರಿ ಭಾರತ ತಂಡದ ಕೈಯಿಂದ ಗೆಲುವನ್ನು ಕಸಿದುಕೊಂಡರು.

ಬರ್ಸಾಪರ ಕ್ರೀಡಾಂಗಣದಲ್ಲಿ ನಡೆದ ಮೂರನೇ ಟಿ20 ಪಂದ್ಯದಲ್ಲಿ 48ಎಸೆತಗಳಲ್ಲಿ ಅಜೇಯ ಶತಕ ಬಾರಿಸಿದ ಮ್ಯಾಕ್ಸ್‌ವೆಲ್ ಅವರಿಂದಾಗಿ ಆಸ್ಟ್ರೇಲಿಯಾ ತಂಡವು 5 ವಿಕೆಟ್‌ಗಳಿಂದ ರೋಚಕವಾಗಿ ಗೆದ್ದಿತು. ಇದರಿಂದಾಗಿ ಐದು ಪಂದ್ಯಗಳ ಸರಣಿಯನ್ನು ಜಯಿಸುವ ತನ್ನ ಆಸೆಯನ್ನು ಜೀವಂತವಾಗಿ ಉಳಿಸಿಕೊಂಡಿತು..


ಮೊದಲೆರಡೂ ಪಂದ್ಯಗಳಲ್ಲಿ ಜಯಿಸಿದ್ದ ಭಾರತ ತಂಡಕ್ಕೆ ಈ ಪಂದ್ಯದಲ್ಲಿಯೂ ಗೆದ್ದು ಸರಣಿ ಕೈವಶ ಮಾಡಿಕೊಳ್ಳುವ ಆಸೆ ಕೈಗೂಡಲಿಲ್ಲ. ಕೊನೆಯ ಐದು ಓವರ್‌ಗಳಲ್ಲಿ ಕಳಪೆ ಬೌಲಿಂಗ್ ಹಾಗೂ ಫೀಲ್ಡಿಂಗ್‌ನಿಂದಾಗಿ ಭಾರತ ತಂಡದಿಂದ ಗೆಲುವು ಕೈತಪ್ಪಿತು.

ಮೊದಲು ಬ್ಯಾಟಿಂಗ್ ಮಾಡಿದ್ದ ಭಾರತ ತಂಡವು ಋತುರಾಜ್ ಗಾಯಕವಾಡ್ ಅಜೇಯ ಶತಕದ ಬಲದಿಂದ 20 ಓವರ್‌ಗಳಲ್ಲಿ3 ವಿಕೆಟ್‌ಗಳಿಗೆ 222 ರನ್ ಗಳಿಸಿತು.

ಗುರಿ ಬೆನ್ನಟ್ಟಿದ ಆಸ್ಟ್ರೇಲಿಯಾ 15 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 145 ರನ್ ಗಳಿಸಿತ್ತು. ಗೆಲುವಿಗೆ 30 ಎಸೆತಗಳಲ್ಲಿ 78 ರನ್‌ಗಳ ಅಗತ್ಯವಿತ್ತು. ಆಗಿನ್ನೂ ಭಾರತಕ್ಕೆ ಗೆಲುವಿನ ಅವಕಾಶ ವಿತ್ತು. ಆದರೆ ಮ್ಯಾಕ್ಸ್‌ವೆಲ್ ಆಟದ ಭರಾಟೆ ಮುಗಿಲುಮುಟ್ಟಿತು.

ಈಚೆಗೆ ಏಕದಿನ ಕ್ರಿಕೆಟ್ ವಿಶ್ವಕಪ್‌ನಲ್ಲಿ ಅಫ್ಗಾನಿಸ್ತಾನ ಎದುರು ಅಜೇಯ ದ್ವಿಶತಕ ಹೊಡೆದು 'ಹೀರೊ' ಆಗಿದ್ದ ಮ್ಯಾಕ್ಲ್‌ವೆಲ್ ಇಲ್ಲಿಯೂ ಅಮೋಘ ಬ್ಯಾಟಿಂಗ್ ಮಾಡಿದರು.

ಕೊನೆಯ ಓವರ್‌ನಲ್ಲಿ 21 ರನ್‌ಗಳ ಅಗತ್ಯವಿದ್ದಾಗ ಪ್ರಸಿದ್ಧ ಕೃಷ್ಣ ಕೈಗೆ ಚೆಂಡು ಕೊಟ್ಟ ನಾಯಕ ಸೂರ್ಯಕುಮಾರ್ ಯಾದವ್ ತಂತ್ರ ಫಲಿಸಲಿಲ್ಲ. ಈ ಓವರ್‌ನಲ್ಲಿ ಮ್ಯಾಕ್ಸ್‌ವೆಲ್ ಮೂರು ಬೌಂಡರಿ ಮತ್ತು ಒಂದು ಸಿಕ್ಸರ್ ಹೊಡೆದರೆ, ಮ್ಯಾಥ್ಯೂ ವೇಡ್ ಒಂದು ಬೌಂಡರಿ ಬಾರಿಸಿದರು. ಮ್ಯಾಕ್ಸ್‌ವೆಲ್ ಮತ್ತು ವೇಡ್ ಮುರಿಯದ 6ನೇ ವಿಕೆಟ್ ಜೊತೆಯಾಟದಲ್ಲಿ 91ರನ್ ಗಳಿಸಿದರು.


ಆಸ್ಟ್ರೇಲಿಯಾದ ಗ್ಲೆನ್ ಮ್ಯಾಕ್ಸ್‌ವೆಲ್ ಚೆಂಡನ್ನು ಸಿಕ್ಸರ್‌ಗೆ ಎತ್ತಿದ ಪರಿ –ಎಎಫ್‌ಪಿ ಚಿತ್ರ

**ಋತುರಾಜ್ ಚೊಚ್ಚಲ ಶತಕ:** ಅಂತರರಾಷ್ಟ್ರೀಯ ಟಿ20 ಕ್ರಿಕೆಟ್‌ನಲ್ಲಿ ಚೊಚ್ಚಲ ಶತಕ ಗಳಿಸಿದ ಋತುರಾಜ್ ಗಾಯಕವಾಡ್ ನೆರವಿನಿಂದ ಭಾರತ ತಂಡ ದೊಡ್ಡ ಮೊತ್ತ ಗಳಿಸಿತು.

ಋತುರಾಜ್ ಅಜೇಯ 123 ರನ್‌ಗಳನ್ನು ಗಳಿಸಿದರು. ಕೇವಲ 57 ಎಸೆತಗಳನ್ನು ಎದುರಿಸಿದ ಅವರು 13 ಬೌಂಡರಿ ಮತ್ತು 7 ಸಿಕ್ಸರ್ ಸಿಡಿಸಿದರು. 215.79ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು. ತಿಲಕ್ ವರ್ಮಾ ಅವರೊಂದಿಗೆ ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 141 ರನ್ ಕೂಡ ಸೇರಿಸಿದರು.

**ಆರಂಭಿಕ ಆಘಾತ:** ಬ್ಯಾಟಿಂಗ್ ಆರಂಭಿಸಿದ ಭಾರತ ತಂಡವು 24 ರನ್‌ಗಳಿಗೆ ಎರಡು ವಿಕೆಟ್ ಕಳೆದುಕೊಂಡಿತು. ಯಶಸ್ವಿ ಜೈಸ್ವಾಲ್ ಮತ್ತು ಇಶಾನ್ ಕಿಶನ್ ಪೆವಿಲಿಯನ್ ಸೇರಿದರು. ಆದರೆ ಇನ್ನೊಂದು ಬದಿಯಲ್ಲಿದ್ದ ಋತುರಾಜ್ ಮಾತ್ರ ಏಕಾಗ್ರ ಚಿತ್ತದಿಂದ ಬ್ಯಾಟಿಂಗ್ ಮಾಡಿದರು.

ಕ್ರೀಸ್‌ಗೆ ಬಂದ ಸೂರ್ಯಕುಮಾರ್ ಯಾದವ್ (39;29ಎ) ಬೀಸಾಟ ವಾಡಿದರು. ಅವರು ಕ್ರೀಸ್‌ನಲ್ಲಿದ್ದಷ್ಟು ಹೊತ್ತು ಋತುರಾಜ್ ಬೆಂಬಲವಾಗಿ ನಿಂತರು. ಆದರೆ 11ನೇ ಓವರ್‌ನಲ್ಲಿ ಆ್ಯರನ್ ಹಾರ್ಡಿ ಎಸೆತವನ್ನು ಆಡಿದ ಸೂರ್ಯಕುಮಾರ್, ವಿಕೆಟ್‌ಕೀಪರ್ ವೇಡ್‌ಗೆ ಕ್ಯಾಚಿತ್ತರು. ಆಗಿನ್ನೂ ತಂಡದ ಮೊತ್ತ 100ರ ಗಡಿಯನ್ನೂ ದಾಟಿರಲಿಲ್ಲ.

ಈ ಹಂತದಲ್ಲಿ ಕ್ರೀಸ್‌ಗೆ ಬಂದ ತಿಲಕ್ ವರ್ಮಾ ಅವರೊಂದಿಗೆ ಸೇರಿದ ಋತುರಾಜ್ ಇನಿಂಗ್ಸ್ ಚಿತ್ರಣವನ್ನೇ ಬದಲಿಸಿಬಿಟ್ಟರು. ಸೂರ್ಯ ಔಟಾದಾಗ ಋತುರಾಜ್ 22 ರನ್ (22 ಎಸೆತ) ಗಳಿಸಿ ಕ್ರೀಸ್‌ನಲ್ಲಿದ್ದ ಅವರು ನಂತರ ತಾವು ಎದುರಿಸಿದ 30 ಎಸೆತಗಳಲ್ಲಿ ಶತಕದ ಗಡಿ ದಾಟಿದರು.

ಅದರಲ್ಲೂ ಕೊನೆಯ ಓವರ್‌ನಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್ ಎಸೆತಗಳನ್ನು ದಂಡಿಸಿದರು. ಇದೊಂದೇ ಓವರ್‌ನಲ್ಲಿ ಋತುರಾಜ್ ಮೂರು ಸಿಕ್ಸರ್, ಎರಡು ಬೌಂಡರಿ ಸಿಡಿಸಿದರು. ಈ ಓವರ್‌ನಲ್ಲಿ ಒಟ್ಟು 30 ರನ್‌ಗಳು ಹರಿದುಬಂದವು.

**ಟಿ–20: ಗರಿಷ್ಠ ಶತಕ**

| ಶತಕ | ಆಟಗಾರ | ದೇಶ |
|---|---|---|
| 4 | ರೋಹಿತ್ ಶರ್ಮಾ | ಭಾರತ |
| 4 | ಗ್ಲೆನ್ ಮ್ಯಾಕ್ಸ್‌ವೆಲ್ | ಆಸ್ಟ್ರೇಲಿಯಾ |
| 3 | ಬಾಬರ್ ಆಜಂ | ಪಾಕಿಸ್ತಾನ |
| 3 | ಸಬಾವೂನ್ ಡವಿಜಿ | ಜೆಕ್ ಗಣರಾಜ್ಯ |
| 3 | ಕಾಲಿನ್ ಮನ್ರೊ | ನ್ಯೂಜಿಲೆಂಡ್ |
| 3 | ಸೂರ್ಯಕುಮಾರ್ | ಭಾರತ |

**ಸ್ಕೋರ್ ಕಾರ್ಡ್**

**ಭಾರತ: 3ಕ್ಕೆ 222 (20 ಓವರುಗಳಲ್ಲಿ)**
ಯಶಸ್ವಿ ಸಿ ವೇಡ್ ಬಿ ಬೆಹ್ರೆನ್‌ಡಾರ್ಫ್ 6 (6ಎ, 4x1)
ಋತುರಾಜ್ ಔಟಾಗದೇ 123 (57ಎ, 4x13, 6x7)
ಇಶಾನ್ ಸಿ ಸ್ಟೋಯಿನಿಸ್ ಬಿ ರಿಚರ್ಡ್‌ಸನ್ 0 (5ಎ)
ಸೂರ್ಯ ಸಿ ವೇಡ್ ಬಿ ಹಾರ್ಡಿ 39 (29ಎ, 4x5, 6x2)
ತಿಲಕ್ ವರ್ಮಾ ಔಟಾಗದೇ 31 (24ಎ, 4x4)
**ಇತರೆ:** 23 (ಲೆಗ್‌ಬೈ 4, ನೋಬಾಲ್ 1, ವೈಡ್ 18)
**ವಿಕೆಟ್ ಪತನ:** 1–14 (ಯಶಸ್ವಿ ಜೈಸ್ವಾಲ್; 1.2), 2–24 (ಇಶಾನ್ ಕಿಶನ್; 2.3), 3–81 (10.2; ಸೂರ್ಯಕುಮಾರ್ ಯಾದವ್)
**ಬೌಲಿಂಗ್:** ಕೇನ್ ರಿಚರ್ಡ್‌ಸನ್ 3–0–34–1, ಜೇಸನ್ ಬೆಹ್ರೆನ್‌ಡಾರ್ಫ್ 4–1–12–1; ನಥಾನ್ ಎಲ್ಲಿಸ್ 4–0–36–0, ತನ್ವೀರ್ ಸಂಘಾ 4–0–42–0; ಆರೋನ್ ಹ್ಯಾಡ್ಲಿ 4–0–64–1; ಗ್ಲೆನ್ ಮ್ಯಾಕ್ಸ್‌ವೆಲ್ 1–0–30–0.

**ಆಸ್ಟ್ರೇಲಿಯಾ: 5ಕ್ಕೆ 225 (20 ಓವರ್‌ಗಳಲ್ಲಿ)**
ಹೆಡ್ ಸಿ ಬಿಷ್ಣೋಯಿ ಬಿ ಆವೇಶ್ 35 (18ಎ, 4x8)
ಹಾರ್ಡಿ ಸಿ ಇಶಾನ್ ಬಿ ಅರ್ಷದೀಪ್ 16 (12ಎ, 4x3)
ಇಂಗ್ಲಿಸ್ ಬಿ ಬಿಷ್ಣೋಯಿ 10 (6ಎ, 4x2)
ಮ್ಯಾಕ್ಸ್‌ವೆಲ್ ಔಟಾಗದೇ 104 (48ಎ, 4x8, 6x8)
ಸ್ಟೋಯಿನಿಸ್ ಸಿ ಯಾದವ್ ಬಿ ಪಟೇಲ್ 17 (21ಎ, 4x2)
ಡೇವಿಡ್ ಸಿ ಯಾದವ್ ಬಿ ಬಿಷ್ಣೋಯಿ 1 (1ಎ)
ವೇಡ್ ಔಟಾಗದೇ 28 (16ಎ, 4x3, 6x1)
**ಇತರೆ:** 15 (ಬೈ 4, ಲೈಗ್‌ಬೈ 3, ನೋಬಾಲ್ 2, ವೈಡ್ 6)
**ವಿಕೆಟ್ ಪತನ:** 1–47 (ಆ್ಯರನ್ ಹಾರ್ಡಿ; 4.2), 2–66 (ಟ್ರಾವಿಸ್ ಹೆಡ್; 5.4), 3–68 (ಜೋಶ್ ಇಂಗ್ಲಿಸ್; 6.2), 4–128 (ಮಾರ್ಕಸ್ ಸ್ಟೋಯಿನಿಸ್; 12.6), 5–134 (ಟಿಮ್ ಡೇವಿಡ್;13.3)
**ಬೌಲಿಂಗ್:** ಅರ್ಷದೀಪ್ ಸಿಂಗ್ 4-0-44-1; ಪ್ರಸಿದ್ಧ ಕೃಷ್ಣ 4-0-68-0; ರವಿ ಬಿಷ್ಣೋಯಿ 4-0-32-2; ಆವೇಶ್ ಖಾನ್ 4-0-37-1; ಅಕ್ಷರ್ ಪಟೇಲ್ 4-0-37-1.
ಪಂದ್ಯದ ಆಟಗಾರ: ಗ್ಲೆನ್ ಮ್ಯಾಕ್ಸ್‌ವೆಲ್

**ಫಲಿತಾಂಶ: ಆಸ್ಟ್ರೇಲಿಯಾಕ್ಕೆ 5 ವಿಕೆಟ್ ಜಯ**


ಭಾರತದ ಋತುರಾಜ್ ಗಾಯಕವಾಡ್ ಅವರ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

## ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್: ಕರ್ನಾಟಕಕ್ಕೆ ಬಿಹಾರ್ ಸವಾಲು ಇಂದು

**ಅಹಮದಾಬಾದ್:** ವಿಜಯ್ ಹಜಾರೆ ಟ್ರೋಫಿ ಕ್ರಿಕೆಟ್ ಟೂರ್ನಿಯ ಸಿ ಗುಂಪಿನಲ್ಲಿ ಸತತ ಮೂರು ಪಂದ್ಯಗಳನ್ನು ಗೆದ್ದಿರುವ ಕರ್ನಾಟಕ ಬುಧವಾರ ನಡೆಯಲಿರುವ ಬಿಹಾರ ಎದುರಿನ ಹಣಾಹಣಿಯಲ್ಲಿಯೂ ಅಜೇಯ ಓಟ ಮುಂದುವರಿಸುವ ಛಲದಲ್ಲಿದೆ.

ಕಳೆದ ಪಂದ್ಯದಲ್ಲಿ ದೆಹಲಿ ವಿರುದ್ಧ ಕರ್ನಾಟಕದ ವಿದ್ವತ್ ಕಾವೇರಪ್ಪ, ವಿ. ಕೌಶಿಕ್ ಮತ್ತು ವೈಶಾಖ ವಿಜಯ ಕುಮಾರ್ ಅವರು ಮಿಂಚಿದ್ದರು. ದೆಹಲಿ ತಂಡವು ಸಣ್ಣ ಗುರಿಯನ್ನು ಒಡ್ಡಿತ್ತು.

ಬ್ಯಾಟಿಂಗ್‌ನಲ್ಲಿಯೂ ಕರ್ನಾಟಕ ಬಲಾಢ್ಯವಾಗಿದೆ. ಮೊದಲ ಪಂದ್ಯದಲ್ಲಿ ಶತಕ ಸಿಡಿಸಿದ್ದ ಮಯಂಕ್ ಅಗರವಾಲ್ ಮತ್ತು ಆರ್. ಸಮರ್ಥ್ ನಂತರದ ಎರಡು ಪಂದ್ಯಗಳಲ್ಲಿ ಹೆಚ್ಚು ರನ್ ಗಳಿಸಿಲ್ಲ. ಆದರೆ ದೇವದತ್ತ ಪಡಿಕ್ಕಲ್ ಎರಡು ಅರ್ಧಶತಕ ಮತ್ತು ಒಂದು ಶತಕ ಗಳಿಸಿದ್ದಾರೆ. ಅತಿ ಹೆಚ್ಚು ರನ್ ಗಳಿಸಿರುವ ಬ್ಯಾಟರ್‌ಗಳ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದ್ದಾರೆ.

ಬಿಹಾರ ತಂಡವೂ ಮೂರು ಪಂದ್ಯಗಳನ್ನು ಆಡಿದೆ. ಆದರೆ ಎರಡರಲ್ಲಿ ಸೋತಿತ್ತು. ಒಂದು ಪಂದ್ಯವು ಮಳೆಯಿಂದಾಗಿ ರದ್ದಾಗಿತ್ತು. ಹಾಗಾಗಿ ಎರಡು ಅಂಕ ಪಡೆದಿದೆ.

ಕರ್ನಾಟಕ ತಂಡಕ್ಕೆ ಸಮಬಲದ ಪೈಪೋಟಿಯು ನೀಡುವಷ್ಟು ಅನುಭವಿ ಆಟಗಾರರು ಬಿಹಾರ ತಂಡದಲ್ಲಿ ಇಲ್ಲ.


ಕರ್ನಾಟಕ ತಂಡದ ದೇವದತ್ತ ಪಡಿಕ್ಕಲ್

ಆದ್ದರಿಂದ ಈ ಪಂದ್ಯದಲ್ಲಿ ಸುಲಭ ಜಯ ಸಾಧಿಸುವತ್ತ ಕರ್ನಾಟಕ ದೃಷ್ಟಿ ನೆಟ್ಟಿದೆ. ಬಿಹಾರ ತಂಡದಲ್ಲಿರುವ ಆಲ್‌ರೌಂಡರ್ ವಿ. ಪ್ರತಾಪ್ ಸಿಂಗ್ ಉತ್ತಮ ಲಯದಲ್ಲಿದ್ದಾರೆ. ಅವರೊಬ್ಬರೆ ಕಳೆದ ಮೂರು ಪಂದ್ಯಗಳಲ್ಲಿ ಗಮನ ಸೆಳೆದಿರುವ ಆಟಗಾರ.

ಉಳಿದ ಬ್ಯಾಟರ್‌ಗಳು ಮತ್ತು ಬೌಲರ್‌ಗಳು ಎದುರಾಳಿಗಳಿಗೆ ಕಠಿಣ ಪೈಪೋಟಿಯೊಡ್ಡುವಲ್ಲಿ ಸಫಲರಾಗಿಲ್ಲ. ಮಯಂಕ್ ಬಳಗವು ಬಿಹಾರ ತಂಡಕ್ಕಿಂತ ಹೆಚ್ಚು ಬಲಾಢ್ಯವಾಗಿದೆ. ಆದ್ದರಿಂದ ತಂಡವು ಗೆಲ್ಲುವ ಸಾಧ್ಯತೆಯೂ ಹೆಚ್ಚಿದೆ.

**ಪಂದ್ಯ ಆರಂಭ:** ಬೆಳಿಗ್ಗೆ 9

## ಕೌತುಕ ಮೂಡಿಸಿದ ಬೂಮ್ರಾ ಇನ್ಸ್ಟಾ ಸ್ಟೋರಿ



**ಮುಂಬೈ (ಪಿಟಿಐ):** ಭಾರತ ಕ್ರಿಕೆಟ್ ತಂಡದ ವೇಗಿ ಜಸ್‌ಪ್ರೀತ್ ಬೂಮ್ರಾ ಮಂಗಳವಾರ ಇನ್ಸ್ಟಾಗ್ರಾಮ್ ಸ್ಟೋರಿಯಲ್ಲಿ ಹಾಕಿದ ಸಂದೇಶವೊಂದು ತೀವ್ರ ಕುತೂಹಲ ಮೂಡಿಸಿತು.

'ಕೆಲವೊಮ್ಮೆ ಮೌನವೇ ಅತ್ಯುತ್ತಮ ಉತ್ತರ' ಎಂಬ ಸಂದೇಶವನ್ನು ಅವರು ತಮ್ಮ ಡಿ.ಪಿ (ಡಿಸ್‌ಪ್ಲೇ ಚಿತ್ರ)ಯೊಂದಿಗೆ ಪೋಸ್ಟ್ ಮಾಡಿದ್ದರು. ಇನ್ಸ್ಟಾಗ್ರಾಮ್ ಸ್ಟೋರಿಯ ಪೋಸ್ಟ್‌ಗಳು ಸಾಮಾನ್ಯವಾಗಿ 24 ಗಂಟೆಗಳ ನಂತರ ತನ್ನಷ್ಟಕ್ಕೆ ಅಳಿಸಿಹೋಗುತ್ತವೆ.

ಬೂಮ್ರಾ ಅವರು ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಕಾಣಿಸಿಕೊಳ್ಳುವುದಿಲ್ಲ. ವಿವಾದ, ಚರ್ಚೆಗಳಿಗೂ ಆಸ್ಪದ ಕೊಟ್ಟಿದ್ದು ಕಡಿಮೆ. ಎಲ್ಲದಕ್ಕೂ ತಮ್ಮ ಬೌಲಿಂಗ್ ಸಾಧನೆಯ ಮೂಲಕವೇ ಉತ್ತರ ಕೊಟ್ಟವರು.

ಗಾಯ ಮತ್ತು ಶಸ್ತ್ರಚಿಕಿತ್ಸೆಯಿಂದಾಗಿ ಸುಮಾರು ಒಂದು ವರ್ಷ ಕ್ರಿಕೆಟ್‌ನಿಂದ ದೂರವಿದ್ದ ಅವರು ವಿಶ್ವಕಪ್ ಟೂರ್ನಿಗೂ ಒಂದು ತಿಂಗಳು ಮುನ್ನವಷ್ಟೇ ತಂಡಕ್ಕೆ ಮರಳಿದ್ದರು. ಗುಜರಾತ್ ಆಟಗಾರ ಬೂಮ್ರಾ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ 11 ಪಂದ್ಯಗಳಿಂದ 20 ವಿಕೆಟ್ ಗಳಿಸಿದ್ದರು.

**ಸಂಕ್ಷಿಪ್ತ ಸುದ್ದಿ**

## ತವರಿಗೆ ಮರಳಿದ ಸ್ಮಿತ್, ಜಂಪಾ

**ಗುವಾಹಟಿ (ಪಿಟಿಐ):** ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡಿದ್ದ ಆಸ್ಟ್ರೇಲಿಯಾದ ಸ್ಟೀವ್ ಸ್ಮಿತ್ ಮತ್ತು ಆ್ಯಡಂ ಜಂಪಾ, ಭಾರತದ ಎದುರಿನ ಟಿ20 ಸರಣಿಯ ಮೂರನೇ ಪಂದ್ಯದಲ್ಲಿ ಆಡಲಿಲ್ಲ. ಅವರು ಸ್ವದೇಶಕ್ಕೆ ಮರಳಿದರು.

ಹೋದ ವಾರ ಏಕದಿನ ವಿಶ್ವಕಪ್ ಜಯಿಸಿದ್ದ ಆಸ್ಟ್ರೇಲಿಯಾ ತಂಡದಲ್ಲಿದ್ದ ಏಳು ಆಟಗಾರರು ಟಿ20 ಸರಣಿಯಲ್ಲಿ ಆಡಲು ಉಳಿದಿದ್ದರು. ಅವರಲ್ಲಿ ಈಗ ಇಬ್ಬರು ತಮ್ಮ ದೇಶಕ್ಕೆ ಮರಳಿದ್ದಾರೆ. ಇನ್ನುಳಿದ ಐವರಲ್ಲಿ ಗ್ಲೆನ್ ಮ್ಯಾಕ್ಸ್‌ವೆಲ್, ಮಾರ್ಕಸ್ ಸ್ಟೊಯಿನಿಸ್, ಜೋಶ್ ಇಂಗ್ಲಿಸ್ ಮತ್ತು ಸೀನ್ ಅಬಾಟ್ ಅವರು ಬುಧವಾರ ತಮ್ಮ ದೇಶಕ್ಕೆ ಮರಳುವರು. ಫೈನಲ್ ಪಂದ್ಯದ ಹೀರೊ ಟ್ರಾವಿಸ್ ಹೆಡ್ ಒಬ್ಬರು ಇಲ್ಲಿಯೇ ಉಳಿಯಲಿದ್ದಾರೆ. ಈ ಸರಣಿಯ ನಾಲ್ಕು ಮತ್ತು ಐದನೇ ಪಂದ್ಯವು ಕ್ರಮವಾಗಿ ರಾಯಪುರ (ಡಿ.1) ಮತ್ತು ಬೆಂಗಳೂರಿನಲ್ಲಿ (ಡಿ 3) ನಡೆಯಲಿವೆ.

ವಿಕೆಟ್ ಕೀಪರ್ –ಬ್ಯಾಟರ್ ಜೋಶ್ ಫಿಲಿಪ್ ಮತ್ತು ಸ್ಫೋಟಕ ಶೈಲಿಯ ಬ್ಯಾಟರ್ ಬೆನ್ ಮ್ಯಾಕ್‌ಡೆರ್ಮಾಟ್ ಆಸ್ಟ್ರೇಲಿಯಾ ಬಳಗಕ್ಕೆ ಸೇರ್ಪಡೆಯಾಗಿದ್ದಾರೆ. ರಾಯಪುರ ಪಂದ್ಯದ ವೇಳೆಗೆ ಬೆನ್ ದ್ವಾರಶಿಯುಸ್ ಮತ್ತು ಸ್ಪಿನ್ನರ್ ಕ್ರಿಸ್ ಗ್ರೀನ್ ಸೇರಿಕೊಳ್ಳುವರು.

## ಅತಿ ನಿರೀಕ್ಷೆಗಳಿಂದ ಆಘಾತ ಸಾಧ್ಯತೆ: ಕಪಿಲ್ ದೇವ್

**ಗುರುಗ್ರಾಮ (ಪಿಟಿಐ):** ಅತಿಯಾದ ನಿರೀಕ್ಷೆಗಳು ಕೆಲವೊಮ್ಮೆ ಮನಸ್ಸಿಗೆ ಆಘಾತ ತಂದೊಡ್ಡುತ್ತವೆ. ಆದ್ದರಿಂದ ಸಮತೋಲನ ಸಾಧಿಸುವುದು ಮುಖ್ಯ ಎಂದು ದಿಗ್ಗಜ ಕ್ರಿಕೆಟಿಗ ಕಪಿಲ್ ದೇವ್ ಹೇಳಿದ್ದಾರೆ.

ಈಚೆಗೆ ವಿಶ್ವಕಪ್ ಕ್ರಿಕೆಟ್ ಫೈನಲ್‌ನಲ್ಲಿ ಭಾರತದ ಎದುರು ಆಸ್ಟ್ರೇಲಿಯಾ ತಂಡವು ಗೆದ್ದಿತ್ತು. ಅದಕ್ಕೂ ಮುನ್ನ ಭಾರತವೇ ಕಪ್ ಜಯಿಸುವ ಅಪಾರ ನಿರೀಕ್ಷೆಯು ಅಭಿಮಾನಿಗಳ ವಲಯದಲ್ಲಿ ಮೂಡಿತ್ತು. ವಿಶ್ವಕಪ್ ಟೂರ್ನಿಯ ಲೀಗ್‌ನಲ್ಲಿ ಎಲ್ಲ ಒಂಬತ್ತು ಪಂದ್ಯ ಮತ್ತು ಸೆಮಿಫೈನಲ್ ಪಂದ್ಯವನ್ನು ಗೆದ್ದಿದ್ದ ಭಾರತವು ಅಜೇಯವಾಗಿ ಫೈನಲ್ ತಲುಪಿತ್ತು.

ಈ ಕುರಿತು ಮಾತನಾಡಿದ ಕಪಿಲ್, 'ಅತಿಯಾದ ನಿರೀಕ್ಷೆಗಳನ್ನಿಟ್ಟುಕೊಂಡರೆ ಸೋಲು ಎದುರುದಾಗ ಹೃದಯ ಒಡೆದು ಹೋಗುವುದು ಸಹಜ. ಆದ್ದರಿಂದ ಅತಿಯಾದ ನಿರೀಕ್ಷೆಗಳು ಬೇಡ. ಸಮತೋಲನ ಇರಲಿ' ಎಂದರು.

## ಟಿ20 ಕ್ರಿಕೆಟ್ ವಿಶ್ವಕಪ್: ನಮೀಬಿಯಾ ಅರ್ಹತೆ

**ದುಬೈ (ಪಿಟಿಐ):** ಐಸಿಸಿ ಪುರುಷರ ಟಿ20 ವಿಶ್ವಕಪ್ ಟೂರ್ನಿಗೆ ನಮೀಬಿಯಾ ತಂಡ ಅರ್ಹತೆ ಪಡೆದಿದೆ.

ಆಫ್ರಿಕಾ ವಲಯದ ಕ್ವಾಲಿಫೈಯರ್ ಕೂಟದಲ್ಲಿ ಆಡಿರುವ ಐದು ಪಂದ್ಯಗಳಲ್ಲಿ ಎಲ್ಲವನ್ನೂ ಗೆದ್ದ ನಮೀಬಿಯಾ ತಂಡವು 10 ಅಂಕಗಳೊಂದಿಗೆ ಮುಖ್ಯ ಕೂಟಕ್ಕೆ ಪ್ರವೇಶ ಪಡೆಯಿತು.

ಟಿ20 ವಿಶ್ವಕಪ್ ಮುಂದಿನ ವರ್ಷ ಜೂನ್ 4ರಿಂದ ವೆಸ್ಟ್ ಇಂಡೀಸ್ ಮತ್ತು ಅಮೆರಿಕದಲ್ಲಿ ನಡೆಯಲಿದೆ.

ಪಿಯು: ವಿದ್ಯಾರ್ಥಿನಿಯರ ರಾಜ್ಯಮಟ್ಟದ ಅಥ್ಲೆಟಿಕ್ಸ್

## ಬೆಳಗಾವಿಗೆ 2 ಚಿನ್ನ, 3 ಬೆಳ್ಳಿ ಪದಕ

ಪ್ರಜಾವಾಣಿ ವಾರ್ತೆ


**ಧಾರವಾಡ:** ನಗರದಲ್ಲಿ ಮಂಗಳವಾರ ನಡೆದ ಪದವಿಪೂರ್ವ ಕಾಲೇಜುಗಳ ವಿದ್ಯಾರ್ಥಿನಿಯರ ರಾಜ್ಯ ಮಟ್ಟದ ಅಥ್ಲೆಟಿಕ್ಸ್ ಕೂಟದಲ್ಲಿ ಬೆಳಗಾವಿ ತಂಡ 5 ಪದಕ (2 ಚಿನ್ನ, 3 ಬೆಳ್ಳಿ), 24 ಪಾಯಿಂಟ್ಸ್ ಗಳಿಸಿ ಸಾಧನೆ ಮಾಡಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ ತಂಡಗಳು ತಲಾ 6 ಪದಕ, ಕ್ರಮವಾಗಿ 19 ಹಾಗೂ 14 ಪಾಯಿಂಟ್ಸ್ ಪಡೆದಿವೆ.

ಶಾಲಾ ಶಿಕ್ಷಣ (ಪದವಿಪೂರ್ವ) ಇಲಾಖೆ, ಜಿಲ್ಲಾ ಪದವಿಪೂರ್ವ ಕಾಲೇಜುಗಳ ಪ್ರಾಚಾರ್ಯರ ಸಂಘ, ಜಿಲ್ಲಾ ದೈಹಿಕ ಶಿಕ್ಷಣ ಉಪನ್ಯಾಸಕರ ಸಂಘದ ವತಿಯಿಂದ ಆರ್.ಎನ್.ಶೆಟ್ಟಿ ಕ್ರೀಡಾಂಗಣದಲ್ಲಿ ಆಯೋಜಿಸಿರುವ ಅಥ್ಲೆಟಿಕ್ಸ್ ಪಂದ್ಯಾವಳಿಯ ವಿವಿಧ ಸ್ಪರ್ಧೆಗಳ ಫಲಿತಾಂಶ ಇಂತಿದೆ.

**ಫಲಿತಾಂಶಗಳು:** 100 ಮೀ. ಓಟ: ಸ್ತುತಿ ಪಿ.ಶೆಟ್ಟಿ (ಉಡುಪಿ)-1 , ವೈಭವಿ ಬುದ್ರುಕ್ (ಬೆಳಗಾವಿ)-2, ಪ್ರಿಯಾ ಕೆ (ಬೆಂಗಳೂರು ಉತ್ತರ)-3; 400 ಮೀ ಓಟ: ರಿತುಶ್ರೀ (ದಕ್ಷಿಣ ಕನ್ನಡ)-1, ಅಭಿಜ್ಞಾ (ಶಿವಮೊಗ್ಗ)-2 ಹಾಗೂ ಅರ್ಣಿಕಾ ವರ್ಷಾ ಡಿಸೋಜಾ-3; 800 ಮೀ: ಪ್ರಿಯಾಂಕಾ ಓಲೆಕಾರ (ಧಾರವಾಡ)-1, ಶಿಲ್ಪಾ ಹೊಸಮನಿ (ಧಾರವಾಡ)-2, ಚೈತ್ರಾ ಟಿ.ಪಿ (ದಕ್ಷಿಣ ಕನ್ನಡ)-3; 3,000 ಮೀ: ಶ್ರೀರಕ್ಷಾ (ಬೆಂಗಳೂರು ಉತ್ತರ)-1, ಪ್ರಣತಿ (ಬೆಂಗಳೂರು ಉತ್ತರ)-2, ಮಹಾಲಕ್ಷ್ಮಿ ಬಸಕಾಲಿ (ಬಾಗಲಕೋಟೆ)-3; 100 ಮೀ. ಹರ್ಡಲ್ಸ್: ಅಪೂರ್ವ ನಾಯಕ್ (ಬೆಳಗಾವಿ)-1, ಇಶಾ ಎಲಿಜಬೆತ್ (ಬೆಂಗಳೂರು ದಕ್ಷಿಣ)-2, ಗೌರಂಗಿ ಗೌಡ (ಶಿವಮೊಗ್ಗ)-3.

ಡಿಸ್ಕಸ್ ಥ್ರೋ: ಮಾಧುರ್ಯ (ಉಡುಪಿ)-1, ಐಶ್ವರ್ಯಾ ಮಾರುತಿ ಬೆಂಡಿಗೇರಿ (ದಕ್ಷಿಣ ಕನ್ನಡ)-2, ದೇವಿಕಾ ರಾವ್ (ಉಡುಪಿ)-3; ಶಾಟ್‌ಪಟ್: ಐಶ್ವರ್ಯಾ ಮಾರುತಿ ಬೆಂಡಿಗೇರಿ (ದಕ್ಷಿಣ ಕನ್ನಡ)-1, ಶಿಫಾ ಎಸ್.ತಹಶೀಲ್ದಾರ್ (ಬೆಳಗಾವಿ)-2, ಮಾಧುರ್ಯ (ಉಡುಪಿ)-3; ಹೈಜಂಪ್: ಗೌತಮಿ ಗೌಡ (ಶಿವಮೊಗ್ಗ)-1, ಅಮೃತಾ ಕೆ. (ದಕ್ಷಿಣ ಕನ್ನಡ)-2, ಸುದೀಕ್ಷಾ ಕಾಮತ್ (ಉಡುಪಿ)-3; ಲಾಂಗ್ ಜಂಪ್: ಲಕ್ಷಾ (ಮೈಸೂರು)-1, ಸ್ಮಿತಾ ಆರ್. ಕಾಕತ್ಕರ್ (ಬೆಳಗಾವಿ)-2, ನಿತ್ಯಶ್ರೀ (ಬೆಂಗಳೂರು ಗ್ರಾಮಾಂತರ)-3.

4X100 ಮೀ. ರಿಲೆ: ಬೆಳಗಾವಿ ತಂಡ (ವೈಭವಿ ಬುದ್ರುಕ್, ಅಪೂರ್ವಾ ನಾಯಕ್, ಅದಿತಿ ಗಡಕರಿ, ಸ್ಮಿತಾ ಆರ್.ಕಾಕತ್ಕರ್)-1, ಬೆಂಗಳೂರು ಉತ್ತರ ತಂಡ (ಪ್ರಿಯಾ ಕೆ, ರಕ್ಷಿತಾ ಕಂದಾಚಾರಿ, ದೀಕ್ಷಾ ಡಿ., ಮಾನ್ಯಾ)-2, ದಕ್ಷಿಣ ಕನ್ನಡ ತಂಡ (ಜೊಬಿನಾ ಜಾಯ್, ರೀತುಶ್ರೀ, ಅನಘಾ ಕೆ.ಎ, ರೇಖಾ)-3.


400 ಮೀಟರ್ ಓಟ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದ ರೀತುಶ್ರೀ –ಪ್ರಜಾವಾಣಿ ಚಿತ್ರ/ ಬಿ.ಎಂ.ಕೇದಾರನಾಥ

## ಟ್ರ್ಯಾಕ್‌ನಲ್ಲಿ ಮಿಂಚಿದ ಶ್ರವಣ್, ಭೂಮಿಕಾ

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿ.ವಿ ಅಥ್ಲೆಟಿಕ್ಸ್: ಐದು ದಾಖಲೆ

ಪ್ರಜಾವಾಣಿ ವಾರ್ತೆ

**ಮೂಡುಬಿದಿರೆ (ದಕ್ಷಿಣ ಕನ್ನಡ):** ತಮ್ಮದೇ ಸಂಸ್ಥೆಯ ಪ್ರತಿಸ್ಪರ್ಧಿಗಳ ಸವಾಲು ಮೀರಿದ ಆಳ್ವಾಸ್ ಅಲೈಡ್ ಹೆಲ್ತ್ ಸೈನ್ಸಸ್‌ನ ಶ್ರವಣ್ ಗಿರಿ ಮತ್ತು ಭೂಮಿಕಾ ಅವರು ಇಲ್ಲಿನ ಸ್ವರಾಜ್ಯ ಮೈದಾನದ ಟ್ರ್ಯಾಕ್‌ನಲ್ಲಿ ಮಿಂಚು ಹರಿಸಿದರು.

ಆಳ್ವಾಸ್ ಆಯುರ್ವೇದ ವೈದ್ಯಕೀಯ ಕಾಲೇಜು ಆಶ್ರಯದಲ್ಲಿ ಮಂಗಳವಾರ ಆರಂಭಗೊಂಡ ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಅಥ್ಲೆಟಿಕ್ ಕೂಟದಲ್ಲಿ ಶ್ರವಣ್ ಮತ್ತು ಭೂಮಿಕಾ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ 100 ಮೀಟರ್ಸ್ ಓಟದ ಚಿನ್ನ ಗೆದ್ದುಕೊಂಡರು. ಶ್ರವಣ್ ಕೂಟ ದಾಖಲೆಯನ್ನೂ ಬರೆದರು.

ಮೊದಲ ದಿನ ಒಟ್ಟು 5 ಕೂಟ ದಾಖಲೆಗಳನ್ನು ಸ್ಥಾಪಿಸಿದ ಆಳ್ವಾಸ್ ಸಂಸ್ಥೆಯ ವಿದ್ಯಾರ್ಥಿಗಳು 13 ಪಾಯಿಂಟ್‌ಗಳೊಂದಿಗೆ ಪಾರಮ್ಯ ಮೆರೆದಿದ್ದಾರೆ. ಉಡುಪಿಯ ಎಸ್‌ಡಿಎಂ ಆಯುರ್ವೇದ ಕಾಲೇಜು 10 ಪಾಯಿಂಟ್ಸ್ ಕಲೆ ಹಾಕಿ ದ್ವಿತೀಯ ಸ್ಥಾನದಲ್ಲಿದೆ. 400 ಮೀ ಹರ್ಡಲ್ಸ್‌ನ ಪುರುಷ ಮತ್ತು ಮಹಿಳಾ ವಿಭಾಗದ ಅಥ್ಲೀಟ್ಸ್ ದಾಖಲೆ ಬರೆದರು.

**ಮೊದಲ ದಿನದ ಫಲಿತಾಂಶಗಳು:**




100 ಮೀಟರ್ಸ್ ಓಟದಲ್ಲಿ ದಾಖಲೆ ನಿರ್ಮಿಸಿದ ಶ್ರವಣ್ ಗಿರಿ ಸಂಭ್ರಮ (ಎಡ). ಪುರುಷರ 400 ಮೀಟರ್ಸ್ ಹರ್ಡಲ್ಸ್‌ನಲ್ಲಿ ಚಿನ್ನ ಗೆದ್ದ ವಿಸ್ಮಯ

**ಪುರುಷರು:** 100 ಮೀ ಓಟ: ಶ್ರವಣ್ ಗಿರಿ (ಆಳ್ವಾಸ್ ಅಲೈಡ್ ಹೆಲ್ತ್ ಸೈನ್ಸಸ್)-1, ಸೂರ್ಯ ಪಿ (ಆಳ್ವಾಸ್)-2, ಅಕ್ಷ್ ಬೆನೆಡಿಕ್ಟ್ (ಶ್ರೀಗಂಗೋತ್ರಿ ಕಾಲೇಜ್ ಆಫ್ ನರ್ಸಿಂಗ್)-3. ಕಾಲ: 10.9 ಸೆ. ಕೂಟ ದಾಖಲೆ: ಹಿಂದಿನ ದಾಖಲೆ 11.2 ಸೆ, ಅನಿಲ್ ಕುಮಾರ್, ಜೆಜೆಎಂಸಿ ದಾವಣಗೆರೆ, 2001); 400 ಮೀ: ಕಾರ್ತಿಕ್ (ಆಳ್ವಾಸ್)-1, ಸದನ್ (ಆಳ್ವಾಸ್)-2, ಅಂಕಿತ್ ಬಿ.ಶೆಟ್ಟಿ (ಎಸ್‌ಡಿಎಂ, ಧಾರವಾಡ)-3. ಕಾಲ: 53.4 ಸೆ; 5000 ಮೀ: ಪ್ರಣವ್ ಜಗದೀಶ್ (ಲಕ್ಷ್ಮಿ ಸ್ಮಾರಕ ಫಿಜಿಯೊಥೆರಪಿ ಕಾಲೇಜು, ಮಂಗಳೂರು)–1, ಥಾಮಸ್ ಪೌಲ್ (ಸೇಂಟ್ ಆ್ಯನ್ಸ್ ಕಾಲೇಜ್ ಆಫ್ ನರ್ಸಿಂಗ್, ಮೂಲ್ಕಿ)–2, ಚಂದನ್ ಎಸ್ (ಆಳ್ವಾಸ್)–3. ಕಾಲ: 18 ನಿಮಿಷ 57.6ಸೆ; 400 ಮೀ. ಹರ್ಡಲ್ಸ್: ಕಾರ್ತಿಕ್ (ಆಳ್ವಾಸ್)–1, ಸದನ್ (ಆಳ್ವಾಸ್)–2, ಅಂಕಿತ್ ಶೆಟ್ಟಿ (ಎಸ್‌ಡಿಎಂ ಧಾರವಾಡ). ಕಾಲ: 53.4 ಸೆ. (ಕೂಟ ದಾಖಲೆ: ಹಿಂದಿನ ದಾಖಲೆ: ಅರ್ಜುನ್ ಜಾಯ್, ಸಿಟಿ ಕಾಲೇಜ್ ಮಂಗಳೂರು 1ನಿ.66ಸೆ, 2007); ಹೈಜಂಪ್ ಮನು (ಆಳ್ವಾಸ್)–1, ಕಾರ್ತಿಕ್ (ಆಳ್ವಾಸ್)–2, ಜೋಯಲ್ ಕೆ.ಸನ್ನಿ (ಸದರ್ನ್ ಕಾಲೇಜ್, ಬೆಂಗಳೂರು)–3. ಎತ್ತರ: 1.86 ಮೀ. ಕೂಟ ದಾಖಲೆ: ಹಿಂದಿನ ದಾಖಲೆ: 1.80 ಮೀ, ರಾಘವೇಂದ್ರ, ಸಿಎಚ್‌ಎಂಎಸ್, ಚಿತ್ರದುರ್ಗ, 2003; ಶಾಟ್‌ಪಟ್: ರಾಕೇಶ್ (ಆಳ್ವಾಸ್)–1, ಕರಣ್ ರಾಜೇಶ್ (ಎಸ್‌ಡಿಎಂ ಹಾಸನ)–2, ರತನೇಶ್ ಆರ್ (ಶಾಂತಾ ಗ್ರೂಪ್ ನಂದನಗನಹಳ್ಳಿ)–3. ದೂರ: 11.12ಮೀ; ಜಾವೆಲಿನ್ ಥ್ರೋ: ರಾಕೇಶ್ (ಆಳ್ವಾಸ್)–1, ರಾಜೇಶ್ (ಮಂಡ್ಯ ವೈದ್ಯಕೀಯ ಕಾಲೇಜು)–2, ದಿನಕರನ್ (ಆಳ್ವಾಸ್)–3. ದೂರ: 50.89 ಮೀ (ಕೂಟ ದಾಖಲೆ: ಹಿಂದಿನ ದಾಖಲೆ: ಅರುಣ್ ತೇಜಸ್, ಎಸ್‌ಡಿಎಂ ಉಜಿರೆ, 46.56 ಮೀ, 2014).

**ಮಹಿಳೆಯರು:** 100ಮೀ: ಭೂಮಿಕಾ (ಆಳ್ವಾಸ್)–1, ದುರ್ಗಾ (ಆಳ್ವಾಸ್)–2, ಲಕ್ಷ್ಮಿ ವೈಷ್ಣವಿ (ಆಳ್ವಾಸ್)–3; ಕಾಲ: 13.2 ಸೆ; 400 ಮೀ ಹರ್ಡಲ್ಸ್: ವಿಸ್ಮಯ (ಆಳ್ವಾಸ್)–1, ಎವ್ಲಿನ್ ಜಾಯ್ (ಅಥೆನಾ ಕಾಲೇಜ್, ಮಂಗಳೂರು)–2, ಸೂಸನ್ ಅಲಿಯಾಸ್ (ಅಥೆನಾ)–3. ಕಾಲ: 1ನಿ 08 ಸೆ. (ಕೂಟ ದಾಖಲೆ: ಹಿಂದಿನ ದಾಖಲೆ: 1ನಿ 18.88ಸೆ, ಖ್ಯಾತಿ ಎಸ್.ವಿ, ಬಿಎಂಸಿ ಮಂಗಳೂರು, 2008); 5000 ಮೀ: ದಿವ್ಯಾ ಎಸ್ (ಜೆಎಸ್‌ಎಸ್, ಚಾಮರಾಜನಗರ)–1, ಸಾವಿತ್ರಿ ಎಸ್ ಮೇಟಿ (ಶ್ರೀ ಇನ್‌ಸ್ಟಿಟ್ಯೂಟ್, ಬಾಗಲಕೋಟೆ)–2, ಹರ್ಷಶ್ರೀ ಡಿ.ಎಸ್ (ರಾಜೀವ್ ಇನ್‌ಸ್ಟಿಟ್ಯೂಟ್, ಹಾಸನ). ಕಾಲ: 29 ನಿ 35.4 ಸೆ; ಜಾವೆಲಿನ್ ಥ್ರೋ: ಅರುಣಾ ವಿ.ಎಸ್ (ವಿದ್ಯೋದಯ, ಬೆಂಗಳೂರು)–1, ಮಾಧುರಿ ಕೆ (ಫಾದರ್ ಮುಲ್ಲರ್, ಮಂಗಳೂರು)–2, ಮೇಘನಾ ಜಿ (ಎಸ್‌ಡಿಎಂ, ಉಡುಪಿ)–3; ದೂರ: 24.95 ಮೀ; ಹೈಜಂಪ್: ರಕ್ಷಾ (ಇಂದಿರಾ ನರ್ಸಿಂಗ್ ಕಾಲೇಜ್, ಮಂಗಳೂರು)–1, ಸೀಮಾ (ಸಂಜೀವಿನಿ, ಹುಬ್ಬಳ್ಳಿ)–2, ಡಾಲಿಯಾ ಸಿಸಿ (ಸೇಂಟ್ ಆ್ಯನ್ಸ್, ಮೂಲ್ಕಿ)–3. ಎತ್ತರ: 1.24ಮೀ.

## ಟೆನಿಸ್: ಮನೀಷ್ ಗಣೇಶ್ ಮುನ್ನಡೆ

**ಕಲಬುರಗಿ:** ಎಳೆಬಿಸಿಲಿನ ವಾತಾವರಣದಲ್ಲಿ ಮನಸಿಗೆ ತಂಪು ನೀಡುವಂತೆ ಆಟವಾಡಿದ ಕರ್ನಾಟಕದ ಮನೀಷ್ ಗಣೇಶ್ ಕಲಬುರಗಿ ಓಪನ್ ಐಟಿಎಫ್ ಟೆನಿಸ್ ಟೂರ್ನಿಯ ಸಿಂಗಲ್ಸ್ ವಿಭಾಗದಲ್ಲಿ ಶುಭಾರಂಭ ಮಾಡಿದರು. ರಾಜ್ಯದ ಇನ್ನೊಬ್ಬ ಆಟಗಾರ ಆದಿಲ್ ಕಲ್ಯಾಣಪುರ ಅವರಿಗೆ ನಿರಾಸೆ ಕಾಡಿತು.

ನಗರದ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಮುಖ್ಯ ಸುತ್ತಿನ ಮೊದಲ ಪಂದ್ಯದಲ್ಲಿ ಮಂಗಳವಾರ ಮೈಸೂರಿನ 'ಸೈನಿಕ' ಮನೀಷ್ 6–1, 6–2ರಿಂದ ಜಪಾನ್‌ನ ಯುಚಿರೊ ಇನುಯಿ ಅವರನ್ನು ಪರಾಭವಗೊಳಿಸಿ ಎರಡನೇ ಸುತ್ತು ಪ್ರವೇಶಿಸಿದರು. ಈ ಮೂಲಕ ಮೊದಲ ಎಟಿಪಿ ಪಾಯಿಂಟ್ ಗಳಿಸಿದರು.

ಭಾರತೀಯ ಸೇನೆಯಲ್ಲಿರುವ ಮನೀಷ್, ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದಾರೆ. ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಮತ್ತೊಂದು ಪಂದ್ಯದಲ್ಲಿ ಆದಿಲ್ ಕಲ್ಯಾಣಪುರ ಉತ್ತಮ ಪೈಪೋಟಿ ನೀಡಿದರೂ 4–6, 3–6ರಿಂದ ಗುಜರಾತ್‌ನ ಆರ್ಯನ್ ಶಾ ಎದುರು ಸೋಲನ್ನು ಅನುಭವಿಸಿದರು.

ಮೊದಲ ಸುತ್ತಿನ ಇತರ ಪಂದ್ಯಗಳಲ್ಲಿ ಭಾರತದ ರಾಘವ್ ಜೈಸಿಂಘಾನಿ 6–4, 6–3ರಿಂದ ಸ್ವದೇಶದ ಶಿವಾಂಕ್ ಭಟ್ನಾಗರ್ ಎದುರು, ಭಾರತದ ಹಂಸ್ ಕಬೀರ್ 5–7, 6–4, 6–2ರಿಂದ ಹಾ ಮಿನ್ ಡಕ್ ವು ವಿರುದ್ಧ, ಜಪಾನ್‌ನ ರೂಕಿ ಮತ್ಸುದಾ 6–2, 6–1ರಿಂದ ಭಾರತದ ಸಿದ್ಧಾಂತ್ ಬಂತಿಯಾ ಮೇಲೆ, ಭಾರತದ ಕರಣ್ ಸಿಂಗ್ 6–4, 6–2ರಿಂದ ಸ್ವದೇಶದ ರಂಜೀತ್ ಮುರುಗೇಶನ್ ಎದುರು, ಜಪಾನ್‌ನ ತಗುಚಿ ರಿಯೊತಾರೊ 6–3, 5–7, 6–3ರಿಂದ ಕೊರಿಯಾದ ಯುನ್ಸೆಕ್ ಜಾಂಗ್ ವಿರುದ್ಧ ಗೆದ್ದು ಮುನ್ನಡೆದರು.

**ಮೈಸೂರು ರೇಸ್**

### ಪ್ರಿನ್ಸ್ ಕಾರ್ಪೊರೇಟ್ ಗೆಲ್ಲುವ ನಿರೀಕ್ಷೆ

ರಾಜ್ಯೋತ್ಸವ ಟ್ರೋಫಿ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಪ್ರಿನ್ಸ್ ಕಾರ್ಪೊರೇಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಹಿಯರ್ ಐ ಕಮ್ 9, ಪೆಟ್ಟೀಸ್ ಚಾಯ್ಸ್ 3, ಶಿವಾಲಿಕ್ ಸೌಂಡ್ 4
2ನೇ ರೇಸ್: ಕೋಡ್ ಆಫ್ ಹಾನರ್ 4, ಸಿಟಿ ಆಫ್ ಹಸ್ಲ್ 5, ಕಂಟ್ರೀಸ್ ಮೇಜರ್ 3
3ನೇ ರೇಸ್: ಅತುಲ್ಯ 6, ಜನ್ಯೆರೊ 8, ಎಲೊಕ್ವೆಂಟ್ 12
4ನೇ ರೇಸ್: ಟಾಮ್ ಕ್ರೂಸರ್ 8, ಇಂಡಿಯನ್ ಪೇಟ್ರಿಯಾಟ್ 1, ಮಿಸ್ಟಿಕ್ ಡಿವೈನ್ 7
5ನೇ ರೇಸ್: ಪ್ರಿನ್ಸ್ ಕಾರ್ಪೊರೇಟ್ 2, ಫೆರೆಟ್ಟಿ 7, ಗ್ಯಾಮ 11
6ನೇ ರೇಸ್: ಓಕರ್ 6, ಕೆಟಲಿನ 1, ಲಕ್ಕಿ ಪಾಯಿಂಟ್ 2
7ನೇ ರೇಸ್: ಬ್ರೈಟೆಸ್ಟ್ ಸ್ಟಾರ್ 7, ಅನುಸ್ತುಬಾ 5, ಡಿ ಬ್ರದರ್ 2

**ಉತ್ತಮ ಬೆಟ್: ಕೋಡ್ ಆಫ್ ಹಾನರ್**

| ಜಾಕ್‌ಪಾಟ್ | 1ನೇ ಟ್ರಿಬಲ್ | 2ನೇ ಟ್ರಿಬಲ್ |
|---|---|---|
| 3,4,5,6,7 | 2,3,4 | 5,6,7 |

## ಹಾಕಿ: ಪಂಚದೇಶ ಟೂರ್ನಿಗೆ ಸಂಭವನೀಯರ ಆಯ್ಕೆ

**ನವದೆಹಲಿ (ಪಿಟಿಐ):** ಮುಂದಿನ ವರ್ಷ ನಡೆಯಲಿರುವ ಪ್ಯಾರಿಸ್ ಒಲಿಂಪಿಕ್ ಕೂಟದಲ್ಲಿ ಸ್ಪರ್ಧಿಸುವ ಭಾರತ ತಂಡದ ಆಯ್ಕೆಗೆ ಹಾಕಿ ಇಂಡಿಯಾ ಮುನ್ನುಡಿ ಬರೆದಿದೆ.

ಸ್ಪೇನ್‌ನಲ್ಲಿ ನಡೆಯಲಿರುವ ಪಂಚದೇಶಗಳ ಸರಣಿಯಲ್ಲಿ ಆಡಲು 39 ಆಟಗಾರರ ಸಂಭವನೀಯರ ತಂಡವನ್ನು ಆಯ್ಕೆ ಮಾಡಲಾಗಿದೆ. ಇದಕ್ಕಾಗಿ ನಡೆಯಲಿರುವ ರಾಷ್ಟ್ರೀಯ ಶಿಬಿರದಲ್ಲಿ ಈ ತಂಡವು ಭಾಗವಹಿಸಲಿದೆ. ನಂತರ ಅಂತಿಮ 20ರ ತಂಡವನ್ನು ಆಯ್ಕೆ ಮಾಡಲಾಗುವುದು.

ಟೋಕಿಯೊ ಒಲಿಂಪಿಕ್ ಪದಕ ವಿಜೇತ ತಂಡದ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಮನದೀಪ್ ಸಿಂಗ್ ಹಾಗೂ ಮನ್‌ಪ್ರೀತ್ ಸಿಂಗ್ ಅವರೂ ತಂಡದಲ್ಲಿದ್ದಾರೆ. ಒಲಿಂಪಿಕ್ಸ್ ಸಿದ್ಧತೆ ಇಲ್ಲಿಂದಲೇ ಆರಂಭವಾಗಲಿದೆ ಎಂದು ತಂಡದ ಕೋಚ್ ಕ್ರೇಗ್ ಫುಲ್ಟಾನ್ ಕೂಡ ಇಂಗಿತ ವ್ಯಕ್ತಪಡಿಸಿದ್ದಾರೆ.

**ಸಂಭವನೀಯರ ತಂಡ: ಗೋಲ್‌ಕೀಪರ್ಸ್:** ಪಿ.ಆರ್. ಶ್ರೀಜೇಶ್, ಕೃಷನ್ ಬಹಾದ್ದೂರ್ ಪಾಠಕ್, ಸೂರಜ್ ಕರ್ಕೆರಾ, ಪವನ್ , ಪ್ರಶಾಂತ್ ಕುಮಾರ್ ಚವ್ಹಾಣ.
**ಡಿಫೆಂಡರ್ಸ್:** ಜರ್ಮನ್‌ಪ್ರೀತ್ ಸಿಂಗ್, ಸುರೇಂದರ್ ಕುಮಾರ್, ಹರ್ಮನ್‌ಪ್ರೀತ್ ಸಿಂಗ್, ವರುಣಕುಮಾರ್, ಅಮಿತ್ ರೋಹಿದಾಸ್, ಗುರಿಂದರ್ ಸಿಂಗ್, ಜುಗರಾಜ್ ಸಿಂಗ್, ಮನದೀಪ್ ಮೋರ್, ನೀಲಂ ಸಂಜೀವ ಎಸ್, ಸಂಜಯ್, ಯಶದೀಪ್ ಸಿವಾಚ್, ದಿಪ್ಸನ್ ಟಿರ್ಕಿ, ಮಂಜೀತ್.
**ಮಿಡ್‌ಫೀಲ್ಡರ್:** ಮನಪ್ರೀತ್ ಸಿಂಗ್, ಹಾರ್ದಿಕ್ ಸಿಂಗ್, ವಿವೇಕ್ ಸಾಗರ್ ಪ್ರಸಾದ್, ಮೊಯಿರಂಗಥೆಮ್ ರವಿಚಂದ್ರ ಸಿಂಗ್, ಶಂಶೇರ್ ಸಿಂಗ್, ನೀಲಕಂಠ ಶರ್ಮಾ, ರಾಜಕುಮಾರ್ ಪಾಲ್, ಸುಮಿತ್, ಆಕಾಶದೀಪ್ ಸಿಂಗ್, ಗುರ್ಜಂತ್ ಸಿಂಗ್, ಮೊಹಮ್ಮದ್ ರಾಹೀಲ್ ಮೌಸಿನ್, ಮಣಿಂದರ್ ಸಿಂಗ್.
**ಫಾರ್ವರ್ಡ್ಸ್:** ಎಸ್. ಕಾರ್ತಿ, ಮನದೀಪ್ ಸಿಂಗ್, ಲಲಿತ್ ಕುಮಾರ್ ಉಪಾಧ್ಯಾಯ, ಅಭಿಷೇಕ್ ದಿಲ್‌ಪ್ರೀತ್ ಸಿಂಗ್, ಸುಖಜೀತ್ ಸಿಂಗ್, ಸಿಮ್ರನ್‌ಜೀತ್ ಸಿಂಗ್, ಶಿಲಾನಂದ ಲಕ್ರಾ, ಪವನ್ ರಾಜ್‌ಭರ್.


ಪಿ.ಆರ್. ಶ್ರೀಜೇಶ್

ಭಾರತ ಕುಸ್ತಿ ಸಂಸ್ಥೆಗೆ ಚುನಾವಣೆ ಹಾದಿ ಸುಗಮ

## ತಡೆಯಾಜ್ಞೆ ತೆರವು ಮಾಡಿದ 'ಸುಪ್ರೀಂ'

**ನವದೆಹಲಿ (ಪಿಟಿಐ):** ಭಾರತ ಕುಸ್ತಿ ಫೆಡರೇಷನ್‌ಗೆ ಚುನಾವಣೆ ನಡೆಸುವುದಕ್ಕೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ನೀಡಿದ್ದ ತಡೆಯಾಜ್ಞೆಯನ್ನು ಸುಪ್ರೀಂ ಕೋರ್ಟ್ ಮಂಗಳವಾರ ತೆರವುಗೊಳಿಸಿದೆ.

ನ್ಯಾಯಮೂರ್ತಿಗಳಾದ ಅಭಯ್ ಎಸ್.ಓಕಾ ಮತ್ತು ಪಂಕಜ್ ಮಿತ್ತಲ್ ಅವರನ್ನು ಒಳಗೊಂಡ ಪೀಠ, ಇಡೀ ಚುನಾವಣಾ ಪ್ರಕ್ರಿಯೆಗೆ ಹೈಕೋರ್ಟ್ ತಡೆಯೊಡ್ಡುವುದರ ಹಿಂದಿನ ಮರ್ಮ ತನಗೆ ಅರ್ಥವಾಗುತ್ತಿಲ್ಲ ಎಂದು ಹೇಳಿತು. ಹರಿಯಾಣ ಕುಸ್ತಿ ಸಂಸ್ಥೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ಬಾಕಿವುಳಿಸಿ ಹೈಕೋರ್ಟ್ ಮಧ್ಯಂತರ ತಡೆಯಾಜ್ಞೆ ನೀಡಿತ್ತು.

'ಚುನಾವಣೆ ನಡೆಸಲು ಅವಕಾಶ ಮಾಡಿಕೊಟ್ಟು, ಅರ್ಜಿಯ ವಿಚಾರಣೆ ಮುಗಿದ ನಂತರವಷ್ಟೇ, ಅದರ ಆಧಾರದ ಮೇಲೆ ಫಲಿತಾಂಶ ಪ್ರಕಟಿಸಬಹುದು ಎಂದು ಹೇಳಿ ಆದೇಶ ನೀಡುವುದು ಸರಿಯಾದ ಮಾರ್ಗವಾಗುತಿತ್ತು' ಎಂದು ಪೀಠ ಅಭಿಪ್ರಾಯಪಟ್ಟಿದೆ.

ಭಾರತ ಒಲಿಂಪಿಕ್ ಸಂಸ್ಥೆ ರಚಿಸಿದ ಅಡ್‌ಹಾಕ್ ಸಮಿತಿಯು ಕಳೆದ ಜುಲೈ 6ರಂದು ಚುನಾವಣೆಯನ್ನು ನಿಗದಿಪಡಿಸಿತ್ತು. ನಂತರ ಮಹಾರಾಷ್ಟ್ರ, ಹರಿಯಾಣ, ತೆಲಂಗಾಣ, ರಾಜಸ್ಥಾನ, ಹಿಮಾಚಲ ಪ್ರದೇಶ ಕುಸ್ತಿ ಸಂಸ್ಥೆಗಳ ಆಕ್ಷೇಪಗಳ ನಂತರ ಚುನಾವಣೆಯನ್ನು ಜುಲೈ 11ಕ್ಕೆ ಮುಂದೂಡಲಾಯಿತು. ನಂತರ ಅಸ್ಸಾಂ ಸಂಸ್ಥೆ ಚುನಾವಣೆಗೆ ತಡೆ ಕೋರಿ ಹೈಕೋರ್ಟ್ ಮೊರೆ ಹೋಗಿತ್ತು. ಅದು ತೆರವಾದರೂ, ಚುನಾವಣೆಗೆ ತಡೆ ಕೋರಿ ಹರಿಯಾಣ ಕುಸ್ತಿ ಸಂಸ್ಥೆಯು, ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. ಆಗಸ್ಟ್ 12ರಂದು ಹೈಕೋರ್ಟ್ ಚುನಾವಣೆಗೆ ಮತ್ತೆ ತಡೆಯಾಜ್ಞೆ ನೀಡಿತು. ಇದನ್ನು ತೆರವುಗೊಳಿಸುವಂತೆ ಕೋರಿ ಅಡ್‌ಹಾಕ್ ಸಮಿತಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

### ಚುನಾವಣಾ ದಿನ ನಿರ್ಧಾರ ಇಂದು?

ತಡೆಯಾಜ್ಞೆ ತೆರವಾಗಿರುವ ಹಿನ್ನೆಲೆಯಲ್ಲಿ ಕುಸ್ತಿ ಫೆಡರೇಷನ್‌ಗೆ ಹೊಸದಾಗಿ ಚುನಾವಣಾ ದಿನಾಂಕ ನಿರ್ಧಾರವನ್ನು ಚುನಾವಣಾ ಅಧಿಕಾರಿ ಅವರು ಬುಧವಾರ ಪ್ರಕಟಿಸುವ ನಿರೀಕ್ಷೆಯಿದೆ.



ಕಿಕ್‌ಸ್ಟಾರ್ಟ್ ಎಫ್‌ಸಿಯ ಸಿಇಒ ಲಕ್ಷ್ಮಣ್ ಭಟ್ಟಾರಾಯ್, ಅಧ್ಯಕ್ಷ ಶೇಖರ್ ರಾಜನ್, ಕೆಎಸ್‌ಎಫ್‌ಎ ಅಧ್ಯಕ್ಷ, ಶಾಸಕ ಎನ್.ಎ. ಹ್ಯಾರಿಸ್, ಟೋಟನ್‌ಹ್ಯಾಮ್ ಹಾಟ್‌ಸ್ಪರ್‌ನ ರಾಯಭಾರಿಗಳಾದ ಓಸ್ವಾಲ್ಡೊ ಆರ್ಡಿಲ್ಸ್ ಮತ್ತು ಲೆಡ್ಲಿ ಕಿಂಗ್ ಅವರು ಮಂಗಳವಾರ ಜೆರ್ಸಿಗಳನ್ನು ವಿನಿಮಯ ಮಾಡಿಕೊಂಡರು –ಪ್ರಜಾವಾಣಿ ಚಿತ್ರ

## ಟೋಟನ್‌ಹ್ಯಾಮ್ ಜತೆ ಕಿಕ್‌ಸ್ಟಾರ್ಟ್ 3 ವರ್ಷಗಳ ಪಾಲುದಾರಿಕೆ ಒಪ್ಪಂದ

**ಬೆಂಗಳೂರು:** ಕಿಕ್‌ಸ್ಟಾರ್ಟ್ ಫುಟ್‌ಬಾಲ್ ಕ್ಲಬ್ ಮಂಗಳವಾರ ಇಂಗ್ಲಿಷ್ ಪ್ರೀಮಿಯರ್ ಲೀಗ ತಂಡವಾದ ಟೋಟನ್‌ಹ್ಯಾಮ್ ಹಾಟ್‌ಸ್ಪರ್‌ನೊಂದಿಗೆ ಮೂರು ವರ್ಷಗಳ ಪಾಲುದಾರಿಕೆ ಒಪ್ಪಂದಕ್ಕೆ ಸಹಿ ಹಾಕಿತು.

ಬೆಂಗಳೂರಿನ ತಾಜ್ ಹೋಟೆಲ್‌ನಲ್ಲಿ ನಡೆದ ಸಮಾರಂಭದಲ್ಲಿ ಕಿಕ್‌ಸ್ಟಾರ್ಟ್‌ನ ಅಧ್ಯಕ್ಷ ಶೇಖರ್ ರಾಜನ್ ಮತ್ತು ಸಿಇಒ ಲಕ್ಷ್ಮಣ್ ಭಟ್ಟಾರಾಯ್ ಅವರು ಟೋಟನ್‌ಹ್ಯಾಮ್‌ನ ರಾಯಭಾರಿಗಳು ಹಾಗೂ ಫುಟ್‌ಬಾಲ್ ದಿಗ್ಗಜರಾದ ಲೆಡ್ಲಿ ಕಿಂಗ್ ಮತ್ತು ಓಸ್ವಾಲ್ಡೊ ಆರ್ಡಿಲ್ಸ್ ಅವರೊಂದಿಗೆ ಒಪ್ಪಂದ ಮಾಡಿಕೊಂಡರು.

'ಪಾಲುದಾರಿಕೆ ಒಪ್ಪಂದದ ಭಾಗವಾಗಿ ಟೋಟನ್‌ಹ್ಯಾನ್‌ನ ಜಾಗತಿಕ ಫುಟ್‌ಬಾಲ್ ಕೋಚಿಂಗ್ ತಂಡಕ್ಕೆ ಕಿಕ್‌ಸ್ಟಾರ್ಟ್ ಎಫ್‌ಸಿ ಪ್ರವೇಶ ಪಡೆದಿದೆ. ಮುಂದಿನ ದಿನಗಳಲ್ಲಿ ಕಿಕ್‌ಸ್ಟಾರ್‌ನ ಆಟಗಾರರಿಗೆ ಲಂಡನ್‌ಗೆ ತೆರಳಿ ವಿಶೇಷ ತರಬೇತಿ ಪಡೆಯುವ ಅವಕಾಶವಿದೆ. ಮಾತ್ರವಲ್ಲ, ನುರಿತ ಕೋಚ್‌ಗಳಿಂದ ಮಾರ್ಗದರ್ಶನ, ತರಬೇತಿ ಸಿಗಲಿದೆ' ಎಂದು 1978ರ ಫಿಫಾ ವಿಶ್ವಕಪ್ ವಿಜೇತ ಅರ್ಜೆಂಟೀನಾ ರಾಷ್ಟ್ರೀಯ ತಂಡದಲ್ಲಿದ್ದ ಓಸ್ವಾಲ್ಡೊ ಆರ್ಡಿಲ್ಸ್ ಹೇಳಿದರು.

'ಭಾರತದಲ್ಲಿ ಫುಟ್‌ಬಾಲ್ ಕ್ರೀಡೆ ಸಾಕಷ್ಟು ಪ್ರಸಿದ್ಧಿ ಹೊಂದಿದ್ದರೂ ಜಾಗತಿಕ ಶಕ್ತಿಯಾಗಿ ಹೊರಹೊಮ್ಮಲು ತಳಮಟ್ಟದಲ್ಲಿ ಇನ್ನಷ್ಟು ಪರಿಣಾಮಕಾರಿಯಾಗಿ ಕೆಲಸ ಮಾಡುವ ಅಗತ್ಯವಿದೆ. ಯುವ ಪ್ರತಿಭೆಗಳನ್ನು ಗುರುತಿಸಿ ಸೂಕ್ತ ತರಬೇತಿ ನೀಡಬೇಕಿದೆ. ಫಿಫಾ ವಿಶ್ವಕಪ್ ಟೂರ್ನಿಯಲ್ಲಿ ಭಾರತ ತಂಡವನ್ನು ನಾವು ಎದುರು ನೋಡುತ್ತಿದ್ದೇವೆ' ಎಂದು ಟೋಟನ್‌ಹ್ಯಾಮ್ ತಂಡದ ಮಾಜಿ ನಾಯಕರೂ ಆಗಿರುವ ಲೆಡ್ಲಿ ಕಿಂಗ್ ಹೇಳಿದರು.

'ಟೋಟನ್‌ಹ್ಯಾಮ್ ತಂಡಕ್ಕೆ ನಾವು ಆಟಗಾರರನ್ನು ಹೇಗೆ ತಯಾರಿಸುತ್ತೇವೆ ಎಂಬ ಅನುಭವವನ್ನು ಕಿಕ್‌ಸ್ಟಾರ್ ತಂಡದೊಂದಿಗೆ ಹಂಚಿಕೊಳ್ಳಲಿದ್ದೇವೆ. ಮುಂದಿನ ದಿನಗಳಲ್ಲಿ ಇಂಗ್ಲಿಷ್ ಪ್ರೀಮಿಯರ್ ಲೀಗ್‌ಗೂ ಭಾರತೀಯ ಆಟಗಾರರು ಬರಬೇಕು ಎಂಬುದು ನಮ್ಮ ನಿರೀಕ್ಷೆ' ಎಂದರು.